# ಕರ್ಣಾಟಕ ಕಾವ್ಯಮಂಜರಿ.

# ಮಂಗರಸಕವಿ

ಪ್ರಣೀತಂ

# ಜಯನೃಪಕಾವ್ಯಂ.

[೧೯]

ಎಸ್. ಜಿ. ನರಸಿಂಹಾಚಾರ್,

ಲೈಬ್ರೇರಿಯನ್, ಗವರ್ನ್‌ಮೆಂಟ್ ಓರಿಯಂಟಲ್ ಲೈಬ್ರರಿ, ಮೈಸೂರು

ಮ. ಅ. ರಾಮಾನುಜಯ್ಯಂಗಾರ್,

ಅಸಿಸ್ಟೆಂಟ್ ಮಾಸ್ಟರ್ ವೆಸ್ಲಿಯನ್ ಹೈಸ್ಕೂಲ್, ಮೈಸೂರು

ಇವರಿಂದ ಪರಿಷ್ಕರಿಸಲ್ಪಟ್ಟು

ಕರ್ಣಾಟಕ ಕಾವ್ಯಮಂಜರಿ ಪ್ರೊಪ್ರೈಟರುಗಳಿಗಾಗಿ,

ಮೈಸೂರು

ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿತು.

೧೮೯೭.

ಕ್ರಯ ೨ ರೂಪಾಯಿ.

UNIVERSAL
LIBRARY
OU_200556
UNIVERSAL
LIBRARY

Osmania University Library

Call No K811 M19J          Accession No K

Author

Title 1377

This book should be returned on or before the date last marked below.

Registered according to Act XXV of 1867.
(All rights reserved)

ಈ ಪುಸ್ತಕವು ಕರ್ಣಾಟಕ ಕಾವ್ಯಮಂಜರಿ ಆಫೀಸ್ ಮ್ಯಾನೇಜಿಂಗ್ ಪ್ರೊಪ್ರೈಟರ್ ಮ. ಕುಮಾರಸ್ವಾಮಿ ತಿರುಮಲಾಚಾರ್ಯರಲ್ಲಿ ದೊರೆಯುತ್ತದೆ.

# ಪೀಠಿಕೆ.

---

ಈ ಗ್ರಂಥಕರ್ತನ ಹೆಸರು ಮಂಗರಸ. ಈತನು „ ಹೊಯ್ಸಳದೇಶದ ಹೊಸವೃತ್ತಿಯು " ನಾಡಿನ ಮಧ್ಯದಲ್ಲಿರುವ „ ಧಾತುಪುರಿಯು " ಅಥವಾ ಕಲ್ಲಹಳ್ಳಿಯ ಅಧಿಪನೆಂದೂ, ಮಹಾಮಂಡಲೇಶ್ವರ „ ಚೆಂಗಾಳ್ವ " ಭೂಮಿಪನ ಸಚಿವ ವಂಶದಲ್ಲಿ ಹುಟ್ಟಿದವನೆಂದೂ, ಮಾಧವಸುತನಾದ ವಿಜಯೇಂದ್ರನ ಮಗನೆಂದೂ‡ ಈತನ ಗ್ರಂಥಗಳಿಂದ ತಿಳಿಯಬರುತ್ತದೆ. ಈತನಿಗೆ „ ಪ್ರಭುರಾಜಂ " ಎಂಬ ಬಿರುದಿದ್ದಂತೆ ತೋರುತ್ತದೆ. ಈತನು ಜೈನಮತಕ್ಕೆ ಸೇರಿದವನು §

ಈತನ „ ಸಮ್ಯಕ್ತ್ವಕೌಮುದಿ " ಯ ಕೊನೆಯಲ್ಲಿ—

„ ಸಾಸಿರದ ಮೇಲೆ ನಾನೂಱ ಮೂವತ್ತೊಂದು ।
ಭಾಸುರಂಬಡೆದ ಶಕವರ್ಷದಾಶ್ವಿಯುಜ ।
ಮಾಸದೊಳ್··· ·· · · ಸಮಾಪ್ತಂಗೆಯ್ದನು ‖ "

ಎಂದಿರುವದರಿಂದ ಶಕ ೧೪೩೧ ರಲ್ಲಿ ಅಂದರೆ ಕ್ರಿ. ಶ ೧೫೦೯ಲ್ಲಿ ಈತನು ಈ ಗ್ರಂಥವನ್ನು ಬರೆದಿರಬೇಕು ಆದುದರಿಂದ ಈತನು ೧೫ ನೆಯ ಶತಮಾನದ ಅಂತ್ಯಭಾಗದಲ್ಲಿಯೂ ೧೬ ನೆಯ ಶತಮಾನದ ಆದಿಭಾಗದಲ್ಲಿಯೂ ಜೀವಿಸುತ್ತಿದ್ದಿರಬೇಕು

ಈತನು „ ಜಯನೃಪಕಾವ್ಯ, " ನೇಮಿಜಿನೇಶಸಾಂಗತ್ಯ, " „ ಸಮ್ಯಕ್ತ್ವಕೌಮುದಿ, " „ ಪ್ರಭಂಜನಚರಿತೆ, " „ ಶ್ರೀಪಾಲಚರಿತೆ, " „ ಪಾಕಶಾಸ್ತ್ರ, " ಇವೇ ಮೊದಲಾದ ಗ್ರಂಥಗಳನ್ನು ಬರೆದಿದಾನೆ.

ಆದರೆ ಮಂಗರಸನೆಂಬ ಹೆಸರಿನಿಂದಲೇ ಪ್ರಖ್ಯಾತರಾದ ಬೇರೆ ಇಬ್ಬರು ಕವಿಗಳ ಗ್ರಂಥಗಳನ್ನೂ ಈ ಕವಿಯೇ ರಚಿಸಿದನೆಂದು ಕೆಲವರು ಭ್ರಮಿಸುತ್ತಾರೆ ಹೀಗೆ ಭ್ರಮಿಸುವದಕ್ಕೆ ಇವರ ನಾಮಸಾಮ್ಯತೆಯೇ ಕಾರಣವೆಂಬದಾಗಿ ತೋರುತ್ತದೆ ಅವರಲ್ಲಿ ಮಂಗಿರಾಜನಿಘಂಟುವನ್ನು ಬರೆದವನು, ತನ್ನ ಗ್ರಂಥದಲ್ಲಿ „ ಕಮ್ಮೆ ಕುಲದ ವಿಶ್ವಾಮಿತ್ರಗೋತ್ರದ ರೆಮ್ಮಯ ರಾಮರಸರ ತನೂಭವಂ " ಎಂದೂ, ಶಿವಪುರದ ಸೋಮೇಶ್ವರನ ವರಪ್ರಸಾದದಿಂದ ಗ್ರಂಥವನ್ನು ತಾನು ಬರೆದೆನೆಂದೂ, ಮತ್ತು ನಿಘಂಟುವನ್ನು ಶಕ. ೧೪೯೦ ಅಂದರೆ ಕ್ರಿ ಶ ೧೫೬೮ನೆಯ ವರ್ಷದಲ್ಲಿ ಬರೆದೆನೆಂದೂ ಹೇಳಿಕೊಂಡಿದಾನೆ

---

‡ ಜಯನೃಪಕಾವ್ಯ. ಸಂಧಿ. ೧ ೧೨—೧೫

§ ಜಯನೃಪಕಾವ್ಯ. ಸಂಧ್ಯಂತ್ಯದಪದ್ಯ

ಮತ್ತು ಈ ಕವಿಯು " ಅಭಿನವಮಂಗರಾಜ " ಎಂಬ ಹೆಸರನ್ನು ಇಟ್ಟುಕೊಂಡಿರುವದರಿಂದ ಈತನಿಗೆ ಹಿಂದೆ ಮಂಗರಾಜನೆಂಬ ಮತ್ತೊಬ್ಬ ಕವಿಯು ಇದ್ದಿರಬೇಕು ಬಹುಶಃ ಆ ಪೂರ್ವದ ಮಂಗರಾಜನೇ " ಖಗೇಂದ್ರಮಣಿದರ್ಪಣ " ವೆಂಬ ವೈದ್ಯ ಗ್ರಂಥವನ್ನು ಬರದಿರಬಹುದು ಆತನು ಹೊಯ್ಸಳದೇಶದಲ್ಲಿ " ದೇವಳಿಗೆಯ ನಾಡಿ " ನಲ್ಲಿ ಪ್ರಸಿದ್ಧವಾದ " ಮುಗಳೀಶ್ವರ " ದಲ್ಲಿ ಅರಸನಾಗಿದ್ದಂತೆಯೂ, ಪೂಜ್ಯಪಾದಮುನಿಯ ಶಿಷ್ಯನಾಗಿದ್ದಂತೆಯೂ ತಿಳಿಯಬರುತ್ತದೆ ಮತ್ತು " ಧರೆಗಧಿನಾಯಕಂ ಹರಿಹರ ಕ್ಷಿತಿಪಂ ಕುಡುತಿರ್ಪನೊಲ್ಮೆಯಿಂ " ಎಂಬ ಪದ್ಯಭಾಗವು ಅವನ ಗ್ರಂಥದಲ್ಲಿ ದೊರಕುವದರಿಂದ, ವಿಜಯನಗರದ ಹರಿಹರನ ಕಾಲದಲ್ಲಿ ಇದ್ದಂತೆಯೂ ತೋರುತ್ತದೆ ಹೀಗಿರುವದರಿಂದ ಜಯನೃಪಕಾವ್ಯ ಕರ್ತನಾದ ಮಂಗರಸನು ಈಚಿನವನು ಅವನಿಗೂ ಈ ಯಿಬ್ಬರಿಗೂ ಯಾವ ಸಂಬಂಧವೂ ಇಲ್ಲ

**ಜಯನೃಪಕಾವ್ಯವು** ಪರಿವರ್ಧಿನಿ ಷಟ್ಪದಿಯಲ್ಲಿ ಬರೆದಿದೆ ಇದರಲ್ಲಿ ೧೬ ಸಂಧಿಗಳೂ, ೧೧೪೫ ಪದ್ಯಗಳೂ ಇವೆ ಈ ಗ್ರಂಥದ ಪ್ರಥಮಸಂಧಿಯಲ್ಲಿ ಕವಿಯು—

ಜನ್ನನ ಜಾಣ್ ಮಧುರನ ಮಾಧುರ್ಯಂ ।
ರನ್ನನ ರಸಿಕತ್ವಂ ಗುಣವರ್ಮನ ।
ಬಿನ್ನಣಮಾತ್ರೇವಿಜಯನ ಬಗೆ ಸುಜನೋತ್ತಂಸನ ರೀತಿ ॥
ಹೊನ್ನನ ಹೊಸದೇಸೆಯು ನುಡಿ ನೇಮಿಯ ।
ಕನ್ನಡದೊಳ್ಪಭಿನವಪಂಪನ ಬಗೆ ।
ಯೆನ್ನೀಪೇಳ್ದ ಕೃತಿಗ ಪಿರಿದುಂ ಸೇರುಗೆ ನಿರ್ವಿಘ್ನತೆಯಿಂ ॥ ೧೧.

ಎಂದು ಪುರಾತನ ಕವಿಗಳನ್ನು ಸ್ಮರಿಸಿ, ಗ್ರಂಥದ ಔತ್ಕೃಷ್ಟ್ಯವನ್ನೂ, ಮಾಧುರ್ಯವನ್ನೂ ಅದೇ ಸಂಧಿಯ

ತಕ್ಕರ ಗೋಷ್ಠಿ ತನೂದರಿಯರ ಪೊಸ ।
ತಕ್ಕೆ ತೊಡಂಬಯಲರ ಪೊಸಜೇನೆಯ ।
ಸಕ್ಕರೆ ತೀವಿದ ತನಿವಾಲೂದುವ ತೆಂಕಣ ತೆಳ್ಳೆಲರು ॥
ಮಕ್ಕಳ ನುಡ್ಗುವೆರೆದ ನುಡಿ ಮದುರಿತು ।
ಚೊಕ್ಕಳಿಕೆಯ ನವಚಂದ್ರಿಕೆಯೆನೆ ಹೃದ ।
ಯಕ್ಕೆ ವಿಲಾಸವನೀವುದು ಸತ್ಪಭುರಾಜನ ಸವಿಮಾತು ॥ ೨೪

ಮನವೊಲ್ದೋದುವೆನೆಂಬರ ಬಾಯ್ದ[illegible] ।
ಗಿನಿಯುಳ್ ತುಂಬಿದ ನವರಸದಂಬುಲ ।
ಮನೆ ಆಲಿಸಿ ಕೇಳ್ವರ ಕಿವಿಗೋಪಸಲಾಡಿಗ ಲಿಕೆ ಯೆನೆ ॥

ಅನುರಾಗದಿ ಲಿಖಿಸುವೆನೆಂಬರ ಕ ।
ಯ್ಗನಿಮಿಷನೇತ್ರಿಯು ಪೀನಕುಚಯುಗದೊ ।
ತ್ತಿನಲಾದುದು ಸತ್ಪ್ರಭುರಾಜನ ಸತ್ಕವಿತೆಯು ಸವಿಮಾತು ||೧೫

ವಾಚಕವಾಚ್ಯವ್ಯಂಗ್ಯವ್ಯಂಜನ ।
ಸೂಚಿತಲಕ್ಷಣಲಕ್ಷ್ಯವಿವೇಕರ ।
ಸೋಚಿತ ಭಾವಾಲಂಕೃತಿರೀತಿತ್ರಯಾಭೇದಕಭೇದ್ಯ ||
ಆಚರಿತೋಭಯಸಂಧಿಸಮಾಸವಿ ।
ವೇಚನೆಗಳ ಭೇದವನಿನಿಸರಿಯದೆ ।
ವಾಚಾಲತೆಯಿಂದುಸಿರಿದ ದುಷ್ಕೃತಿಯಲ್ಲಿದು ಭಾವಿಪೊಡೆ || ೧೬

ಎಂಬ ಪದ್ಯಗಳಲ್ಲಿ ಹೇಳಿಕೊಂಡಿರುತ್ತಾನೆ.

ನಮಗೆ ದೊರೆತ ಪ್ರತಿಗಳೆರಡು ಅವುಗಳಲ್ಲಿ ಮೈಸೂರು ಸರ್ಕಾರದ ಓರಿಯೆಂಟಲ್ ಲೈಬ್ರೇರಿಯ ಪುಸ್ತಕವೊಂದು, ಇದೇ ಕ|| ಎಂಬ ಪ್ರತಿ ಮತ್ತೊಂದು ಮೈಸೂರು ಕೃಷ್ಣರಾಜೇಂದ್ರಪುರಾಗ್ರಹಾರದಲ್ಲಿರುವ ಮ|| ರಾ|| ಸೂರಿಪಂಡಿತರ ಮಕ್ಕಳು ಲಕ್ಷ್ಮೀಪತಿ ಪಂಡಿತರು ದಯವಿಟ್ಟು ಕಳುಹಿಸಿಕೊಟ್ಟಿದ್ದು, ಇದೇ ಗ|| ಎಂಬ ಪ್ರತಿ. ಇವುಗಳ ಆಧಾರದಮೇಲೆ ಈ ಗ್ರಂಥವನ್ನು ಮುದ್ರಿಸಿದೇವೆ

ಈ ಪ್ರತಿಗಳನ್ನು ಕೊಟ್ಟ ಮಹನೀಯರಿಗೆ ನಾವು ಬಹಳ ಕೃತಜ್ಞರಾಗಿರುತ್ತೇವೆ

ಈ ಕವಿಚರಿತ್ರವು ಮ|| ರಾ|| ಎಸ್ ಜಿ ನರಸಿಂಹಾಚಾರ್, ಮ|| ರಾ|| ಆರ್ ನರಸಿಂಹಾಚಾರ್ ಎಮ್ ಎ ಇವರುಗಳಿಂದ ವಿರಚಿತವಾದ ,, ಕವಿಕಥಾಮೃತಶರಧಿ '' ಎಂಬ ಗ್ರಂಥದಿಂದ ಸಂಗ್ರಹಿಸಿದೆ.

# ಅಧ್ಯಾಯಾನುಕ್ರಮಣಿಕೆ.


| | | | | ಪುಟ ಸಂ॥ |
|---|---|---|---|---|
| ಪ್ರಥಮ ಸಂಧಿ | ... | ... | ... | ೧ |
| ದ್ವಿತೀಯ ಸಂಧಿ | .. | ... | ... | ೧೭ |
| ತೃತೀಯ ಸಂಧಿ | | .. | ... | ೩೪ |
| ಚತುರ್ಥ ಸಂಧಿ | . | .. | ... | ೫೩ |
| ಪಂಚಮ ಸಂಧಿ | . | ... | ... | ೬೬ |
| ಷಷ್ಠ ಸಂಧಿ | .. | ... | ... | ೮೧ |
| ಸಪ್ತಮ ಸಂಧಿ | ... | ... | ... | ೯೪ |
| ಅಷ್ಟಮ ಸಂಧಿ | ... | ... | ... | ೧೦೭ |
| ನವಮ ಸಂಧಿ | ... | ... | ... | ೧೨೩ |
| ದಶಮ ಸಂಧಿ | . | ... | ... | ೧೩೪ |
| ಏಕಾದಶ ಸಂಧಿ | .. | .. | ... | ೧೪೯ |
| ದ್ವಾದಶ ಸಂಧಿ | . | . | ... | ೧೬೪ |
| ತ್ರಯೋದಶ ಸಂಧಿ | | | .. | ೧೮೧ |
| ಚತುರ್ದಶ ಸಂಧಿ | .. | .. | .. | ೧೯೮ |
| ಪಂಚದಶ ಸಂಧಿ | .. | .. | ... | ೨೧೦ |
| ಷೋಡಶ ಸಂಧಿ | . | | .. | ೨೩೨ |

ಮಂಗರಸಕವಿ ಪ್ರಣೀತಂ

# ಜಯನೃಪ ಕಾವ್ಯಂ.

## ಪ್ರಥಮಸಂಧಿ.

( ಪರಿವರ್ಧಿನಿಷಟ್ಪದಿ )

ಸೂಚನೆ ॥ ಶ್ರೀಮತ್ಸೋಮಾನ್ವಯನವತಿಲಕಂ ।
ಸೋಮಪ್ರಭಸುತ ವಿಕ್ರಮಕೌರವ ।
ನಾಮನವನಿಯಂ ಪರಿಪಾಲಿಸಿ ಪಡೆದಂ ನಿರ್ವಾಣವನು ॥

ಶ್ರೀಮದಖಿಲಸುಮನೋಗಣಭಾಸಿ ಸ ।
ದಾಮೃತವಿಲಸತ್ಫಲವಿತರಣಗುಣ ।
ಧಾಮಂ ನಮದಾನಂದಾಕರನಮಲಚ್ಛಾಯಾಯೋಗಂ ॥
ಕಾಮಪ್ರಸರಾಪಹರಂ ವರರ ।
ಮ್ಯಾಮರಭೂರುಹಮೆನೆ ಚೆಲ್ವಂ ತಳೆ ।
ದಾಮಹಿತಾಧೀಶ್ವರನೆಮಗೀಗಭಿಮತಸಂಸಿದ್ಧಿಯನು ॥ ೧

ಸಿದ್ಧರ ಶಿವಪದಸಾಖ್ಯಸಮೃದ್ಧರ ।
ಬದ್ಧಾನಂತಚತುಷ್ಟಯನಿಲಯರ ।
ಶುದ್ಧಚರಮದೇಹಪ್ರಮಿತೋತ್ತಮ-ರೂಪರ ವಿಶ್ರುತರಾ ॥
ಉದ್ಧತಕರ್ಮಕಲಾಪವಿನಾಶರ ।
ಬುದ್ಧರ ಭುವನಾಧಿಕರಷ್ಟಗುಣಾಪಿ ।
ನದ್ಧರ ಪಜ್ಜಳಿಸುವ ಪದಯುಗಕಾಂ ಪಲಸೂಟ್ಜಿಗುವೆನು ॥ ೨

ಪಂಚಮಹಾವ್ರತನಿಲಯರ ದುರ್ಧರ ।
...ಮುಖಗಜಮ

ಪಂಚಾಚಾರವಿಚಾರರ ನಿರ್ಮಲ |
ಪಂಚಪದಾಸಾಚಾರ್ಯಪದಕ್ಕಾಂ |
ಪಂಚವಿಧವಿರಾಜಿತಮುಷ್ಟಿಯೊಳಭಿವಂದನೆಯಂ ಮಾಳ್ಪೆಂ ||೩

ಮುಕ್ತಿಪದದ ಹೊಲಬಂ ಮುಗುಳ್ಗಣ್ಣೆಯನ |
ಶಕ್ತಿಗಿಡಿಪ ಪರಿವಿಡಿಯಂ ವಿಮಲವಿ |
ರಕ್ತರಸಾಸ್ವಾದನಮಂ ಹೇಯೋಪಾದೇಯದ ತೆಱನಂ ||
ಯುಕ್ತಿಗೆ ಯುಕ್ತಮೆನಿಸುವಾಗಮಮಂ |
ವ್ಯಕ್ತೀಕರಿಸುವುಪಾಧ್ಯಾಯರನಾಂ |
ಭಕ್ತಿಯಿನಭಿವಂದಿಸುವೆಂ ಸುಮತಿವಿಶಾಲತೆಯಂ ಬಯಸಿ ||೪

ಮಱೆದುಂ ಲೌಕಿಕವಚನಮುಮಂ ನುಡಿ |
ದಱಿಯದ ಮುಂ ಕೊಂಡ ಮಹಾವ್ರತಮಂ |
ಪಱಿಪಡಿಸದ ತೀವ್ರಪರಿಗ್ರಹಕೊಂದಿನಿಸುಂ ಚಿತ್ತವನು ||
ಎಱಗಿಸದೆನ್ನವರನ್ನಿಗರೆನುತುಂ |
ಮಱುಕಂ ಮಚ್ಚರಗೊಳ್ಳದ ಸತ್ಯ |
ಕ್ಕೆಱವೆಟ್ಟೆನಿಸುವ ಸಾಧುಸಮಿತಿಗತಿಸಮತೆಯೊಳೆಱಗುವೆನು ||೫

ಗುಪ್ತಿತ್ರಿತಯಾಂಚಿತರುರುಗುಣಗಣ |
ಲಿಪ್ತರಮಲಜಿನಧರ್ಮವಿಚಾರಕ |
ರಾಪ್ತಾಗಮನಯವಿದರುತ್ತಮಶಿವಪದಸುಖತತ್ಪರರು ||
ಸಪ್ತಮಹಾತತ್ತ್ವಜ್ಞರಭಿಕರು |
ದೃಪ್ತಮದನಮದಹರರನುಕಂಪಾ |
ವ್ಯಾಪ್ತಹೃದಯರೆನಿಸುವ ಯೋಗಿನಿಕಾಯಕ್ಕಿರದೆಱಗುವೆನು ||೬

ಪರಮಬ್ರಹ್ಮಹೃದಯಸರಸಿರುಹೋ |

ಶ್ರೀಮದ್ಗುಣಸಂಯುತಗುಣಭದ್ರ ।
ಸ್ವಾಮಿಯು ಕೋವಿದಕವಿಪರಮೇಷ್ಠಿ ।
ಸ್ವಾಮಿಯು ಬಾಹುಬಲಿಸ್ವಾಮಿಯು ಸನ್ನುತರೆನಿಪಕಳಂಕ ॥
ಸ್ವಾಮಿಯು ಮೈಮೆವಡೆದ ಜಿನಸೇನ ।
ಸ್ವಾಮಿಯು ನಿರ್ಮಲತರಪೂಜ್ಯಪದ ।
ಸ್ವಾಮಿಯು ಪದಮಂ ನೆನೆದು ಬೞಿಕ್ಕೀಕಾವ್ಯಮನುಸಿರುವೆನು ॥೮

ವಿಲಸದಮಲವಾಗ್ರುಚಿಯಿಂ ಭವ್ಯಾ ।
ವಳಿಯ ಮನದ ಕತ್ತಲೆಯಂ ಕದಲಿಸಿ ।
ಬೞಿಯೊಳ್ಕವಲಯುಕತ್ವಾನಂದಮನೊದವಿಸಿ ಲೀಲೆಯೊಳು ॥
ತೊಳಪ ದಯಾಂಭೋನಿಧಿಯಂ ಪೆರ್ಚಿಸಿ ।
ಯಳವಿಗಳಿದ ಸತ್ಪಥದೊಳ್ಚರಿಯಿಸು ।
ವಲಘುಗುಣಪ್ರಭೇಂದುಪದಂ ನಮ್ಮಂ ಪರಿರಕ್ಷಿಸುಗೆ ॥೯

ವಿವರಿಸಲಾಮುನಿಪುಂಗವನ ತನೂ ।
ಭವನಾಶ್ರುತಮುನಿಯ ವರಪರಂಪರೆ ।
ಯವರೊಳು ಮತ್ತಿನ ನಾಲ್ಕುಂ ಸಂಘದೊಳೋವದೆಯಾಚರಿಪ ॥
ಭುವನಾಗ್ರದ ಸುಖಸಂಪದಕಿಚ್ಛೈ ।
ಸುವ ಚಿತ್ತಂಬಡೆದು ವಿರಾಜಿಪ ಮುನಿ ।
ನಿವಹದ ಪದಪಂಕಜಕೆಱಗುವೆನಾಂ ಪಱಮೆವಸುಳಿಯಂತೆ ॥೧೦

ಜನ್ನನ ಜಾಣ್ ಮಧುರನ ಮಾಧುರ್ಯಂ ।
ರನ್ನನ ರಸಿಕತ್ವಂ ಗುಣವರ್ಮನ ।
ಬಿನ್ನಣಮಾಶ್ರೀವಿಜಯನ ಬಗೆ ಸುಜನೋತ್ತಂಸನ ರೀತಿ ॥
ಹೊನ್ನನ ಹೊಸದೇಸೆಯ ನುಡಿ ನೇಮಿಯ ।
ಕನ್ನಡದೊಳ್ಪಭಿನವಪಂಪನ [೩] ಬಗೆ ।
ಯೆನ್ನೀಪೇಳ್ದ ಕೃತಿಗೆ ಪಿರಿದುಂ ಸೇಱುಗೆ ನಿರ್ವಿಘ್ನತೆಯಿಂ ॥೧೧

ದ್ವಾರಾವತಿಯ ಪುರಾಧೀಶ್ವರರ ।
ಕ್ಷ್ಮೀರಮಣಾನ್ವಯ ಚೆಂಗಾಳ್ವ ಮಹೀ ।
ನಾರೀಧವನಿಜಸಚಿವರುಚಿರಕುಲದುಗ್ಧಾಂಭೋನಿಧಿಗೆ ॥

---

೩ ರಸ । ಮ. ಗ.॥

ತಾರಾತರುಣೀವಲ್ಲಭ ಜಿನಪದ |
ವಾರಿಜಮಧುಕರ ಯಾಚಕಜನಚಿಂ |
ತಾರತ್ನಂ ಚಿತ್ರಕಲಾಸದನಂ ಸುದತೀಜನಮದನಂ ||೧೨

ವಿಲುಳಿತವಿಶ್ವಂಭರೆಯೆಂಬಬಲೆಯ |
ಲಲಿತಶ್ರೀಮುಖಮೆಂಬಂದದಿ ಕ |
ಣ್ಗೊಳಿಸುವ ಹೊಯ್ಸಳ †ದೇಶದ ಮಧ್ಯದ ಹೊಸವೃತ್ತಿಯ ನಾಡಾ ||
ಅಲಘುಪ್ರಿಯದಿಂ ಪರಿಪಾಲಿಪನು |
ಜ್ಜ್ವಲತೇಜಂ ‡ದಾತುಪುರಾಧೀಶಂ |
ಲಲನಾಮಾಧವಸುತಸದೃಶಂ ಮಾಧವಸುತವಿಜಯೇಂದ್ರಂ ||೧೩

ಪ್ರಭುಕುಲದೀಪಂ ಪ್ರಮದಾಜನಚಿ |
ತ್ತಭವಂ ಪ್ರಜ್ಜ್ವಲತೇಜೋಪೇತಂ |
ಶುಭತರಕೀರ್ತಿಯುತಂ ಸುರಭೂಜೋಪಮವಿತರಣಶೀಲಂ ||
ತ್ರಿಭುವನಪತಿ ಜಿನಭಕ್ತಂ ಮಾಸವ |
ವಿಭವಂ ವಿನಯಾಂಬುಧಿಚಂದ್ರಂ ರಣ |
ಕಭಿನವವಿಜಯಂ ವಿಜಯಾಜ್ಗನೆಗಧಿರಾಜಂ ವಿಜಯೇಂದ್ರಂ ||೧೪

ಆತನ ಸುತ ಮಂಗರಸನೆನಾಂ ಸ |
ತ್ಪ್ರೀತಿಯಿನೀಜಯನೃಪಚಾರಿತ್ರಮ |
ನೋತುಸಿರ್ದಂ ಪರಿವರ್ಧಿನಿಯಿಂ ನೂತನರಸವರ್ಧಿನಿಯಿಂ ||
ಖ್ಯಾತಿವಡೆದ ಕೋವಿದನಿಕುರುಂಬಮ |
ದೇತೆಱನೆಂದು ತಿರಸ್ಕರಿಸದೆ ಮನ |
ಪ್ರೀತು ಕರಂ ಮತ್ತಿದಱೊ¶ಳ್ತಪ್ಪುಂಟಾದೊಡೆ ತಿರ್ದುವುದು ||೧೫

ಬಿಸವೊಳ್ಳುಣಿಸಿನೊಳಡಗಿರಲದನೀ |
ಕ್ಷಿಸುತಲರಿಂ ಪೊಣರ್ವಕ್ಕಿಯವೊಲು ಮನ |
ವೊಸೆದುಣ್ಬಂ ಬಲ್ಲವೆ ಮತ್ತಿನ ಖಗತತಿಯಾದಱಂತೆವೊಲು ||
ರಸಮುತ್ಪ್ರೇಕ್ಷೆಯುಪಮೆ ಕೂಡಿದ ಕೃತಿ |
ವೆಸದೊಳಮೆಯ್ಯೊಳು ತೀವಿದ ತಪ್ಪಂ |
ರಸಿಕರ್ ಬಲ್ಲಂದದಿ ಬಲ್ಲರೆ ಕಾಲುರಿಚರ್ಧರಣಿಯೊಳು ||೧೬

---

†. ಪಿಷಯದ ಗ|| ‡. ದಾತು. ಗ|| ¶. ಳ್ತೀವಿದತಪ್ಪಂ ಗ||

ಬಲ್ಲವರಾದೊಡಮೇನೊ ಕೆಲರ್ತಾ |
ವುಲ್ಲದೆ ತಮ್ಮೊಳ್ದ್ವಮಾತಲ್ಲದೆ |
ಸಲ್ಲದು ಸರ್ವಗ್ನನುತಂ ಮತ್ತಿನ ಮಾನ್ಯರೊರೆದ ಕೃತಿಯಾ ||
ಸಲ್ಲಲಿತಮನೇನೆನ್ನದೆ ತಮ್ಮಯು |
ಬಲ್ಲತನವನೇ ಮೆಱೆವಣ್ಣಂಗಳ |
ಬಲ್ಲತನದ ಬಾಯೊಳು ಬಳಹರಿ ಬಲ್ಮನಿಸುದಳೆದು ಹೊಗಲಿ ||೧೭

ಬಂದೇ ಬೀಜದೊಳೊಂದೇ † ರೂಪಿನೊ |
ಳೊಂದೇನೆಲದೊಳಗೊಂದಿ ಬೆಳೆದು ಕಲ |
ವೊಂದಱೊಳೊಡನೆ ಬೆರೆದು ಬೇಪ್ವೊಳ್ಸಱಂತೆ ವ್ಯದುತ್ವವನು ||
ಬಂದದ ‡ ಖರಮುದ್ಧದವೊಲ್ ಸಜ್ಜನ|
ರೊಂದಾಗೊಗೆದು ಬಳೆದು ಖಳಗುಣಮನ |
ದೆಂದುಂ ಬಿಡದಿಹ ಕಲುಹೃದಯರ್ಗಾನವಿರತವಂಜುವೆನು ||೧೮

ಸುರಭಿವಿಲೇಪನಸುರುಚಿರರತ್ನಾ |
ಭರಣಮನತಿಗಳೆಯಿಸಿ ತಲೆಯೋಡೆಲು |
ಗುರಳತೊವಲ್ಗೊವೆಗೀಶನ ಸಾಮೀಪ್ಯಂ ಬಡೆವಂತೆ ||
ಸರಸಕಲಾಕೋವಿದಸಜ್ಜನರಂ |
ಪೊರೆಯೊಳ್ನಿಲಲೀಯದೆ ಪಿರಿದುಂ ತಾ |
ಮರಸುಗಳಂ ಬಿಡದಿಹ ದುರ್ಜನಸಂತತಿಗಾನಂಜುವೆನು ||೧೯

ಬಂದಿರೆ ಪರಿಣಾಮವೆ ಮನೆಯೊಳಗ |
ಕ್ಕಂದಿರನುವೆ ಮಕ್ಕಳು ಪದುಳವೆ ನೀ |
ವೆಂದುಂ ಬಾರದವರು ನಮ್ಮಲ್ಲಿಗೆ ಬಂದಿರಿ ಕರುಣದೊಳು ||
ಎಂದು ವಿನಯವಚನಮನೆ ನುಡಿದು ಬಗೆ |
ಗೊಂದಿದ ಕಾರ್ಯಮನಿನಿಸುಂ ಬಿಡದ |
ಣ್ಣಂದಿರನೀಕ್ಷಿಸುವುದು ಮುನ್ನೆಸಗಿದ ಪಾಪದ ಫಲವೈಸೆ || ೨೦

ವರತೀಕ್ಷ್ಣಸ್ಯಚ್ಛಿದ್ರಿತರಾದೊಡ |
ಮುರುತರಸಜ್ಜನಸಮುದಾಯಂ ಭಾ |
ಸುರಸದ್ಗುಣನಿಕುರುಂಬಮನಿನಿಸು ಮನೋವಾಕ್ಕಾಯದೊಳು ||

---

† ನೆಲದೊಳ | ಗೊಂದಿ ಬೆಳೆದು ಫಲವಾಗಿ ಬಳಿಕ. ಕ||

‡ ಖಳ. ಕ||

ಪರಿಹರಿಸದೆ ನಿರ್ಮಲತೆಯನೋವದೆ ।
ಪರಕಲಿಸುವರುಜ್ಜ್ವಲನವರತ್ನದ ।
ಹರಿಪ್ರೊಲವರು ಸುಖಮಿರಲೀಧರೆಶಶಿರವಿಯುಳ್ಳನ್ನೆವರಂ ॥ ೨೧

ಪಾಲಂ ಕೊಂಡು ಪಯಮನಿೞಿಕೆಯ್ವ ಮ ।
ರಾಳಂಬೊಲು ದುರ್ಗಂಧಕ್ಕೆಳಸದೆ ।
ಲೋಲುಪತೆಯಿನೊಳ್ಗಂಪಿಂಗೆಱಗುವ ಭೃಂಗಂಬೊಲು ಕೃತಿಯಾ ॥
ಆಲಿಸಿ ಕೇಳ್ದಲ್ಲದುದಂ ಪಿಂಗಿಸಿ ।
ಲೀಲೆಯಿನೊೞ್ಳಿತ್ತಂ ಪಿಡಿವಾ ಬುಧ ।
ಜಾಲಂ ವಸುಧಾಲಂಕಾರಮದಂ ಮುದದಿಂ ಬಲಗೊಂಬೆಂ ॥ ೨೨

ಈತೆಱದಿಂ ದುರ್ಜನರಂ ದೂಷಿಸಿ ।
ನೀತಿನಿಪುಣರೆನಿಸುವ ಸಜ್ಜನರಂ ।
ಪ್ರೀತಿ ಮಿಗಲು ತುತಿಯಿಸಿ ಪಾಲೊಳಗಯಿದಾರೆಯ ಸಕ್ಕರೆಯಂ ॥
ಓತೊಡವೆರಸುವ ತೆಱದಿಂ ನವರಸ ।
ರೀತಿವಡೆದ ಸಕ್ಕದದೊಳು ಕನ್ನಡ ।
ಮಾತಂ ೩ ಸಮಙ್ ಬೆರಸಿ ಜಯನೃಪಚಾರಿತ್ರಮನೋತುಸಿರ್ದೆಂ ॥ ೨೩

ತಕ್ಕರ ಗೋಷ್ಠಿ ತನೂದರಿಯರ ಪೊಸ ।
ತಕ್ಕೆ ತೊಡಂಬೆಯಲರ್ಪೊಸಜೇನೆಯ ।
ಸಕ್ಕರೆತೀವಿದ ತನಿವಾಲೂದುವ ತೆಂಕಣ ತೆಳ್ಳೆಲರು ॥
ಮಕ್ಕಳ ಮುದ್ದುವೆರೆದ ನುಡಿ ಮದುರಿತು ।
ಚೊಕ್ಕೞಿಕೆಯ ನವಚಂದ್ರಿಕೆಯೆನೆ ಹೃದ ।
ಯಕ್ಕೆ ವಿಲಾಸಮನೀವುದು ಸತ್ಪ್ರಭುರಾಜನ ಸವಿಮಾತು ॥ ೨೪

ಮನಮೊಲ್ದೋದುವೆನೆಂಬರ ಬಾಯ್ದೞಿ ।
ಗಿನಿಯುಳ್ತುಂಬಿದ ನವರಸದಂಬುಲ ।
ಮೆನೆ ಲಾಲಿಸಿ ಕೇಳ್ವರ ಕಿವಿಗೋಪವಳಾಡಿದ ಲಲ್ಲೆಯೆನೆ ॥
ಅನುರಾಗದಿ ಲಿಖಿಸುವೆನೆಂಬರ ಕ ।
ಯ್ಗನಿಮಿಷನೇತ್ರೆಯ ಘನಕುಚಯುಗದೊ ।
ತ್ತೆನಲಾದುದು ಸತ್ಪ್ರಭುರಾಜನ ೧ ಸತ್ಕವಿತೆಯ ಸವಿಮಾತು ॥ ೨೫

೩ ಸಮನೆ ಕ॥ ೧ ಕಾವ್ಯದೊಳೊಪ್ಪುವ ಮಾತು. ಕ॥

ವಾಚಕವಾಚ್ಯವ್ಯಂಗ್ಯವ್ಯಂಜನ |
ಸೂಚಿತಲಕ್ಷಣಲಕ್ಷ್ಯವಿವೇಕರ |
ಸೋಚಿತಭಾವಾಲಂಕೃತಿರೀತಿತ್ರಯಭೇದಕಭೇದ್ಯ ||
ಆಚರಿತೋಭಯಸಂಧಿಸಮಾಸವಿ |
ವೇಚನೆಗಳ ಭೇದಮನಿನಿಸಱಿಯದೆ |
ವಾಚಾಲತೆಯಿಂದುಸಿರಿದ ದುಷ್ಕೃತಿಯಲ್ಲಿದು ಭಾವಿಪೊಡೆ ||೨೬

ಇದು ವಿಪುಲಾಚಲದೊಳು ವೀರೇಶನ |
ಪದಸನ್ನಿಧಿಯೊಳು ಗೌತಮಗಣಧರ |
ರೊದವಿದ ಕಾರುಣ್ಯದೊಳಾಶ್ರೇಣಿಕನೃಪತಿಗೊರೆದ ಕಥನಂ ||
ತದನಂತರದೊಳ್ಜಿನಸೇನಾರ್ಯ್ಯಂ |
ಮುದದಿಂ ವಿರಚನೆಗೆಯ್ದ ಲಸತ್ಕೃತಿ |
ಯಿದನಾಂ ಪುಣ್ಯನಿಮಿತ್ತಂ ಹಿರಿದುಂ ಹರಿಸದೊಳುಸಿರಿದೆನು ||೨೭

ಈಕಥೆಯಂತೆನಲನಿಲಾಧಾರದಿ |
ನಾಕಾಶಂ ಪಲವೆಸೆದಿಹವವಱೊಳು |
ಲೋಕಂ ಸರಿಡಮರುಗಮಂ ಡಮರುಗದೊಳ್ತ್ರಗುಚಿಟ್ಟಂತೆ ||
ಆಕಾರಂಬಡೆದುದು ಮತ್ತದಱೊಳ್ |
ನಾಕಿನರೋರಗಭುವನಂ ನಿರಘಾ |
ಕಾರರ್ ಸಿದ್ಧರಡರೆ ಶೋಭಿಪ ಪೀರತ್ರಯದಂತಿಹುದು ||೨೮

ಮತ್ತಾನಡುವಣ ಲೋಕದೊಳೋವದೆ |
ಸುತ್ತಿದ ಜಲಧಿದ್ವೀಪಂಗಳ ಸಂ |
ಪತ್ತಿಂ ನೆಲೆಗೊಂಡಿರ್ಪವವಱ ಮಧ್ಯದೊಳತಿಶೋಭಿಸುವ ||
ಮೊತ್ತಮೊದಲ ಲವಣಾಮ್ಬುಧಿ ಚೆಲ್ವಂ |
ಪೆತ್ತುದು ಭೂಮಂಡಲಮೊಂಬಿಂದುವ |
ನೊತ್ತಿ ಬಳಸಿ ಪರಿರಂಜಿಪ ಪರಿವೇಷಂ ತಾನೆಂಬಂತೆ ||೨೯

ಹರಿಸದಿನೆಡೆದೆಱಪಿಲ್ಲದೆ ತನ್ನೊಳ್ |
ನೆರೆವ ಹಲವು ಹೊೞೆವೆಣ್ಗಳನತ್ಯಾ |
ತುರದಿಂದಮರ್ದಪ್ಪುವ ಬಹುಬಾಹುಗಳೆನಲತಿರಂಜಿಸುವ ||

ತೆರೆಯಿಂ ತತ್ಸುಖಜನಿತಸ್ವೇದೋ |
ತ್ಕರಬಿಂದುಗಳುಣ್ಮಿದುವೆಂಬಂತಿರೆ |
ಪಿರಿದುಂ ಸೊಗಯಿಪ ಬುದ್ಬುದದಿಂದಂಬುಧಿ ವಿಭ್ರಾಜಿಸಿತು ||೧೦

ಆಮಿಸುಪ್ಪುಗಡಲ ಮಧ್ಯದೊಳು |
ದ್ದಾಮತೆಯಂ ಪಡೆದೊಪ್ಪುವ ಜಂಬೂ |
ನಾಮದ ದೀವಿ ಕರಂ ನಯನಾನಂದಮನಿರದೊದವಿಸಿತು ||
ಶ್ರೀಮತ್ಸ್ರೋತಸ್ವಿನಿಯ ನಡುವೆಯಭಿ |
ರಾಮತೆಯಂ ಪಿರಿದುಂ ಪಡೆದಾದ್ರೋ |
ಣಾಮುಖವೆಂಬ ಪೊಬ್ಬಲದೊಂದಾಕಾರಮನಂಗೀಕರಿಸಿ ||೧೧

ಆಮಧ್ಯದ್ವೀಪದ ನಡುವಳಿಯ ಮ |
ಹಾಮೇರುಮಹೀಧರಮೆಸೆದತ್ತು ಮ |
ಹೀಮಾನಿನಿ ನರಲೋಕವೆಸರ ಪುರುಷನ ಮಿಸುಪಾದಲಗೆ ||
ಪ್ರೇಮದಿ ಪಿಡಿದೆತ್ತಲು ರಂಜಿಸುವಾ |
ವ್ಯೋಮಚ್ಛತ್ರದ ಪೊಸಪೊಂಗಾವೆನೆ |
ಭೂಮಿಯನಾ ಬಿದಿ ನಿರ್ಮಿಸುವಂದಿಕ್ಕಿದ ಕರುಕಂಭವೆನೆ ||೧೨

ಅಙ್ಗುಲಿಯಂ ಮುನ್ನೆಮ್ಮ ಗಞ್ಗಳಂ |
ತಞ್ದಿಂದ್ರನನಾಸಗ್ಗಮನೆನ್ನೀ |
ಸಞ್ದಲೆಯಿಂ ಪೊತ್ತಂಬುಜಜನ್ಮಾಂಡದ ಪ್ರಾಙ್ಗಡಗಾಗಿ ||
ನುಞ್ಯುಪ್ಪಂದದಿ ಹಾಕದೊಡೆನಗೇ |
ತಙ್ದೊಡ್ಡಿತ್ತೆನುತುಂ ಬೆಳೆವಂದದಿ |
ನುಞಿ ‡ ಮುಟ್ಟಿದುದಾನಿರ್ಜರಲೋಕಮನಾಮಿಸುನಿಯ ಪೆಟ್ಟು ||೧೩

ತ್ರಿಜಗದ್ಭೂಷಣವೆನಲೆಸೆವ ಮಹಾ |
ರಜತಾದ್ರಿಯ ವಾಮೇತರದಿಶೆಯೊಳು |
ಭುಜಗಾಧಿಪನ ಪೂಗಟ್ಟಿಗೆ ಪಿರಿದೆನಿಪಾಭರತಕ್ಷೇತ್ರ ||
ವಿಜಯಾಚಲದಿರ್ಕೆಲದೊಳು ಮೀನ |
ಧ್ವಜನಾಡುಂಬೊಲನೆನಲೆಸೆದುದು ಸರ |
ಸಿಜನಣುಗನ ಕೈಮಾಟಕೆ ಕಡುವಿರಿದುಂ ಬಿನ್ನಣವಡೆದು ||೧೪

‡ ಬೆಳೆದತ್ತುಮುರುಧಿನಿವಾಸಿಗಮಿಸುನಿಯಪೊಂಪೊಂಪೆಟ್ಟು. ಗ||

ಇಂತು ವಿರಾಜಿಪ ಭರತಾವನಿಯೊಳ |
ಗಂತಕದಿಶೆಯಾರ್ಯಾಖಂಡಾವನಿ |
ಸಂತತಸೌಭಾಗ್ಯಂದಳೆದಿರ್ಪುದದಱೊಳುತ್ತಮಮಾಗಿ ||
ತಿಂತಿಣಿಗೊಂಡೆಸೆವೈವತ್ತಾಱುಜ |
ನಾಂತಂ ನೆಲಸಿಹುವವಱ ನಡುವೆ ರತಿ |
‡ಕಾಂತನ ಮನೆಯೆನಿಸುವ ಕುರುಜಾಂಗಣವಿಷಯಂ ಸೊಗಯಿಸುವುದು ||

ಸಲೆ ಭಂಗಂ ನದಿಯೊಳು ಕುಟಿಲತ್ವಂ |
ಲಲನೆಯರಳಕಸಮಿತಿಯೊಳಗಾಜಡಿ |
ವಿಲಸತ್ಪುಷ್ಪದೊಳಕುಲೀನಾಚರಣಂ ಖಗಸಮಿತಿಯೊಳು ||
ತಲೆವಿಡಿವಿಡಿವುದು ರತಿಕಲಹದ ಕಾ |
ದಲರೊಳ್ ದಂಡಂ ವೃದ್ಧಜನದ ಕರ |
ತಳದೊಳಗಲ್ಲದೆ ಮತ್ತಾಜನಪದದೊಳಗೊಂದಿನಿಸಿಲ್ಲಂ ||೩೬

ಬೆಳೆಯೆಂಬ ಸುತೋದಯಕಾರಣದಿಂ |
ದಿಳೆ†ಯೆಂಬಬಲೆ ರಜಸ್ವಲೆಯಾದಂ |
ತಳಸಿ ಕುಡಿಯುರುಬುವುಕ್ಕಗಳಿಂ ಕೆಂಪಾದ ಪೊಲಗಳಿಂದ ||
ಬಳಿಕವಳ ಚತುರ್ಥಸ್ನಾನಕ್ಕರ |
ದಲಸದೆಯಂಬರಸತಿಯೊಱ್ವಂದದಿ |
ಮೞೆ ಕೊಳ್ಗಂ ಮತ್ತಾನಾಡೈಶ್ವರ್ಯವನೇವಣ್ಣಿಪನು ||೩೭

ಮಿಸುಪ ನದೀನಾರಿಯು ನಳಿತೋಳೆನ |
ಲೆಸೆವಿರ್ತಡಿಗಾಲುವೆಯಿಂದಮೆ ನೆಱೆ |
ಮುಸುಕಿ ಬಳೆದ ಚೆಂದೆಂಗೊಳ್ವಾೞೆಯಡಕೆ ಪಸುರೆಲೆವಳ್ಳಿ ||
ಪೊಸಮಾವಿನ ತೋಂಟಂ ಕಿಱುಗಳಮೆಯು |
ರಸದಾಳಿಯು ಬೆಳೆವೊಲನೊಪ್ಪಿದುದಾ |
ವಸುಧಾಸತಿ ಕೈಗೈಯೆ ವಿರಾಜಿಪ ಪಸುರ್ವಸದನದಂತೆ ||೩೮

ನನೆಯುದಿರದ ಪೊಸಕಮ್ಮಂಗಳಮೆಯು |
ತೆನೆಯು ತುದಿಯು §ತನಿಗಂಪಂ ಭುಂಜಿಸ |
ಲೆನುತನುರಾಗದಿನವಱೊಳ್ಕುಳ್ಳಿರ್ದಾಜಡಿವಸುಳೆಗಳು ||

‡. ಕಾಂತೆಗೆ ನೆಲೆ. ಗ||   †. ಯೆಂಬಿಳೆಲೆ.   §. ಪೊಸಗಂಪಂ ಕೊಳಲೆಂ| ದೆ. ಕ||

ಅನುವಂ ಪಡೆದುವು ತತ್ತೃಣರಾಜಿಯ |
ಕೊನೆಗರ್ಚಿದ ಹರಿನೀಲದ ಪರಲೆನೆ |
ನನೆವಿಲ್ಲನ ಪಸುರ್ಗಾವಿನ ಮಿಗಸೊಕ್ಕಿನ ಪೊಸಮಿಂಟೆಯೆನೆ ॥೩೯

ಅರೆವಣ್ಣಾದ ಕಳವೆದೆನೆಗರ್ಚು |
ತ್ತರಗಿಳಿ ಪಾಚಲವಂ ನೋಡುವ ಪಾ |
ಮರಿಯರ ಕುಡುಪುರ್ವಿನ ಕೊನೆಮುಟ್ಟಿದ ತುಱುಗವೆಗಳ ನಡುವ ॥
ಕಱೆಯಾಲಿಗಳೆಸೆದುವು ಚಿತ್ತಭವಂ |
ವಿರಹಿವಿಹಂಗವನಿಸುವ ಪರಲ್ವಿ |
ಲ್ಲರಡುಹೆದೆಯ ಮಾಧ್ಯದ ಹರಿನೀಲದ ಗೋಳಕವಂಬಂತೆ ॥೪೦

ಬಳೆಗೈಯೆತ್ತಿ ಬಗಸೆಗಣ್ಗಳ ಕೋ |
ಮಲೆಯುರ್ಪಾಱಿಸುತೀಕ್ಷಿಪ ಕಡೆಗ |
ಣ್ವೆಳಗೆಸೆದುವು ತತ್ಕಳವೊಗೆೞಗಲನುತಾಗಸದೊಳ್ಕಂದ ॥
ಗಿಳಿಯುಂ ಸೆಳೆಯಲೆನುತ್ತವರೆತ್ತಿದ |
ತೆಳುವಳುಕಿನ ಸೆಳೆಯೋ ಪಸುರ್ವಟ್ಟೆಯ |
ತೊಳಗುವ ಗಾಳಿಪಟಕೆ ಕಟ್ಟಿದ ರಜ್ಜುವಿದೋ ಎಂಬಂತೆ ॥೪೧

ಚದುರೆಯ ಚಟುಲಚಕೋರಾಕ್ಷಿಗಳೊಳ |
ಗೊದವಿದ ಮೂವಣ್ಣದ ರುಚಿಯವಳೞ್ |
ವುದಕದೊಳೊಡವೆರೆಸ್ಸಿಯಲು ಮತ್ತದನೀಂಟುವ ಪಥಿಕರ ಕಣ್ಗೆ ॥
ಇದು ಕಸ್ತೂರಿವಿಮಿಶ್ರಿತಜಲಮಿಂ |
ತಿದು ಘನಸಾರವಿಮಿಶ್ರಿತಜಲಮಿಂ |
ತಿದು ನವಘುಸೃಣವಿಮಿಶ್ರಿತಜಲವೆಂಬಂತೆ ವಿರಾಜಿಸಿತು ॥೪೨

ಪೊಂಬಳ್ಳಿಯ ಪೊಗರಂ ಗೆಲ್ವಂಗದ |
ಕಂಬುಲಲಿತಕಂಧರೆ ಮುನ್ನೆಱೆದ ನ |
ಮಾಂಬು ಜಲಕ್ಕನೆ ತೀವಲ್ಕಾ ಪಾಂಥನ ಸೆರೆಗೈಯುಂಬ ॥
ಅಂಬುರುಹದೊಳಾಪ್ರತಿರೂಪು ಕರಂ |
ಬಿಂಬಿಸೆ ಕಣ್ಗೆಡ್ಡಂಬಡೆದುದು ಪೀ |
ತಾಂಬರದೇವನ ಪಟ್ಟದರಸಿಯಾಕಾರಮನನುಕರಿಸಿ ॥೪೩

೧. ದುದು ಬಳಕದ ಕ॥

ಶ್ರೀಮದ್ವಿಶ್ರುತವಿಷಯವಿಭಾಸಿ |
ಗ್ರಾಮಮಡಂಬನಗರಖೇಡದ್ರೋ |
ಣಾಮುಖಪತ್ತನಸಂವಾಹನಗಳ್ ಗಂಡಶಿಖರಿಯಾಗೆ ||
ಆಮಧ್ಯದ ನವಮಣಿಹರ್ಮ್ಯಗೃಹ |
ಸ್ತೋಮವಿರಾಜಿತ§ವಾರಣಪುರಮು |
ದ್ದಾಮತೆಯಿಂದೊಪ್ಪುವ ರೋಹಣಗಿರಿಯಂತೆ ವಿರಾಜಿಸಿತು ||೪೪

ಇಳೆಯೆಂಬೆಳೆಲತೆಯ ಪೀನಸ್ತನದೊಳ್ |
ತೊಳಗುವ ಪೊಸಪೊಂದಾತಿಯ ತೆಱದಿಂ |
ಪೊಱಲೀಕ್ಷಿಸುವರ ಕಣ್ಬಗೆಗೊಪ್ಪಂಬಡೆದುದು ಮತ್ತದಱ ||
ವಲಯದೊಳ್ತೋರಣದಿಂ ಕೀಲಿಸಿ ಪ |
ಜ್ಜಳಿಸುವ ಪಸುರ್ವಣಿಯೆಂಬ ತೆಱದಿ ನಳ |
ನಳಿಸುತೆ ತುಱುಗಿ ಬೆಳೆದ ಬಹಿರುದ್ಯಾನಂ †ಕಣ್ಗೊಳಿಸಿದುದು ||೪೫

ಪರಿವ ಪಸುಳೆಗಿಳಿಗಳ ನುಣ್ಗೊರಲಿಂ |
ಪಱಿಗುಟ್ಟುವ ಪರಪುಟ್ಟದ ಪಾಡುವ |
ಪಱಿವೊಮಱಿಯ ಫಲವೀವ ಗುಣದಿನಮರಮಹೀಜಾತವನು ||
ಪಱಿಯೆಂಬ ಕುಜಾತದ ಶಶಿಕಾನ್ತದ |
ಪಱಲೆಯಿನೊಸರ್ವ ಕೊಳದ ಸುಭಗತೆಯಿಂ |
ಪಱಲೆಯನುಱೆ ಪಾತ್ರಿಸುವುದು ನನ್ದನಕಾನನ್ದನದಿರವು ||೪೬

ಹಿರಿದುಂ ಹರಿಸಮೊದವೆ ವಿಬುಧಸ್ತ್ರೀ |
ಪುರುಷರ್ತನ್ನೊಳು ವಿಹರಿಸುವುದಱಿಂ |
ನಿರತಸುರಭಿಸುಮನೋಮಂದಾರಕ್ಕಾಸ್ಪದಮಪ್ಪುದಱಿಂ ||
ಸುರಲೋಕಂ ತ್ರಿದಶಜನಾನ್ವಿತಮದು |
ಪಿರಿದಲ್ಲೆಂದಾಬಹುಜನಯುತಕರಿ |
ಪುರಕಿಱಿತಂದಾನಂದನದಂತೆ ವನಂ ವಿಭ್ರಾಜಿಸಿತು ||೪೭

ಅನವರತಂ ತನ್ನೊಳು ವಿಹರಿಪ ವರ |
ವನಿತಾತತಿಕೃತಲೀಲಾಕೃತ್ಯದಿ |
ಮಿನುಗುವ ಕುಸುಮಮಾವಳಿ ತೀವಿದ ದಶದೋಹಲತರುವಿಂದ ||

§ ಹಸ್ತಿನಪುರಿಯ. ಕ| † ಬಂಧುರಮಾಯಿತ್ತು. ಕ||

ಘನಹಿಮಶಿಶಿರವಸನ್ತಗ್ರೀಷ್ಮ |
ವನಿಹಿತವರ್ಷಾಶರದಾಗಮಗಣ |
ಎನಿಸುಂ ಕಾಣಿಸದಾಬಹಿರುದ್ಯಾನಂ ವಿಭ್ರಾಜಿಸಿತು ||೪೮

ವನಲಕ್ಷ್ಮಿಗೆ ಯೌವನವೆನೆ ಮದುರಿತು |
ಮಿನುಗುವ ಮೊಡವಿಗಳೆನೆ ಮೞಲೊಟ್ಟಿಲು |
ಘನಕುಚವೆನೆ ಕೃತ್ರಿಮಗಿರಿ ರೋಮಾವಳಿಯೆನೆ ಕೃತಕನದಿ ||
ದನಿಯೆನೆ ನವಕೋಕಿಲರವಮೊಳ್ದಱು |
ಜೆನೆ ನವಿಲಡಿಯೆನೆ ತಳಿರಳಕಾವಳಿ |
ಯೆನೆ ಪಜ್ಜೆಮೊಗಳುಗುರೆನೆ ಕೇದಗೆಯೆಸೞೊಪ್ಪಮನೆಯ್ದಿದುವು ||೪೯

ಪಸುರೆಲೆದುಱುಗಿದ ಬನಗತ್ತಲೆಯೊಳ್ |
ಗೆಸೆವ ವಸನ್ತಂ ನೂತನಚಂಪಕ |
ದೆಸೞ್ದೊಂಗಲ್ಜೊಡರ್ವಿಡಿದಾಕೆಂಗಣ್ವಕ್ಕಿಯ ಸರಮೆಂಬ ||
ಪೊಸಗಂಟೆಯನಲುಗಿಸೆ ವಿಟಮೃಗತತಿ |
ಮುಸುಕಲು ಕಂಡಿಂಗೋಲ ಶರಾಸನ |
ಕಸಮೇಷುಗಳಂ ಸಾರ್ಚುತಿಸುವನಂಗಜನತಿಭರದಿಂದ ||೫೦

ಇದು ವನವನಿತೆ ಬಿಡುವ ಬಡಸುಯ್ಯೊಲ |
ರಿದು ಚೈತ್ರಂ ಬೀಸುವ ಬಿಜ್ಜಣಿಗೆಯೊ |
ಳೊದವಿದ ಗಾಳಿಯಿದೀಶ್ವರನಿಂ ಮುನ್ನಮೆ ಮಣ್ಮೞಿಗೊಂಡ ||
ಮದನಂಗಾಮಱುಮೃಟ್ಟಂ ಪಡೆಯಿಸ |
ಲೊದವಿದ ಜೀವನವಾಯುವಿದೆನೆ ಕಡು |
ಚದುರರ ಚಿತ್ತಂಗೊಳಿಸಿದುದಾಬನದೊಳು ಸುೞಿವೆಳಗಾಳಿ ||೫೧

ಹೊಸಹೊಂಗೋಂಟೆಯ ಬಟ್ಟಿದೆನೆಯೆ ರಂ |
ಜಿಸುವ ದಳಾವಳಿ ರಾಜಕುಮಾರ |
ಪ್ರಸರವಿರಾಜಿತಸದನಸಮೂಹಮೆ ನವಕೇಸರವಿತತಿ ||
ವಸುಧಾವರಸಾಧಮೆ ಕರ್ಣಿಕೆಯುಂ |
ತೆಸೆದಿರೆ ಹಸ್ತಿನಪುರಿ ಲಕ್ಷ್ಮೀಯುತ |
ಳಸಮಾನಸುವರ್ಣಾಂಭೋರುಹದಂದಮನನುಕರಿಸಿದುದು ||೫೨

ತಳದಿಂ ಕೆನೆವರೆಗಂ ತೆತ್ತಿಸಿ ಪ |
ಜ್ವಳಿಸುವ ಪೊಸಮಾಣಿಕಮಣಿಗಳ ತನಿ |
ವೆಳಗಾಗಸಮಂ ಚುಂಬಿಸಿ ವಿತತಭುಜಗಭುವನಂಬರೆಗಂ ||
ಇಳಿದಗುಳಿಮಲೋದಕದೊಳಿರದೆ ಮಾ |
ರ್ಪೊಳೆಯುಲ್ಮಲೋಕದೊಳಿನಿಸುಳಿಯದೆ |
ಬಳೆದುರಿಲಿಂಗಂಬೊಲು ಕೋಂಟೆ ಕರಂ ಕಣ್ಗೆ ವಿರಾಜಿಸಿತು ||೫೩

ವರವಜ್ರದ ಮುಂಡಿಗೆದಾಡೆಗಳಾ |
ಕುರುವಿಂದದ ಕಿಱ್ಕೋಲ್ಗಟ್ಟುಗಳ |
ಅರುಣಜಲಂಬೊರೆದಧರಮುದಱೊಳೆಡೆಯಾಡುವ ಜನತತಿಯಾ ||
ಸ್ವರಸಂತತಿ ಗರ್ಜಿತಮಾಗಲ್ಕಾ |
ಪುರದ ಮಿಸುಪ ಹುಲಿಮೊಗಮೊಪ್ಪಿದುದರಿ |
ಧರಣೀಪಾಲಪಶುಗಳಂ ನುಂಗುವ ಪುಲಿಮೊಗಮೆಂಬಂತೆ ||೫೪

ರತಿ ಪಾರ್ವತಿ ರಮೆ ರಾಜೀವೋದ್ಭವ |
ಸತಿಯರ್ ಕುಳ್ಳಿರ್ಪರುಪೀ ಗಳೆನ |
ಲತಿರಂಜಿಸೆ ನಾಲ್ವಾಗಿಲ ಗೋಹುರಮುಮರಾಡುತ್ತಿರ್ಪ ||
ನುತಸಾರಿಗಳೆನೆ ಸಂಚರಿಸುವ ಜನ |
ತತಿ ತತ್ಪುರದಿನಶಿವೀಧಿಗಳು |
ನ್ನತಿಕೆಯೊಳೊಪ್ಪುವಡೆದ ಪಗಡೆಯು ನಾಲ್ಗರದಂತೊಪ್ಪಿದುವು ||೫೫

ಶ್ರುತಿಸೀಮಂತಿನಿ ಮನವೊಸೆದಾಡುವ |
ಕೃತಕಾದ್ರಿಗಳೋ ಸದ್ಭವ್ಯಲಸ |
ನ್ಮತಿಮುಕ್ತಿಗೆ ಬಿಡದೆಡೆಯಾಡುವ ನವಮಣಿನಿಶ್ರೇಣಿಗಳೋ ||
ವಿತತದಯಾಬ್ಧಿಯ ನವಫೇನಗಳೋ |
ಅತಿಪುಣ್ಯದ ಬಲ್ಬಣಬೆಗಳೋ ಎನೆ |
ಸತತಂ ಶೋಭಿಸುವುವು ಜಿತಮದನಜಿನಾಲಯಮುಂತಲ್ಲಿ ||೫೬

ಪುರದ ಪೃಥಿವಿಪಾಲನಪೂರ್ವಾನ್ವಯ |
ದರಸುಗಳಂದಿನ ಚಕ್ರೇಶ್ವರರಂ |
ಪಿರಿದಪ್ಪವಗಡದಿಂದ ಪೆಳರ್ಚಿಸಿ ಬಲ್ಗಪ್ಪಂಗೊಂಡು ||

ಇರಿಸಿದ ನವನಿಧಿಯೋ ಎನಲೀಪ್ಸಿತ |
ವರವಸ್ತುವನೀವಾಪಣನಿಕರಂ |
ಕರಮೆ ೧ವಿರಾಜಿಸುತಿರ್ದುವು ತತ್ಪುರವೀಧಿಯೊಳೆಡೆಗಿಱಿದು ||೫೭

ಇನಿಸು ತೊಲಗಿ ಕೂಡಿದೊಡದು ಕಡುಸವಿ |
ಯೆನುತುಂ ನಿಮ್ಮೊಳು ನಾವು ಮುನಿವೆವೆಂ |
ಬನಿತಱೊಳಱುಗುಲಿ ಕಾವಗೆ ಕೈದುಗಳಾದುವಿವೆನುತೊಸೆದು ||
ನನೆಯುಂ ದಾವಣಿಗಟ್ಟಂ ಕಟ್ಟು |
ತ್ತಿನಿಯರ್ಗೊಪ್ಪಿಸಿ ಕೊಡುವಪ್ರಲಿತ್ತು |
ರ್ವನಿತೆಯರಾಪೂವಿನ ಪೇಟೆಯೊಳೊಳ್ಪಿಸಿಗವಂ ವಿಟರ್ಗೆ ||೫೮

ಬಾಱಿದು ಸುರುಳ್ದಳಿಯೊಲೆಯಿಂ ತೆಗೆದು ವಿ |
ಶಾಲನಯನೆಯೊರ್ವಳು ಕಲ್ಪಾರದ |
ಮಾಲೆಯನೊರ್ವ ವಿಟಂಗೀಯಲ್ಕೆಸೆದತ್ತಿದೞಂ ಜಯಿಸು ||
ಮೂಲೋಕವನೆಲ್ಲವನೆನುತುಂ ಮಾ |
ಸಾಳಾದಂಗಜವೀರಗೆ ಪೂವಿನ |
ಬಾಳಂ ಜಳಪಿಸಿ ರತಿಯನುರಾಗದಿ ಗೆಲಿಸಿ ಕೊಡುವ ತೆರ್ದಿ ||೫೯

ಉಸಿರ್ವೊಯ್ಯಾಗಳ್ಕಸೌರಭ್ಯವ |
ನುಸಿರ್ದಗೆವಾಗಳ್ಕಬಾವನ್ನದ |
ಪೊಸಕಂಪಂ ಕೊಳಲೆರಡೆಡೆಗೆಡೆಯಾಡುವ ಮಱಿದುಂಬಿಗಳು ||
ಎಸೆದುವು ಘಟ್ಟಿವುಗುಱ್ಚಿವಬಲೆಯರ |
ಮಿಸುಪ ಮುಖಾಂಬುಜದೊಳ್ನೆಲಸಿದ ಸಿರಿ |
ಯೊಸೆದು ಕರಂ ಪೊಡೆದಾಡುವ ಹರಿನೀಲದ ಕಂತುಕದಂತೆ ||೬೦

ಕೇದಗೆಯೆಸಱೊಳೊತ್ತೆಯಲೆನುತ್ತಂ ಜ |
ವಾದಿಯನಣ್ಪಿಸುತೆಳದುಪ್ಪುಳವಂ |
ಸೋದಿಸಲೆನುತೊರ್ವಳ್ಕೞವೆರಲುಗುಗೊನೆಯಿಂ ಕರ್ದುಕುತಿರೆ ||
ಆದಂ ಕಣ್ಗೊಪ್ಪಿದಳತಿಕೋವಿದ |
ರಾದರ ಚಿತ್ತಾಕರ್ಷಣಯಂತ್ರವು |
ದಾದರದಿಂ ಪೊಂದಗಡೊಳಗುಂಗುರಗಂಟದಿ ಬರೆವಂತೆ ||೬೧

೧ ವಿರಾಜಿಸಿದುವು ನಗರವೀಧಿಯೊಳೆರಡೆಡೆಗಿಱಿವುದು. ಕ||

ಸಿಂಗರಜೋಯಿಯ ಕುಲದೇವತೆಯ ಗೃ ।
ಹಾಂಗಣಸಮ್ಮೋಹನರಸಪೂರಿತ ।
ದಿಂಗಡಲೊಳಗಣ ಬುದ್ಬುದವೋ ಸಿಂಗರದೆೞ್ವಟ್ಟುಗಳೋ ॥
ಅಂಗಜಗಿರಿದುರ್ಗಗಳೋ ಎನೆ ಚೆ ।
ತ್ತಂಗೊಳಿಸುವ ನವವಿಧಮಣಿಗರುಮಾ ।
ಡಂಗಳ್ತೀವಿದ ವೇಶ್ಯಾವಾಟಂ ಕಣ್ಗೊಪ್ಪಿದುವಲ್ಲಿ ॥೬೨

ಪಾರ್ವತಿಯೊಳ್ಮುನ ವರದಿಂ ಮತ್ಪತಿ ।
ಕರ್ವಿಲ್ಲಂ ಸಮ್ಮೋಹನರೂಪದಿ ।
ನುರ್ವಿಯ ವಿಟರೆಲ್ಲರ್ದೆಯೊಳ್ನಲಸಿದನೇತ್ತೆಱದಿಂದವನಾ ॥
ಒರ್ವಳ್ನೆರೆಯುಲ್ಬಾರದೆನುತ ರತಿ ।
ತಳ್ವದೆ ಬಹುರೂಪಂ ತಾಳಿದಳೆನೆ ।
ಸರ್ವರನನುಕರಿಸುವ ವಾರಸ್ತ್ರೀನಿವಹವೆಸೆದುದಲ್ಲಿ ॥೬೩

ಹರನ ಜೆಡೆಯ ಬಡಹೆಣ್ಣಿಯಂ ವಾಣೀ ।
ವರನ ಬೆರಲ ಕಂರವನಂಬುರುಹೋ ।
ದರನ ಕರದ ಕಂಬುವನಮರೇಂದ್ರನ ಹಸ್ತದ ಕುಲಿಶವನು ॥
ತರಿಸಿ ನಿಟಿಲಮೃದುಹಸ್ತಾಂಗುಲಿಕಂ ।
ಧರರದನಂಗಳ್ಗಣೆಯಂ ನೋಡುತ ।
ಸರಿಯಲ್ಗೊಂದು ಬಿಸುಟ್ಟಪ್ಪುದು ಗಡ ವೇಶ್ಯಾವನಿತೆಯರಲ್ಲಿ ॥೬೪

ವಿಲಸದ್ವಿಶ್ರುತಪುರವರಮಂಜೂ ।
ಳ್ವೆಳೆಪ್ಪಾಲದೊಳ್ಸೌಭಾಗ್ಯತೆಯಿಂ ಕ ।
ಣ್ಗೊಳಿಸುವ ಪುರಜನ† ಮೆಂಬ ಪಳಸನುಣ್ಮ ಪಳವಿಗೆಯಂ ಮೀಱ್ಪ ॥
ಇಳೆಯಮ್ಮನ ಕರುಣಾರಸಂ ತೀವಿದ ।
ಲಲಿತತಟಾಕಮದಾಗಲ್ಕರಮನೆ ।
ತೊಳಗುವ ಬಾಗಿಲ್ವಾಡಮದೞ ತೊಂಜೆಂಬಪ್ಪಾಲೊಪ್ಪಿದುದು ॥೬೫

ನಿರುತಂ ಶ್ರೀಯುತಪುರಮೆಂಬಿಂದ್ರಾ ।
ವರಜನ ಮಧ್ಯದ ಪೂರ್ಕುೞ ಹೊಂದಾ ।
ವರೆಯೆನೆ ‡ ರಂಜಿಪ ರಾಜಾಲಯಮೊಸೆಯುತ್ತಿರಲಂತಲ್ಲಿ ॥

† ಮೆಂದೆಂಬ ಪಳಸಂ ನೆರೆ ಬೆಳೆಯಿಸುವ ಕ॥

‡. ಕಡುರಂಜಿಪ ರಾಜಾಲಯಮೊಸೆಯುತ್ತಿರಲಲ್ಲ ಕ॥

ಸುರುಚಿರವರವಾಣೀಸಂಯುತಬಂ |
ಧುರನತಿಚತುರಕಲಾಪಂ ಪಲನೆಲ |
ದರಸಂ ಕಣ್ಗೊಪ್ಪಂಬಡೆದಂ ನಾಲ್ಕೊಗದವನಂದದೊಳು ||೬೬

ಹಿಂದಿರ್ದರು ನಾವೆಕ್ಕೆಯೊಳಗೆ ಹೋ |
ರ್ದಂದದೆ ಸೋಮಪ್ರಭನೃಪನಭಿನವ |
ಕಂದರ್ಪಂ ಜನಿಸಿದನಾದೊಡೆ ತತ್ಕೀರ್ತಿಲತೆಯುನಾಂತು ||
ಇಂದುಕಲಾಚೂಡನ ಪೆರ್ಚಿದಲೆಯುಂ |
ಕೆಂದಳಿರ್ದಜ್ಜ್ವದುನೆಯ್ದ್ದದೆ ಬಿಡವೆಂ |
ದಿಂದೀವರನಾಭನುಮಬ್ಜಾಸನನುಂ ಚಿಂತಿಸುತಿಹರು (?) ||೬೭

ಸರಸಿಜಶಂಖವಿರಾಜಿತಹಸ್ತಂ |
ನಿರುತಮನಂತಲಸದ್ಭೋಗಯುತಂ |
ವರರುಚಿರಶ್ರೀಸಮುಚಿತಗಾತ್ರಂ ಬಹುಲೋಕಾಧಾರಂ ||
ತರುಣೀಜನಕಾಮೋದಯಕಾರಣ |
ನುರುವಿಕ್ರಮನಾಪುರುಷೋತ್ತಮನೆನೆ |
ಕರಮೆಸೆದಂ ವಿಷ್ಣುವಿನಂದದೊಳಾಪ್ರಭುಕುಲಮಣಿದೀಪಂ ||೬೮

ಇದು ಸುರನರಫಣಿಪರಿವೃಢವಿನಮಿತ |
ವಿದಿತವಿನಯಗುಣಗಣಯುತಜಿನಪತಿ |
ಪದಸರಸಿಜಮದಮಧುಕರನತಿಚತುರಕಲಾಪರಿಪೂರ್ಣಂ ||
ಸದಮಲಚರಿತಂ ಪ್ರಭುರಾಜಂ ಸಂ |
ಮುದದಿಂ ರಚಿಸಿದ ಜಯನೃಪಕಾವ್ಯದೊ |
ಳೊದವಿ ಮನೋಹರಮಂ ಪಡೆದತ್ತೊಂದನೆಯ ಮಿಸುಪ ಸಂಧಿ ||೬೯

ಒಂದನೆಯ ಸಂಧಿ ಸಂಪೂರ್ಣಂ.

# ದ್ವಿತೀಯ ಸಂಧಿ.

---

**ಸೂಚನೆ** ॥ ವರಸೋಮಪ್ರಭರಾಜೇಂದ್ರಂಗೆ ।
ತರುಣಿಗೆ ಸೌಂದರಿಗಂ ಜನಿಯಿಸಿ ಜಯ ।
ಧರಣೀಪತಿ ಸಕಲಕಲಾಕೋವಿದ‡ನಾಗಿ ಹರೆಯವಡೆದಂ ॥

ತತ್ಪೃಥಿವೀಪಾಲನ ಸಕಲಕಲಾ ।
ವ್ಯುತ್ಪನ್ನನ ಕಾರುಣ್ಯರಸದೆ ವಿಲ ।
ಸತ್ಪತ್ನೀನಿವಹಂ ಪಿರಿದನುರಾಗವನೀಯುತ್ತಿಹುದು ॥
ಸತ್ಪತಿಮುಖದರ್ಶನದಿಂದೆಸೆವಸಿ ।
ತೋತ್ಪಲವನವರ್ಕೋದಯದಿಂದ ಮ ।
ಹೋತ್ಪಲಕಾನನಮನುದಿನಮತಿವಿಭ್ರಾಜಿಸುವಂದದೊಳು ॥೧

ಮಿಂಚಂ ಮಿನುಗುವ ಸಂಚಲತೆಯೊಳ್ ಪ ।
ಳಂಚಿ ಗೆಲುವ ಚಟುಲಾಕ್ಷಿಗಳಸೆವ ಪಿ ।
ಪಂಚಿಯ ಪಂಚಮದಿಂಚರಮಂ ಪಿರಿದಪಗಡಿಸುವ ಮಾತು ॥
ಅಂಚೆಯ ನಡೆಯನಿದಂ ತನತೆನುತುಂ ।
ಮಂಚಲ್ಪಿಡಿವ್ರಾಳ್ಕಡೆ ರತಿರೂಪಂ ।
ಲಂಚಂಗೊಂಡ ವಿಲಾಸದಿನೆಸೆದತ್ತಾರಾಣೀವಾಸಂ ॥೨

ಎಳಗಾಯ್ಮೊಲೆಯ ಎಳಂತಿಗೆಗಣ್ಗಳ ।
ಸುಬ್ಬನಾಭಿಯ ಸುಲಲಿತಲಲಿತಾಂಗದ ।
ತಳಿರ್ಗಾಲ್ಗಳ ತಾರಾಪಥಮಧ್ಯದ ಹಸುಳೆವಱಿಯ ಹಣೆಯಾ ॥
ಅಲಘುಕಬರಿಯ ಕಮಲನಿಭವದನದ ।
ಕಳಕಂಠಾಳಾಪದ ಹೊಸಹರೆಯದ ।
ಲಲನೆಯರ ವಿಲಾಸಂ ನೃಪನಚಿತ್ತಮನೆಱಕುಗೊಳಿಸಿದುದು ॥೩

ಆರಾಜೇಂದ್ರನ ರಾಣೀವಾಸದೊ ।
ಳೋರೊರ್ವರ ಮುಖಕೋರೊರ್ವರ ಮುಖ ।
ಪೋರೊರ್ವರ ಕುಡುಪುರ್ವಿಂಗೋರೊರ್ವರ §ಕೊಂಕಿದ ಪುರ್ಬು ॥

---

‡. ನು ಹರೆಯಮಂ ತಳೆದಂ. ಗ॥ § ಕುಡುಪುರ್ಬುಗಳು. ಗ॥

ಒರೊರ್ವರ ಮುಡಿಗೋರೊರ್ವರ ಮುಡಿ |
ಯೋರೊರ್ವರ ತೊಡೆಗೋರೊರ್ವರ ತೊಡೆ |
ವೈರವಡೆದ ವಸ್ತುವಿನಿರವಂ ನೆಱೆ ಪೋಲ್ತು ಸೊಗಯಿಸಿದುವು ||೪

ಆರಾಣೀವಾಸದ ಮಧ್ಯದೊಳೆ ಮ |
ಹಾರಾಜನ ಕೈವಿಡಿದಗ್ರಸ್ತ್ರೀ |
ಯೀರೆಣ್ಟುಸಿರದಱಿಕೆಯು ಗೋಪಾಂಗನೆಯರ ಮಧ್ಯದೊಳು ||
ವಾರಿಜನಾಭನ ತೊಡೆಯುಡರ್ದಿಂದಿರೆ |
ತಾರಾಂಗನೆಯರ ನಡುವಣ ರೋಹಿಣಿ |
ಕೈರವಮಿತ್ರನ ಪೊರೆಯೊಳಗೆಸವಂದದಿ ಕಣ್ಗೊಪ್ಪಿದಳು ||೫

ಲಲಿತಾಶೋಕತರುಣಪಲ್ಲವಪದ |
ತಳದಂತಃಪುರದಬಲಾತತಿ ಕ |
ಣ್ಗೊಳಿಸುವ ಜಂಗಮವಲ್ಲರಿಯಂತೆ ವಿರಾಜಿಸುತಿರಲಲ್ಲಿ ||
ಇಳೆಯಾಣ್ಮಂ ನವಚೈತ್ರನವೊಲು ಪ |
ಜ್ಜಳಿಸುತ್ತಿರೆ ಸೌಂದರಿವೆಸರಂ ನೆಱೆ |
ತಳೆದ ಮಹಾಸತಿಯೆಸೆದಳು ನವನಂದನಲಕ್ಷ್ಮಿಯ ತೆಱದಿ ||೬

ಚಾರುಚಕೋರಂಬೊಲು ಚಂದ್ರಂಬೊಲು |
ಕೀರಂಬೊಲು ವಟಪಕ್ವಫಲಂಬೊಲು |
ಕೋರಕಿತಾಬ್ಜಂಬೊಲು ಸಿಂಗಂಬೊಲು ಪುಳಿನಂಬೊಲು ಮಿಸುಪ ||
ವಾರಣಹಸ್ತಂಬೊಲು ಕೂರ್ಮಂಬೊಲು |
ನಾರಿಯ ಕಣ್ಮೊಗ ನುಡಿ ತುಟಿ ಮೊಲೆ ನಡು |
ತೋರಿದುವಾದ ನಿತಂಬಂ ತೊಡೆಯಡಿಗಳು ಕಡುಸೊಗಸಿದುವು ||೭

ಬೆದರ್ಪುಲ್ಲೆಯನೇಳಿಪ ಜಳತಿಗೆಗ |
ಣ್ಬಿದಿಗೆವೆಱೆಯ ಬಿಂಕಂಗೆಡಿಪಧರಂ |
ಮದನಮತಂಗವಜವಂ ಮೆಯ್ಸಿರಿಗುಂದಿಪ ಮೃದುತರಗಮನಂ ||
ವಿದಳಿತವಿಮಲಾಂಬುಜಮಂ ಸೋಲಿಪ |
ವದನಂ ಪುರುಳಿಯ ಪುರುಳುಗೆಡಿಪ ನುಡಿ |
ಕದಳೀಸ್ತಂಭಮನೇಳಿಸುವೂರುಗಳೊಪ್ಪಿದುವಾಸತಿಗೆ ||೮

ಜೇರೊಂದಱೊನೆರಡಾದ ಲತಿಕೆಯೋ |
ಮಾರಾನಲನ ಜವಳಿದಲೆಯೋ ಮದ |
ನೋರಗಮುಖದ ಕವಲ್ನಾಲಗೆಯೋ ಎಂಬಂತಣಾಗಿನೊಳು ||
ಆರಾಜಪ್ರಭನೃಪನುಂ ಚಾರುಚ |
ಕೋರವಿಲೋಚನೆ ಸೌಂದರಿಯುಂ ಪಿರಿ |
ದಾರಯಲೊಂದಸುವಿಂಗಿರ್ವರ್ಯ್ವಡೆದಂದದಿನೊಪ್ಪಿದರು ||೯

ಮೃಡನಂ ಮೊರಡಿಯಣಾಗಿ ನಾಲ್ಮೊಗನಂ |
ನುಡಿವೆಣ್ಣಂಬುರುಹೋದರನಂ ಸವಿ |
ಗಡಲ ಕುವರಿಯುಂಗಜನಂ ರತಿ ಮೊದಲ್ಗಣ್ಣನನಿಂದ್ರಾಣಿ ||
ಉಡುಪತಿಯಂ ರಾಗದಿ ರೋಹಿಣಿ ಕ |
ಯ್ವಿಡಿದಂದದಿ ನೃಪತಿಯ ತೋಳ್ಬಾಳಂ |
ಪಿಡಿದಾಪಿಡಿನಡುವಿನ ಸೌಂದರಿ ಸುಖಮಿರೆ ದಿನವೊಂದಱೊಳು ||೧೦

ನೊಸಲ ನಯನದಂತೊಪ್ಪುವ ಕುಂಕುಮ |
ರಸದ ಲಲಾಮದಿ ನಿಡುಮುಡಿಯೊಳು ರಂ |
ಜಿಸುವ ಹಸುಳೆವೆಱೆಯಂತೆ ವಿರಾಜಿಪ ಬೆಳರ್ಗೇದಗೆಯೆಸಳಿಂ ||
ಒಸೆದೇಱದ ನವಕೇಸರಿಯಂದದಿ |
ಮಿಸುಗುವ ಮುತ್ತಿನ ಸಿಂಹಾಸನದಿಂ |
ವಸುಧಾಧಿಪಸತಿಯಂದಿನ ದುರ್ಗಾಂಬಿಕೆಯಂತೊಪ್ಪಿದಳು ||೧೧

ಶೃಂಗಾರರಸಾಂಭೋಧಿಯ ತರಳತ |
ರಂಗದ್ವಿತಯದ ನಡುವೆ ವಿರಾಜಿಪ |
ತಿಂಗಳ ತಿಳಿಗೊಳದೆಮಳಂಚೆಯ ಮಧ್ಯದೊಳೆಸೆವಂಬುಜದ ||
ಭಂಗಿಯನನುಕರಿಸುತೆ ಹರಿಸದೊಳು |
ತ್ತುಂಗಕಳಶಕುಚೆಯರು ಬೀಸುವ ಚಮ |
ರಂಗಳ ನಡುವೆಸೆದುದು ವದನಂ ವಸುಧಾ+ವರವಲ್ಲಭೆಯಾ ||೧೨

ಸಮುಚಿತದಿಂ ನಿಂದಾಪ್ರತಿಹಾರ |
ಪ್ರಮದೆಯದೊರ್ವಳ್ ಚುಬುಕಾಗ್ರದೊಳು |
ತ್ತಮಮರಕತಮಣಿಮಯದಂಡಮನತ್ಯಾನಂದಂಬೆತ್ತು ||

+. ಭೀಶನ ವಧುವಾ. ಗ||

ಅಮರಿ ಪಿಡಿಯಲೆನಸುಂ ರಾಜಿಸಿದುದು |
ವಿಮಲಶ್ರೀಮುಖವಿಕಸತ್ಕಾಂಚನ |
ಕಮನೀಯಾಂಭೋಜಾತದ ನವನಾಳವಿದೆಂಬಂದದೊಳು ||೧೩

ಅಂಗಜಪಂಚಫಣೋರಗಪುರುಷಂ |
ಹೊಂಗೇದಗೆಯೆಸಳಿಂ ವಾಸಿಸಿ ಚಿ |
ತ್ತಂಗೊಳಿಸುವ ತನ್ನಯ ಕಾಂತೆಗೆ ನೀಂ ವಾಸಿಸಲೆನುತೀವ ||
ಪಾಂಗಿಂ ತಂಬುಲದೆಲೆಯುಂ ತೆಗೆದೆಡ |
ದಂಗೈಯೊಳಗಿರಿಸುವ ವೀಳೆಯದ ಲ |
ತಾಂಗಿಯ ದಕ್ಷಿಣಹಸ್ತಂ §ಧರಿಸಿತು ಪಿರಿದುಂ ಚೆಲ್ವಿಕೆಯಾ ||೧೪

ಮರಕತಮಣಿಮೇಖಲೆಯ ಮರೀಚಿಯೆ |
ಪಿರಿದೊಪ್ಪುವ ಪಲ್ಲವವೆಂಬಂತಿರೆ |
ನೆರೆದ ಲತಾಂಗಿಯರೊಳಗೊರ್ವಳು ನಿಂದೊಳ್ಗುಡಿಯಗ್ರದೊಳು ||
ಇರಿಸಿದ ಮಿಸುನಿಯ ನಿಡುಗಿಂಡಿ ಕರಂ |
ಪರಿರಂಜನೆಯಂ ಪಡೆದತ್ತಿಬಂ |
ಧುರಕಾಂಚನಕದಳೀಕುಸುಮಂ ವಿಭ್ರಾಜಿಸುವಂದದೊಳು ||೧೫

ಈವರ್ಣದಿನೀಚೆಲ್ವಿಂದೀಕಂ |
ಪಾವರಿಸದೆನುತ್ತೆಣಿಸಲ್ವೇಡೀ |
ದೇವಿಯ ಬಾಯ ಮಿಸುಪ ತಾಂಬೂಲದ ಕಂಪಂ ಕೊಡಿಸುವೆನು ||
ಓವದೆ ನಿನಗೆನುತುಂ ಕೊಸಗಿನ ಬಿರಿ |
ಪೂವಂ ಕೈವಿಡಿದಂದದಿನೊರ್ವಕ |
ಲಾವಿದೆ ಪಿಡಿದು ವಿರಾಜಿಸಿದಳು ಚಿನ್ನದ †ಕಾಳಾಂಜಿಯನು ||೧೬

ಪೊಸಜೌವನೆ ನಿನ್ನೀದೀರ್ಘಾಂಬಕ |
ದೆಸಕದ ಸಂಪತ್ತಿಗೆ ಮಿಗೆ ಸೋಲ್ತೀ |
ಯಸಿತೋತ್ಪಲ ದರದಳಿತಂ ತನ್ನ ಪರಾಗದ ಕಪ್ಪವನು ||
ಬಸದೀಯಲ್ಬಂದಿದೆ ನೋಡೆನುತುಂ |
ಪೊಸಕಲುಕಮನಿಕ್ಕಿದ ನೀಲದ ಹರ |
ಲಿಸೆಯೆ ಕರಂಡಕವಂ ಪಿಡಿದೊರ್ವಳಬಲೆ ಕಣ್ಗೊಪ್ಪಿದಳು ||೧೭

§. ಕಣ್ಗೆ ಮನೋಹರಮೆಯ್ದಿದುದು. ಗ||    †. ಕಾಳಂಜಿ. ಗ||

ಸಡೆಯು ಬೆಡಂಗಂ ನೆಲೆಮೊಲೆಯಿರವಂ ।
ನುಡಿಯಿನದಂ ನೋಟದ ಚಟುಲತೆಯುಂ ।
ಮುಡಿಯೊಳ್ಪಂ ಕಡನಂ ಪೇಡುವ ತೇಜದಿಂ ತಾಂ ರಕ್ಷಿಸುವ ॥
ನಡೆವಕ್ಕಿಯು ನಲ್ಮೆಯು ಪೊಣರ್ವಕ್ಕಿಯು ।
ನುಡಿವಕ್ಕಿಯು ಪಳುದಿಂಗಳ ಹಕ್ಕಿಯು ।
ನಿಡುಗಣ್ಗಱಂವಕ್ಕಿಯು ಬಳಗಂ ಬಳಸಿದುದಾನೃಪಸತಿಯಮಾ ॥೧೮

ಪಲಗಣ್ಣನ ಪಟ್ಟದ ಸತಿ ಸಗ್ಗದ ।
ಲಲನೆಯರೊಳಗೋಲಗಮಿರ್ಪಂತಾ ।
ಲಲಿತಶಶಾಂಕವದನೆ ಸಖಿಯರ ಮಧ್ಯದೊಳಿರಲಾಯೆಡೆಗೆ ॥
ಅಲಘುಕುಚದ ಭಾರದೆ ಮೆಲ್ಲನೆ ಬಂದ ।
ಲತಿಗೆಗಾಲ್ಗಳ ಕಂಚುಕಿಯೊರ್ವ ।
ಳ್ಜಲಜೋಪಮಕರಯುಗಮಂ ಮುಗಿಯುತೆ ಬಿನ್ನವಿಸಿದಳಿಂತು ॥೧೯

ಸಂದಣಿಸಿದ ಮಣಿವಾಗಿಲೊಳೊರ್ವಪು ।
ಳಿಂದನಿತಂಬಿನಿ ಕಾರ ಕಱುಯುಮುಗಿ ।
ಲಿಂದ ಸಮೆದ ಪುತ್ತಳಿ ಸುರಧನುವಿನ ಮುಱಿಯುಂ ಕೈವಿಡಿದು ॥
ಬಂದಂದದೊಳೊಂದರಗಿಳಿಸಹಿತಂ ।
ನಿಂದಿರ್ದಪಳೆಂದೆಂಬುದುಮತಿಮುದ ।
ದಿಂದೊಳವುಗಿಸೆನೆ ಹುಗಿಸಿದಳಾಸ್ತ್ರೀ ಸಭೆಯಂ ಭರದಿಂದ ॥೨೦

ಸ್ಮರಕಾಳೋರಗಹಸ್ತದ ನೀಲದ ।
ಕರಡಗೆಯಂದದ ಮೊಲೆಯು ನವಾಂಜನ ।
ಗಿರಿಯುಂ ಗೆಲ್ವ ಕಟಿಯು ಕರ್ವಾಱಿಯನೇಳಿಪ ನುಣ್ದೊಡೆಯು ॥
ಇರುಳ ತಿರುಳ ಬಣ್ಣದ ತನುವಿನ ಕ ।
ತ್ತುರಿಗಂಪಿನ ಕಾಬ್ಬೇಡಿತಿ ನಡೆತಂ ।
ದರಸಿಯ ಸಭೆಯಂ ಹೊಕ್ಕಳು ಸಂಮೋಹನಸಾಮಜದಂತೆ ॥೨೧

ಬಂದು ವನೇಚರಿ ಸಲೆ ಸಾಧ್ವಸದಿಂ ।
ನಿಂದೆಲರಿಂದ ತಮಾಲಲತಿಕೆ ಮಣಿ ।
ವಂದದಿ ಮಣಿದು ಬಱಿಕ ತಂದರಗಿಳಿಯಂ ಕಾಣ್ಕೆಯನೀಯೆ ॥

ಮಂದೇತರಸಂಮದದಿಂ ಮನದಣಿ |
ವಂದದಿ ಪೊಂದೊಡವಂ ಮೆಚ್ಚಿತ್ತಾ |
ಸೌಂದರಿಯತಿವಿನಯೋಕ್ತಿಯೊಳವಳಂ ಬೀೞ್ಕೊಡುತುಂ ಬೞಿಕ ||೨೨

ಎಸೆವ್ರೊಳ್ದಳಿಗೆರ್ಯೊಳಗಿಡುತುಂ ನವ |
ರಸದಾಳಿಂಬದ ಬಿತ್ತಂ ನೇೞಿಲ |
ಪೊಸದೋರೆಯನಿಮ್ಮಾವಿನ ಪಣ್ಣಂ ತರಿಸಿ ಕುಡುಕುಗೊಡಲು ||
ಹಸಿದಿರ್ದುಂ ತಿನಲೊಲ್ಲದೆ ಕಣ್ಬನಿ |
ಯೊಸರುತ್ತಲೆ ನಲ್ಲಳೆ ಹಾಯೆನುತುಂ |
ಬಿಸುಸುಯ್ಯುತ್ತೆ ಹಳವಳಿಪರಗಿಳಿಯಂ ಕಂಡಳ್ ಕಮಲಾಕ್ಷಿ ||೨೩

ಅಡವಿಯೊಳೊಗೆದು ಬಳೆದ ಹುಲುಗಿಳಿಯಾ |
ಮಡದಿಯು ಮೇಗಣ ವಸ್ತಿಯು ಕಳವಳ |
ದೊಡವೆರಸಿದ ಮಾತಂ ನುಡಿಯುತೆ ಬಿಸುಸುಯ್ಲಿಂ ನಾವಿತ್ತು ||
ಕುಡುಕಂ ತೊಱೆದಿಹುದಚ್ಚರಿಯೆಂದೆನು |
ತುಡುಪಾನನೆ ನಿರವಿಸಲೆಂದುದು ನಾ |
ನಡವಿಯು ಹುಲುಗಿಳಿಯುಹುದೆನ್ನಯ ವಾರ್ತೆಯನುಸಿರುವೆ ಕೇಳು ||೨೪

ಎನುತಿಂತುಸಿರಿದುದೆಲೆ ಕೋಮಲೆಯೀ |
ಜನಪದಕತಿದೂರದೊಳೊಂದು ಮಹಾ |
ವನಮುಂಟದಱ ನಡುವೆ ಋಷ್ಯಾಶ್ರಮವೊಂದುಂಟದಱಲ್ಲಿ ||
ವನಿತೆ ಸರಸ್ವತಿಯೆಂದೆಂಬಳ್ವೆರ |
ಸನುರಾಗದಿ ತನ್ನಂ ಬಳಸಿದ ವಟು |
ಜನದ ನಡುವೆ ಶೋಭಿಸಿದಂ ವಿಮಲಜ್ಞಾನಿವೆಸರ ತವಸಿ ||೨೫

ಆದಿತ್ಯಂಗರ್ಘ್ಯಂಗುಡಲೆನುತುಂ |
ಮೇದಿನಿಗಿೞಿದೆಯ್ದಿದ ಸುರಪತಿ ಮೊದ |
ಲಾದರನೆಲ್ಲರನಾಹ್ವಾನಿಸುತಾದರಿಸಿ ವಿಸರ್ಜಿಸುವ ||
ವೇದದ ಸಂಶಯಮಂ ವೇಧಂಗತಿ |
ಭೇದಿಸುವಂದದೊಳಂ ನಿರವಿಸಿ ವಾ |
ಣೀದೇವಿಗೆಯೋದಂ ಕಲಿಸುವ ಜತಿರಾಯನೆಸೆದನಲ್ಲಿ ||೨೬

ತತ್ತಾಪಸಪರಿವೃಢನಾಶ್ರಮದೊಳ್ ।
ಗುತ್ತಮಮಪ್ಪಿವಮ್ಮಾವಿನೊಳೆನ್ನಯ ।
ಚಿತ್ತಪ್ರಿಯೆಯುಂ ನಾನುಂ ಕಿಱುಗೂಸಿಂದವೆ ನೆಱ ಬಳೆದು ॥
ಮತ್ತವರೋದುವ ಶಾಸ್ತ್ರಂಗಳನಾ ।
ವೃತ್ತಿನೊಳಿರ್ದೆಲ್ಲವನೋವದೆ ಕಲಿ ।
ಯುತ್ತಂಗೋದ್ಭವಸುಖಸಾಮ್ರಾಜ್ಯಮನನುಭವಿಸುತ್ತಿರ್ದು ॥೨೩

ಬಂದಾನೊಂದು ದಿನದೊಳಾಮುನಿಕುಲ ।
ವೃಂದಾರಕನೋವದೆ ಶಿಷ್ಯರ್ಗೊಲ ।
ವಿಂದಮಪುತ್ರಸ್ಯ ಗತಿರ್ನಾಸ್ತಿಯೆನಿಪುದೊಂದಾಗಮಮಂ ॥
ಮಂದೇತರಮುದದಿಂದೊರೆಯುತ್ತಿರ ।
ಲಂದಾಸೂತ್ರಾರ್ಥಮನಾಲಿಸುತುಂ ।
ಸೌಂದರಿ ಕೇಳ್ನಂದನದೋಹಳಮುದಯಿಸಿತೆನ್ನಯ ಸತಿಗೆ ॥೨೮

ಮಿಸುಗುವ ದಾಳಿಂಬದ ಬಿತ್ತಿನ ನವ ।
ರಸಮಂ ಪೊಳೆವ ಪವಳ‡ವಾಯ್ದೆಱಗೆಱ ।
ದಸುಗೆಯ ತಳಿರೊಳ್ಮಲಗಿಸಿ ಪಕ್ಷದ ಪದಱೊಳಗಳವಡಿಸಿ ॥
ಅಸುಗೀಶನನೊಳ್ಗುಡುಕಂ ತರಲೆನು ।
ತೊಸೆದು ಕಳುಪಿ ಶಿಶುವಿನ ಕಾಪಿನೊಳಿ ।
ರ್ಪಸಕವಮದೆಂದಿಂಗಪ್ಪುದೆನುತ ಮಚ್ಚಾರಿಕೆ ಮಱುಗಿದುದು ॥೨೯

ಕಡುಗುರುಡಂ ಕಣ್ಣಂ ಕಡವರಮಂ ।
ಬಡವಂ ಬಯಸುವ ಪರಿಯಿಂದೆನ್ನಯ ।
ಮಡದಿ ತನೂಭವದೋಹಳದೊಳಗಿರಲಾಕಿಱುದಿವಸದೊಳು ॥
ಒಡಲೊಳ್ ಶಿಶುವುದಯಿಸಿ ಬಳೆಯುತ್ತಿರ ।
ಲೊಡನಾವ್ರದ ಪಣ್ಣಣ್ಬ †ಬವಸೆ ತನ ।
ಗಡಸಿತು ಋತುವಲ್ಲದ ಋತುವಿನೊಳಂಬುರುಹಸದೃಶ ಮುಖಿಗೆ ॥೩೦

ಅಲ್ಲದ ⁂ಋತುವಿನೊಳಿಲ್ಲದ ಪಣ್ಣಂ ।
ನಲ್ಲಳ್ ಬಯಸಲ್ತರಲಱಿಯದೆ ನಾ ।
ನಲ್ಲಿಯ §ಮುನಿವೃಂದಾರಕವಿಮಲಜ್ಞಾನಿಯ ಬಱಗೆಯ್ದಿ ॥

‡. ವಾಯೊಳಗೆ. ಗ॥ †. ಬವಕೆ. ಗ॥ † ವದನೇ ಗ॥
⁂. ಕುರುವಿನೊ. ಗ॥ §. ಮುನಿಪುಂಗವವಿಮಲಜ್ಞಾನಿಯ ಸನ್ನಿಧಿಗೆಯ್ದಿ. ಗ॥

ಮೆಲ್ಲಡಿದಾವರೆಗೆಱಗುತ್ತುಂ ಮಾ |
ವೆಲ್ಲಿ ಫಲಂದೋಱುವುದೀಕಾಲದೊ |
ಳುಲ್ಲಸದಿಂದ ನಿರೂಪಿಸೆನಲ್ಕಗುತುಸಿರಿದನಿಂತೆಂದು ||೩೧

ಕುರುಜಾಂಗಣವಿಷಯದ ರಂಜಿಪ ಗಜ |
ಪುರದ ಬಹಿರ್ನಂದನದೊಳಗಾಪೊೞ |
ಲರಸಿನ ಸತಿ ಸೌಂದರಿ ಮಾತಾಡುವ ವಕ್ರತೆಯಂ ಕೇಳ್ದು ||
ಭರದಿಂದಲರೇಱದ ಮಾಕಂದಂ |
ಸರಸಫಲಂದೋಱ¶ಪೂರ್ವದದೆನಲಾ |
ವರಮುನಿಯುಂ ಬೇಱ್ಕೊಂ‡ಡೀಯೆಡೆಗನುರಾಗದಿನೆಯ್ದಿದೆನು ||೩೨

ಬಂದು ಬಹಿರ್ನಂದನದೊಳಗಣ ಮಾ |
ಕಂದಮಹೀಜದ ಮಧುರಫಲವನಾ |
ನಂದದಿ ಕಂಡಾಯೆಡೆಗೆಯ್ದುತ್ತಲ್ಲಿಯ ಬಲೆಯೊಳ್ ಸಿಲ್ಕಿ ||
ನಿಂದಾನಿರಲತಿಭರದಿಂ ಬಂದು ಪು |
ಳಿಂದಂ ಪಿಡಿಯುತೆ ತನ್ನ ಸತಿಯ ಕೈ |
ಯಿಂದಬಲಾಮಣಿ ನಿನಗೆನ್ನಂ ಕಡುಹರಿಸದೊಳಟ್ಟಿದನು ||೩೩

ಬಾಡು ಸವಿಗೆ ನಾನೀಬಲೆಯೊಳು ನಿಲ |
ಲಾಯೆಳವಸಿಱಂ ತಾಳಿದ ಪೆಣ್ಗಳ್ |
ಕಾಯಜನುಪಹತಿಯಿಂದಸುವಂ ನೀಗುವುದದಱಂ §ನಾನು ||
ಸಾಯದೆ †ಸುಮ್ಮನಿರೆನು ಕೊಲಬೇಡ ವ್ಯ |
ಧಾಯುಕ್ತನುತಾಗಿಳಿ ಮೂರ್ಖಗೆ ಸಲ |
ಲಾಯಿಂದೀವರಲೋಚನೆ ಸತ್ಕ್ರಿಯೆಯಿಂದೆಬ್ಬಱಿಸಿದಳು ||೩೪

ಬೞಿಕಿಮ್ಮಾವಿನ ಪಣ್ಣಿತ್ತಾ ಅರ |
ಗಿಳಿಯುಂ ದಿನಚರಿ ಬರವೇೞುತ್ತುಂ |
ಕಳುಹಿ ಕಮಲಲೋಚನೆ ತನ್ನಯ ಮನದೊಳಗಿಂತೆಣಿಸಿದಳು ||
ಹಳುವಿನ ಹಕ್ಕಿಗಳಿಗೆ ಮೊದಲಾಗಿಯೆ |
ಯುಳಗೊಸಂ ಪೆಱಲಂಬು ಬಯಕೆಯಾ |
ಯ್ತಿಳೆಯೊಳ್ ನಂದನರಂ ಪಡೆಯದ ಪೆಣ್ಗಳ ಜನ್ಮಮದೇಕೆ ||೩೫

¶. ಪೂರ್ವವೆನ ಗ|| ‡. ಹಾ. ಕ|| §. ದಾನು. ಗ|| †, ಸುಮ್ಮಾನಿರೆ. ಗ||

ತರುಣಾಶೋಕದ ಪಸುರೆಲೆಯೆಡೆಯೊಳ್ |
ಪರಿರಂಜಿಪ ಪಲ್ಲವವಾಡುವವೊಲ್ |
ಮರಕತಮಣಿದೊಟ್ಟಿಲೊಳಿರ್ದಂ ಕೈಕಾಲ್ಗಳನಾಡಿಸುವ ||
ಸುರುಚಿರವಿಮಲವಿಡೂರಜಸೂತ್ರಂ |
ಪೊರಳ್ವಂದದಿ ಪೀತಾಂಬರತಲ್ಪದೊ |
ಳುರುಳ್ವಳಿಯನನೆತ್ತುವ ಭಾಗ್ಯಂ ಮುನ್ನಂ ನೋನದರ್ಗುಂಟೇ ||೩೬

ಪಾವಸೆಯಂ ಪಜನೊಂಕುವ ಪೊಸಕೆಂ |
ದಾವರೆಯೆನೆ ಕಿಱುಗೈಯಿಂ ಮೇಲುದ |
ನೋವದೆ ನೂಂಕಿ ಕೊರಲ ಕಂಬಕೆಯಂ ಪತ್ತಿದೊರ್ಕ್ಕೊಡೆಯನೇಱಿ ||
ತೀವಿದ ಪಾಲ್ಕ್ರೊಲೆಯಂ ತನಿವಾಯಿಂ |
ತಾವರಿಸುತ ಕರ್ಚುವ ಕಂದನ ಸ |
ದ್ಭಾವವನೀಕ್ಷಿಸದಾಕೆಯ ಕಣ್ಗಳ್ ಪೇಳಿಮ ಕಣ್ಗಳ್ಪೆ ||೩೭

ಅನುದಿನಮುಮ್ಮಳಿಪ ಪುತ್ರೋದಯಮಂ |
ನೆನೆಪ ವನಜಮುಖಿ ಬಡವನುತಪಿಯುತಿ |
ವಿನಯದೊಳೆಣೆವಕ್ಕಿಗಳವಕವೃತವನೊಲಿದೀವಂತೆನ್ನ ||
ತನಯನ ಮೊಗದಾವರೆಯುಸ್ಸಿರಲೊ |
ಳ್ತಸಿವಾಲಂ ಕಪ್ಪಿಪೆನ್ನೀನೆಲೆಸೊಲೆ |
ಗನುರಾಗದಿ †ಕಂಚುಕಮಂ ಕಟ್ಟುವ ನೃಪೆನಗೆಂದಹುದೊ ||೩೮

ಎನುತಾಸುಂದರಿ ಚಿಂತಿಸುತಳಲತೆ |
ಮನಿಲನ ಸೋಂಕಿಂದಲರ ತೊಡಂಬಯ |
ಸಿನಿಸುಱಿಯದೆ ಬಿದಿರ್ವಂದದಿ ಮಣಿದೂಷನಲ್ಲವನೀಡಾಡಿ ||
ಮನಸಿಜಮಂತ್ರಾಕ್ಷರಮಂ ಬಳಪದಿ |
ನನುರಾಗದ ಬರೆಯಲ್ಪೊಂಬಲಗೆಗೆ |
ಮಿನುಗುವ ಪಸಿಱೆಡುವಂದದೆ ನೊಸಲೊಳ್ ಮೃಗಮದಮಿಕ್ಕಿದಳು ||

ಇಂಗೋಲ್ವಿಲ್ಗಿಕ್ಕಿದ ಗವಸಣಿಗೆಯ |
ಭಂಗಿಯವೊಲ್ ಬಿಳಿದಂ ಪೊದೆಯುತ ಜೆ |
ಳ್ದಿಂಗಳ ಪಕ್ಕಿಯ ಮಱಿ ಚಟುಲತೆಯುಳ್ಳಂದದಿ ಕಣ್ಮುಚ್ಚಿ ||

†. ಕಂಚುಕಿಯಂ. ಕ||

ಅಂಗನೆ ಮಿಸುಪಂಭೋರುಹದೆಲೆಯೊಳು |
ಪಿಂಗದೆ ಮೆಯ್ಯಿಕ್ಕಿದ ಪಣ್ಣಂಚೆಯ |
ಪಾಂಗಿಂ ಪೊಸಪಸುರ್ವಟ್ಟೆಯ ಮಲ್ಲಾಸಿನ ಮೇಲೊರಗಿದಳು ||೪೦

ಉಡುಪಾನನೆಗಿಂತಯ್ದಿದ ನೋವವ |
ಳಡಪ ಡವಕೆ ಕೈಪಿಡಿ ಕಾಳಾಂಜಿ ತೊಡ |
ವುಡಿಗೆ ಚವುರ ಸೀಗುರಿ ಬಿಜ್ಜಣ ಮುಡಿವು ಕರಗಂ‡ಪೊತ್ತ ||
ಮಡದಿಯರ್ಗಂ ದೀವದ ಖಗಮೃಗಕುಂ |
§ಬಿಡದಡಸಿತು ತರುಮೂಲಮನೊಂದದ |
ಕಡುನೋವಾಶಾಖಾಸಂತತಿಗಿರದೆಯ್ದುವ ಮೂರ್ಛೆಯೊಳುಂ ||೪೧

ಆವೇಳೆಯೊಳಾಕೆಯು ನಿಜಸತಿ ಪ |
ದ್ಮಾವತಿಯುಂಬವಳರಸನೆಡೆಗ ಬಂ |
*ದಾವಾರ್ತೆಯ ನೀಱಲ್ ಪೋಗಂ ಕೇಳ್ದರಸಂಚೆಯ ತೇಜ ||
ಆವರಿಸಿದವಸ್ಥೆಯೊಳಿರದೆಯ್ತಂ |
ದಾವಘುವಿನ ಗೃಹಕೆಯ್ದಿ ಮುಸುಂಕಿದ |
ಧಾವಳ್ಯಾಂಬರಮುಂ ತಗದಂ ಸ್ಮರನಸಿಯೊಱ್ದಗದಂತೆ ||೪೨

ಅಂಗಜಫಣಿ ಹರಿಯುಂ ಪಸುಟೊಂದದ |
ಪಿಂಗಿಸಿ ಮೆಯ್ಯ ಮುಸುಕನಾಕನಕಲ |
ತಾಂಗಿ ಪತಿಯು ನಿಜವದನಮನೀಕ್ಷಿಸೆ ತುಱುಗೆವೆಗಣ್ಗೊಣರು ||
ಭೃಂಗಮಿಥುನಮಂಭೋರುಹದೊಳಗೆ ಮ |
ಲಂ∤ಬಱಿಕ್ಕಾನಿದ್ರೆ ತಿಳಿಯೆ ಪ |
ಕ್ಷಂಗೆದಱುವ ಭಂಗಿಯು ಕಡುಚೆಲ್ವಂ ನೆನಯಿಸುತೊಪ್ಪಿದುವು ||೪೩

ಇನಿಯನ ಪೋಗಮಂ ಕಾಣುತ ಮುತ್ತಗ |
ಳನಿಮಿಷದೊಳ್ ಸಂಜನಿಸುವುದಂ ಜನ |
ಜನಿತಂ ಮಾಡುವ †ತೞದಿಂ ಕಣ್ಗಳೊಳಪ್ಪಿ ಜನಿಸಲಾಗ ||
ಮನದಬ್ಜಾನುಗುಗೂರ್ಜನೆಯಿಂ ಮಿಡಿಯುತ |
ತನಯಂ ಹುಟ್ಟುವ ಪರೆಯಿಂ ಬಾಲಿಕೆ |
ನಿನಗಿನ್ನುಂ ಸಾಲದು ಬಱಿಜೀವನಮೇಕೆಂದುಸಿರುತಿರ ||೪೪

---

‡. ಪಿಡಿದು. ಕ||  §. ಬಿಡದೆಯ್ದಿತು. ಕ||  *. ದಾವಾರತೆಯುಸಿರಲ್. ಗ||
∤. ಸಿಡಿಯೆಲರ್ಗ. ಗ||  †. ಪುಲಕಣ್ಣಾಮನಯೊಳಗ. ಗ||

ಅನಿತಱೊಳಿಂತೆಂದೊಂದಶರೀರ |
ಧ್ವನಿ ಕೇಳಲ್ ಬಂದತ್ತೆಲೆ ವನಜಾ |
ನನೆ ನೀನಾಲಿಸುವುದು ಪದ್ಮಾವತಿ ಗೆಳೆಯಂದಂಬಡೆದು ||
ನಿನಗೆ ತನೂಭವದೋಹಳಮಂ ತಾ |
ನನುಗೊಳಿಸಿದುದಿದು ನಿಕ್ಕುವವೊರ್ವಂ |
ಜನನುತನುದಯಿಪನೆನೆ ಸತಿ [೧]ಸುಖಮಿರೆ ದಿನಸ್ಫುರಂದಱೊಳು ||೪೪

ಕಡುಸೊಗಯಿಸುವೀಕುಸುಮದನಲವೋ |
ಪೊಡವಿಯನೆಲ್ಲಮನೊಂದೇ ತೋಳೊಳ್ |
[೨]ಗಡಣದಿ ಧರಿಯಿಪುದಪ್ಪುದು ನಿಶ್ಚಯಮುಮದಱಿಂದೀಧರೆಯಾ ||
ಬಡವರೊಳಗೆ ಬಡವಂ ನಾನದನೇಂ |
ತಡೆಯಲ್ಕೆ ಸಮರ್ಥನೆಯೆನುತುಂ ನಡ |
ನಡುಗುವವೋಲ್ ನಡು ಕೊಡೆದುದು ಋತುಸಮಯದೊಳಾನೃಪಸತಿಗೆ ||

ನೊಡವಿ ಜನಿಸಿದುವು ಮೊಗನೆಂಬಿಂದುವಿ |
ನೊಡಲಾಲದ ಪಣ್ಮಿನುಗುವವೊಲ್ ಮ |
ಯ್ಪೊಡೆದನುರಾಗರಸದ ಪೊಂಪುಪೊಣ್ಮಿದುದೆನೆ ಮಾಣಿಕಗಂಡ ||
ಬಡನಡುವಿನ ಭಾಮಿನಿ ತದ್ಗರ್ಭದೊಳ್ |
ಪಿರಿದಪರಂಜಿಸಿ ಸಳೆಯಲವಿಲ್ಲನ |
ಪಡಿಯಱತಿಯ ಕ್ಕೈಯೊಳಗೊಪ್ಪುವ ಸೆಳೆಯಂತೆ ವಿರಾಜಿಸಿತು ||೪೭

ಮಿಱುಗುವ ಮಾಣಿಕದೊಡವಿಂ ಮುಡಿಯೊಳ್ |
[೩]ತುಱುಬಿದ ಚೆಂಗಣಿಗಿಲೆಯ ಪೂವರಲಿಂ |
ನಿಱಿವಿಡಿದುಟ್ಟರುಣಾಂಬರದಿಂ ಪೂಸಿದ ಕುಂಕುಮದಣ್ಪಿಂ ||
ಮೆಱೆದಕ್ಕಂಕಂಬಡೆ [೪]ದೊಸೆದಾರತಿ |
ಯೆಱೆಯಂ ಪೂಜಿಸ ಕೆಂಗಲ್ಪುರುವಿನ |
ತೆಱನೆನೆ ಯುವತಿ ಕಲಾವತಿ ಸಿರಿಯಿಂದಾಲಕ್ಷ್ಮಿಗೆ ಸವತಿ ||೪೮

ಬಱಿಕಾನನಚಂದ್ರಮನ ಕಳಂಕಂ |
ಕಳೆವಂದದಿ ಪಲ್ಲಂ ಸುಲಿದೆಳಲತೆ |
ಯೊಳಸಿ ಮಱುಗೆ ಮೊಯ್ದ್ವ್ಯಾಡ್ದುವವೋಲ್ಲಾಲ್ಪಗಲಿನ ನೀರ್ವಿಂದು ||

---

೧ ಸುಖದಿಂದಿರಲೊಂದುದಿನಂ. ಗ||
೨ ಬಿಡದೆತಳೆವುದದು ನಿಶ್ಚಯಮವಾಗಿರೆ ಭೂತಳದೊಳಗೆ ಗ||
೩ ತುಱುಗಿದ. ಗ|| ೪. ದುಮುದದಿ. ಗ||

ಮಲಯಜಮಿಕ್ಕಿ ಮುಡಿದು ಮಲ್ಲಿಗೆಯಂ |
ಬಿ ದುಱಟ್ಟೋಱಣಿಯು ಮುತ್ತಂ ತೊ |
ಟ್ಟೆೞವಿಂಚಿಂ ಕೆಂಡರಿಸಿದ ಕಾಂತೆಯೊನಲ್ಕಡುಸೊಗಸಿದಳು ||೪೯

ಈವಿಧದಿಂ ಕೈಗೆಯ್ದು ಸತಿಯಿರೆ |
ಹೂವಿನ ಹೊತ್ತೊೞಗಾದಪರದಿಶಾ |
ದೇವಿಯನೋವದೆ ಸೋಂಕಿ ದಿನಂ ತನ್ನಶುಚಿತ್ವಮನಿರದೆ ||
ಆವನಧಿಯೊಳಲೆವಂದದಿನಗುೞ್ |
ತೀವಿದ ರಾತ್ರಿಯೊಳವನೀನಾಥಂ |
ಜಾವಗಳಿಯಲೋಲಗಮಿರ್ದೆಯ್ದಿದನಾಸವ್ಯಾಗೃಹಕೆ ||೫೦

ಇದು ಕಲ್ಗೆನುಸತುವೆ ಭೇದಿಸಬಾರದ |
ಸದಮಲಮಪ್ಪ ನವಾಕಾಶಸ್ಫಟಿ |
ಕದ ಪಾವುಗೆಯಂ ಮೆಟ್ಟುತ್ತುಱಿಯನ ಸೆಜ್ಜೆವನೆಗೆ ಬರ್ಪ ||
ಸುದತೀಮಣಿ ರಂಜಿಸಿದಳ್ ನೆಲದೊಳ್ |
ಮೃದುಪಾದವನಿಡ ನೋವುದೆನುತ ಕಡು |
ಚದುರಿಂದಂಬರಚರವಿದ್ಯಂಬಡೆದೆಯ್ದುವ ತೆಱನಾಗಿ ||೫೧

ಬರುತಾಬಲ್ಲಹನೇಱಿದ ಗಾಲಿಯ |
ಸರದ ಶಕುನಿಮಂಚದ ಮೇಲತಿಬಂ |
ಧುರಬಹುಕುಸುಮದೆಸಱ ಪಚ್ಚಡಿಕೆಯಿನೊಪ್ಪಂಬಡೆದಿರ್ಪ ||
ಅರಸಂಚೆಯ ಕಿಱುದುಪ್ಪುೞಿಪಾಸಂ |
ಹರಿಗದಿನೇಱಿ ದಳಂಗೋಱದ್ರವನಡ |
ರ್ದರಗಿಳಿ ಹೂಡಿದ ಹೂದೇರೇಱುವ ರತಿಯೆಂಬಂದದೊಳು ||೫೨

ಸಿಟ್ಟುಪ ಬಾಕುಳಿಗಣ್ಗಳ ರುಚಿಯೊಡ |
ವೃಟ್ಟದ ಕಾತರದಿಂ ಮಿಸುನಿಯ ಕರು |
ತೊಟ್ಟನೆ ಹೊನ್ನಾಳದ ಕೈದಂ ಪಿಡಿವಂದದಿನಮರ್ದಪ್ಪಿ ||
ಕೊಟ್ಟು ಕುಡುಕದಂಬುಲಮಂ ಸವಿಯಂ |
ತಟ್ಟುವ ತನಿಗಲೆಯುಪಚರದಿಂ ಮನ |
ಮುಟ್ಟೆ ಕರಂ ಕೂಡಿದ‡ರಂಗಭವಂ ಮಿಗೆ ಮೆಚ್ಚುವ ತೆಱದಿ ||೫೩

೧. ಟ್ಟೊರಾ. ಗ|| ೨. ತುಂ ಕ| ‡. ರಸವಾಸ್ತ್ರಂ. ಗ||

ಸುರತಸುಖದ ಸೊಕ್ಕೇ ಬಲಿದಂದದೊ |
ಳಿರುತುಂ ನಿದ್ರೆಯೊಳಾಸತಿ ಹರಿಸುರ |
ಕರಿಶಶಿಶರನಿಧಿಯುಂ ತಾಂ ಕನಸಿನೊಳಗೆ ಕಾಣ್ಬನಿತರೊಳು ||
ಕರಮೆಸೆವಾದಿವವೆಂಬ ಮಹೇಶ್ವರ |
ನಿರುಳಿಂಬಿಂಗಜನಂ ಮರ್ದಿಪನೆನು |
ತುರವಣೆಯಿಂದ ತೆಱೆದ ಕಣ್ಣೆನೆಯುಷ್ಣಾಂಶುವುದಯಿಸಿದುದು || ೫೩

ಸುಸ್ವಪ್ನಂಗಾಣುತ ಮಂಗಲಗೀ |
ತಸ್ವನಮಂ ಕೇಳ್ದು ಭೂವರನ ಮ |
ನಸ್ವಿನಿ ತತ್ಪತಿಯೊಡನೆೞ್ದು ಮೊಗಂದೊಳೆದತಿಹರ್ಷದೊಳು ||
ಆಸ್ವಪ್ನೇಕ್ಷಾರ್ಜಿತಗೆ ಮಣಿದು ಕಾ |
ರ್ತಸ್ವರಲಲಿತಾಭರಣವನಿಟ್ಟು ಸಿ |
ಕಸ್ವರದಿಂದಾತನೊಳಾಕನಸಿನ ತೆಱ†ನಂ ಪೇೞ್ದಳು || ೫೪

ಕೇಳಿ ಮಹೀಪಾಲಕನಿಂತೆಂದಂ |
ಬಾಲಿಕೆ ತತ್ಸ್ವಪ್ನದ ಫಲದಿಂ ಭೂ |
ಪಾಲಶಿರೋಮಣಿಯಪ್ಪ ಸುತಂ ಜನಿಯಿಸುವಂ ನಿನಗೆಂದು ||
ಲೀಲೆ§ಯೊಳುಸಿರಲು ಕೇಳ್ದತಿಹರ್ಷಂ |
ದಾಳಿ ಸುಖದೊಳಿರುತಿರಲಾವಾರ್ತೆಯಿ |
ನಾಲಲಿತಾಂಗಿಯು ನಡುವಿನ ಕಡುದಾರಿದ್ರ್ಯಂ ಪಿಂಗಿದುದು || ೫೫

ಬಸಿಱೊಳಗಣ ಬಾಲನ ಕೀರ್ತಿ ಕರಂ |
ಮುಸುಕಿ‡ದುದನೆ ಬೆಳ್ಪಾಯಿತು ವದನಂ |
ಪಸು*ಯುಣಲ್ಬೇಕೆನು*ತರವಿಂದಭವಂ ಪೊಂಗಳಸದೊಳು ||
ಲಸಿತಾಮೃತಮಂ ತೀವಿ ಬಱಿಕ ರಂ |
ಜಿಸುವರಗಿನ ಮುದ್ರೆಯನಿಟ್ಟಂದದಿ |
ನಸಿತರುಚಿಯನಾಂತುದು ಕುಚಚೂಚುಕವಾನವಗರ್ಭಿಣಿಗೆ || ೫೬

ಅಂಗನೆಯಂಗದ ಕಾಮಂ ಮುನ್ನಿನ |
¶ನಂಗತೆಯಂ ಪರಿಹರಿಸಿ ಬಱಿಕ ದಿ |
ವ್ಯಾಂಗಂದಳೆದೊಪ್ಪಂಬಡೆದಂದದಿನಾನೃಪವರಸೂನು ||

---

†. ನನೊರೆದಳು ಗ |		§ ಯಿನುಸಿರಲ್ಕೇ ಗ ||		‡. ಕಿದವ್ರೊಲು. ಕ ||
*. ತಬ್ಬಿಭವಂ ಹೊಸಹೊಂ ಗ ||		¶. ಸಂಗತಿ. ಗ ||

ಹಿಂಗದೆ ಲಾವಣ್ಯಂದಳೆದೆಸದು |
ತುಂಗಪಯೋಧರಯುಗಳೆಯು ಬಸಿಱೊಳು |
ತಿಂಗಳದೊಂಭತ್ತಪ್ಪನ್ನವರಂ ಬಳೆದು ಬಲಿದನಂದು ॥೫೮

ಅಸಮಾಸ್ತ್ರನನಾರುಭದಿನದೊಳಗಾ |
ಬಸದಿಯಣುಗಿಯೊಲವಿಂ ಪಡೆವಂದದಿ |
ಶಿಶುವಂ ಶಶಿಮಂಡಲಲಲಿತಾನನೆಯುರುಮುದದಿಂ ಪೆತ್ತ ||
ಬಸಗೆಗಳಾಪುರದೊಳಗೆಲ್ಲವು ಪಲ |
ಪಸುರ್ದೋರಣ ಪಟ ಗುಡಿ ಸಂತಸವಱು |
ಪೊಸಮುತ್ತಿನ ಬಣ್ಣವುರಂ ಮನೆಮನೆದಪ್ಪದೆ ಶೋಭಿಸಿತು ॥೫೯

ಬಸದಿಮನೆಯ್ದೆ ಬಹುಳವೈಭವದಿಂ |
ದಸಮಾಸ್ತ್ರರಿಯ ಪೂಜೆಯ ನೆಱೆ ಸಂ |
ತಸದಿಂ ಮಾಡಿಸಿ ಪಾಲ್ಗನಿಸಿ ಕರಂ ಕಾರಾಗಾರವನು ||
ವಸಥಕ್ಕೆಯ್ದೆ ಮಗನ ವದನವನೀ |
ಕ್ಷಿಸಿಯರಿವರ್ಗಮರಮಹೀರುಹದಂ |
ತೊಸೆದಿತ್ತಂ ರಾಜಪ್ರಭರಾಜಂ ರವಿಸನ್ನಿಭತೇಜಂ ॥೬೦

ಆರಾಜಪ್ರಭದೇವಂ ತನ್ನ ಕು |
ಮಾರಂ ದ್ವಿಟ್ಕುಲಮಂ ಜಯಿಸುವನೆಂ |
ದಾರಯ್ಯುತ ಲಗ್ನಗರುಸಿರಲು ಕೇಳುತ್ತೊಲವಗಲಾಗೆ ||
ರಾರಾಜಿಪ ಜಯಮೆಸರಂ ವಿಕ್ರಮ |
ಕೌರವವೆಸರಂ ಮನವೊಸೆದಿತ್ತು |
ಧಾರಿಣಿ \ಪೊಗಳ್ವಂತೆಪೊಲುತಾಸದಿ ತೊಟ್ಟಿಲ್ಗಿಂಬಿಸಿದಂ ॥೬೧

ಅರೆವಿರಿದರವಿಂದೋದರದೊಳಗಲ |
ಯರಲುಣಿಯಲಗೊರ್ಗಳದವಳ್ದೆರೆಯೊಡವೊಳ |
ಗರಸಂಚಿಯು ಮು‡ ಮಣಿಪಂಜರದೊಳು ರಾಯಗಿಳಿಯು ಪಸಾಳೆ ||
ಸಿರಿದುಂ ರಾಜಿಸುವಂದದಿನೊಪ್ಪುವ |
ಪೆರಕೆವರಲೊಳನುಗೊಳಿಸಿದ ತೊಟ್ಟಿಲೊ |
ಳರಸುಮಗಂ ಬಳೆದಂ †ವಿಗೆ ಸೊಗಯಿಸುತುಂ ತನ್ನೆಳವೆಯೊಳು ॥೬೨

---

‡ ನಾಱ ಗ॥ \. ಪೊಗಳ್ವಂದದೊಳು ಗ॥ †. ರಾರಾಜಿಸುತಂ. ಗ॥

ಕಾವುಂ ಕರ್ಣಗೋರಲನಿನಿಪದಂ ಪು |
ತ್ರೀವೋಹನರಾಜ್ಯಕ್ಕಾರಿಲ್ಲಂ |
ದಾಪುಧುವಿಧುವಾರಾಂತರಂಜಿಸಿ ಬಿಟ್ಟಿಪಟ್ಟದ ಹಸ್ತಿ ||
ಈವುಹಿಗರ್ಹಿಸಿದಂ ತಾನನುತಾಪಂ |
೧ಪ್ರೇಮದಿನತ್ತ ತಲೆಯುನೇರಿಸಿದಂ |
ತಾವುಗುವಂ ಮದವತಿಯರು ಕುಚಕುಂಭಕ್ಕೊಲಿದತ್ತವರು ||೬೩

ಹೊಸಹೊಂಬಣ್ಣದ ಹೊಗರಂ ೨ಸೋಲಿಸಿ |
ಮಿಸುಪಂಗೋಪಾಂಗದೊಳಿಕ್ಕಿದ ೩ ಪಲ |
ಪಸದನದರುಣಮಣಿರುಚಿಯು ಮಣಿದೀಧಿತಿ ಜಲಜಲಿಸುತ್ತಿರಲು ||
ವಸುಧಾಧೀಶನ ಸುಕುಮಾರಂ ಮನ |
ಪೊಸದಲಗನ ಬನ್ನೇರು ಕರಂ ರಂ |
ಜಿಸಿದಂ ಬಾಲಸಮೀರಸಖನ ಭಂಗಿಯನಂಗೀಕರಿಸಿ ||೬೪

ಸಾತಿಶಯದೆ೪ಪೆಣ್ ಪೂರ್ಣಿಮಾವರೆಗಂ |
ರೋಚಿಸಿ ದಿನದಿನದಪ್ಪದ ಕಲೆಯೊಳ್ |
ಕೂಡಿ ಬಳೆದು ಕುವಲಯಕತ್ಯಾನಂದವನೀವಂಬಗೆಯಿಂ ||
ನಾಡೆಯ್ದಿಯಾನ ೫ಸುಕುಮಾರನೆಳವಯಿಂ |
ಷೋಡಶವರ್ಷದುಬ್ಬರವುತ್ರಿಹರ್ಷದಿ |
ಗಾಡಿಯಿನೆಲ್ಲ ವಿದ್ಯದ ಕಲೆಯೊಡವರೆದು ಪಿಂಜೆಸಿದಂ ||೬೫

ಬಡನ ಸ್ಫೋಡನುಟ್ಟ್ಯೊಡನೆ ತೊಡುವ |
ಟ್ಟ್ಯೊಡನಿರದಾಡಿಯೊಡನೆ ೬ಹೊಸಪರೆಯುಂ |
ಬಡದ ಕೆಳೆಯರಿಂ ಕುಕ್ಕುಟವಲ್ಲಮಹಿಷಮೇಷಂಗಳನು ||
ಗಡಣದಿ ಕಾದಿಪ ವನದದನೋವದ |
ಪ್ರೌಢವಿಯಯಾನಣುಗಿನ ಸುಕುಮಾರಂ |
ಸಡಗರದಿಂ ಸಲ ಸಂಪದದೂರ್ ದಿನವುಂ ನೂಂಕುತ್ತಿಹನು ||೬೬

ಕಡಿದೇರದ ಕಂಜಂತಪ್ಪಿಯಾನಂ |
ಪದದೀಕ್ಷಿಸವಿನಕಾಂತದ ಕಲ್ಲೋಳ |
ಗೂಡಯಿಪ ಹಗ್ಗಿಯುಪ್ಪರಿ ತಿರುತನವು ದೇಹಂಜಾವನವ ||

೧. ಪ್ರೇಮದೊಳ್. ಗ|| ೨. ಹೋಲಿಸಿ ಗ|| ೩ ಪೊಸ ಗ||
೪. ಮಣಿಯ ರುಚಿರಪ್ರಭ ಗ|| ೫. ನಂದನನೆಳಗೂಸಿಂ. ಗ||
೬ ರಂನಲಪಿಂದವೆ. ಗ|| ೭. ಕಿಯ್ಯಾ. ಗ||

ವಿದಿತಮೆನಲ್ಪಡೆದರಸುಮಗನ ನಿಜ |
ವದನಂಗಾಣುತ ವನಿತಾನೀಕದ |
ಹೃದಯದೊಳಂಗೋದ್ಭವಪಾವಕನತಿಭರದಿಂ §ಜನಿಯಿಪುದು ||೬೭

ಚರಮಶರೀರಂ ಚತುರಕಲಾಬಿಂ |
ಧುರನುನ್ನತನಪಗತನೀಹಾರಂ |
ಸುರುಚಿರವಜ್ರವೃಷಭನಾರಾಚಕೋಪಮವರಶಕ್ತಿ‡ಯುತಂ ||
ತರುಣೀಜನನವಮದನಂ ಕಾರಣ |
ಪುರುಷಂ ಕಣ್ಗೆಡ್ಡಂಬಿಡೆದಂ ಭೂ |
ವರಕುಲಚೂಡಾಮಣಿ ಜಯನೃಪನಾಥನೆನಮಲಮೂರ್ತಿ ||೬೮

ಗೊಂದಗಳಂ ಕಾಯುದ ಗೋವಿಂದಂ |
ಕಂದುಗೊರಲನಲ್ಲದ ಮಾದೇವಂ |
ಚೆಂದಂಗೆಡದ್ಯಗಣಿಯಂ ನಾಲ್ದಲೆಯಾನದ ¶ವಾಣೀಶಂ ||
ಕುಂದದ ಕುಳಿರ್ಗದಿರಂ ಪಲಗನ್ಡಿ |
ಯೊಗ್ಗಂದದ ಪೂರ್ವದಿಶಾಧೀಶ್ವರನೆಂ |
ಬಂದದನತಿವಿಭ್ರಾಜಿಸಿದಂ ¶ರಾಜಪ್ರಭರಾಜಸುತಂ ||೬೯

ನತಿಯರೊಳಾಹವದೊಳ್ ಪರಿಜನನಂ |
ತತಿಯೊಳ್ ಚರಿತದೊಳೆಸೆವ ಜಿನದದೊಳು |
ಸತತಂ ಗುರುವಿನೊಳನ್ಯವಧುಗಳೊಳು ದುಷ್ಟಪ್ರಕರದೊಳು ||
ನತಜನಪಾಲಕನಿಕುರುಂಬದೊಳು |
ನ್ನತಿಕೆವಡೆದ ನವನವರಸರುಚಿರ |
ಪ್ರತಿಮೆಯ ತೆಱದಿ ವಿರಾಜಿಸಿದಂ *ವಿಕ್ರಮಕಾರವರಾಜಂ ||೭೦

ಶ್ರೀಮದ್ಗುಣನಿಲಯನೆನಿಸಿಪ್ಪಜಯ |
ಭೂಮೀಶ್ವರನಂತರದೊಳು ಮತ್ತಾ |
ಸೋಮಪ್ರಭರಾಜಂಗಂ ಕೈರವಲೋಚನ ನಾಂದಗಂ ||
ಪ್ರೇಮದಿ ವಿಜಯುಜಯಂತರನಿಪ ಗುಣ |
ನಾಮದ ಸುಕುಮಾರರ್ಜನಿಯಿಸಿಯು |
ದ್ದಾಮತೆವೆತ್ತು ಬಳೆದು ಬಾಲ್ಕೇಳಿಂಜಾವನನಮೆಯ್ದಿದರು ||೭೧

§. ದಾಧಯಿಪುದು ಗ|| ‡ ವಾಗೀಶಂ ಗ|| ¶ ವಿಕ್ರಮಕಾರವಭೂಪಾಲಂ. ಗ||
*. ರಚಿತ. ಗ|| § ಸೋಮಪ್ರಭನೃಪತನುಜಂ. ಗ||

ಅಲವರ್ಗಟಿಯನೊಳಂಬುಜಪುತ್ರನೊಳ್ಕೃ |
ನಲಿಯುಂ ಪಿರಿದನುರಾಗಂಮಾಳ್ಪಂ |
ತಲಘುಘುಜಂ ವಿಜಯ ಜಯಂತಾವರಜರೊಳಿಸಿಸುಂ ಪಿಡಪೆ ||
ಸಲೆ ಸ್ನೇಹಂಬಡೆದನಕಂಬಡಪಂ |
ಲಲನಾಜನಸುಮನಶ್ಚಾಪಂ ಠ |
ಕುಲದೀಪಂ ಸರಸಕಲಾಪಂ ಸತ್ಕುಲಮಾಣಿಜಯಪ್ರಘೋಷಂ || ೩೧

ಇನಿಸುಂ ಸ್ನೇಹಾಶಾವಶನಾಗನ |
ಘನಪಾತ್ರಾಪೇಕ್ಷಯಾನೇ ಮಾಡದ |
ವಿನುತದಶಯೊಳೊಂದದ ತಾನನುಚಿತರೂಪಹತಿಯುಂ ಕಿಡದ ||
ಅನುಪಮತೇಜಃಪ್ರಸರಂಗುಂದದ |
ಜನಸಂಸ್ತುತಸಜ್ಜ್ಯೋತಿಯುತಂ ನಂ |
ಮನದಿ ಸದಾಲೋಕಮಿತಂಗಾಬ್ದಂ ಪ್ರಸಾಕುಲಮಾಣಿದೀಪಂ || ೩೨

ಇದು ಸುರನರಫಣಿಪರಿವೃಢಸಿಯುವಿತ |
ವಿದಿತವಿನಯಗುಣಗಣಯುತಜಿನಪತಿ |
ಪದಸರಸಿಜಮದಮಧುಕರನತಿಚತುರಕಲಾಪರಿಪೂರ್ಣಂ ||
ಸದಮಲಚರಿತಂ ಪ್ರಥಮಂ ಸಂ |
ಮುದದಿಂ ರಚಿಸಿದ ಜಯನೃಪಕಾವ್ಯದೊ |
ಳೊದವಿ ಮನೋಹರಮಂ ಪಡೆವತ್ತೆರಡನೆಯ ಸಂಧಿ || ೩೩

## ಎರಡನೆಯ ಸಂಧಿ ಸಂಪೂರ್ಣಂ.

# ತೃತೀಯ ಸಂಧಿ.

—— () ——

**ಸೂಚನೆ** | ಓಲಗದೊಳಗಿರುತುಂ ನವಚಿತ್ರದ |
ಬಾಲೆಯನೀಕ್ಷಿಸಿ ಜಯಭೂಪಾಲಂ |
ಲೀಲೆಯಿನಯ್ತಂದಂ ವಾರಾಣಸಿವೆಸರ ನಗರಿಗಂದು ||

ಅಂದಂಬಡೆದೀತೆಱದಿಂದೊಂದು |
ನೊಂದುದಿನಂ ¹ಬಿಸುರುಹಲೋಚನೆಯುರ |
ವಿಂದದ ಬಿಂಕಂಬತ್ತರವುಕ್ಕಳ ತಂಡದ ಮಂತ್ರಿಗಳ ||
ಗೊಂದಣದತಿಚತುರಕವೀಂದ್ರರ ಬಲು |
ಸಂದಣಿಯೊಳು ಸಿಂಹಾಸನವೇಱಿ ಮು |
ನಂದಣಿವುತ್ಸವದಿಂದೋಲಗವಿರ್ದಂ ಜಯಭೂವರನು || ೧

ತನ್ನ ಧಟಿಂದಗಿದುಕಾಭ್ಯಪರುಂ |
ದುನ್ನತಿಕೆಯೊತ್ತಾಕಪ್ಪದ ದಸೆ |
ಗನ್ನೆಯರೆನಲಣ್ಬರ್ ಸತ್ರಿಯರ್ ಸಿತಚಾಮರವಂ ಬೀಸಿ ||
ಸನ್ನುತರೆಣ್ಭಾಸಿರ ಮಕುಟಧರರ್ |
ಮನ್ನೆಯರಧಿರಾಜರ್ ಸಾಮಂತರ್ |
ಕೆನ್ನಂ ಶೋಭಿಯಿಸೀಯು ಮಹಾಮಂಡಲಿಕನಸಯುತಿರ್ದಂ || ೨

ನೆಲೆವೊಲೆಯುಮಳ್ವಕ್ಕಿಯು ಕಣ್ಮಿಂಗಳ |
ಲಲಿತಾನನಪದ್ಮದ ಪದಕೂರ್ಮದ |
ವಿಲಸದ್ಭುಜವೀಚಿಯ ಕೋಮಲತನುರುಚಿ ನಿರ್ಮಳಜಲದ ||
ಅಳಕಭ್ರಮರದ ಕಂಬುಗ್ರೀವದ |
ಲಲನಾಜನಕಾಸಾರದೊಳಾನೃಪ |
ತಿಲಕಂ ರಾಜಮರಾಳನ ತೆಱದಿಂ ²ಕಣ್ಗೆ ವಿರಾಜಿಸಿದಂ || ೩

ಇಂತು ವಿರಾಜಿಪ ರಾಜಾಸ್ಥಾನಕೆ |
ಸಂತಸದಿಂ ಪಡಿಯಱನೊರ್ವನ |
ತ್ಯಂತಚತುರಚಿತ್ರಿಕನೊರ್ವಂ ಬಿಂಕಂಬಡೆಯ್ತಂದಂ ||

---

1\. ಬಿಂಬಫಲಾಧರೆ. ಗ॥ 2. ಕಣ್ಗಿಂಬಡೆದಂ. ಗ॥

ಕಂತುನಿಭಂಗಭಿವಂದಿಸಿ ತನ್ನಯ |
ಪಿಂತಣ ಬಾಲನ ಕರದೊಳಗಣ ಪಟ |
ಸಂತತಿಯೊಳಗೊಂದೊಂದಂ ಪಿರಿದನುರಾಗದಿ ತೋಱಿದನು ||೪

ಅಂದಂಬಡೆದ ಮೊದಲ ಮೂವರ್ಣ್ಣವು |
ದೊಂದೊಂದಱೊಳೊಂದಿದ ಬಗೆ ನೀಲಕ |
ಬಿಂದುಕ ಪತ್ರಕ[೧]ದೊಮ್ಮ ಸುವರ್ತನವೆಂಬ ಪೆಸರಿನೆಸೆಪ ||
ಸಂದಣಿಸಿದ ನವಚಿತ್ರಸುವರ್ತಕ |
ವೆಂದಂಬಡೆತೆಱದಕ್ಕ ಕರಂ ಮನ |
ಸಂದುದು ನೇತ್ರಕ್ಕಂ ಸೂತ್ರಕ್ಕಂ ಸಕ್ಕಸವನವಾಗಿ ||೫

ಮಿಸುಗುವ ಚಿತ್ರದ ಚಿತ್ರಾರ್ಧದ ರಂ |
ಜಿಸ ವಾಚಿತ್ರಾಭಾಸದ ಮೂವಿಧ |
ರಸಚಿತ್ರದ ದೂಳೀಚಿತ್ರದ ಕಮಬಿನ್ನಣದೆರಡು ತೆಱಂ ||
ಮಿಸುಪತಿಪಿದ್ಧದ ನಿಜವಿದ್ಧದ ಮೋ |
ಹಿಸುವಾಪರವಿದ್ಧದ ಬಗೆ ಲಾಕ್ಷಾ |
ರಸಲೇಖಾಪದ್ಧತಿ ಭೂಪನ ಕಣ್ಗಿನಿದಂ ಪುಟ್ಟಿಸಿತು ||೬

ತೊಳಗುವ ಬಹುಚಿತ್ರದ ಪಟವುಂ ಕ |
ಣ್ಗೊಳಿಪಂದದಿ ವಿವರಿಸಿ ತೋಱುತ್ತುಂ |
ಬಱಿಕೊಂದುತ್ತಮಪಟದ ಸುರುಳ್ದೆಗೆಯುತ ಮುಖವಸ್ತ್ರವನು ||
ಕಳೆಯಲ್ ಕುವರನ ಚೆಲ್ವಂ ಚಿತ್ರದ |
ನವನವಿಲೋಚನ ನೋಡುವೆನೆನುತುಂ |
ಗಳಲನ ಮುಸುಕಂ ತೆಗೆದಂದದಿನತಿರಮ್ಯಂಬಡೆಯಿತ್ತು ||೭

ಕೆಂಬಟ್ಟೆಯ ಮೃದುತಲ್ಪದೊಳೊಱಗಿ ತೆ |
ಱಂಬೊಳೆದೊಪ್ಪುವ ರತಿಯೆನ ನವರ |
ಕ್ತಾಂಬುಜದೊಳ್ಪವಡಿಸಿದಿಂದಿರೆಯೆನೆ ಸಂಧ್ಯಾರಾಗದೊಳು ||
ಇಂಬುವಡೆದ ಶಶಿಲೇಖೆಯೆನಲ್ ಕೆಂ |
ಕಂಬಡೆದೆಸೆವಪರಸ್ಥಳದೊಳು ಚೆ |
ಲ್ವಂಬೊತ್ತಾ ಚಿತ್ರದ ಪೆಣ್ಬರಿಜಂ ನೋಡಿದನಾ[೩]ಕುವರಂ ||೮

೧. ದುಮ್ಮ ಗ|| ೨ ಬಂಧುರವಡೆ ಗ|| ೩ ನೃಪತಿ. ಗ||

ಸುತ್ರಾಮಪ್ರಮದೆಯು ಕಮಲಜನ ಕ |
ಳತ್ರದ ಶಂಕರಸುದತಿಯು ಶಂಬರ |
ಶತ್ರುಸತಿಯು ದಿವೋದರದಯಿತೆಯು ಪೋಲ್ವೊಯೊ ಎನುತೊಸೆದು ||
ಕ್ಷತ್ರಿಯಕುಲದೀಪಂ ನೇತ್ರಕ್ಷಂ |
ಸೂತ್ರಕ್ಕೆಳವಟ್ಟಾಚಿತ್ರಮನತಿ |
ಚಿತ್ರಂಬೆತ್ತಿನಿಸುಂ (೧)ಕಣ್ಣೆಸಯಲಾಗದೆ ನಡೆನೋಡಿದನು ||೯

ಪವಳದುಟಿಯ ಪೊಸಪಜ್ಜಮುಗುರುಳ್ಗಳ |
ಕುವಲಯನೇತ್ರದ ಕುಲಿಶರದಂಗಳ |
ಜವಳಿಗಳಸಮೊಲೆಗಳ ಜೈವಾತೃಕಮಂಡಲನಿಭಮುಖದ ||
ನವಲತಿಕಾದೇಹದ ನನಾಂಗ್ಯಯು |
ಸವಿಗೋಲ್ವಿಲ್ಲ ಸಮದ ಕುಡುವ್ವರ್ವಿನ |
ಯುವತೀರೂಪದ ಚಿತ್ರಮನಾಸುಕುಮಾರಂ ನೋಡಿದನು ||೧೦

ಆರಸಭರಿತವಿಚಿತ್ರದ ಚಿತ್ರದ |
ಸಾರಿಯು ಬಣ್ಣದುಟಿಯ ಬಂದುಗಯೊಳು |
ತೋರವೊಲೆಗಳೆಂಬಂಬುಜದೊಳು ನಾಸಾತಿಲಕುಸುಮದೊಳು ||
ರಾರಾಜಿಸ ಲೋಚನಕೈರವದೊಳು |
ಕೂರುಗುರ್ಗೇಗಗೆಯೊಸಗೊಳು ನೃಪತಿಯ |
ಚಾರುನಯನಮತಿಲಗ್ನಂಬಡೆದುವು ಬಂಡುಣಿವೆಱೆಯಂತೆ ||೧೧

ಬದವಿಗಲಂಪಿನ ಪೊಂಪುಳಿಯಿಂದವೆ |
ಗದಮುಚ್ಚದೆ ನಡನೋಡುವ ಮಾನವ |
ಮದನನ ನಿಡಿಯಲರ್ಗಣ್ಬಾಗಿಲ್ಪೊಕ್ಕಂಗಭವನಕೆಯ್ದಿ ||
ಹೃದಯಕಮಲವಿಷ್ಟರದಾಪರಿಮದೊಳ್ |
ಸದಮಲಕಲಧೌತಚಾತ್ಯಯಾಂಗದ |
ಸುದತೀಮಣಿಯಭಿನವಕಮಲಾಲಯೆಯಂದದಿಸೊಪ್ಪಿದಳು ||೧೨

ತದೂಭ್ರುವಿಮೀಶ್ವರಚೂತಾರತ್ನದ |
ಹೃದಯವನದ ನಿರ್ಮಲತರಮಪ್ಪ ಲ |
ಸದಿತ್ತಿಯೊಳಾಚಿತ್ರಪಟದೊಳೊಪ್ಪುವ ನವಬಾಲಿಕೆಯು ||

---

೧. ಕಣ್ಮನದಣಿವಂದದಿ. ಕ||

ಅದ್ಭುತವಪ್ಪ ವಿಲಾಸಶ್ರೀಯುಂ ।
ಸದ್ಭಾವನೆಯಿಂ ಭಾವಿಸಿ ಬಾಲಕಂ ।
ಗೋದ್ಭವನಾತಿಟ್ಟುಮನತಿಚತುರಂ ಬಿನ್ನಣಿಸುತ ಬರೆದಂ ॥೧೩

ನಿಡುಸುಯ್ಯೆರೋಡುವ ವದನಂ ನಸು ।
ನಡುಗುವ ಮೆಯ್ಯುಟ್ಟಲಿಯು ಕಣ್ಮಲ ।
ರುಡುಗಿದ ಪ್ರಪ್ರಣ್ಮವ †ಪೆರ್ಮದನಿಂ ಗೋಸರಿಸುತ್ತಿ ಡಲ ಬಲ್ಪು ।
ತಡಬಡಿಸುವ ನುಡಿ ತಲೆಯೊತ್ತುವ ನವಿ ।
ರಡಪಿದ ಬೆಜ್ಜಗೆಸಯಲು ನವಚಿತ್ರದ ।
ಮಡದಿಯ ಕಡುಚೆಲ್ವಿಕೆಯುಂ ರಾಜಕುಮಾರಂ ನೋಡಿದನು ॥೧೪

ಆಮದನನಿಕಾರಂ ಮೆಯ್ದೋವಿದ ।
ಭೂಮೀಶ್ವರವರಸುಮತಿಚತುರಂ ।
ಶ್ರೀಮತಿಯೆಂಬಂ ತಚ್ಚಿತ್ರಕನೊಳಗಿಂತೆಂದುಸಿರಿದನು ॥
ಈಮಾನಿತಚಿತ್ರಕೆ ಪಾಸಟಿಯುಮ ।
ಭಾಮೆಯುರುಂಟಾದೊಡೆ ಪೇಳೆಂದನ ।
ಲಾವಮಾತಂ ಕೈಕೊಂಡಾತಗೆ ನುಡಿದಂ ತಾನಿಂತೆಂದು ॥೧೫

ಧರಣೀಶಯಿತೆಯ ದರಹಸಿತಾಸ್ಯದ ।
ದೊರೆಯೆನೆ ಮಿಸುಗುವ ಕಾಳಿವಿಷಯದ ।
ಸುರುಚಿರಸೌಭಾಗ್ಯಂಬಡೆದೊಪ್ಪುವ ವಾರಾಣಸಿಯೆಂಬ ॥
ಪುರದೊಳ್ನಾಥಕುಲಾಂಬರಚಂದ್ರಂ ।
ಸಿರಿಗಂದಂಗನೆಯೆನಿಪನಕಂಪಂ ।
ಸುರಪರಿವೃಢನಮರಾವತಿಯೊಳು ಸುಖಮಿರ್ಪಂತೆನಿಸಿರ್ದಂ ॥೧೬

ಜಿತಶತ್ರುವಗೆ ಸಕಲಗುಣನಿಲಯಗ ।
ನುತದಿವಿಜಾವನಿಜೋಪಮದಾನಿಗೆ ।
ಯುತನುನಿಭಂಗೆ ಯಶೋವಿಸರಂಗೆಯುಕಂಪಮಹೀಶಂಗೆ ॥
ಶತದಳನಯನದ ಶಶಿನಿಭವದನದ ।
ರತಿರೂಪದ ರಾಜಮರಾಳೋಪಮ ।
ಗತಿಯ ಗರುವೆಯುಮಿತಪ್ರಭೆಯೆಂಬಳು ನಿಜಸತಿಯಾಗಿಹಳು ॥೧೭

---

† ಕಿಬ್ಬಪೆಮರೋ ಗ॥ †. ದಮನೆಯ್ದಿದ. ಕ॥

ಅಲತೆಗೆಗಾಲಭಿನವತಾರಾನಖಿ |
ವಲಸಗಮನನವಂಬುಜಕುಟ್ಮಲಕುಚೆ |
ವಲಗ್ನಶ್ರೋಣರವೃತಾಧರವಸಿತಲತೋಪಮರೋಮಾಳಿ ||
ಅಲಘುನಿತಂಬಮನನ್ಯಜಫಣಿನಿಭ |
ಲಲಿತಕಬರಿ ಕಳಕಂ ಸದೃಶರವ |
ವಳಿಕುಂತಳವೊಪ್ಪಿದುವಾಜನತಾಧೀಶನ ವಲ್ಲಭೆಗೆ ||೧೮

ಆಮಾನಿನಿಯ ವಿಮಲಗರ್ಭದೊಳು |
ದ್ದಾಮಯಶಶ್ರೀಯಮುದ್ಗುಣನಿಲಯರು |
ಹೇಮಾಂಗದ ರತ್ನಾಂಗದ ಚಾರುಸುಕೇತುಗಳೆಂಬವರು ||
ಪ್ರೇಮದೊಳುದಯಿಸಿ ಬಳೆಯಲ್ಬಳಿಕಂ |
ಳ್ದಾಮರೆಗಣ್ಣ ಸುಲೋಚನೆಯುಂ ಲ |
ಕ್ಷ್ಮೀಮತಿಯುಂ ಸಂಜನಿಯಿಸಿ ಪಿರಿದುಂ ಚೆಲ್ವಿಕೆದಾಳಿದರು ||೧೯

ಆಮುಕ್ತಳೊಳೊಪ್ಪಿದಳು ಸುಲೋಚನೆ |
ಕೋಮಲಕಮಳದಳಾಯತಲೋಚನ |
ಸೋಮವದನೆ ಚದುರಿಂ ಚತುರಾಸ್ಯಮನಃಪ್ರಿಯವರವಚನೆ ||
ಆಮಹಿಮವಿರಕ್ತಜನಾಲೋಚನೆ |
ಕಾಮಿನಿಕರನಿಜಧೈರ್ಯವಿಮೋಚನೆ |
ಸಾಮಜಗಮನೆ ಮದನಮಹಿಷೀಲೀಲಾಶುಕನಿಭವಚನೆ ||೨೦

ಅನಿಮಿಷನಿಭಲೋಚನೆಯಬ್ಜಾನನೆ |
ವಿನುತಲಸದ್ವಿದ್ರುಮಲಲಿತಾಧರೆ |
ಘನಗುಣನಿಧಿಯಮಿತಪ್ರಭೆ ತನ್ನ ತನೂಜೆ ಸುಲೋಚನೆಯಾ ||
ಅನುರಾಗದಿನಮಳ್ದೋಳಿಂದೆತ್ತಲು |
ಮಿನುಗುವ ಪಾಲ್ಗಡಲಮಳ್ದೆರೆಯಾಪವೊಳು |
ಜನಿಸಿ ಜಲಕ್ಕನೆ ರಾಜಿಪ ಸಿರಿಯಂದದಿ ಕಣ್ಗೊಪ್ಪಿದಳು ||೨೧

ಎಳೆಯಂಚೆಯನೇಳಿಪ ಗಮನದ ಮಾಱ |
ಗಿಳಿಯುಂ ಮಱಸುವ ನುಣ್ಮಾತಿನ ಕಿಱು |
ದಳಿರಂ ಗೆಲ್ವಧರದ ಚೆಕ್ಕೆರಲೆಯ ಸೋಲಿಪ ನಗೆಗಣ್ಣ ||

ತೂಳಪ ಹಸುಳಲತೆಯುಂ ಸಲ *ತೆಗಿಪ |
ನಳಿತೋಳ್ಗಳ ಸಿಂಗದ ಶಿಶುವಂ ತಾ |
ನಿಱಿಕೆಯ್ವೊಳ್ಪಡುಪಿನ ನೃಪತನುಜೆಯು ತರುಣಿಮಮೊಪ್ಪಿದುದು ||೧೨

ತರುಣೀಮಣಿ ತನ್ನಯ ಶೈಶವದೊಳ್ |
ಗುರುಮುಖದಿಂ ತಜ್ಜನಕನಕಂಪನ |
ಸುರುಚಿರಚರಿತನಿಧಾನನ ನುಡಿದೊಡೆಯೋದಿ ಬಳೆಯುತ್ತಿರಲು ||
ಕರಮೆ ವಿರಾಜಿಸಿದಳು ತಾನಂದಿನ |
ನರಸಖ‡ನೆಂಬಾರುಷಿಯೂರುವಿನಿಂ |
ದಿರದುದಯಿಸಿ ವಿಭ್ರಾಜಿಸುವಾಪ್ರೂರ್ವಸಿಯುಂಬಂದದೊಳು ||೧೩

ಪೊಳತುವು ಮೂಲ ತರುಣಿಮದಿಂ ಜವ್ವನ |
ದೞ್ವನ್ನಂ ಬದರಿಯು ಬಡಗದರ್ಗಿನ |
ಪೊಳವಡಕೆಯು ಪೊಸನೆಲ್ಲಿಯು ಪಸುನಿಯು ಮಿಂಟಯು ತಮರೆಯು ||
ಎಳೆಯ ಮುಗುಳ ಸಿಂಬೆಯು ಪೊಂಬಗರಿಯು |
ಪಳುಗಾಯು ಕರಂಡಕದಣಾವಕ್ಕೆಯು |
ಕಳಸದ ಪೊರೆಯೆನ ಪಂವಿಟಯಿಂ ಸುಕುಮಾರಿ ಸುಲೋಚನೆಗೆ ||೧೪

ಕಣ್ಮಲರ್ಗಳ್ ಕಡುಸಿಡಿದಾವು ಪೂತು |
ಪೊಣ್ಮಿತು ಪೊಂಗನ್ನಡಿ ಮೊಗದೊಳ್ ಪೂಗ |
ರಣ್ಮಿದುದಂಗಲತಿಕೆಯೊಳು ಕಂಪು ಕುನುಂಗಿತು ಕುರುಳೋಳಿ ||
ನುಣ್ಮಡಿ ಬಿಣ್ಪುದುದು ಮೊಲ್ಲೆರ್ದಯೊಳ್ |
ನಾಣ್ಮುಳಿತುದು ಮೂಡಿದುವುರದೊಳ್ ಗೂಲೆ |
ಪೆಣ್ಮಣಿಗಕೆ ಮನೋಹರವಡೆವೇ ಯಂಜವ್ವನದೊಳಗೆ ||೧೫

ಅರುಣಾಂಭೋರುಹದಲರ್ಗಲತೆಗಯಿಂ |
ಪೊರಯಿಟ್ಟು ಜಪಾಪ್ರಸವದ ಕೆಂಪಂ |
ಬರಸಿ ಕುಸುಂಬಯನೂಟ ಲಸದ್ವಿದ್ರುಮದ ರುಚಿಯನೂತ್ತಿ ||
ಕುರುವಿಂದದ ರಂಗಂ ಭಾವಸೆಗೆ |
ದ್ಧರಲಂಬನ ತೇಜದೊಳಲ್ದು ಕರಂ |
ಹರಿಸದಿ ಬಿದಿ ನಿರ್ಮಿಸಿದಂದದಿನೊಪ್ಪಿದುವವಳಂಘ್ರಿಗಳು ||೧೬

* ಸೋಲಿಪ. ಕ|| ‡. ನೆಂಬಮಹಾಋಷಿ | ಯೂರಿಂ. ಕ|| ಗ|| †. ಳಕ್ಕೆ. ಗ||

ಸಾಲದು ಸಾಲದೆಮಗೆ ಸುರುಚಿರರುಚಿ |
ಬಾಲಿಕೆ ಬಂಡುಣಿಯೋರಗೆಗುರುಳಳೆ |
ಪಾಲಿಸು ಕಾರುಣ್ಯದಿ ನಿನ್ನಯ ನಗೆಮೊಗದೊಳ್ ಸೂಸುವ ||
ಲೋಲಕಟಾಕ್ಷಮರೀಚಿಯನೆನುತುಂ |
[೧]ಕಾಲಂ ಪಿಡಿದೆಳಮಿಂಚುಗಳೆಂದೆನ |
ಲಾಲಲಿತಾಂಗಿಯ ಪದನಖಕಿರಣಂಗಳ್ ತಳತಳಿಸಿದುವು ||೧೭

ಜನನುತಮಪ್ಪುತ್ತಮಗತಿಯಂ ಪಡೆ |
ದನಿಶಂ ತನಗೆ ವಿರಕ್ತರನಱಗಿಪ |
ವನಿತೆಯ ಮೇಗಾಲ್ಗಳ ಪಾಸಟಿಯಂ ನಾಮಯ್ದುವೆವೆಂದು ||
ಮನದೊಳ್ ಭಾವಿಸಿ ನೀರ್ನೆಲೆಯೊಳಗಾ |
ದಿನದಿ ತಪಂಗೆಯ್ದುವು ಕೂರ್ಮಂ ಮೇ |
ದಿನಿಯೊಳದಱನುತ್ತಮರ ಪದಂಬಯಸದ ಜೀವಿಗಳುಂಟೇ ||೧೮

ಸ್ಮರಮಲ್ಲನ ಸಂಮೋಹನಗದೆಯೋ |
ಸ್ಮರನದಟುಂಬಡೆದೊದರ್ವ ಕಹಳೆಯೋ |
ಸ್ಮರಶರದ ಕಲಾಪಗಳೋ ಸ್ಮರನಂ ನೋಡದ ಮುನಿಜನದಾ ||
ಉರುಧೈರ್ಯವನಱಯಲ್ಕೆನುತುಂ ರತಿ |
ಕರದೊಳು ಧರಿಸಿದಸಿಯುಗುಂಡೋ ಎನ |
ತರುಣೀರತ್ನದ ಕಿಱುದೊಡೆ ಕಣ್ಗೆ ಕರಂ ಚೆಲ್ವಾಗಿಸಿದುದು ||೧೯

ಅಂಗಭವಾಧ್ವರಿಯಾತ್ತವಿಧಿಯಿಂದ ಭು |
ಜಂಗರ ಧೈರ್ಯಪಶುಗಳಂ ಹತಿಸಿ ಮ |
ನಂಗೊಳಿಸುವ ನವನಾಭೀಕುಂಡದೊಳೋವದೆ ಹೋಮವನು ||
ಪಿಂಗದೆ ಮಾಡಿ ಬೞಕ ನಿಱಸಿದ ಪೊಸ |
ಪೊಂಗೆಲಸದ ಯೂಪಸ್ತಂಭಂಗಳ |
ಭಂಗಿಯನನುಕರಿಸಿದುವುಳ್ತೊಡೆಯುಗಕಮಲದಳಾಂಬಕಿಗೆ ||೨೦

ಮನಸಿಜರಾಜನ ಕೃತಕಾಚಲಮೆನೆ |
ನನೆಗಣೆಯಂ ಕ್ರೀಡಿಪ ನವಸಂಮೋ |
ಹನಸರಸಿಯ ತೀರದೊಳೆ ವಿರಾಜಿಪ ಪುಳಿನತಳಂಗಳನೆ ||

---

೧ ಕಾಲ ಹಿಡಿದ ಕಾರ್ಗಾಲದ ಮಿಂಚೆನೆ. ಗ||

ವನಜೋದರನನಾಗನ ಮಂದಿರದೊ |
ಳ್ಮಿನುಗುವ ನವಕನಕಸ್ತಂಭದ ಮೋ |
ಗನುಮಾಡಿದ ಗಡಗಗಳನೆ ಸತಿಯ ಸಿತಂಬಂ ಸೊಗಯಿಸಿತು ||೩೧

ತನುವಾಗಿಯುಮಸಹಾಯದೆ ಲೋಕವು |
ನಿನಿಸುಟಿಯದೆ ಮೋಹಿಸಿ ವಶಮಾಡುವ |
ವಿನುತಗುಣಂ †ನನಗುಂಟೆಂದಂಬುಜದಳನೇತ್ರೆಯ ಮಧ್ಯಂ ||
ಇನಿವಿರಿದುಂ ತಾಂ ಪಟಿಯುತ್ತಿರ್ಪುದೆ |
ತನುವಾಗಿಯು ಜನಮಂ ಸಂಮೋಹಿಪ |
ಮನಸಿಜನಂ ಮಧುವಿಧುಮಂದಾನಿಲಸಾಧನಸಂಯುತನಂ ||೩೨

ಎಡವಟಿಯದೆ ವಾಚ್ಯಮನಾವಾಚಕ |
ಮೊಡಮೆರೆದಲ್ಲದೆ ಬೇರ್ಪಡಿಸಿರದೆಂ |
ದಡಿಗಡಿಗುಸಿರ್ವ ಬುಧರ ಬಲ್ಲವಿಕೆಯ ನುಡಿಯುಂ ಹುಸಿಮಾಡಿ ||
ಪಡದಿಯ ಬಡನಡುವೆಂಬಭಿಧಾನಂ |
ಬಿಡದಿರ್ದಪಭಿಧೇಯಂ ತಾನಾ |
ವೆಡೆಯೊಳಡಂಗಿರ್ದಪುದೋ ಅದನಾನಱಿಕೆವಡೆದುದಿಲ್ಲ ||೩೩

ಪಿರಿದುಂ ಪ್ರಿಯದಿಂದವೆ ಮುಂ ಪೆತ್ತವ |
ರಿರವಂ ಪೋಲ್ವುದು ಪುಟ್ಟಿದ ಶಿಶುವಂ |
ಬರ ಮಾತಂ ಸ್ಥಿರಕರಿಸುವ ತೆಱದಿಂ ತದ್ರಾಜಾತ್ಮಜೆಯ ||
ಸುರುಚಿರಶೂನ್ಯಾಕಾರಮನಂಗೀ |
ಕರಿಸಿದ ಮಧ್ಯದೊಳೊದವಿದ ಸೊನ್ನೆಯ |
ಪೊರೆಯಾದುದು ನಾಭೀವಲಯಂ ಮನ್ಮಥಕೇಳೀನಿಲಯಂ ||೩೪

ಮೋಹಾಗಮಸಿದ್ಧಾಂತದ ಗಣಿತವು |
ನೂಹಿಸಿ ಗುಣಿಯಿಸಬೇಕೆಂದೆನುತ |
ಶ್ರೀಹರಿಯಣುಗಿನಣುಗನತಿಮುದದಿಂ ತನ್ನೆಳವರೆಯದೊಳು ||
ಮೋಹರಿಸಿದ ಮೂರೇಖೆಯ ತೆಱನೆನ |
ಲಾಹೆಣ್ಗಳ ರನ್ನೆಗೆ ಪಲ್ಲವಕ |
ವ್ಯೂಹದರ್ಪಯನಿಕ್ಕುಳಿಗೊಂಡತಿರಾಜಿಸಿದುವು ತಿವಳಿಗಳು ||೩೫

† ತನ. ಗ||

ಶೃಂಗಾರಾಮೃತರಸಪೂರಿತದಿ ಮು |
ನಂಗೊಳಿಸುವ ನಾಭೀಕಾಸಾರದೊ |
ಳಂಗಜಗಜಮವಗಾಹಂಗೆಯ್ಯಲದಱ ಕಟದೊಳಗೊಗೆದು ||
ಹಿಂಗದ ಮದಕೆ ಮೊದಲ್ಮಸುಕಿದ ಬಹು |
ಭೃಂಗಂ ಹಂತಿವಿಡಿದು ನಡುವೆಂಬ ನ |
ಭೋಂಗಣಕೇಱುಂದದಿ ಭಾಸಿಸಿದುದು ಬಾಲೆಯ ಬಡಬಾಸೆ ||೩೬

ಉರದೊಳ್ನೆಲಸಿದ ಯೌವನಲಕ್ಷ್ಮಿಯ |
ಕರಯುಗಗತಕೋರಕಿತಕನಕಸರ |
ಸಿರುಹದ್ವಯಮೋ ಮತ್ತಾಲಕ್ಷ್ಮಿಗೆ ಲಾವಣ್ಯಾಮೃತಮಂ ||
ಹರಿಸಮೊದವೆಯಭಿಷೇಕಂಗೆಯ್ಯಲ್ |
ಸ್ಮರಗಜಮುಂ ಸಮ್ಮೋಹನಗಜಮುಂ |
ಕರದಿಂದೆತ್ತಿದ ಕಳಸಮೊ ಪೇೞನೆ ಮೊಲೆಗಳಸೆದುವವಳ ||೩೭

ಸಿರಿಮುಡಿಸೋಗೆಮೊಗಂಗಾಣುತ್ತಾ |
ಸ್ಮರಪಂಚಫಣೋರಗೆಯುಗಳಂ ಸುರು |
ಚಿರಸುತನುಶ್ರೀಖಂಡಲತಿಕೆಯಿಂದಿೞಿದೋಡುವ ತೆಱದಿ ||
ಸ್ಮರನಿಧಿಯೆಡೆಗೆಯ್ದುವ ನವಸೋಹನ |
ತರುವಿನಸಿಯಬೀಳಲ ತೆಱದಿಂ ಬಂ |
ಧುರಮಾದುವು ಕರಯುಗಮಾಕಮಲದಳಾಯತಲೋಚನೆಗೆ ||೩೮

ಸಿರಿಯಣುಗಂ ಸಮ್ಮೋಹನಶರದಿಂ |
ವಿರಹಿವಿತಾನಮನೆಚ್ಚು ಕೆಡಹಿ ಕಡು |
ಭರದಿಂ ಬಾಜಿಪ ಶಂಖಮೆನಲ್ಕಣ್ಗೊಗಲತಿರಂಜಿಸಿತು ||
ತರುಣಕುರಂಗಾಕ್ಷಿಯ ತಳಕುಕ್ಷಿಯ |
ವರಕೇಕೀಕಬರಿಯ ಕಳಶಸ್ತನ |
ಭರೆಯ ಸರೋರುಹಪದೆಯ ಶಚೀಸನ್ನಿಭನಿಜಸಂಪದೆಯಾ ||೩೯

ಮಾನಸಿಜನೆಂಬಂಕದ ಬಿಲ್ಗಾಱಂ |
ಮನಮೊಸೆದರ್ಚನೆಗೆಯ್ವನನುತ ತ |
ನ್ನಿನಿವಿಲ್ಲಂ ಕಿಱುದುಂಬಿಯ ತಿರುವಂ ಚೆಂದಳಿರ್ಗೈಪೊಡೆಯಂ ||

---

೬. ನವನಾಭೀಕೂಪ. ಕ||

ನನೆಯ ಶರಂಗಳನಿರಿಸಿದ ಕಾಂಚನ |
ವನರುಹವಿಷ್ಟರವೆನೆ ಕುಡುಪುರ್ವಿನ |
ವಿನುತಾಳಕದರುಣಾಧರದಲರ್ಗಣ್ಗಳ ಮೊಗವೊಪ್ಪಿದುದು ||೪೦

ಕಳಿಯದ ಬಿಂಬಫಲಂ ಕರಿನತೆಯಂ |
ಕಳೆ†ದು ಮಿಸುಪ ಮಾಣಿಕ್ಯಂ ಕೆಂಪಂ |
ತಳೆದಮೃತಂ ಸವಿಯೇಱಿದ ಹೊಸಹವಳಂ ಗೊಂದಣವೆಂಬ ||
ತುಱಿಯದ ಬಂಧೂಕಂ ಹೆಚ್ಚದ ಹೆಱ |
ಗಿ§ ತುಂಡಿಸದಾಲದ ಪಣ್ಣೆಳವೆಯು |
ನುಱುಮದ ಚೆಂದಳಿರೆನೆಯಿನಿದುಟಿ ಸೊಗಯಿಸಿತಾನೃಪಸುತೆಗೆ ||೪೧

ಕಂದದ ಕುಂದದ ಕಡಲೊಳ್ ಬೀಱದ |
ಚಂದಿರನಗಲ್ದುರದೊಳಗಿನಿ‡ತುಂ ಮಿಂ |
ಚೊಂದಿದ ಮುತ್ತಿನ ಕಂಠಿಕೆಯೊ ಸ್ಮರಕೀರ್ತಿಲತೆಯ ಬಿತ್ತೋ ||
ಕಂದರ್ಪಂ ವಿರಹಿಗಳಂ ಕೊಱೆಯ |
ಲ್ಕೆಂದು ಪಿಡಿವ ಕುಲಿಶದ ಕರಗಸವೋ |
ಕುಂದಲಲಿತಕುಟ್ಮಲವೋ ಎನೆ ರದವೊಪ್ಪಿದುವಾಸತಿಗೆ ||೪೨

ಸರಸಾನನಶಶಿಮಂಡಲಮಂ ಘನ |
ತರಕಬರೀರಾಹುಗ್ರಹಮು¶ಳುವುರ್ದು |
ಪಿರಿದುಂ ನಿಶ್ಚಯಮೆಂದದನದು ಬಂದಪರದ ಮಾಳ್ಕೆಯೊಳು ||
ಸ್ಮರ||ವಿಧಿಮೋಹನಮಂತ್ರಾಕ್ಷರಮಂ |
ಬರೆಯಲ್ಬೃತಪರಂಜಿಪಗಡುಗಳ |
ದೊರೆಯಾದುವು ನುಣ್ಗದುಪುಗಳಾಶ್ಯಾಮೆಗೆಯಭಿನವರಮೊಗೆ ||೪೩

ಸಿರಿ ತನ್ನಯ ನಲ್ಮೆಯ ಶಯ್ಯಾಮಂ |
ಬಿರದೊಳಗದಿರದೆ ಚಂಪಾಳೀಕುಲ |
ಮುರವಣೆಯಿಂ ಪುಗೆ ದೋಷಂ ಪೊರ್ದುಗುಮೆನುತದು ಪುಗದಂತೆ||
ಭರದಿಂ ಕಾಪಿಕ್ಕಿದ ನವಚಂಪಕ |
*ದರೆಮುಗುಳಿದು ತಾನೆಂಬಂದದಿ ಬಂ |
ಧುರಮಾದುದು ನಾಸಿಕಮಾಸರಸಿಜಸಲ್ಲಲಿತಾನನೆಗೆ ||೪೪

---

†. ಯೆ. ಗ|| §. ಳ ಗ|| ‡. ಸಂ. ಗ|| ¶. ಮಡವುರ್. ಗ||
||. ನಿಧಿಮೋಹನೆಯಂ. ಗ| *. ದರದಳಿತಂ. ಗ||

ಶ್ರುತಿಗಳನುಲ್ಲಂಘಿಸಿ ಗಮಿಸುವದನು |
ಚಿತವಾಕುಟಿಲಾಳಕಸಮುದಯಸಂ |
ಗತಮಂ ಮುಟ್ಟಿರ್ಪುದು ಪೊಲ್ಲಮಧೋಗತಿಗಿಳಿವುದು ಕಷ್ಟತರಂ ||
ಕ್ಷಿತಿಯೊಳಗೊಡವುಟ್ಟಿದರೊಳ್ ನೆರೆವುದು |
ಮತವಲ್ಲೆನುತೆತ್ತಂ ಪರಿಯದೆ ತ |
ತ್ಸತಿಯ ಕುಡಿತೆಗಣ್ಗಳ್ಕಿಲ್ಲದೊಡಾಮೊಗಕೆಲ್ಲಿಯ ತೆಱಪು ||೪೫

ತಾನೇ ತನ್ನತುಳಾಕಾರಕ್ಕೆ ಸ |
ಮಾನಮೆನಿಪನನ್ಯಮಲ್ಲದೆ ಬಂ |
ದಾನಲಕ್ಷ್ಮಿಯದಿದಕಿದು ಸರಿಯೆನಿಸಿದೊಡುಪಮಾಲಂಕಾರ ||
ಈನಾರೀಮಣಿಯುಪಮಾತೀತನ |
ಮೀನಲಸತ್ಕರ್ಣಕ್ಕೆನಲದಕೆ |
ನ್ನೇನಂ ಸರಿಯೆಂದುಸಿರುವೆನಾನುಱಿದವಯವಗಳ ತೆಱದಿ ||೪೬

ಉದಧಿಯಣುಗಿಯುಗ್ರನ ಸತಿ ಶಾರದೆ |
ಮದನಮಹಿಷಿ ಮೆಯ್ಗಣ್ಣನ ಪಟ್ಟದ |
ಸುದತಿಯರ್ಗಿಮ್ಮಡಿಯಾದೈಸಿರಿ ಪೊಸಗಾಡಿ ಚದುರು ಚೆಲ್ವು ||
ವಿದಿತವಿಭವಮುಂಟೀಕೆಗೆನುತ ಮುಂ |
ಬಿದಿ ಬರೆದಳಿಕಾಕ್ಷರಪಙ್ಕ್ತಿಯ ತುದಿ |
ಮೊದಲೊಳಗೆಸೆವಾಶ್ರೀಕಾರಂಪೋಲು ಶ್ರುತಿಯೊಪ್ಪಿಗುವವಳ ||೪೭

ಮಿಸುಗುವ ನಗೆಗಣ್ಣೆಂಬಂಬುಜಮಂ |
ನೊಸಲೆಂಬೆಳವೆಱೆ ಬಾಧಿಸಲೆನುತುಂ |
ಮಸಕದಿ [೧]ಬಂದು ಪಿಡಿವ ಸಮಯಕೆ ಬಿಡು ಬಾಧಿಸಬೇಡೆನುತ ||
ಕುಸುಮಶರಂ ತನ್ನೆಡಗೈಯೆರಲೆಯ |
ಪೊಸಕೋಡನದರ್ಕಡ್ಡಂ ಪಿಡಿದವೊ |
ಲಸಿಯಳ ಲಲಿತಭ್ರೂಲೇಖೆ ಕರಂ ಕಣ್ಗೆ ವಿರಾಜಿಸಿತು ||೪೮

ಅನುದಿನದಿಂ ದೂರದ ನೇಹಂ ನಮ |
ಗೆನುತ ಮರುತಮಾರ್ಗದಿನೊಸೆದಿಱಿತಂ |
ದನುರಾಗದಿ ನಗೆಗಣ್ಣೆಯ್ದಿಲನಮರ್ದಪ್ಪಿದ ಕಿಱುವೆಱೆಯೋ ||

೧. ನದು ಬಂದಡರುವ ಸಮಯಕೆ. ಕ|

ಎನೆ ಕುರುಳ್ಗಳ ಕುಣಿತಕ್ಕಂಗೋದ್ಭವ ।
ನನುಮಾಡಿದ ನವರಂಗಸ್ಥಲವೋ ।
§ಎನೆ ಕಣ್ಬಗೆಗೊಪ್ಪಂಬಡೆದುದು ನೊಸಲಾರಮಣೀಮಣಿಗೆ ॥೪೯

ಸ್ಮರಯಂತ್ರದ ಬೀಜಾಕ್ಷರವಿತತಿಯು ।
ಕುಜುಪುಗಳಂ ಮುಡಿಯೆಂಬ ತಮಾಲೋ ।
ತ್ಕರ‡ಲತಿಕೆಯು ಬೀಱಲ ತಿಂತ್ರಿಣಿಯುಂ ಸಿರಿವೊಗದಾವರೆಯು ॥
ಪರಿಮಳವುಂ ಕೊಳಲೆಂಪು ಮುಸುಂಕಿದ ।
ತರುಣಭ್ರಮ†ರಸಮಿತಿಯು ಏಡಂಗಂ ।
ಪಿರಿದುಂ ಗೆಲೆವಂದುದು ಪಿಡಿನಡುವಿನ ಕುವರಿಯ ಕುರುಳೋಳಿ ॥೫೦

ಮಾನನಿದಾನೆಯ ಮಂದಶ್ವಾಸವೆ ।
ನೇ ನವಸುರಭಿಸಮೀರಂಗೆತ್ತು ನಿ ।
ದಾನಿಸಿಯುಂಗಜನೆಂಬ ಮಹಾಕಾಳೋರಗನೆಯ್ತರುತ ॥
ಆನಯನದ ಕಡುಚೆಲ್ವಂ *ನಿನಿಟ್ಟಿಸಿ ।
ತಾನದು ಸಾರಂಗಾಕ್ಷಿಗಳೆಂದನು ।
ಮಾನಿಸಿ ಸುಗಿದು ಪೆಱಗೆ ನಿಂದಂದದಿ ಕಬರಿ ವಿರಾಜಿಸಿತು ॥೫೧

ನವಮಣಿಭೂಷಣವುಂ ತಾಮೆಲ್ಲಂ ।
ತಮೆ ತೊಟ್ಟಿಲ್ಲದೆ ಕಡುಚೆಲ್ವಿಕೆ ತಮ ।
ಗವತರಿಸದು ನಾನೊಂಗಳ್ಪಿಸಿತುಂ ಪೊಂದೊಡವಂ ತೊಡದೆ ॥
ನವವಿಟರಂ ಸೋಲಿಪ ಸೌಂದರ್ಯಂ ।
ಸವಸಿಸಿದತ್ತೆನಗಿರದೆಯೆನುತುಮುೞ ।
ದವಯುವವುಂ ನಗುವಂದದಿ ಬೆನ್ನ ಜಳಗು ಸೊಗಯಿಸಿತವಳ ॥೫೨

ಕರಚರಣಾಧರದಂತಪಿತತಿಯೆಂ ।
ಬರುಣಮಣಿಯನುಗುರೆಂಬ ಕುಲಿಶವುಂ ।
ಕುರುಳಲರ್ಗಣ್ಕುಡುಪುರ್ಪ್ಗೋಳ್ವ್ಯಾಸಗಳೆಂಬ ಕಱಯ ¶ಪರಲಂ ॥
ಸ್ಮರನೆಂಬಾಸೊನ್ನಾರಂ ಕೀಲಿಸ ।
ಲಿರದೊಪ್ಪುವ ಪೊಸಚಿನ್ನದ ತಗಡೆನೆ ।
ಕರಮೆಸೆದುದು ಮೆಯ್ವಳಗು ಮಹೀಪತಿಯಣುಗಿನ ನಂದನೆಗೆ ॥೫೩

---

§. ಎನುವೀವೋಹದ ಹಣೆಯೆನಿಸುವತೆಳ್ವಣೆಯೊಪ್ಪಿದುವವಳ. ಗ॥ ‡. ವಲ್ಲಿಯು. ಗ॥
†. ರಾವಳಿಯು ಚೆಲ್ವಿಕೆಯುಂ. ಗ॥ *. ನೋಡುತ. ಗ॥ ¶. ಮಣಿಯುಂ. ಕ॥

ಅರಮಗಳಾಲಾಪಕೆ ತಮ್ಮಯ ದನಿ |
ಸರಿಯೆಂದಾಡಿದ ಪಾಪದ ಫಲದಿಂ |
ಹರಿಸದಿ ಮುಂ ಪೆತ್ತವರನಗಲಿ ಕಾಕಾಲಯಮೊಳಗೊಡಲಂ ||
ಪೊರೆದುಂ ಮೆಯ್ಮಸಿವಣ್ಣಮನಾಂತನ |
ಪರತಂ ನುಡಿವಡೆಯದೆ ಪಿಕಮಿರ್ದುವು |
ಧರೆಯೊಳದಱಿನೊಳ್ಪದರ್ಗೆಣೆ ತಾಮೆಂಬರನಘಮುಬ್ಬಲಿಸದೆ || ೫೪

ತರುಣಾಶೋಕಲಸತ್ಪಲ್ಲವಪದ |
ದರಸುಮಗಳ ರಾರಾಜಿಪ ನವಮೃದು |
ತರಗಮನದ ಗಾಡಿಯ ಗರುವಿಕೆಯಂ ನೀನೊಲವಿಂದೆನಗೆ ||
ವರಮಂ ಕುಡುಕುಡು ಕಾರುಣ್ಯದೊಳೆನು |
ತರವಿಂದೋದ್ಭವನಂ ಮಿಗೆ ತುತಿಯಿಸಿ |
ಯುರವಣೆಯಿಂ ಪೊತ್ತಪುದಿನ್ನುಂ ನಾಡಱಿಕೆಯೊಳರಸಂಚೆ || ೫೫

ಸುವಚನನೊಳಗೆ ಸರಸ್ವತಿ ವಿಲಸ |
ಚ್ಛ್ರವಣದೊಳಗೆ ಮಣಿಕರ್ಣಿಕೆ ಕರದೊಳ್ |
ನವಪುಷ್ಕರೆ ಸುರುಚಿರಲೋಚನಯುಗದೊಳಗಧಿಕವಿಶಾಲೆ ||
ಸವಿದುಟಿಯೊಳ್ ಸಲೆ ಶೋಣೆ ಹೃದಯದೊಳ್ |
ಗವಿರತನರ್ಮದೆ ನೆಲಸಿಪ್ಪುದರಿಂ |
ಯುವತಿ ನಿರೀಕ್ಷಿಸುವರ ಕಣ್ಗಿರದೆ ಕೃತಾರ್ಥತೆಮಾಡುವಳು || ೫೬

ಕಲ್ಪಲತಾಲಲಿತಾಂಗಂ ವಿಲಸ |
ತ್ಸ್ವಲ್ಪೇತರಕುಚಯುಗಳಂ ವೀಣಾ |
ಜಲ್ಪಂ ಜೈವಾತೃಕಮುಖಮಭಿನವಕುವಲಯ[೧]ದಳನೇತ್ರಂ ||
ಅಲ್ಪಲಲಿತಮಧ್ಯಂ [†]ನವಕದಳೀ |
ಕಲ್ಪೋರು ಜಗದ್ವಶ್ಯಮನೋಭವ |
ಶಿಲ್ಪಾಕಾರಂ ಕಣ್ಗೆ ವಿರಾಜಿಸಿತಾರಾಜಾತ್ಮಜೆಯ || ೫೭

ಅರ್ಣೋಜಸುದಳನೇತ್ರೆಯಮಲತರ |
ಪೂರ್ಣಕಲಾಭೃದ್ವಕ್ತ್ರೆ ವಿವಿಧವರ |
ವರ್ಣಜನದ ಸುಜ್ಞಾನಚರಿತ್ರಲತಾಮೂಲಲವಿತ್ರೆ ||

---

೧. ನೇತ್ರಯುಗಂ. ಗ|| †. ಸತ್ಕದಳೀ. ಕ||

ಕರ್ಣಾಟಶ್ರೀಕಾರಶ್ರೋತ್ರೆ ಸು ।
ವರ್ಣಶಲಾಕಾಸನ್ನಿಭಗಾತ್ರೆ ಗು ।
ಣಾರ್ಣವಪೃತ್ರೆ ಸುಲೋಚನೆಯೊಪ್ಪಿದಳಾಲೋಕಪವಿತ್ರೆ ॥ ೫೮

ನುತಹಸ್ತವಿರಾಜಿತೆ ಸುಶ್ರವಣಾ ।
ನ್ವಿತೆ ಸುಖರಸಚಿತ್ತಾರ್ದ್ರೆ ಸುಮೋಹನ ।
ತತಮೂಲಗುಣೋತ್ತರೆ ಚಿತ್ರಾಂಬರೆ ಸಕಲಕಲಾಶ್ಲೇಷೆ ॥
ವಿತತಚರಿತ್ರಸದನುರಾಧ §ವಿರಾ ।
ಜಿತರೋಹಿಣ್ಯಾದರೆ ಚೆಲ್ವಿಂ ಸ್ಮರ ।
ಸತಿಗತಿಜ್ಯೇಷ್ಠೆ ತರುಣಿ ತಾರಾಮಯಮೆನೆ ಕಣ್ಗೊಪ್ಪಿದಳು ॥ ೫೯

ನನೆಗಣೆಯನೆ ನಗೆಗಣ್ ರಸದಾಳಿಯ ।
ಧನುವೆನೆ ಕುಡುಪುರ್ವಾಜಡಿವಟ್ಟವದೆ ।
ಯೆನೆ ಕುರುಳ್ಗಳ್ ಪೊಸಪವಳದ ಗುಂಬದಡಿಯ ‡ಚೆಲ್ವೆನೆಯಧರಂ ॥
ಮಿನುಗುವ ಪಟ್ಟಯಿಗೆಯೆನೆ ಮುಡಿಯೆಸೆಯಲ್ ।
ವನರುಹದಳಲೋಚನೆ ಸೊಗಯಿಸಿದಳ್ ।
ಮನಸಿಜರಾಜನ ¶ರಾಜಿಪ ಶಸ್ತ್ರಾಲಯಮೆಂಬಂದದೊಳು ॥ ೬೦

ಮಾಣಿಕದುಟಿಯ ಮಧುರಕೋಕಿಲಸಿಭ ।
ವಾಣಿಯ ವನರುಹವದನದ ನಸುಜೆದ ।
ರ್ದೇಣನಯನದೆಳದಿಂಗಳ ನೊಸಲ ನವೀನಕುಸುಮಶರದ ॥
ತೂಣೀರೋಪಮಜಂಘೆಯ ಮಧುಪ ।
ಶ್ರೇಣಿಯ ಕುಂತಳದಂಗಭವ್ಯೋರಗ ।
ವೇಣಿಯ ವನಿತಾರತ್ನದ ರೂಪನದೇನಂ ಬಣ್ಣಿಪೆನು ॥ ೬೧

ಚಂದಿರವೊಗದ ಚಟುಲಮೃಗನೇತ್ರದ ।
ಬಂದುಗೆದುಟಿಯ ಮಿಸುಪ ಬಡನಡುವಿನ ।
ಮಂದಶ್ವಾಸದ ಮಧುರಾಳಾಪದ ಮನಸಿಜಗಜಗತಿಯ ॥
ಕುಂದಲಲಿತಕುಟ್ಮಲರದನದ ಕುರು ।
ವಿಂದಪವದ ಕುಮುದಲಸದ್ಗಂಧದ ।
ಚಂದುಗ್ಗೆಯ ಕುಮಾರಿಯ ರೂಪನದೇನಂ ಬಣ್ಣಿಪೆನು ॥ ೬೨

§. ಸುರಂ. ಗ॥ ‡. ದನುರಂಗುದುಟಿ. ಗ॥ ¶. ಮೋಹನ. ಗ॥

ಏಱುಂಜೌವನದೆಳವೆಱೆನೊಸಲರ |
ನೇಱಿಲ ದೋರೆದುಟಿಯು ಪೊಣ್ಮುವ ಪೊಱ |
ವಾಱ ಪಸುಳೆಗಿಳಿವಾತಿನ ಬಾಱುದೊಡೆಯು ಬಣ್ಣಿಗೆಗಾಲಾ ||
ಆಱಡಿಗುರುಳಲರ್ವಿಲ್ಲನ ಮಡದಿಯು |
ಮಾಱುಂಗೊಂಡ ಮನೋಹರರೂಪದ |
ನೀಱೆಯು ನವಲಾವಣ್ಯದ ಸಿರಿಯುನದೇನಂ ಬಣ್ಣಿಪೆನು ||೬೩

ನನೆವಿಲ್ಲಾಗಱಡಿವೆದೆಯೋಱುವವ್ರೋ |
ಲ್ವನಿತಾಮಣಿಯಿಂತೊಪ್ಪುವ ರೂಪಿಗ |
ಮಿನುಗುವ ಮೀಱುಂಜೌವನವೇಱಿ ವಿರಾಜಿಸುತಿರೆ ಕಂಡು ||
ಜನಕನಕಂಪಮಹೀನಾಥಂ ಮನ |
ಕನುರಾಗಂದಳೆದಾಕೆಗೆ ತಕ್ಕೊರ್ವನಿ |
ಯುನದಾವೆಡೆಯಿರ್ದಪನೆನುತವೆ ಬಗೆಯೊಳ್ಭಾವಿಸಿದಂ ||೬೪

¶ಇಂತೆಣಿಸುತೆ ಕರೆಯಿಸಿ ಮಂತ್ರಿಗಳಂ |
ಮಂತಣಮಿರ್ದು ಮನೋರಾಗದಿ ತಾ |
ನಿಂತು ನಿರೂಪಿಸಿದಂ ಮತ್ಸುತೆಗೇಱುಂಜೌವನವಾಯ್ತು ||
ಅಂತದಱಿಂದಾಕೆಗೆ ಸರ್ವೋರ್ವೀ |
ಕಾಂತರೊಳೊರ್ವಕಲಾವಿದನಂ ಗುಣ |
ವಂತನನುದ್ವಹನಕ್ಕೆ ವಿಚಾರಿಸಿ ಬೇಗದಿ ನೀವೆನಲು ||೬೫

ನರನಾಥಂ ನಿರವಿಸೆ ಕೇಳ್ದತ್ಯಾ |
ದರದಿಂ ಸರ್ವಸಚಿವರಿಂತೆಂದರ |
ತರುಣಿಗೆ ತಕ್ಕವರೀಭೂತಳದೊಳಗಣ ನೃಪನಿಕರದೊಳು ||
ಗರುವಿಕೆಯುಳ್ಳವರಿಲ್ಲದಱಿಂ ಧರೆ |
ಯರಸುಗಳೆಲ್ಲರನಿಲ್ಲಿಗೆ ಕರೆಯಿಸೆ |
ಯರಮಗಳಾರಂ ವರಿಯಿಪಳವನೇ ವರನೆಂಗುಸಿರಿದರು ||೬೬

ಎಂಬವಸರದೊಳಗಾಚೆನ್ನೆಸಱ |
ಬಿಂಬಂ ಬಿಸುಪನುೞ್ದು ಘನೊಮೀತಳ |
ಕಂಬರದಿಂದಿೞಿತರ್ಪಂದದಿನಾಜನತಾಧಿಪಸಭೆಗೆ ||

¶ ಇಂತೆಣಿಸುತವೆ ಗ। ೧ ತರದಿಂ ಗ॥ ೨ ಗಗನದೊ ಘ।

ತುಂಬಿದ ಪೊಸಮಾಣಿಕಮಣಿದೊಡವಿನ |
ಕೆಂಪೆಳಗೆಂ ಸೂಸುತ ಚಿತ್ರಾಂಗದ |
ನೆಂಬ ದಿವಿಜನೊರ್ವಂ ತಳತಳಿಸುತ್ತೊಸೆದಿರದೆಯ್ದಿದನು ||೬೭

ಬರುತಾದೇವಂ ತನ್ನಂ ನಿಟ್ಟಿಸಿ |
ಯುರುಮುದದಿಂದಾಸನದಿಂದೆಳ್ದು |
ದರವಂ ಮಾಡಿದ ಮನುಜೇಶ್ವರನೊಳಗಿಂತೆಂದುಸಿರಿದನು ||
ಧರಣೀಶಾ ಕೇಳ್ಮುನ್ನಿನ ಭವದೊಳ್ |
ಪಿರಿಯಣ್ಣಂ *ನಾಂ ನಿನಗಂಗೋದ್ಭವ |
ಹರಪದಪೂಜೆಯ ಫಲದಿಂದಾಸಗ್ಗದೊಳುದ್ಭವಿಸಿದನು ||೬೮

ದಿವದೊಳ್ದಿವ್ಯಸುಖವನುಣುತಿಂದಿನ |
ದಿವದೊಳ್ನಿನ್ನನೆ ನೋಡುವೆನೆನುತತಿ |
ತವಕದಿನೆಯ್ದಿದೆನನೆ ಕೇಳ್ದಾದರದಿಂದಂತಃಪುರದ ||
ಯುವತೀಜನನಿಜಪುತ್ರಸುಹೃಜ್ಜನ |
ನಿವಹಮದೆಲ್ಲಮನಲ್ಲಿಗೆ ಕರೆಯಿಸಿ |
ದಿವಿಜನ ಕೋಕನದಾಂಘ್ರಿಯುಗಕ್ಕವನತರಂ ಮಾಡಿಸಿದಂ ||೬೯

ಮತ್ತಾಮನುಜಾಧೀಶ್ವರನತಿಮುದ |
ವೆತ್ತಿಂತುಸಿರ್ದಂ ಜೌವನವಾದುದು |
ಮತ್ತನುಜಗೆಯುವಳೀ ತನ್ನಿಚ್ಛೆಯ ವರನಂ ವರಿಯಿಸುವ ||
ಉತ್ತಮಮಂಡಪವಂ ವಿರಚಿಸಿಮೆನೆ |
ಚಿತ್ತರದಿಂ †ಗೆಯ್ದಂ ನವರತ್ನದ |
ಮೊತ್ತದಿ ಕಣ್ಗೆ ವಿರಾಜಿಸುವಂದದೊಳಾಚಿತ್ರಾಂಗದನು ||೭೦

ಕ್ಷಣದೊಳು ನಿರ್ಮಿಸಿ ಮಂಡಪಮಂ ಬಂ |
ಡಣಿಯೆಣೆಗುರುಳ್ ಸುಲೋಚನೆಯೇನೇ |
ನುಣಿಸನುಣಲ್ಕೀಹಾರಂ ಜನಿಯಿಸದಮೃತಾನ್ನವನೀವ ||
ಮಣಿಪಾತ್ರೆಯುಮಂ ನನದಂತಹ ಭೂ |
ಷಣಮಂ ಮಾಸದುದುಪ್ಪಟಿಯುಂ ತಾ |
ನಣಿಯರವೊಲ್ದಿತ್ತಾದೇವಂ ತದ್ಭೂಪತಿಗಿಂತೆಂದಂ ||೭೧

*. ನಾನೀಗಂಗೋ. ಕ|| †. ನಿರ್ಮಿಸಿದಂ ಮಣಿಗಳ. ಕ||

ಮುನ್ನಂ ಮಾಡಿದ ಪುಣ್ಯದ ಫಲದಿಂ ।
ದುನ್ನತಿಕೆಯು ಸೌಭಾಗ್ಯಂದಳೆದೈ ।
ಸನ್ನುತ‡ಸರ್ವೋರ್ವೀಪತಿಯುನುತತಿಮುದದಿಂ ಮಾತಾಡಿ ॥
ತನ್ನೊಲವಿಂ ತತ್ಪುತ್ರಕಳತ್ರಕೆ ।
ರನ್ನವೆಸದ ಬಹುವಿಧಭೂಷಣಮಂ ।
ಮನ್ನಿಸಿ ಕೊಟ್ಟಾದೇವನಮರಲೋಕಕ್ಕೆಯ್ದಿದನಿತ್ತ ॥ ೭೦

ತರುಣಿ ಸುಲೋಚನೆಯುಂ § ಬಸಮಾಡಲ್ ।
ಗರಗರನಾದ ವಿಲಾಸಂದಾಳ್ದಿದ ।
ಗರಿಮುರ್ಬನ್ನಿ ಮೆನುತ್ತೈವತ್ತಾಱಕೆಯು ಜನಪದದ ॥
ಅರವ-ಕ್ಕಳ ಬಙಗೆವ್ಮರಸಂ ದೂ ।
ತರನಟ್ಟದನಾಕಜ್ಜದ ತೆಱನದು ।
ಧರಣಿಪಚೂಡಾಮಣಿ ನಾನೆಯ್ದಿದ ತೆಱನಂ ಚಿತ್ತೈಸು ॥೭೩

ನಾನಾಪೂಬಲೊ¶ಚಿತ್ರಿಕನೊರ್ವಂ ।
ಭೂನುತೆ ಸುಭಗೆ ಸುಲೋಚನೆಗರಸಾ ।
ನೀನಲ್ಲದೆ ¶ಮತ್ತಿನ ಮನುಜೇಶರ್ ತಕ್ಕವರಲ್ಲೆಂದು ॥
ಸಾನಂದದಿ ನಿನ್ನಯ ವರರೂಪದ ।
ನೂನಲಸಚ್ಚಿತ್ರಂಬರೆದೆನ್ನಯ ।
ಮಾನಿನಿಯಿಂದಾಕೆಯ ಬಗೆಗಟ್ಟಿದೆನತಿಸಂತೋಷದೊಳು ॥೭೪

ಆಚಿತ್ರಮನೆಱಕದೊಳೀಕ್ಷಿಸುತ ಸು ।
ಲೋಚನೆಯುಂಗೋದ್ಭವನ ಕುಸುಮನಾ ।
ರಾಚಕೆ ತನುವಂ †ತೆತ್ತು ಬಱಕ ಪೂರ್ಣೆಂತೆಂದುಸಿರಿದಳು ॥
ಭೂಚಕ್ರಾಧೀಶ್ವರನಂದನರೊಳ ।
ಗೀಚಿತ್ರದ ಪಡಿರೂಪಂ ಧರಿಯಿಸಿ ।
ದಾಚೆನ್ನಿಗನಲ್ಲದೆಯುಬದವರೆನ್ನಯ ಸೋದರರೆಂದು ॥೭೫

ಎನುತ ನುಡಿದು ಸಂತಸದಿಂ ಮತ್ಸತಿ ।
ಗನುನಯದಿಂ ನವಚಿತ್ರಾಂಬರವಂ ।
ಮಿನುಗುವ ಮಣಿದೊಡವಂ ಮಚ್ಚೀಯುತ ಬಱಕೇಕಾಂತದೊಳು ॥

‡. ಸಕಲೋ. ಕ॥ §. ವಿವಹಂ. ಗ॥ ¶. ಮಾತಿನ. ಗ॥
ಖ. ಸಂಮುದದಿಂದ. ಖ। †. ಕೊಟ್ಟು. ಕ॥ ಗ॥ *. ದರ್ಶನ್ನಯು. ಗ॥

ವನಿತೆ ನುಡಿದಳಿಲ ಚಿತ್ರಿಕಸತಿ ನಿ |
ನ್ನಿನಿಯನ ದೆಸೆಯಿಂದೀಯೆಡೆಗಾನವ |
ಮನಸಿಜನಂ ತರ್ಪುದ್ಯೋಗಮನೆಸಗೆನುತವೆ ತವಕದೊಳು ||೭೬

ಆನುಡಿಯಂ †ಕೇಳ್ದಿನ್ನ ಮನಸ್ವಿನಿ |
ತಾನೆನಗೊರೆಯಲ್ಕಾದದಿಂ ಕೇಳುತ |
ನಾನಾಕುವರಿಯ ರೂಪಂ ಮುನ್ನವೆ ನೆಱೆ ಬಲ್ಲುದಱಿಂದ ||
ಈನವಚಿತ್ರಂಬರೆದಯ್ದಿದೆನೆನೆ |
ಭೂನಾಥಂ ಕೇಳ್ದಾಚಿತ್ರಿಕೆಗೆಯ |
ನೂನಸಕಲಮಣಿಖಚಿತವಿಭೂಷಣಮಂ ಮನವೊಸೆದಿತ್ತಂ ||೭೭

ಅನಿತಱೊಳಾವಾರಾಣಸಿಯಧಿಪತಿ |
ಯನುಚರನೊರ್ವಂ ಬಂದಿಂತೆಂದಂ |
ಜನಪತಿ ಕೇಳ್ನಮ್ಮರಸಂ ತನ್ನ ಕುಮಾರಿಯನೊಲಿಸುವ್ರೊಡೆ ||
ಅನುನಯದಿಂದವೆ ಬರವೇಱ್ದಿನ್ನಂ |
ವಿನಯದಿ ನಿನ್ನಂ ಕರೆಯಲ್ಕಟ್ಟಿದ |
ನೆನೆ ಕೇಳ್ದತ್ಯಾತುರದಿಂ ನಿಜಪುರವರವಂ ಪೊಱಮಟ್ಟಂ ||೭೮

ಸುರಪರಿವೃಢವೈಭವದಿಂದುರುಮುದ |
ಕರಿಯಲಸನ್ಮಸ್ತಕಮನಡರಿ ಸೋ |
ದರರಾವಿಜಯಜಯಂತರ್ತನ್ನಿರ್ವಕ್ಕದೊಳೆಯ್ತರಲು ||
ಪರಿವೇಷ್ಟಿತವಾರಕಜನಪರಿಜನ |
ತರುಣೀಜನನಖಿಜನವೆಯ್ದುತ್ತಿರೆ |
ಹರುಷದಿ¶ನಡೆದಂ ವಿಕ್ರಮಕೌರವನುರುಗಂಭೀರರವಂ ||೭೯

ವಿಮಲಕುಲಿಶವಿಭ್ರಾಜಿತಹಸ್ತಂ |
ಸುಮನೋಲೋಕಾನನ್ದಕರಂ ನೆಗ |
ಳ್ದಮಿತಾರಾತಿಮಹೀಭೃದ್ಬಲಮರ್ದನನನಿಮಿಷನೇತ್ರಂ ||
ರಮಣೀಯಸುಧರ್ಮಾವಾಸಂ ಮಿಸು |
ಪಮರಾಧೀಶ್ವರನೆಂಬಂದದಿ ನವ |
ಕಮದೇಭಾರೂಢಂ ಶೋಭಿಸಿದಂ ಪ್ರಭುಕುಲಮಣಿದೀಪಂ ||೮೦

---

† ತಂದ. ಕ.|| ¶ ಬಂದಂ ಕ.||

ಇದು ಸುರನರಫಣಿಪರಿವೃಢವಿನಮಿತ |
ವಿದಿತವಿನಯಗುಣಗಣಯುತ ಜಿನಪತಿ |
ಪದಸರಸಿಜಮದಮಧುಕರನತಿಚತುರಕಲಾಪರಿಪೂರ್ಣಂ ||
ಸದಮಳಚರಿತಂ ಪ್ರಭುರಾಜಂ ಸಂ |
ಮುದದಿಂ ವಿರಚಿಸಿದ ಜಯನೃಪಕಾವ್ಯದೊ |
ಳೊದವಿ ಮನೋಹರಮಂ ಪಡೆದುದು ಮೂಱನೆಯ ಮಿಸುಪ ಸಂಧಿ ||

ಮೂಱನೆಯ ಸಂಧಿ ಸಂಪೂರ್ಣಂ.

———— ೦ ————

# ಚತುರ್ಥ ಸಂಧಿ.

ಸೂಚನೆ | ಬನದೊಳ್ವಿದ್ಯಾಮುದ್ರಿಕೆಯಿಂ ಕಂ |
ಡನಿಲಪಥಂಬಿಡದೇರ್ದುಯದೃಶ್ಯದಿ |
ನನಿಮಿಷನೇತ್ರೆಯನೀಕ್ಷಿಸಿದಂ ಸ್ಮರರೂಪಂ ಜಯಭೂಪಂ ||

ಬರುತಾಕಾಶೀವಿಷಯದೊಳತಿಬಂ |
ಧುರಬಹುಕುಸುಮಲತಾಸ್ಪದವಿಲಸ |
ತ್ತರುಷಾಶೋಕವನಂಗಂಡಾಯೆಡೆಯೊಳ್ ೧ಬೀಡಂ ಬಿಡಿಸಿ ||
ಹರಿಸದಿ ತನ್ನ ಸಖಂ ಶ್ರೀಮತಿಯಿಂ |
ಬೆರಸಾವನದ ವಿಲಾಸವನೀಕ್ಷಿಸು |
ತರಸುಮಗಂ ನಡೆದಂ ಮದನಂ ಮಾಧುಗೂಡಿ ನಡೆವ ತೆಱದಿ ||೧

ಪನಿನೀರ್ವರಿವ್ರನಲೆರಡುಂ ೨ಕಡೆಯೊಳ್ |
ಗೆನಸುಂ ಬೀಗಿ ಬೆಳೆದ ನವಘುಸೃಣದ |
ಘನಸಾರದ ಪೊಸಕಾಡೊಳಗಾಡುವ ಕತ್ತುರಿವುಲ್ಲೆಗಳ ||
ಬಿನದಿಪ ಹಸುಳೆಜವಾದಿಯ ಮಿಗಗಳ |
ನನುರಾಗದಿ ನೋಡುತ ಬಿಜಯಂಗೈ |
ವನಿತಱೊಳೊಂದು ನವೀನಕುಸುಮಮಂಟಪಮಿರಲೀಕ್ಷಿಸಿದಂ ||೨

ಇದು ರತಿರಾಜಸಭಾಸದನಂ ಮ |
ತ್ತಿದು ಮನಸಿಜಮೋಹನಮಂತ್ರಾಲಯ |
ಮಿದು ಗಾಡಿಯ ಗುಣದಾಗರಮಿದು ತುಂಬಿಯ ಜೇವಣಸಾಲೆ ||
ಇದು ರತಿ ನರ್ತಿಪ ನಾಟಕಗೃಹಮಿಂ |
ತಿದು ರಸಿಕರ ಕಾರಾಗಾರಂ ತ |
ಪ್ಪದೆನಲ್ಬುದುರರ ಚಿತ್ತಂಗೊಳಿಸಿದುದಾಲತಿಕಾ೩ಸದನಂ ||೩

ಅದಱೊಳ್ವಿದ್ಯಾಧರಮಿಥುನಂ ಕೂ |
ಡಿದುದನರಸನೊಳ್ಪಿಸುಣಾತುವನ್ರೋ |
ಳ್ಕೆದರ್ದ ಕಬರಿಯ ಮುಗುಳ ಸೂಸಿದ ಪೊಸಗರ್ಪೂರದಂಬುಲದ ||

---

೧ ಬಲಮಂ ಕ|| ಗ||  ೨. ಕರೆ. ಗ||  ೩. ವಾಸಂ ಕ||

‡ಉದಿರ್ದಂಗದ ಬಾವನ್ನವುಡಿಯು ಸೊಗ |
ಸೊದವೆ ರಪಿಸಿದಾನವಸಾಗಂಧಕೆ |
ಪದೆದೆಱಗುವ ಪೊಸಪಱವೆಗೞಳ ಪಸುಳೆಯಿಂಚರವೊಪ್ಪಿದುವು ॥ ೪

ಮತ್ತದಱೊಳ್ಮಣಿಮುದ್ರಿಕೆಯೊಂದೆಸೆ |
ಯುತ್ತಿರೆ ಕಂಡದನಾಜಯಭೂವರ |
ನೆತ್ತಿ ಕರಾಂಗುಲಿಯೊಳಗಿಟ್ಟಲ್ಲಿಂ ಮುಂದಕೆ ನಡೆಯುತಿರೆ॥
ಚಿತ್ತಜನಿಭಖೇಚರನೊರ್ವಂ ನಭ |
ದತ್ತಣಿನಿೞಿದಾ†ಬಱಿಯೊಳಗದನಱ |
ಸುತ್ತಿರೆ ಕಂಡಾತನದೆಂದಾಮಣಿಮುದ್ರಿಕೆಯಂ ಕೊಟ್ಟಂ ॥ ೫

ಅದನೀಯಲ್ಕೆಚ್ಚತ್ತಾಖಚರಂ |
ಮದನನಿಭಂಗಿಂತೆಂದನೆಲೇ ವಿಭು |
ವಿದು ನೆನೆದಾಕಾರಂಮಾಡುವ ಘನಪಥದೊಳ್ಗಮಿಯಿಸುವ ॥
ವಿದಿತಲಸದ್ವಿದ್ಯಾಮಣಿಮುದ್ರಿಕೆ |
ಯಿದನವಧಾರಿಸು ನೀನೆನುತವೆ ಸಂ |
ಮದದಿಂ ಕೊಟ್ಟು ಬಱಿಕ ಖೇಚರನಾಗಸಕೆ ನೆಗೆದನಿತ್ತ ॥ ೬

ಶ್ರೀಮತಿಸಚಿವನೊರೆದನಿಂತೆನುತಾ |
ಭೂಮೀಶಂಗೆಲೆ ನೃಪಕುಲತಿಲಕ |
ಶ್ಯಾಮೆ ಸುಲೋಚನೆಯಂ ನಿನ್ನೀಚೆಲ್ವಿಂ ವಶಮಾಡುವ್ರೊಡೆ ॥
ಈಮಣಿಮುದ್ರಿಕೆ ನಿನಗಾ¶ಯ್ತೀಬ್ಗನ |
ಲಾಮಾತಂ ಕೇಳ್ದವನೊಡಗೂಡಿ ನ |
ಭೋಮಾರ್ಗಕೆ ನೆಗೆದಾವಾರಾಣಸಿಗೊಲವಿಂದೆಯ್ದಿವನು ॥ ೭

ಜಲರುಹನಯನೆ ಸುಲೋಚನೆಯಲ್ಲದೆ |
ಯುೞಿದವರಾರುಂ ಕಾಣದ ರೂಪಂ |
ತಳೆದಾಸಖನಂ ಕುವರಿಯ ಮಣಿಮಯಹರ್ಮ್ಯದ *ಮೇಲಿರಿಸಿ ॥
ಬಱಿಕತ್ಯಾತುರದಿಂ₰ದೊಳಪೊಕ್ಕಂ |
ಲಲಿತಾಂಗಂ ನಿಜಸತಿರತಿಯಲ್ಲದೆ |
ಯಿಳೆಯ ಜನದ ಕಣ್ಗೆಯದೃಶ್ಯಂದಳೆದಲರ್ವಿಲ್ಲನ ತೆಱದಿಂ ॥ ೮

‡. ಅ. ಗ॥ § ೪ಂಚರವಿನಿವಿಂದು ಸುಖಕರವಮಾಯ್ತು. ಖ॥ಗ॥ †. ತಾಣದೊ. ಗ॥
¶. ಯಿ ನುತಿರ. ಕ॥ * ಪೋಱಗಿ ಖ॥ ₰ ದವನೀಶ್ವರ। ನೊಳಪೊಕ್ಕಂ ಖ।ಗ॥

ಈತೆಱದಿಂ ಬಂದೊಳಪುಗುತವೆ ನಿಂ |
ದಾತೋಯಜಗಂಧಿಯನಭಿನವಕಲ |
ಧೌತಕನತ್ಕಮಲಾನನೆಯುಂ ಕೋಕನದದಲಸತ್ಪದೆಯುಂ ||
ಶ್ವೇತಸರೋಜವಿಲೋಚನೆಯುಂ ವನ |
ಜಾತಲಲಿತಕುಟ್ಮಲಕುಚೆಯುಂ ವಿ |
ಖ್ಯಾತವಿರೋಚನನಿಭತೇಜಂ ಮನವೊಸೆದು ನಿರೀಕ್ಷಿಸಿದಂ ||೯

ಸಿಟ್ಟಿಸಲ್ಗಣ್ಗಳ ನಿಱುಗುರುಳಬಲೆಯ |
ಬಟ್ಟನೆಸೆವ ಬಲ್ಮೊಲೆಯುಂಪರಡುಂ |
ಪಟ್ಟದ ತಪ್ಪಲ ನಡುವಣಿಜುಂಬಿನೊಳಡಗಿ ಸುರಭಿಶಸ್ತ್ರಂ ||
ಕಟ್ಟೊಟ್ಟಲ್ಕೆಯೊಳೆವೆ†ಯಲುಗದೆ ನೀಡುಂ |
ನಿಟ್ಟಿಪ ನೀಜನ ಬಗೆ ಬುಸೆಯ ಪು |
ಲ್ಪಟ್ಟೆವಿಡಿದು ನಡೆಯುತ್ತಿರೆ ಕಾಣಲೊಡನೆ ಕಲ್ಪೂಗಲಿಪ್ರಾಯ್ದುಂ ||೧೦

ಮತ್ತಾಮದಿರವಿಲೋಚನೆ ತುಱುಗೆವೆ |
ಯೆತ್ತಿ ನಿರೀಕ್ಷಿಸಲಾಮೂವಣ್ಣಂ |
ಮುತ್ತಿ ಮನೋಹರಮಾದುದು ಮಾನವಮದನನೆನಿಪ ನೃಪನ ||
ವೃತ್ತವದನವಿಧುಮಂಡಲದೂಡಲಂ |
ಪತ್ತಿದ ಕೞಿಯುಂ ಸುಧೆಯುಂ §ಪಕ್ವಂ |
ಪೆತ್ತಾಲದ ತನಿವಣ್ಣುಂ ಮಿಗೆ ವಿಭ್ರಾಜಿಸುವಂದದೊಳು ||೧೧

ಅರಮಗನಂ ಕೆಲ್ಲಯಿಸುತ ನೋಡುವ |
ತರುಣಿಯ ಕೇಕರರುಚಿ ಕರ್ಣಾಂತಂ |
ಪರಿದು ಕರಂ ವಿಭ್ರಾಜಿಸಿದುದು ಸಚರಾಚರಭೂಮಿಯೊಳು ||
ಪಿರಿದುಂ ಚೆಲ್ವಿಕೆಯೊಳು ‡ಚತುರತೆಯೊಳು |
ಗರುವಿಕೆಯೊಳಗೀಯಭಿನವಮದನಗ |
ಸರಿಯಪ್ಪವರಂ ಕಾಣೆನೆನುತ ಭುವಿಯೊಳು ಕಣ್ಣುಸಿರ್ವಂತೆ ||೧೨

ಸಿರಿವೊಗವಂ ನಸುಬಾಗಿ ಕರಂ ಭೂ |
ವರನಂ ಪುರ್ಬೇಱಿಸಿ ನಡೆ ನೋಡುವ |
ತರುಣಿಯ ನಡುಗಣ್ಪೊಳಗಾಯೆವೆಯಾಪುರ್ಬನಡರಿ ಪರಿಯ ||

---

†.ಯುಡುಗದೆ. ಖ|| §.ಚೆಲ್ವಂ. ಖ||ಗ|| ‡. ಗರುವಿಕೆಯೊಳ್ವರಚತುರತೆಯೊಳ್.ಕ||

ಕರವೊಸೆದುದು ಕಾಮಂ ಕಿಱುದುಂಬಿಯ |
ತಿರುವಂ ಕರ್ವಿಲ್ಗೇಱಿಸುತಿಂದೀ |
ವರನವಕುಸುಮಶಿಳೀಮುಖದಿಂದಿಸುವಂದಮನನುಕರಿಸಿ ||೧೩

ಮಾಸದಪ್ಪುಲ್ಲಿತಕೃಷ್ಣವಿಪಕ್ಷವಿ |
ಭಾಸಿ ವಿಬುಧಕುಜದವೊಲಮಲಚ್ಛಾ |
ಯಾಸಂಗತಮಂಬುದದವೊಲೆಸೆವ ಚಪಲತಾಸಮುಪೇತಂ ||
ವಾಸರಭರ್ತ್ತಾರನವೊಲರುಣಯುತ |
ಮಾಶಾಮುಖದವೊಲಂಜನರಂಜಿತ |
ಮಾಸುಕುಮಾರನನೀಕ್ಷಿಪ ಸೀಱುಮ ನಿಡಿಯಲರ್ಗಣ್ಬೊಣರು ||೧೪

ಅಂಗೋದ್ಭವನತಿಕೋಪದಿನಿಸ ಲಲಿ |
ತಾಂಗಮನೋವದೆ ತಾಂಗಿದ ನನೆಯ ಶ |
ರಂಗಳ ಗಱಿಗಳ್ವೋ ಎಂಬೊಂದಾಕಾರಮನನುಕರಿಸಿ ||
ಪಿಂಗದೆ ರಾಜವಸಂತನ ನಿಜವದ |
ನಂಗಾಣುತ ಕನಕಲತಾಂಗಿಗೆ ಪುಳ |
ಕಂಗಳು ಜುಮ್ಮೆನು¶ ತೞ್ದು ಕರಂ ಪಡೆದುವು ಪರಿರಂಜನೆಯಂ ||೧೫

†ಮುಸುಕಿವ ಜೇಟದ ಬೀಜದಗೆಯ ಜೇ |
ರ್ಗಸಮಾಯುಧನೂಡಿದ ನವಮೋಹನ |
ರಸವಾರಿಯ ಕಣಮೋ ಕಾಮಂ ಕಿಱುಸೂಜಿಗೆ ಸೇರಿಸಿದ ||
ಪೊಸಮುತ್ತುಗಳೋ ಎಂಬಂದದೊಳಾ |
ಅಸಿಯಳ್ ಮಯ್ಯೊಗ್ದಲ ಮೊದಲೊಳ್ಮೇ |
ಹಿಸಿದುವು ಸಣ್ಣ ಜಮರ ಬಿಂದುಗಳರಮಗನಂ ಕಾಣುತವ ||೧೬

ಎಂದುಂ ಬಾರದಿಳಾಧಿಪನಭಿನವ |
ಕಂದರ್ಪಂ ಕಾರುಣ್ಯದಿನೀಗಳ್ |
ಬಂದಪನಾವಿರ್ಪ ಗೃಹಕ್ಕೆನುತುಂ‡ ಕಾಣುತ್ತಿದಿರೆೞ್ದು ||
ಇಂದೀವರಲೋಚನಪುತ್ರಿಕೆಗಳ್ |
ಮಂದೇತರಗಮನದಿಂದಹರ್ಷ§ವನೀ |
ವಂದದೊಳಾನಂದಾಶ್ರು ಕರಂ ಕಣ್ಗೊಪ್ಪಿದುವಾಸತಿಗೆ ||೧೭

¶ ತೞ್ದುವು ಪಿರಿದುಂ ರಂಜನೆಯನೆ ತಳೆದುವು ಕ||
† ಮಿಸುಕುವ. ಕ|| ‡. ನಿರೀಕ್ಷಿಸುತಿ ಕ.|| § ಹರ್ಷದೊಳ. ಕ||

ಬಸಿಱಿಂ ಬಲಿದುಕ್ಕುವ ಮೋಹಾಮೃತ |
ರಸದ ಬೆಳಂತಿಗೆ ಪರಕಲಿಸಿದುದೋ |
ಕುಸುಮಶರನ ಪೊಸಜಸದ ಪೆಳರ್ಪು ಮುಸುಂಕಿದುದೋ ಎನಲು ||
ಅಸಿತೋತ್ಪಲಲೋಚನೆಯಾನನದೊಳ್ |
ಪಸರಂಗೊಂಡು ವಿವರ್ಣಂ ಮಿಗೆ †ರಂ |
ಜೆಸಿದುದು ರಾಜ* ಶಶಾಂಕನ ನಗೆಮೊಗಮಂ ಸಿಪ್ಪುಸಲೊಡನೆ ||೧೮

ಇದು ಮೋಹನದೇವತೆಯಾವೇಶದೊ |
ಳೊದವಿದ ತೊಳಪೊ ಇದು |ಕಾಮಜ್ವರ |
ದುದಯಕೆ ಮುನ್ನನುಕರಿಸಿದ ಶೀತದಿ ಪುಟ್ಟಿದ ಕಂಪನಪ್ಪೋ ||
ಇದು ಗಿಳಿದೇರನ ದಾ.. ಯಾ ಭೀತಿಗೆ |
ಪುದುಗಿದ ‡ನಡುಕವೊಯೆನಲೊಪ್ಪಿದುದು |
ಸುದತಿಗೆ ಸುಕುಮಾರಾಂಗನ ಕುವರನ ಮೊಗಮಂ ಕಾಣುತವೆ ||೧೯

ತರುಣೀಚಕಿತವಿಲೋಚನವಿಲಸ |
‡ತ್ಸರಸಚಕೋರೀಪೂರ್ಣಶಶಾಂಕನ |
ಪರಿರಂಜಿಪ ಲಾವಣ್ಯಜಲಂ ಪರಿಯಲ್ಕವನಂ ನೋಳ್ಪ ||
ಸುರುಚಿರಪಲ್ಲವಪಾಣಿಯು ತನುತನು |
ಪಿರಿದುಂ ನಡುಗಿ ಮನೋಹರಮಾದುದು |
ಪರಿಪ್ರೊನಲೊಳ್ ಸಿಲ್ಕಿದ ನವಮೋಹನಲತೆ ಕಂಪಿಸುವಂತೆ ||೨೦

ಮದನಸಮಾನಮನೋಹರರೂಪನ |
ಸದಮಲಯುತ*ಸಂಪೂರ್ಣಕಲಾಭೃ |
ದ್ವದನಮ†ನತ್ಯಾತುರದಿಂದೆವೆಪ್ರಯ್ಯದೆ ಸೀಡುಂ ನೋಳ್ಪ ||
ಮದವತ್ಪಿಕವಾಣಿಯು ಮಧುರಸ್ವರ |
ಕೊದವಿತು ಪಲ್ಲಟವಿ..ದ ವಿಪಂಚಿ‡.. |
ವಿದಿತಸ್ವರವ್ರಾಡೆದಾವಾಸದ ದನಿಗಳ್ ಪಲ್ಲಟಿಪಂತ ||೨೧

೧. ರಾ. ಗ|| *. ಶಶಾಂಕವದನೆಗೆ ಮೊಗವಂ ಕಾಣುತಲಿ ಗ| ; ವಿರಹ ಗ||
‡ ಪೊಸನಡುಕಪ್ರ ಸುಕುಮಾರನ | ವದನಂಗಾಣುತ ಸಂಜನಿಸಿದ ಕಂಪನಮ್ರೀ ಕಾಮಿನಿಗೆ. ಕ|| ‡ ತ್ತರಳ. ಕ|| ಶ? ಗ|
†. ನೆವೆಪ್ರಯ್ಯದ ಕಡುನೇಹದಿ ಪಿರಿದುಂ ನಡೆನೋಳ್ಪ. ಕ||
‡. ಯೊಡೆದಾವಾಸದಲಿಂಚರಗಪ್ಪಲ್ಲಟಿಸುವ ಮಾರ್ಗ್ಯೊಳು ಗ||

ಎಸೆವಗ್ಗಣ್ಣಾಡಿದೊಡೆವೆಯಿನಿಸಲಾಗದೊ |
ಡಾಸಿಪ್ರಾಯೊಡ್ಡೆಯುಲುಕಿದೊಡಧರಂ ಮೆ |
ಯ್ಯನೆ ಸು ಪೊಡುಕಿದೊಡ ದಿಟದ ಮಾನಿಸೆಯೆಂದೇ ಬಗೆಗಂಗನಮ ॥
† ಇಸದೆನ್ನಂ ಬಿಡನೆನುತವೆ ಮರವಾ |
ನಿಸೆಯುಂದಮನನುಕರಿಸಿದಳೋಎನೆ |
ಲಸಿಯುಳ್ ಮೆಯ್ಮೆಚ್ಚಿವಳ್ ಪೆಂಗಾದಳ್ ನೃಪಸುತನಂ ನೋಡಿ ॥ ೨೨

ತಾವರೆಗಣ್ಣಿಂ ತವಕದಿನೀಕ್ಷಿಸಿ |
ಭಾವೋದ್ಭವರೂಪನ ಕಡುಚೆಲ್ವಂ |
¶ ಭಾವಕೆ ಪಿರಿದುಂ ಭಾವಿಸಿ ಬಳಿಕಂ ತನ್ನದೆಯೊಳಗಿಟ್ಟು ॥
ಭಾವಸುರತಮಂ ಮಾಡಿದ ಸಪಿ ಮೆ |
ಯ್ದೀವಲ್ಪುಟ್ಟಿದ ಪರವಶವೋಎನೆ |
ತೀವಿದಡಾಪ್ಪಳೆಯುಂ ಪ್ರಣಯಿನಿಗ ಲತಾಂಗಿಸುಲೋಚನೆಗೆ ॥ ೨೩

ಇದು ಚಿತ್ರಂ ಸಿರ್ನರವೀಸಾತ್ವಿಕ |
ದುದಯಂ ತಂಗಿಯುದೇಕಾಯುತ್ತನುತವೆ |
ಮದನಾವಳಿಯೆಂಬಾಳಿಯುದೊರ್ವಳ್ ಜನಗೊಸ್ವಸಿತಳ್ ಳು ॥
§ ಸುದತೀಮಣಿಯನಗಲಿಯೆಲರ್ವರ್ಟ್ಟಿಗೆ |
ವಿದಿತಯಶಸ್ಕಾಂತಂ ತವಕದಿ ಪೊ |
ಆದನೆಳವೊಬಗಂ ಕೇಳ್ದು ಸುಗಮ ಹಾಬುವ ಹಂಸನ ತೆ. ದಿ ॥ ೨೪

‡ ಅಸಿತಟೊಳಗೆ ತನ್ನಂ ಕೇಳ್ದಳಿಗೆ |
ವನಜವದನೆಯಿಂತೆಂದಳ್ ಚಿತ್ರಿಕ |
ವಸಿತೆ ಮೊದಲ್ತೋಱದ ಚಿತ್ರವೆ ಚೈತನ್ಯಂಬಡೆದಂತೆ |
ಮನುಜೇಶ್ವರನೊರ್ವಂ ಮನೆಯಂ ಪೊ |
ಕ್ಕನುರಾಗದಿ ನಡೆ ನೋಡುತ್ತನ್ನಯ |
ಮನಮಂ ತನ್ನ ವಿಲಾಸದ ಪೆಳೆಗುಡುತವ ಮಾಣ್ಬಂಗೊಂಡಂ ॥ ೨೫

---

†. ಎಸೆವೆ. ಗ॥ ¶. ಭಾವಿಸಿ ಭಾವಕ ಕಡುನೇಹದ ತನ್ನೆರ್ದೆಯೊಳಗಿಂಬಿಟ್ಟು ಗ॥
\. ದೊಂದೆಂಬ ಕೆಳದಿ ಮಾತಾಡುವ ಸಮಯದೊಳು. ಕ॥
§. ಮದಿರಾಂಬಿಕೆಯು ಕ।
‡. ಅಸಿತರೊಡನೆ ಕೇಳ್ದಲಭಿಜಾತೆಗೆ. ಕ॥ . ಎ ಪೆಳೆಗೊಳುತವ ಗ॥

ಎಂಬವಸರದೊಳ್‡ಗಾಂ ಜನಿಸಿದ ಮಾನ |
ಮೆಂಬ ಮನೆಯನಾತಂ ಮನುಜೇಶ್ವರ |
ನೆಂಬಾದಾಕ್ಷಿಣ್ಯಕೆ ಕೊಟ್ಟುದುಮಲ್ಲದೆ ತನ್ನೋಪವಳ ||
ಇಂಬುವಡೆದ ಚೆಲ್ವಂ ನೆಱೆ ಕಳ್ದ ಸಿ |
ತಂಬಿನಿ ನೀನಲ್ಲಾಯೆಂದೆನುತುಂ |
ಶಂಬರರಿಪು ಕಡುಮುಳಿಸಿಂದೆಚ್ಚನಮಲಶಶಿವದನೆಯನು ||೨೬

ಸ್ಮರನೆಚ್ಚಸುಗೆಯಬುಜದಾಮ್ರದ ಸುರು |
ಚಿರ¶ವಿಚಕಿಲದುತ್ಪಲದಲರ್ಗಣೆ ಕ |
ಣ್ಸಿರಿವೊಗಪ್ರೊಕ್ಕಿಟ್ಟೊತ್ತೆಡೆಯೊರ್ದೆಯುಂ ನಡೆ ನೋಟುವೆಣಿಕೆ ಸುಯ್ಲು ||
ಜ್ವರ ಕೃಶವನಶನ ವಿಕಲಂ ಮೌನಂ |
ದೊರೆದ ಮಱವೆ ಮರಣೋದ್ಯೋಗಮುಮೆಂ |
ಬೆರಡೈದಱವಸ್ಥೆಗಳೆಯ್ದಿದುವಿನಿಯಂ ತೊಲಗಲ್ಕವಳ ||೨೭

ಅನಿತ§ಱೊಳಲ್ಲಿಂದೆೞ್ದು ಸುಲೋಚನೆ |
ಮನವೊಸೆದೀಕ್ಷಿಪ ಕಡೆಗಣ್ಗಳ ರುಚಿ |
ಯನಿಲಪಥಂಬಿಡಿದೆಯ್ದುವ ಕುವರನ ಬೆನ್ನನಮರಿ ಪರಿಯೊ ||
ಭುವನಸುಂ ಸೊಗಯಿಸಿದುದು ನರರೂಪದ |
ಮಿನುಗುವ ಗಾಳಪಟಂಬಿಟ್ಟಂಗಜ |
ನನುರಾಗದ ಪಿಡಿಮಲ್ಪರಿದೊಪ್ಪುವ ರಜ್ಜು†ವಿದೆಂಬಂತೆ ||೨೮

ಬೞಿಕ ಬಲಿವ ಬಹುಚಿಂತೆಯೊಳಾಸ |
ದ್ವಿಳಸನ್ಮಧುರಾಧರೆಯಂಗುಷ್ಠವ |
ಸಿಳಿಯೊಳ್ ಬಲಿದಭಿನವಹೇಮಾಂಭೋರುಹಮುಖಿಯುಂ ಬಾಗಿ ||
ಬಳತಿಗೆಗಣ್ಣೀರಡಱ ಸೋಗೆಗಳಿಂ |
ದಿೞಿತಹ ನವಜಲಧಾರಾದ್ವಿತಯಂ |
ತೊಳಗಿದುವಲರ್ಗಣೆಯನ ಮಿಡಿವಿಲ್ಲಮುಳ್ಳೆದೆಯೆಂಬಂದದೊಳು ||೨೯

ಸಂದಣಿ ಹಿತತನದಿಂದೀವಿರಹದೊ |
ಳೊಂದಿದ ಬಲ್ಗಿರ್ಚಿಗೆ ವೇದನೆಯಂ |
ತಂದೆನ್ನಂ ಭಸ್ಮೀಕರಿಸದೆ ತಾಂ ನಿರ್ನೆರಮಿಹುದಲ್ಲ ||

---

‡. ಗಾನುದಿಸಿದ. ಕ|| ¶. ಮಾಲತಿಕುವಲಯ. ಖ||
§. ಎನಿತು. ಕ|| †. ವಿನಂವದೊಳು. ಗ||

†ಎಂದಾಪ್ರೌಢಲೊಳಗಣ ವಾಯುವನ ।
ಲ್ಲಿಂದವೆ ಪೊಱಮಡಿಸಿದ ಮಾಟ್ಕೆಯೊಳರ ।
ವಿಂದವಿಶಾಲವಿಲೋಚನೆಯಾನಿಡುಸುಯ್ಕರವೊಪ್ಪಿದುದು ॥೩೦

ತಡವಂ ಮಾಡದೆ ತಂದೊಪ್ಪಿಸಿ ಕುಡು ।
ಕುಡು ನಿನ್ನಯ ಮಱುಪ್ರೌ‡ಕ್ಕ ಮನೋಜನ ।
ನಡಸಿ ಕುಡಲ್ಬೇಕೆನುತವೆ ಪಿರಿದಪ್ಪಾಗ್ರಹದಿಂ ಬಂದು ॥
ಕಡುಪಿಂದವೆ ಮೂವಳಸಂ ಮುತ್ತಿದ ।
ಕುಡುವೆೞ್ದಲೆಯಾನ ¶ಭಾಳಾಂಬಕದಾರಿ ।
ಸುಡುವಂದದಿನಳುರ್ದುದು ವಿರಹಜ್ವರಮಾಲಲಿತಾಂಗಿಯನು ॥೩೧

ಆರಾಜಶಿಖಾಮಣಿಯಗಲಲ್ ನವ ।
ನೀರಜದಳಲೋಚನೆಯಭಿನವಭಾ ।
ಗೀರಥಿಯೆನೆ ಸೊಗಯಿಪ ಸತಿಯತಿಕಾರ್ಶ್ಯಂದಳೆದೊಪ್ಪಿದಳು ॥
ದಾರುಣವಡೆದ ನಿದಾಘಸಮಯಕಾ ।
ಶಾರದ ಭಂಗಿಯುಮಂ ಸಿತಪಕ್ಷಂ ।
ತೀರಿದ ನಿರ್ಮಲಶಶಿಬಿಂಬದ ಭಂಗಿಯುಮಂ ನೆನೆಯಿಸುತ ॥೩೨

ಚಾರುಕುಮುದನವಪರಿಮಳಗಂಧಿ ಚ ।
ಕೋರವಿಲೋಲವಿಶಾಲವಿಲೋಚನೆ ।
ಯಾರಾಜಶಿಖಾಮಣಿನೃಪಚಂದ್ರಂ ತೊಲಗಿದ ಸಮಯದೊಳು ॥
ಕಾರ ದಿನಂ ಕೈಮೀಱಿದ ಬಳ್ಳಿಕವೆ ।
ನೀರನುಣದ ಚಾದಗೆವೆಱಿಯಂತಾ ।
ಹಾರಂಗೊಳ್ವುದನುೞಿದಳ್ §ಮಸಗಿದ ವಿರಹಾವಸ್ಥೆಯೊಳು ॥೩೩

---

†. ಎಂದವನೊಡಲೊ ಗ॥ ‡. ಕ್ಕಾ ಮನುಜನ ಗ॥ ¶ ಭಾಳನಯನ. ಕ॥
§ ಮಸುಳಿದ ಕ॥ ಗ॥

ಇದು ಕಾಮಜ್ವರದುರಿಯೊಳಗೆಱಗ ।
ಲ್ಕೊದವಿದ ವಿಕಲವಚನವೋ ಮತ್ತಿದು ।
ಮದನಗ್ರಹವೋವದೆ ಹೊಡೆಯಲ್ ಸಂಭವಿಸಿದ ಮರುಳ್ವಾತೋ ॥
ಇದು ಸೊರ್ಕಂಜೌವನಚೆಲ್ವಿಕೆಯ ।
ನ್ಮದವೆತ್ತನ್ನ ತಲೆಯನೇಱಲು ಜನಿ ।
ಸಿದ ಮಱವೆಯ ಮಾತೋಎನೆ ಕಳವಳಮಾಯಿತು ವಿರಹಿಣಿಗೆ ॥೩೪

**ಎಂಬುದು ಗ॥ ಪುಸ್ತಕದಲ್ಲಿ ಮಾತ್ರವಿರುವ ಅಧಿಕಪಾಠ.**

ಬರುತಿದೆ ಬಲ್ವೆತ್ತು ಬಂಡುಣಿವಸುಳಿಯು |
ತಿರುವಿಲ್ಲಾಳನ ಪಟುವಿಗೆಯೊಳವೀ |
ನೆರಡಂ ಕೊಂಡಲೆ ಸಖಿಯೆನಗುಳ್ಳವಳಾದೊಡೆ ನೋಂಕೆನುತ ॥
ತರುಣಿ ವಿಕಲವಚನವನಾಡಿದಳಾ |
ವಿರಹದ ವೇದನೆಯೊಳ್ ತನ್ನಂ ಸ
ತ್ಕರಿಸಲ್ಬರ್ಪ ವಿಲೋಲಾಕ್ಷಿಯು ನಗೆಮೊಗವಂ ಕಾಣುತವೆ ॥ ೧೪

ಜನನುತಮಪ್ಪ ವಸಂತನ ಬರವಂ
ನೆನೆದು ನೆನೆದು ಪರಭೃತಶಿಶುವಂದಿನ |
ದಿನದೊಳ್ ಮಧುರಾಳಾಪವನುಱದಂತೆಗೊಳಿಪೆರಡನೆಯು |
ನನೆಯು ಸರಲ ನೀಱಂ ಬರ್ಪುದನೇ |
ಮನದೊಳಗೋವದೆ ಬಯಸಿ ಬರ್ಕೆ ನೊ |
ತನರ್ಚಿ ಮಿನೆ ಸೊಗಯಿಸಿದಳ್ ಮುಸುಕಿದ ಕ್ರಮೂಕೀಭಾವದೊಳು ॥ ೧೫

ಕಾಮಜನೆಸಗೆಯು ಕಮ್ರಸರಂಗಳ್ |
ಗಾಯದ ತನಿಸೋಕಿಂ ತಾಮರಸದ |
ಳಾಯತಲೋಚನವಂ ಮುಚ್ಚಿ ನೆಲಕ್ಕೊಱಗಿದ ಮೂರ್ಛೆಯೊಳು |
ಆಯತಿಗೆಟ್ಟುಳ್ವರ್ವವಡೆದಱವಿನ |
ತೋಯದ ಮಾಱ್ದೊಱಗಿದಳಲಸಾಂಗಿನೂ |
ಳಾಯೆಣೆವಕ್ಕಿವೊಲೆಯು ಲಲಿತಾಂಗಿಯಾಗಲ್ದಿನಿಯನ ಬಯಸಿ ॥ ೧೬

ಈದಾರುಣವಿರಹದ ವೇದನೆಯಿಂ |
ಗೀದೇಹವನುೞಿವುದು ಸುಖಮದು ಸುಖ |
ಮಾದೊಡೆನೋನಾಂ ಪೋಗಿ ಜನಿಸುವ್ವಾಡಮೀಚೆಲ್ವಿಕೆಯು ತನು ॥
ಆ ದೇವೋರಗಭಾಮಿನಿಯರ್ವರ್ಗದ |
ಬಾದವರೊಳಗಿಲ್ಲದಱಿಂದಿಲ್ಲಿಂ |
ಪೋದಪೆನೆಂಬುದುಚಿತಮಲ್ಲೆಂದುೞಿದುದು ಜೀವನಮವಳ ॥ ೧೭

ಈಯುಂದದ ವಿರಹದ ವೇದನೆಯಿಂ |
ದಾಯಾಸಂಗೊಂಡಲರ್ಮಾಸಿನ ಮೇ |
ಲಾಯತನೇತ್ರೆ ಸುಲೋಚನೆ ಮಱೆದು ಕರಂ ಮೈಯ್ಮಿಕ್ಕಿದಳು ॥

---

೧. ಗುಳಿಯದೆ. ಗ॥ ೨. ಮೋಹನ. ಗ॥, ಮಾತ್ಕ. ಖ॥

ಆಯಿರವಂ ಕಾಣುತುಮವಳಾಗಿದು |
ರಾಯುತಿರ್ಗಟ್ಟು ನೆರೆದು ನೆಚ್ಚಿ ತಂತ್ರಾಕದೊ |
ಳೋಲಂದರದಿಂ ಸತ್ಕ್ರಿಯೆಯಿಂದುಪಚರಿಸಿದರೀತೆಜದಿಂದ ॥೩೮

ಪಸುಳೆದಳಿರ ಪಾಸಿನ ಮೇಲೊಱಗಿಸಿ |
ಪೊಸಗಪ್ಪುರವ ಕಂ ಪೊಳೆದುದಿರಿಸಿ |
ಸಸಿಯಿಂಪೊಸವರ್ಣದೂಪಲಜಲವುಂ ತಸುಲತೆಯೊಳ್ತಂದು ॥
ಕುಸುಮಶರಗ್ರಹವಡರದ ತೆಜದಿಂ |
‡ದಸವರಾಂಬಕಯಂತ್ರಮನಚ್ಚಿ ಬರೆದಾ |
ಅಸಿಯಾಳ ತೋಳೊಳ್ ಕಟ್ಟಿ ಸಖೀಜನಮುಪಚರಿಸಿದರಾಗ ॥೩೯

ಪಳಿಗಪ್ಪುರವನಿನೀರ ಪೊಸನಾಟಿದು |
ಸಾಂದ್ರ ಕಪ್ಪುರದುಮಾದಲರೆಳೆಯಾಸಗೆಯು |
ತಳಿರಲೆವಿಜ್ಜಳ ತಣ್ಣಿದಿರ್ಗಲ್ ಕನ್ನಯಿದ್ದಲ ನವನಾಳಂ ॥
ಕುಳಿರ್ವಣ್ಣಿನ ಬುವನ್ನದೀನಾಳಿಯು |
ದೆಳಸಿ ಕರಂ ಸತ್ಕರಿಸಲು ತಕ್ಕೋ |
ಮಾಲೆಯು ವಿರಹವೇದನೆಯಾಪ್ಯಾಂಬೊಯ್ದಗ್ಗಿಯು ತೆಱನಾಯ್ತು ॥೪೦

ಪೊತ್ತವೊದಪ ಶೈತ್ಯನವನ ವೆಚ್ಚಿಗುದು |
ಸ್ತೃತ್ತೋರೋಚೆಯಾರೊಲಮಿಂ ಬೀಸುವ |
ಪೊತ್ತದಲರ ಬೀಸಣಿಗೆಯೊಳಣ್ಣುವ ತನಿಗಂಪಿನ ಗಾಳಿ ॥
ಮಾತ್ತ ತವ ಪೊಸಗಪ್ಪುರದೊಳ್ಪಡಿ |
ಪೊತ್ತಿದುದು ವಿರಹಾನಲನೊಳಗದ |
ಚಿತ್ತರಸು ತಪ್ಪನಿತಿರ್ಪನ್ನಧ್ಯಾಸೇನಂ ಬಣ್ಣಿಪೆನು ॥೪೧

ಪೀನಪಯೋಧರಮುಂ ಬಿಡಿಪಂಬುಗು |
ಹಾನನದೊಳ್ಪ್ರಾಗವಿಟ್ಟು ವಿಭರದಿನ |
ಪೀನಲತಾಂಗಮನಪಡೆಪ್ಪಿ ಕರಂ ಕೂಡಿಮುಳುರುತಿರ್ಪ ॥
ಆನನೆಗಣಗೊನೆಯಿಂದುಪಯುಪಿದು |
ಗ್ರಾನಲನೊಳ್ಗುರಿಯೊಳು ತದ್ವಿರಹದ |
ವಹ್ನಿ ಕರ್ಣ್ಗೆ ವಿರಾಜಿಸಿದಳ್ ಸ್ವಾಹಾಸಧುವೆಂಬಂತೆ ॥೪೨

‡. ಅನಂಗಮಂತ್ರಯಂತ್ರಂ. ಕ॥ § ಕಳದ. ಗ।

ಅನಿತಱೊಳಾಚಿತ್ರಾಂಗದ ದೇವನ ।
ವನಿತೆ ಕನಕಲತೆಯೆಂಬವಳವರಾ ।
ಜನಿಯಿಂದಿರ್ದುದು ರುಕ್ಮಿರಶ್ಮಿಲೇಖೆಯು ತೇಜದಿಂದೆಸೆಯುತಿರ್ದುದು ॥
ಮಿನುಗುವ ಹರ್ಮ್ಯದೊಳೊಱಗಿ ವಿರಹದಿಂ ।
ದಿನಸುಂ ಬನ್ನವಡುವ ಭೂಮೀಶ್ವರ ।
ತನುಜೆಯು ನೋವಂ ಪಿಂಗಿಸಿ ಬಿಟ್ಟಿಕಂತೆಂಗು ನಡೆದಳಾಗ ॥೪೩

ಜನ್ನೇತ್ರಕರ್ಣಾಸಿತೋತ್ಪಲಲೋಚನೆ ।
ನಿನ್ನನೊಲಿಸಿದಬ್ಜಕೆಯು ಜಯಭೂಪಂ ।
ಮನ್ನಿಯರೊಳ್ನಿಶ್ಚಯು ವರನಂ ವರಿಯಿಸ ಮಂಡಪಕೆ ॥
ಮುನ್ನೇಸಱ ಹೊತ್ತಿಂಗೆಯ್ದುತ್ತಸಂ ।
ತನ್ನ ಕೊರಲ್ಗಿಡು ಮಾಲೆಯನೊಸೆದೆನು
ತುನ್ನಿಡಿಪಾಗೇವಾಂಗನೆ ಸುರಲೋಕಕ್ಕೆಯ್ದಿದಳತ್ತ ॥೪೪

ತರುಣಿಯು ಬೞಿಯಿಂ ಬಂದು ವಿರಹದಿಂ
ದುರಿಗದಿರಿಂದ ಕಿಡು ಬ್ಬಟ ತೆರೆದೆನೆ ।
ಕೊರಗಿ ಕರಂ ಜೀವಿನ ಹೊತ್ತಪ್ಪನ್ನೆವರಂ ಬೀಡಿನೊಳು ॥
ಹರಣಾಯ್ಗೆಯಿಡೆವಿರ್ದಲ್ಲಿಂ ಬೞಿವರ್ಗಂ
ತುರಿಪದಿ ಮಾಧುರ್ಯಸಿಗೂನೆಂಬದಿ ।
ಧರಣೀಪತಿ ಜಯಭೂಪಂ ಸುವತೀಜನಸುಮನಶ್ಯಾಪಂ ॥೪೫

ಬಳಿಕ ಭರತಭೂವಲ್ಲಭನಣುಗಂ ।
ತುಱಿಲಬಳನ ರಾಜ್ಯದಿಯು ಧರೆಯೀ ।
ಲಲನೇಶ್ವರಸಂತರೆಯ್ದೂರಿ ಕೀರ್ತಿವಮುದದಿನಕಂಪನೃಪಂ ।
ಅಲಘುಪ್ರಿಯದಿಂದಿರ್ದಂಗು ನಲಂ
ದಳೆದು ಪೊಱಲನುಯ್ದಿಸಿ ಬೀಡಾರಂ ।
ಗಳನಸುನವ ದಿಂ ಕೊಡಿಸಿ ಸಕಲಸನ್ಮಾನಂಮಾಡಿದನು ॥೪೬

ದಿನಮುಂ ತುಷ್ಟಿಪಚಾರಮನಿನದಿನ ।
ದಿನಗಳಿದಿನನುವಮವರು ಮಾಡುತೆ ।
ಮನುನಿಭಚರಿತನಕಂಪಂ ತತ್ಪರಿವೃಢನಿಕುರುಂಬವನು ॥

ಜನತಾಧಿಪಜಯರಾಜನುಮಂ ತ |
ತ್ತನುಜಾತೆ ಸುಲೋಚನೆ ತನ್ನಯ ಕ |
ನ್ಯಾನವಾಂತವರಂ ವರಿಯಿಪ ಮಂಡಪಕೋಲವಿಂದೆಯ್ದಿಸಿದಂ ॥೪೭

ವರನಂ ತನ್ನಿಚ್ಛೆಯೊಳಂ ವರಿಯಿಪ |
ಪರವಸಿತಾಮಣಿಯಂ ನೋಡುವೆನೆನು |
ತ್ತುರಗಾಧೀಶವಿಮಾನಂ ನಲನನೊಡದು ಮಾಡಿದ ಶಿಲ್ಪದಿಂ |
ಸುರರಾಜನ ಸುರುಚಿರಗೃಹಮಲ್ಲಿಂ |
ಧರಣೀತಳಕಿಳಿತಂದ ತೆಱದಿ ಬಂ |
ಧುರವಾದುದು ಬಹುರತ್ನವಿರಾಜಿತಮಂಡಪಮಂತಲ್ಲಿ ॥೪೮

ಹಲವು ಪರಲ ಕೀಲಿಸಯಿಂದೊಪ್ಪುವ |
ನೆಲನೆಲ್ಲಂ ರಾಮುಶರಕ್ಕ ಹಗಿದ |
ಜಲಭಾಂಡಾಗಾರದ ದಱಿಂ ಬಂಧುರಮಂ ಪಡೆದತ್ತು ॥
ಜಲಜಲಜಲಿಸುವ ನವಮಾಣಿಕ್ಯದ
ಸುಲಲಿತವಹ ಕುರುಜ್ಜಿಗೆ ಮಂಗಳದ |
ಕೆಲಸಂಮಾಡಿದ ರೋಹಣಗಿರಿಯೆಂಬಂದದಿನೊಪ್ಪಿದುವು ॥೪೯

ಮಿನುಗುವ ಪೊಸಮಣಿಗಂಬಮಂ ಮೆರವೊಡ
ವಿನೆ ಬದ್ದಲಿಯೆಲ್ಲಂ ಬಹಾಳಿಗೆ
ಳಿನೆ ನವರಂಗಂ ಕವಲಿಸ ಚಿತ್ರದ ಪತ್ರವೆ ಪತ್ರತತಿ ॥
ಮೆನ ಕೃತ್ರಿಮವಿಹಗಾವಳಿ ಶುಕಪಿಕ |
ಮೆನಲಾಮಂಡಪಮತಿಶೋಭಿಸಿದುದು |
ವನೆಯದರಲಿ ಹೀಱುನ ಕೇಳೀವನದಂಗಮನನುಕರಿಸಿ ॥೫೦

ಸ್ಮರನಿಭಜಯನೃಪನಲ್ಲದ ಮುತ್ತಿನ |
ಹರರಂ ಶಿಕ್ಕದವಳಂ ಬಳಿ |
ವರಿಸುವೆವೆನುತುಂ ಬಂದು ಬಳ್ಳಿದರಿಯನುತ್ತಮಮಂಡಪಕೆ |
ಸರದಿಂ ಬಹವಸ್ತ್ರರಸುತರಂ
ಫಲಗುಂ ನಗುತ್ತೆಡಿಸುವಂದದಿ ಬಂ
ಧುರವಾದುದು ಬಹುವರ್ಣಭಂಗಿಯ ಪಾಂಚಾಲಿಕೆಯಂತಲ್ಲಿ ॥೫೧

೧. ನವುವಾದ. ಗ॥ ನಯಣದ. ಕ॥ ೨ ಮಾತಿನ ಗ॥

ಇಂತೂಪ್ರ್ವದ ಪುಣ್ಯದ ಪುಣ್ಯಕೆಗಸೆವ ಭ |
ವಂತಿಯು ಸುಜ್ಞಾನಿಗಳಿಸ ಸಲ್ಲುತೆಯೊಳು |
ಕಾಂತಕನಕನಂದನಂ ಸೊಸರಿಸುವೊಳಗತಿಮುದದಿಂದ ||
ಕಂತುಸನ್ನಿಭವಿಕ್ರಮ ಜಯನೃಪಸಖನು |
ಶಾಂತಂ ಪುಣ್ಯವಶದಿಂ ವಸಿಷ್ಠರಸುತ |
ಸಂತಸದೊಳು ಪರಿಸ್ಕೃತನಂ ವಾರಾಣಸಿಯಾಧಿರಾಜಂ || ೫೨

ವಿಲಸದೂರ್ಧ್ವಸ್ವರ್ಗದೊಳು ಬಂದಿತನೊಂ |
ಗಲತರವಿಮಾನಸಿರಿಯನುಮನು |
ಜ್ವಲಿತರಾಜಭೋಗದಿಂದ ಸ್ಥಾಪಿತಸುವರ್ಣಾಧಾರಂ ||
ವಿಲಸಿತಜನ್ಮಪಾಪಕಲಿಸಿ ಪ್ರಕಟಿತ |
ನಲಘುತರಾಚಾರಂ ಕಲ್ಯಾಣಂ |
ದಳದನವರತ ಗುಣಿ ಜಯಂತಾಪ್ರ್ಯಮಕುಲಮಣಿದೀಪಂ || ೫೩

ಇದು ಸುರನರನಿಕರಸಂಸ್ತೂಯಮಾನಸಮಿತ |
ಮಿತಪಿಸವಾಗ ಚಂದ್ರ ಪುಣ್ಯಜಿನಪತಿ |
ಸದಸಲಿಸಿಜಮಸವಪ್ರಭಾಬಲನಪಿತತುರಕಲಾಪರಿಪೂರ್ಣಂ ||
ವಿದಮಲವಿರಚಿತ ಪ್ರಕಾರದಾನ ಸಂ |
ಮದದಿಂ ರಚಿಸಿದ ಜಯನೃಪಕಾವ್ಯದೊಳ್ |
ಕೊಡವಿ ಮನದ ಗುಣರಸಂ ರಚಿಸಿದ ನಾಲ್ಕನೆಯ ವಿಸುಪ ಸಂಧಿ || ೫೪

ನಾಲ್ಕನೆಯ ಸಂಧಿ ಸಂಪೂರ್ಣಂ.

# ಪಂಚಮ ಸಂಧಿ.

—— ೦ ——

**ಸೂಚನೆ||** ನೆರೆದ ನರೇಂದ್ರತನುಜರಿರ್ದಂದದಿ ।
ವರರೂಪಿನೊಳ್ ಜಯನ್ತಂ ಜಯಭೂ ।
ವರನಬಲಾಮಣಿಯಂ ವರಿಯಿಸಿದಂ ಧರೆಯುಬ್ಬ ವಂದದೊಳು||

ನರಪಾಲಕನಂದನವಿತತಿ ಸಯ್ಯಂ ।
ಬರಸಾಲೆಯೊಳಿರಲತ್ತಲಕಂಪನ ।
ವರಸತಿಯಮಿತಪ್ರಭೆಯು ಬೆಸದಿನವಳಾಳಿಯರೆಯ್ತಂದು ||
ಗರುವೆ ಸುಲೋಚನೆಯಂ ಹೊಸಹಸೆಯೊಳ್ ।
ಗಿರಿಸಿ ಬಳಿಕ ಹರಿಸಂ ಮಿಗೆ ಸಕಲಾ ।
ಭರಣಕೆ ಮೊದಲೆನಿಸುವ ಮಜ್ಜನವಂ ಮಾಡಿಸಲೆಳಸಿದರು ||೧

ತರುಣಭ್ರಮರಸಮಿತಿಗಸಿತೋತ್ಪಲ ।
ದರಲ ರಸಮನೆಱೆವಂತೆ ತಮಾಲೋ ।
ತ್ಕರಲತಿಕೆಗೆ ಕರ್ಪೂರವಿಮಿಶ್ರಿತವಾರಿಯನೆಱೆವಂತೆ ||
ತರುಣಿಯ ತಲೆಗೆಣ್ಣೆಯನೆಱೆದುಗುರಿಪ ।
ವರಸತಿಯುಗುರೆಸೆದುದು ಕಾರ್ಗಾಲದ ।
ಕರಿಯಮುಗಿಲ ಹೊರ್ಜೆಯೊಳು ಹರಿದಾಡುವ ಕಿಱುಮಿಂಚಿನ ತೆಱದಿ ||೨

ಒಲವಿಂದುಗುರಿಪ ವನಿತೆಯ ಕಂಕಣ ।
ದುಲಿವೆಂಪೆಳಮೊಱೆಗಂ ಕೇಳುತ ಮಿಗೆ ।
ನಲಿವ ನವಿಲ ಗಱಿಯಂದದಿನಾಕುರುಗುರ್ಗಳ ಹೊಳಹೆಂಬ ||
ವಿಲಸಚ್ಚಂದ್ರಿಕೆ ತನ್ನೊಳವರಿಯಲ್ ।
ನೆಲಸಿದ ಭೀತಿಯಿನುಱೆ ನಡುಗುವ ಕ ।
ತ್ತಲೆಯಂದದಿನಲುಗಿದುವಳಕಾಳಿಗಳಾರಾಜಾತ್ಮಜೆಯಾ ||೩

ಅಲರ ಸರಕೆ ‡ಬಾಸಣಮಿಕ್ಕುವವೊಲು ।
ಲಲಿತಾಂಗಕೆ ನವಚಂದನಪಂಕವ ।
ನೊಲವಿಂ ತಿಮಿರಿ ಬಳಿಕ ಹೂವಿನ ಹೊಂಗಾಲ್ವಣೆಯೊಳಗಿರಿಸಿ ||

---

‡. ಬಾಸಟಸಿ ಕ|| ಗ||

ಲಲನೆಗೆ ಸೀರೆಱೆದರ್ ಮದವತಿಯರ್ |
ಕಳಸಮನೆತ್ತಿ ಕರಿಣಿಯುಗಳಂ ಮಂ |
ಗಳದೇವಿಗೆ ಮಧುರಾಮೃತಮಂ ಮಜ್ಜನಕೆಱೆವಂದದೊಳು ||೪

ಬ ಯೊಳೊಗೆದೇಱುವ ಶಶಿಲೇಖೆಯ |
ಪೆ...ಯೆನಲುಂಬುಕಣಂಗಳ್ ತೀವಿದ |
ಪರಿಣಾಕ್ಷಿಯ ತನುವಂ ದುಗುಲದಿ ತೊಡೆದಾಳೀಜನವುಡಿಸೆ ||
ಕರಮೆಸೆದುದು ನಿಱಿಯುಂಗಜನಬರಂ |
ಸರಸವಿಟರ ನಿಡುಗಣ್ಕೆಂಗಳನುರು |
ಭರದಿಂ ಬೀಸಿ ತೆಗೆವ ಬಲೆ ನಿಱಿಗೊಂಡಂದಮಾನನುಕರಿಸಿ ||೫

ತೊಂಡಲ್ಹೂವಿನ ಗಾಲಿ ನನೆಯ ನಿಡು |
ದಂಡೆ ಮನೋಹರಮಾದಚ್ಚ ತರಂ |
ಗೊಂಡಿಕ್ಕಿದ ಪೊಸಹೊಂಗೇದಗೆಯೆಸಳ್ಗಳ್ ನವಶಸ್ತ್ರತತಿ ||
ದುಂತುಮುಡಿಯೆ ಪೀಲಿಯ ಪಱಿಯಿಗೆಯೆನೆ |
ತೊಂಡೆದುಟಿಯ ತರುಣೀರತ್ನದ ನು |
ಣ್ಗೊಂಡೆ ಮನೋಜವನೇಱುವ ಪೂದೇರಂದದಿನೊಪ್ಪಿದುದು ||೬

ಸಿರಿಸೂಸಲೆಂಬ ರುಚಿರಶಿಲೇಖೆಯ |
ನುರುಕಬರೀಮದನಾಸಿತಸರ್ಪಂ |
ಭರದಿಂ ಪಿಡಿವುದೆನುತ ರತಿಯವಕಿಕ್ಕಿದ ರಕ್ಷಾಮಣಿಯ ||
ನಗರೆಯೆನಲಾಶಶಿಲೇಖ ಸರಾಗದಿ |
ಪಿರಿಯಾಣಾಗಂ ಸಾಮ್ಯನನೆತ್ತಿದಳೆನೆ |
ಗರುಡೋದ್ಗಾರದ ಪಚ್ಚೆಯ ತಿಲಕಂ ತೊಳಗಿದುದಾಸತಿಗೆ ||೭

ಬಿನ್ನೀಹಪಱಿಂದಪ ಬಳೆದೊಡೆ ನಿಮ |
ಗೆನ್ನೃಣಾಯೆನ ತ್ತವೆ ನೇರಾಣಿಯ |
ಕನ್ನಡಿಮೊಗಮಂ ತುಂಬಿ ಬಳೆವುದಂ ಕಂಡು ಬಿಡಿಯ ವನಿತೆ ||
ತಾನ್ನಿಱಿಸಿದ ಸೀಮಾರೇಖೆಗಳೆನೆ |
ಕನ್ನಯ ದೀರ್ಘವಿಲೋಚನಕೊರ್ವರ್ಗಳ್ |
ಚೆನ್ನ ಸರಾಗದೊಳಿಕ್ಕಿದ ಕಲುಕದ ರೇಖೆ ವಿರಾಜಿಸಿತು ||೮

೧. ದುಂಡು. ಗ||

ಆರಲುಣಿಯೀಹೂವಿನ ಬಂಡುಣ್ಗೊಡೆ |
ಮರಣಮಾವಕೆ ನಿಶ್ಚಯಮಾದತ್ತೆಂದು |
ಗರಳಮನಿದಱಿಂ ಕಿಡಿಸೆನೆನುತ ಬನಸಿರಿಯೊಸಗೆಯಿತ್ತ ||
ಬಿರಿಮೊಗ್ಗೆಯ ತುದಿಗಮೃತದ ಘುಟಿಕೆಯ |
ನಿರಿಸಿದವೊಲು ಮುತ್ತಿನ ಮೂಗುತಿಯುಂ |
ವಿರಚನೆಗೆಯ್ದುಳದೊರ್ವಳ್ ತರುಣಿಯ §ನಾಸಾಮುಕುಳದೊಳು ||೯

ಪರಿರಂಜಿಸುವ ಪಯೋಜಾತದ ಪೂರ್ |
ವೆರಡುಂ ಪಕ್ಕದೊಳಗೆ ಪತ್ತಿದ ಬಂ |
ಧುರಶೈವಾಲಲತೆಯುವ್ತೊಲು ಶಿಬಿಬಂ ತನ್ನಯ ಕಿವಿಯಾ ||
ಉರದಿಂ ಕಿಬ್ಬಿರಿಗೊತ್ತರಿಸಲ್ಕದು |
ಕರವೊಪ್ಪುವವೊಲ್ ‡ನವಮೃಗಮದದಿಂ |
ಬರೆದ ಮಕರಿಕಾಪತ್ರಮವಳ ನುಣ್ಗದಪಿನೊಳೊಪ್ಪಿದುದು ||೧೦

ಅತನುತ್ವಂ ತನಗಹುದನಱಿದು ಹರಿ |
ಸುತನೋವದೆ ರತಿವೇದಾಕ್ಷರಗಳ |
ನತಿಮುದದಿಂ ಬರೆದೋಲೆಯು§ನುಚ್ಚಸ್ಥಲಮಿದು ತಾನೆಂದು ||
ಚತುರತೆಯಿಂ ನಿಱಿಸಿದ ನೆಲೆಯನದಂ |
ಶ್ರುತಿಯೊಂದೆಂಬುದುವುಪಚಾರದಿನಾ |
ಕ್ಷಿತಿಯಲ್ಲದೊಡೆಲ್ಲಿಯುದೀಕೆಯ ಕಿವಿಗೀನವಮೋಹನವು ||೧೧

ಸಿರಿದುಱುಬಿನ ಸೂಸಕಕಿಕ್ಕಿದ ಪಲ |
ಪರಲ ರಸುಮೆ ಕರ್ಣಾಭರಣಂಗಳ |
ಬೆರಕೆವಣಿಯ ಡಾಳಂ ನುಣ್ಗೊರಲೊಳ್ ಕಟ್ಟಿದ ಮಾಣಿಕದ ||
ಸರದ ಸುರಂಗುಗಳೆಲ್ಲಂ ಬಳಸಲ್ |
ತರುಣಿಯ ಮೊಗವೊಪ್ಪಿತು ಪಲವಣ್ಣದ |
ಪರಿವೇಷದ ಮಧ್ಯದೊಳೊಪ್ಪುವ ಸಂಪೂರ್ಣೇಂದುವಿನ ತೆಱದಿ ||೧೨

ಮೊತ್ತಮೊದಲ್ತಾನೊಲವಿಂ ಪಡೆದೆಳ |
ಮುತ್ತುಗಳಂ ಪ್ರಿಯತರದಿಂದುರದೊಳ್ |
†ತೆತ್ತಿದ ಶಂಖದ ತೆಱನಂ ಬಲ್ಲರ ಬಗೆಯೊಳ್ ನೆನೆದಿರ್ಪಂತೆ ||

§. ನಾಸಿಕ. ಗ|| †. ಕರ. ಗ|| §. ನವ. ಗ|| |. ಪು. ೮. ಗ||

ಹತ್ತುಸರಗ ಜಳ್ಳಗಿಯುನಭಿನ್ನತೆ ।
ಪೆತ್ತು ೯ಸರಾಗದಿ ಕಟ್ಟಿದ ವಿಲಸ ।
ದ್ವೃತ್ತಪಯೋಧರಯುಗಳಿಯು ನುಸ್ಗೊರಲತಿವಿಭ್ರಾಜಿಸಿತು ॥೧೩

ಮದನನ ರತಿಯು ಮದುವೆಯೊಳ್ ಸಿರಿ ಸಂ ।
ಮುದದಿಂ ಪೊನ್ನ್ಕೈರಣೆಯು ಜವಳಿಗಳ ।
ಸದ ಸೋಲೊಲಿದಿಕ್ಕದ ಮಂದಾರದ ಮಾಲೆಯ ಮಾಟ್ಕೆಯೊಳು ॥
ಮಾವಯು ಪಸಯುನ್ನತಕುಚತಟಗೊಳ್ ।
ಕೆದುರೆಯಾದೊವರ್ಗಳ ನಪನವರತ್ನದ ।
ಪದಕಂಗಟ್ಟಿದಳಾಶೃಂಗಾರಮನೇನಂ ಬಣ್ಣಿಪೆನು ॥೧೪

ಶ್ರೋಣೀಸ್ಥಲಮನೇಱ ಸತ್ಪ್ರೀದ್ಗಮ ।
ಬಾಣಂ †ಬಡಪಡೆನೊಪ್ಪುವ ಬಾಸೆಯು ।
ನೇಣ್ಗೊಳ್ ಕಟ್ಟಿ ಲಲಿತಮಧ್ಯಮದೆಂಬಾಕಾಶದ ಮೇಲೆ ॥
ಹೊರಿ ಹಿಡಿದು ಹಾರಿಸಿದ ಪಟಂಪೊಲ್ ।
ಪೀನಾವಾಳಿಯು ವಿಧುನಿಭವದನಯು ।
ಬೋಣಾಪರೆಯು ಮೇಲೆಯು ಮೇಲುದದ ಸೆಱಂಗು ವಿರಾಜಿಸಿತು ॥೧೫

ರಂಗುಮಿಗುವ ನವರತ್ನವಿರಾಜಿತ ।
ಮುಂಗುರ ಕಡಗ ಉಳಿಯು ಸರ ಟಕಕಿಗೆ ।
ಮುಂಗೈವಳ ಕಂಕಣ ಸೂಡಗ ತೋಳ್ವಳೆ ಭುಜಕೀರ್ತಿಗಳು ॥
ಸಿಂಗರಮಾದುವವಳ ಸಿಡುದೋಳೊಳ ।
ಗಂಗಜವೀರನ ಲಾಡಿಗೆ ಬಹುಕುಸು ।
ಮಂಗಳ ನವಕಂಕಣತತಿ ಸೇರಿ ಮನೋಹರಮಪ್ಪಂತೆ ॥೧೬

ಮಂಜುಲ ಜವ ಗುಪ್ಪೆಯುನಪರಂಜಿಯು ।
ತೊಳಪ ಲಕ್ಕೆ ಪಲವಣ್ಣದ ಪೂವಂ ।
ತಳೆದೊಪ್ಪುವೆ ಮೂವಳಸಂ ಮುತ್ತಿದುದೋ ಅಂಗಜನೃಪನ ॥
ವಿಲಸಜ್ಜಂಗಮದುರ್ಗದ ಹುಬ್ಬುಗು ।
ಜ್ವಲಿಸುವ ರನ್ನದ ಕೋಟೆಯಿದೋ ಎನೆ ।
ತೊಳಗುವ ನವಮಣಿಮೇಖಲೆಯೊಪ್ಪಿದುದವಳ ನಿತಂಬದೊಳು ॥೧೭

---

೯. ಸುರಾಗ. ಗ॥ † ಬಡಬಡನೊ. ಕ॥, ಗ॥

ಅಲಘುನಿತಂಬಸ್ತನಪರ್ವತದಿಂ।
ವಿಲಸಲ್ಲಾವಣ್ಯಮಹಾನದಿಯಿಂ ।
ಲಲಿತಾಭರಣಸುವರ್ಣಮಣಿಗಳಿಂದೆಸೆವಾಸತಿಯೆಂಬ ॥
ನೆಲವೆಣ್ಣಿಂ ಹೊಬ್ಬುಲೆನುತಂಗಜನಿಧಿ ।
ಯೊಲವಿಂ ಮೃದುಪದಕೂರ್ಮನ ಬೆನ್ನೊಳ್ ।
ನೆಲೆಗೊಳಿಸಿದ ಶೇಷನಪ್ರಾಲ್ ಕುಲಿಶದ ನೂಪುರವೊಪ್ಪಿದುದು ॥೧೮

ಕೆಂದಾವರೆಯುಸಿಯೊಸಱ ಕೊನೆಗಳೊಳ್ ।
ನಿಂದಳಿಸುವ ಜಲಕಣ ಶೈವಾಲದ ।
ಬಿಂದು ಲಸನ್ಮಕರಂದ ತರುಣರವಿಕಿರಣಂಗಳ್ ಪತ್ತಿ ॥
ಅಂದವಡೆದ ತೆಱದಿಂದಾಳ್ಕಲರ್ದನ ।
ವೆಂದೀವರನೇತ್ರೆಯು ಕಾಲ್ಬೆರಲೊಳ್ ।
ಗೊಂದಿಸಿದಂಗುಲ್ಯಾಭರಣಂಗಳ್ ತೊಳತೊಳತೊಳಗಿದುವು ॥೧೯

ಘನಕಲಶಸ್ತನಯುಗದೊತ್ತಂಬದಿ ।
ಮನದನುರಾಗರಸಂ ತಾನಡಿಗಿಱ ।
ದೆನಸುಂ ಕಾಂತಿವಡೆದು ಸ್ಫೂರ್ಜತ್ಪ್ರಾಣ್ತಿ ವಿರಾಜಿಸುವಂಗದವೊಳ್ ॥
ಕನಕಲತಾಂಗಿಯ ಮೃದುಪದತಳದೊಳು ।
ವನರುಹಪತ್ರಾಂಬಕಿಯುರು ತೊಡೆಯುಲು ।
ಮಿನುಗುವಲಕ್ತಕರಸವತಿಚತುರರ ಚಿತ್ತಂಗೊಳಿಸಿಗುವು ॥೨೦

ಮಜ್ಜನವನುಲೇಪನವುಡೆ ನಿಱಿ ಪೊಸ ।
ಸಜ್ಜಕ ತಲೆವೀದಿಯುಮಣಿ ತಿಲಕಂ ।
ಕಜ್ಜಳ ನಾಸಾಮಣಿ ಕುಂಡಲ ಕಂಕಣ ನೂಪುರ ಕಟಕಂ ॥
ಪಜ್ಜಳಿಸುವ ಮೇಖಲೆಯುಂದಾಗೆ ಕಿಱು ।
ಗೆಜ್ಜೆಯುಲಕ್ತಕದಿಂ ಮುಡಿಯಿಂ ಕೆಂ ।
ಬಜ್ಜೆವರಂ ರಚಿಸಿದ ಸಿಂಗರವೊಪ್ಪಿದುವಾಬಾಲಿಕೆಗೆ ॥೨೧

ತರುಣಿಯು ತನುಲತೆವಿಡಿದಾಭರಣದ ।
ಕುರುವಿಂದಮಹೋಕೆಯು ವೈಡೂರ್ಯಂ ।
ಸರಸಿರುಹದ ಕುಲಿಶಂ ಜೊತದ ಮೌಕ್ತಿಕಮಣಿ ಮಾಲತಿಯು ॥

ಹರಿನೀಲಂ ನೆಯ್ದಿಲ ಬಿರಿಮೊಗ್ಗೆಯು ।
ವರವರ್ಣಮನಂಗೀಕರಿಸಲ್ಕೆ ।
ಸ್ಮರಕೋದಂಡಮನೇಱಿದ ಪಂಚಶರದವೋಲ್ ತೊಳಗಿದುವು ॥ ೨೨

ರಸುಮಿಸಿ ರವಯುದ ಕಂಕಣವಂಗಜ ।
ಪಸರಂ ಕರ್ಣಿಕೆ ರತಿವೆಸರಂ ನು ।
ಸ್ನಿಸಿಲ ತಿಲಕವಿಂಗೊಲ್ವಿಲ್ವೆಸರಂ ಮುಡಿ ಮುಗುಳ್ಗೆಸೆವೆಸರಂ ॥
ಮಿಸುಗುವ ಮೇಖಲೆಯುಲಿ ಚಕದಿಂಚರ ।
ಪಸರಂ ನೂಪುರರುತಿಯುಳಿಯುಳಿರವ ।
ಪಸರಂ ತಳೆದು ವಿರಾಜಿಸಿದುವು ಸುಕುಮಾರಿಸುಲೋಚನೆಗೆ ॥ ೨೩

ಭಾಸಿಪ ಬಹುರತ್ನವಿಭೂಷಣದಿಂ ।
ನೇಸಱು ನಿದು ಸಿಂಗರಿಸಿದ ಬಿ.. ಕ ಪಿ ।
ಲಾಸಿಸಿಯಹೊನ್ನ ತಳತಳಿಸುವ ಮುಕುರಂದೊಱೆಜಲ್ಕಲ್ಲಿ ॥
ಪೂಸರಲನ ಪುಣ್ಯದ ಪುಂಜದೆಸೆ ।
ಪ್ಪಿಸುವತಿಯು ಪತಿವ್ರತೆಯೊಪ್ಪಿದುದು ಸು ।
ಭಾಸೂತಿಯು ತೊಡಿಯೇಱು ವಿರಾಜಿಪ ರೋಹಿಣಿಯುಂಬಂತ ॥ ೨೪

ಅಸಿತಳ್ತಿಳಳ್ಳಗಕಂಪನ ಮಂತ್ರಿಗ ।
ಳಸುಲುಗದೊಳಾಯಿಂದಾಕ್ಷ್ಮೆಯುಮ್ಮಂಪದ ।
ವಿನಯಮದೊಳಾಪ್ಯಿನಾತ್ಮಕಮಂಡಲಸಲ್ಲಲಿತಾನನಪು ॥
ಘನಕುಚೆಯಂ ಸಿಸ್ನಿಚ್ಛೆಯು ಪರನಂ ।
ಮನಮಾಱ್ದು ಕರಂ ಪರಯಿಸಲೇಱಂ ।
ಜನುತತಿಸಂಭ್ರಮದಿಂನದೇಱುಸಿದರ್ ಮಂಗಲರವಮುಣ್ಮೆ ॥ ೨೫

ನಂದಣಿಸಿದ ಸಖಿಯರ ಮಧ್ಯದೊಳಾ ।
ನಂದಿ ಪೊನ್ನಂದಳಮನೇರಿಯರ ।
ಸಿಂದಾನನೆಯಾಸೆದು ಸುರಲೋಕಮನಿಸುವೆನೆನುತ ಮನಮಂ ॥
ತಂದಾಪಸಗೆ ತೆಗಯು ಬಾಗಿದ ಸಿರಿ ।
ಗಂದನ ಕಾರ್ಮುಕದಾಜಿಪಿವದಯೊಳು ।
ಸಂದಿಸಿ ಸಂಮೋಹನಮಂ ಬೀಱುವ ಬಿರಿಮುಗುಳ್ಗೆಣೆಯಂತೆ ॥ ೨೬

ಆಸುಕುಮಾರಿಸುಲೋಚನೆಯೋಳ್ರೂಪ |
ಭಾಸಿಪ ಪೊನ್ನಂದಣಮನೆ ಬಳಸಿದ |
ಕೇಸಡಿದಳಿರೊಳ್ವ್ಯಾಪ್ತಿದೊಡೆಯು ರಾಗಾಧರವಟಫಲದ ||
ನಾಸಾಚಂಪಕದಳಕಾಳಿಯು ದರ |
ಹಾಸನಯನಕುಸುಮದ ತನುಲತೆಯು ಪ |
ಲಾಸಿನಿಯರ ತಂಡಂ ನಡೆತಂದುದು ಜಂಗಮವನದಂತೆ ||೨೭

ದೊರೆತನನದೊಳಗೊಂದೊರೆ ಸಿಂಗರದೊಳ್ |
ಸರಿ ಸಕಲಕಲಾಪ್ರೌಢತೆಯೊಳ್ ಪಡಿ |
ಹರೆಯದೊಳೋರಗೆ ಸೌಂದರ್ಯದೊಳಣ ಯೌವನದೊಳು ಪಾಟಿ ||
ಸಿರಿಯೊಳ್ ಸಕ್ಕಸವಂ ತಾಮಾನ ಬಂ |
ಧುರತೆವಡೆದ ರಾಜಾತ್ಮಜೆಯರು ಕಡು |
ಹರಿಸದೊಳಾಸುಕುಮಾರಿಸುಲೋಚನೆಯೊಡನೊಲ್ದಿರ್ದರು ||೨೮

ಮುತ್ತಿನ ನವಮಣಿಸರದೊಡವಿನ ಬ |
ಣ್ಣಿತ್ತುಟಿ ಬಟ್ಟಿದುಂಬಿಂಬನ ಕಡುಬ |
ಲ್ಲಿತ್ತುಟಿ ಗುರುಕಟಿತಟಯುಗ್ಮದ ತೋರಿತ್ತುಟಿ ಯಾಪದಡವರ್ ||
ವೃತ್ತಕುಚದ ದೊಡ್ಡಿತ್ತುಟಿ ಭಾರಂ |
ಜೊತ್ತಡಿಯಿಡಲಿಂಬವ ಜವ್ವನದು |
ನ್ಮತ್ತಹೃದಯದಳವೆಣ್ಗಳ ತಂಪಂ ನಡೆದುದಬಲೆಯೊಡನ ||೨೯

ಎಳವೀಂಪೊಣರ್ಗಣ್ಮಲರ್ಗಳ ಪವಳದ |
ಪೊಳಪುದುಟಿಯು ಬಿಡುಮುತ್ತಿನ ಪಾಳಮ |
ನಿಬಿರಿಕೆಯ್ವ ರದಂಗಳ ತೆರೆಗೈಯ್ಗಳ ಕೂರ್ಮನಿಭಾಂಘ್ರಿಗಳ ||
ತೊಳಗುವ ಲಾವಣ್ಯಜಲಂದುಳುಕುವ |
ಲಲನಾಜನಮೆಯ್ದಿತು ಸಂಮೋಹನ |
ಜಲಸಿಧು ಮೇರೆಯನುಲ್ಲಂಘಿಸಿ ಬರ್ಪಂದಮನನುಕರಿಸಿ ||೩೦

ಸಾರಂಗಾಕ್ಷಿಯು ಸಾಮಜನವಮದ |
ಸಾರಭ್ಯದ ಸಲ್ಲಲಿತಾಸಿತಚಿಮ |
ರೀರಂಜಿತಧಮ್ಮಿಲ್ಲದ ಹುಲ್ಲೆಯು ಕೋಲ್ಗಣ್ಣಿವುರ್ಗಳ ||

ನಾರೀಜನವುಯ್ದಿತು ಮನಸಿಜಮಥು |
ಮಾರುತರಾಡುವ ಸೋಹಿನ ಪೇಟೆಗ |
ಭೀರುತೆಯಿಂದೊಳಗಾಗಿ ನಡವ ಮೃಗಗಣವೆಂಬಂದದೊಳು || ೩೧

ಆಸುಗೆಯುಸಿಯಾತಂಗುಲ್ಗಳ ಪವಳದ |
ಪೂಸವಾವುಗೆಗಾಲ್ಗಳ ಕೆಂದಾವರೆ |
ಯೊಸಱ್ಗಾಲ್ಗಳ ಮಿನುಗುವ ಮಾಣಿಕಮಣಿಗಾಲ್ಗಳ ರಂಜಿಸುವ ||
ರಸಮಾಸರ್ಗಲತೆಗಗಲ್ಗಳ ಸಂಜೆಯು |
ಮಿಸುಪ ಬೆಳಗುಗಾಲ್ಗಳ ಕೋಮಲೆಯರು |
ಕುಸುಮಶರನ ತೇಜವನೆ ಹಸರಮಿಡುವಂದದಿನೆಯ್ದಿದರು || ೩೨

ಬಡನಡುವಿನ ಬಳುಕುವ ನಡುವಿನ ಸು |
ನಡುವಿನ ಸಿಂಗವಸುಳಿನಡುವಿನ ಪುಸಿ |
ನಡುವಿನ ಸಂದೆಗನಡುವಿನ ಪಿಡಿನಡುವಿನ ಶ್ರೀಸಪೊಂಬಳ್ಳ ||
ನಡುವಿನ ಸಣ್ಣನಡುವಿನ ಕಡಂದುಱು |
ನಡುವಿನಸಿಯನಡುವಿನ ನವಡವುರುಗೆ |
ನಡುವಿನ ಮದಯುವಿವನೆಯರು ನಡದರವಳನಿಂದಗೋಲ್ಯೈಸಿ || ೩೩

ಮದನಮತಂಗವನೇಳಿಪ ಗಮನದ |
ಮದನಪಿರಂಚೆಯಪಡರುವರಸಂಚೆಯು |
ಮದವುಂ ಗೆಲ್ವ ಗತಿಯು ಮದನಗ ತಾನೇ ಅತಿಬಲವಾದ ||
ಸದಮಲಸಿಯು ಸೋಲಿಪ ಯಾನದ |
ಮದನಾಗ್ನಿಯನೇಳಿಪ ತೆಂಗಾಯು |
ಮೃದುವಂ ತೆಗೆಬ್ಬ ನಡೆಯು ನಾರೀಜನವೆಯ್ದುದುವವಳೊಡನ || ೩೪

ಪೊಗರುಣ್ಕುವ ಪೊಸಮಿಸುಪಿಯು ಕನ್ನಡಿ |
ಮೊಗದ ತಳತ್ತಳಿಸುವ ಪುಣ್ಣಮವೆಱ |
ಮೊಗದ ಮಿಸುಪ ಚೆನ್ನೇಸಱಂದಿರ ಕುಂದಣದಾವರೆಮೊಗದ ||
ಸೊಗಯಿಪ ಮುದ್ದುಮೊಗದ ಸಿರಿಮೊಗದೆಳ |
ನಗೆಮೊಗದೊಪ್ಪುವ ಬಟ್ಟಮೊಗದ ಕಡು |
ಮುಗುದೆಯರಾಶುಕವಚನೆ ಸುಲೋಚನೆಯೊಡನೊಲ್ದೆಯ್ದಿದರು || ೩೫

ಅಡರ್ದ ಕುಚದ್ವಯಕಳಶದ ಮೊಗಗ ।
ನ್ನಡಿಯುಂಗೈದ ರಂಗನೆಯ್ದುರ್ ಮೆ ।
ಲ್ಲಡಿಯಿಂ ಪೊತ್ತಿಡುತ ಮುಂದಣ ನೆಲನಂ ಬಲಿದೀಕ್ಷಿಸುತ ॥
†ನಡೆಯ ಬೆಡಂಗಿನೊಳಾನೆಗೆಗಣ್ಣಳ ।
ಕಡೆಯ ಬೆಳಂತಿಗೆವೆಳಗು ಹರಿದು ಮುಂ ।
ಗುಡಿಯೊಳ್ ಪಸರಿಸಲೆಸೆದುದು ನಡನುಡಿಯುಂ ಪಾಸಿದ ತೆಱದಿ ॥೩೬

ಸೆಕ್ಕಂದುಱುಬಿನ ಸೆರೆಗೈಗಣ್ಣಳ ।
ಕಕ್ಕಸಮೂಲೆಯ ಕಲುಷ್ಪೃದ್ವಪನದ ।
ಚಿಕ್ಕಹರೆಯದೆಳದುಂಬಿಗುರುಳ ಸೊರ್ಕಾನನಡೆಯ ರತಿಯ ॥
ಕಕ್ಕಸವದ ರೂಪಿನ ಗಿಳಿನುಡಿಗಳ ।
ಚೊಕ್ಕಳಿಕೆಯ ಸೊಬಗಂ ತಾಳದ ಪ ।
ೞ್ಮಕ್ಕಳ ತಂಡಂ ನಡೆತಂದುದು ನಳನಾಕ್ಷಿಯ ಬಳಸಿನೊಳು ॥೩೭

ಚಂದನಲತಿಕೆ ತಮಾಲಲತಿಕೆಯೊರ ।
ಡೊಂದಿದ ತೆಱದಿಂದಸಿತಾಸಿತವ ।
ರ್ಣಂದಾಳಿದ ರತಿಮದನೋರಗಯುಗಲಂ ಕೂಡುವ ತೆಱದಿಂ ॥
ಮಂದಗಮನಯೊರ್ವಳ್ ನಡೆವಡೆಯೊಃ ।
ಪಿಂದಲೆಯಿಂ ಮುಡಿ ಜಗುಳ್ದುದಯಾಲ್ ಕೈ ।
ಯಿಂದೆತ್ತುವ ಭಂಗಿ ಕರಂ ಕಣ್ಗೆ ಮನೋಹರವಯ್ದುದು ॥೩೮

ಸಲ್ಲಲಿತವಿಲೋಚನೆಯರ್ ನೂತನ ।
ಪಲ್ಲವಪದವನಿಡುತ್ತ ಪೆಡಂಗಿಂ ।
ಕೆಲ್ಲಯಿಸುತ ಕೆಲಬಲನಂ ನೋಡಲ್ ತತ್ಕೇಕರಕಾಂತಿ ॥
ಅಲ್ಲಿರ್ದರ ಮೊಲ್ಲೆರ್ದೆಯಂ ಪಳ್ಳಿಯ ।
ಬಲ್ಲೆಯದಿಂದಂಗೋದ್ಭವವೀರಂ ।
ಪೊಲ್ಲಮುಸಿಸಿನಂದಿಡುವಂದದದಿನತಿರಮ್ಯಂದಾಳಿದುದು ॥೩೯

ಅಳಕದೊಳಗ್ಗಲೆಯದಳಕನಿಕುರುಂಬವ ।
§ನಲೆದತ್ತೆನುತುಂ ತಿರ್ದುವ ತೆಱದಿಂ ।
ನಳನಳಿಸುವ ನಳಿತೋಳ ಮೊದಲ ನುಣ್ಬೊಗರಂ ಕಾಣಿಸುತ ॥

† ನಡೆವ. ಕ॥ ‡. ಳಿಯ. ಕ॥ ಗ॥ §. ನಳಿದ. ಕ॥ ಗ॥

ಇಱಿಯುದ ಪೊಸವೇಲುದಱ ಸೆಱಂಗುವು ।
ನಿಱಿದತ್ತೆನುತೆತ್ತುವ ನೆವದಿಂ ವರ ।
ಕಲಶಸ್ತನತಟವುಂ ನಸುಗೋಱುತ್ತೆಯ್ದಿದರಾಳಿಯರು ॥೪೧

ತಳಿರ್ದಿಂತಿನಿ ತಣ್ಪುಳಿನ ತಳಂಗಳ್ ।
ಬಳಗಂ ಪೊಸಬಳ್ಳಿಯು ಜಂಗುಱಿ ಪೊಂ ।
ಗಳಸದ ಸಂದಣಿಯುಲರ್ದಂಬುಜದ ಕದಂಬನೆ ನಡೆವಂತೆ ॥
ವಿಲಸನ್ಮೃದುಪಾದದ ಘನಜಘನದ ।
ಲಲಿತಾಂಗದ ಗುರುಕುಚದಮಲಾನನ ।
ದೆಳವೆಣ್ಗಳ ತಂಡಂ ನಡೆತಂದುದಕಂಪಜಯಂ ಬಳಸಿ ॥೪೨

ಗೊಂದಳಗೊಂಡೀತೆಱದಿಂದೆಯ್ದುವ ।
ಕೆಂದಳಿಗರ್ಜಲ ಕೆಳದಿಯರ ನಡುವೆ ಮ ।
ನಂದಣಿವೃಕ್ಷಹದಿಂದೆಯ್ತಂದಾಮಣಿಮಯಮಂಡಪಕೆ ॥
ಇಂದೀವರಲೋಚನೆಯೊರ್ವಳ್ ಕುರು ।
ವಿಂದಮಣಿಯ ಹಾವುಗೆಯಿಕ್ಕಲ್ ಪೊ ।
ನ್ನಂದಳದಿಂದಿೞಿದಳ್ ಮತ್ತೊರ್ವಳ ಕೈವಿಡಿದಾಕುವರಿ ॥೪೩

ಬರುತಿದೆ ಭಾಳಾಂಬಕನದಟಂ ಮುಱಿ ।
ದರಲ ಸರನ ಪಟ್ಟದ ನವಮದಕರಿ ।
ಬರುತಿದೆ ಬಹುಲೋಕವಶೀಕರಣದ ಮೂರ್ತಿ ಮನದೆಗೊಂಡು ॥
ಬರುತಿದೆ ನವಮೋಹನದಧಿದೇವತೆ ।
ತರಿಪದಿ ತೊಲಗಿ ತೊಲಗಿಮೆನುತುಂ ಕಡು ।
ಭರದಿಂದುಘ್ಘಡಿಸುವ ಕಂಚುಕಿಯರೆಸೆದರಬಲೆಯ ಮುಂದೆ ॥೪೪

ಬಳಸಿದ ಬಹುಮುಕುರದ ಮಧ್ಯದ ಪು ।
ತ್ತಳಿಯು ನೆೞಲ್ ಮಿಗೆ ಸೊಗಯಿಪ್ಪವೊಲ್ ಮನ ।
ವೆಳಸಿ ಕರಂ ನಡೆನೋಡುತ ಕಾತರದಿಂ ಪರಿವೇಷ್ಟಿಸಿದ ॥
ಇಳೆಯಾಣ್ಮರ ಚೇತೋಗೃಹದೊಳ್ ಮೂ ।
ರ್ಪೊಳೆದುದು ತನ್ಮಧ್ಯದೊಳೊಪ್ಪುವ ನವ ।
ನವಿಲೋಚನೆ ಸುಭಗೆ ಸುಲೋಚನೆಯೊರ್ವಳ ಕಡುಚೆಲ್ವು ॥೪೫

ಬಳ್ಳಂಕ ಬಳಸಿ ನೆಯ್ದಿ ನಿಟ್ಟಿಸುವರ ಬಾ ।
ಕುಳಿಗಣ್ಗಂ ಮನಮಂ ನವಮೋಹನ ।
ಜಲನಿಧಿಯಂತೋರಣದಿಂ ಸಿಂದೆಳಮೀನ್ಗಣ್ಗೆಯಾರ ॥
ಅಲಘುಕುಚಾದ್ರಿಯು ಸೇತುವನಡರ್ದ ।
ಕುಲಿಶರದದ ಕರುವಿಂದೋಷ್ಠದ ನವ ।
ಲಲನಾರತ್ನವೆನಿಪ ರತ್ನದ್ವೀಪಕ್ಕರದೆಯಿರ್ದುದು ॥೪೫

ನಲಿದುವು ನವಿಲ ಗತಿಯು ಕಣ್ಗೊಂಪದಿ ।
ಬಲಿದೀಕ್ಷಿಪ ಭೂವರ್ತಿರಕ್ಷಿಗಳ್ ।
ಅಲಪುಪಯೋಧರೆಯುಮಲಾಪಾಂಗರುಚಿಯು ವಿದ್ಯುಲ್ಲತೆಯಂ ॥
ವಿಲಸನ್ಮಣಿವಿರಚಿತಕಂಕಣದೆಳ್ ।
ಯುಲುಹಿನ ಕಿರುವೊಲಗಂ ನವರತ್ನೋ ।
ಜ್ಜ್ವಲಭೂಷಣಕಾಂತಿಯು ಗೀರ್ವಾಣಶರಾಸನಮಂ ಕುಡು ॥೪೬

ತದನಂತರದೊಳ್ ತನ್ವಂಗಿಯನುರು ।
ಮುದದಿಂ ಕಂಚುಕಿಯೊರ್ವನ್ ತನ್ನೃಪ ।
ರದಟಿನ ಪೆಂಪಂ ಸಿರಿಯುಗ್ಗಳಮಂ ಸೊಬಗಿನ ಪೊಕ್ಕಳಮಂ ॥
ವಿದಿತಾನ್ವಯಶುದ್ಧದ ಹೆಚ್ಚುಗೆಯಂ ।
ಮದಯೌವನದುರ್ಕಂ ಸತ್ಪ್ರಥಿತ ।
ಯೊದವಂ ತೋಱುತ್ತುಂ ಪೇೞುತ್ತುಂ ಮೆಲ್ಲನೆ ನಡೆಸಿದಳು ॥೪೭

ಮುಂದೊರ್ವಳ್ ಪೊಗಳುತ್ತುಂ ಪೋಗಲ್ ।
ಕೆಂದಳಮಂ ಕೆಳದಿಯು ಕೈಗಿಟ್ಟರ ।
ವಿಂದಾನನೆ ನವಮಾಣಿಕ್ಯದ ಮಣಿಪಾವುಗೆಯಂ ಮೆಟ್ಟಿ ॥
ಮಂದಸ್ಮಿತಮಧುರವಿಲೋಚನೆಯಂ ।
ಮುಂದೈಸಿದ ನೃಪಸುತರಂ ನೋಡುತ ।
ಕಂದರ್ಪನ ಪಟ್ಟದ ಕರಿ ಮೆಲ್ಲನೆ ನಡೆವಂತೆಯಿರ್ದಳು ॥೪೮

ದರಹಸಿತಜ್ಯೋತ್ಸ್ನೆಯಿನೀಕ್ಷಿಪ ನೃಪ ।
ವರರೆರ್ದೆಯೆಂಬಿಂಗದಿರ್ಗಲ್ಲ್ವೆಳಕಂ ।
ಕರಗಿಸಿ ಹೃದಯೇಂದೀವರಮಂ ಸಂತೋಷಿಸಿ ಕಣ್ಗೊಂಬ ॥

---

೧. ಕಣ್ಣಾಗ ೩॥

ತರಳಚಕೋರಿಗಳಂ ನಲವಡೆಯಿಸಿ ।
ಹರಿಣವಿಲೋಚನೆ ವಟಪಕ್ವಫಲಾ ।
ಧರೆ ಸರಸಾಮೃತವಾಣಿ ನಡೆದಳಾಶಶಿಲೇಖೆಯು ತೆಱಗಿ ॥೪೯

ಸುರುಚಿರಸುರಭಿಲತಾಂಗಿಯು ವಿಲಸ ।
ತ್ಕರಪಲ್ಲವ ಪದಪಲ್ಲವ ರಂಗಾ ।
ಧರಪಲ್ಲವವೊಂಬುಳಿಪಱಿವೊಳ್ ಮೊಯ್ಯರೆದು ಮನೋಜಾತಂ ॥
ಸರಸೇಕ್ಷು-ಶರಾಸನದೆಳದುಂಬಿಯು ।
ತಿರುವಂ ಕರ್ವಿಲ್ಗೇಱಿಸುತಿ ದೀ ।
ವರನವಕುಸುಮಾಳೀಮುಖದಿಂದಿಸುವಂದಮನನುಕರಿಸಿ ॥೫೦

ನೆರೆದ ಮಹಾನರನಾಯಕಸಭೆಯೊಳ ।
ಗರೆಬರ ಬುದ್ಧಿಯುನೆಳಕುಳಿಯಾಡು ।
ತ್ತರೆಬರಹಂಕಾರಮನೇವದೆ ಬಲ್ಸೂಱೆಗೊಳುತ ಬಱಿಕ ॥
ಅರೆಬರ ಧೃತಿಯುಂ ನೆಱೆ ಕವರುತ ಮ ।
ತ್ತರೆಬರ ಪೆಂಪುಂ ದಳವುಳಿಗೊಳುತುಂ ।
ಸ್ಮರಚಕ್ರೇಶನ ಸಲ್ಗೆಯು ಮದವತ್ಪ್ರಾಯಿತೆಯೆಯ್ದಿದಳು ॥೫೧

ಪದದರ್ದುದು ಬಗೆ ಪೆರ್ಚಿದುದೆಲ್ಬುಱು ನಾರ್ ।
ಕೆಡದರ್ದುದು ಗೆಲವಱಿದುದು ಜಾಱ್ ಜರಿದುದು ।
ಬಿದಿರ್ದುದು ಬಿಂಕಂ ಬೀತುದು ಪರಿ ಪ್ರಸರಪ್ರೋದುದು ಪೆಂಪು ॥
ಉದಿರ್ದುದೊಡಲ ಬಲ್ಪೋಡಿತು ಗರುವಿಕೆ ।
ಮದವನ್ಮದನಮತಂಗಗಮನೆಯುಂ ।
ಮುಂದದಿಂ ನಡೆನೋಡುವ ನರಪಾಲಕನಂದನಸಂತತಿಗೆ ॥೫೨

ಹಿಂದಣವರ್ ಛೀ ! ಸಂಸಾರವಿದೇ ।
ಕೆಂದು ವಿರಕ್ತಹೃದಯರಾದರ್ ಮೊಗ ।
ಸಂದಿಸಿದವರಂಗಭವಗ್ರಹವಡರ್ದಂದದಿ ನೋಡಿದರು ॥
ಮುಂದಣವರ್ ತಾವಂದೆಸಗಿದ ಸೈ ।
ಪಿಂದೆಱೆಯುಲ್ಬಹುದೆನುತಿರ್ದರು ಪೂ ।
ರ್ಣೇಂದುವದನೆ ನಡೆತರ್ಪಾಗಳ್ ನೋಡುವ ನೃಪಸಮಿತಿಯೊಳು ॥೫೩

ಆಪೃಥಿವಿಪರೊಳ್ ತನ್ನಂ ಸೋಲಿಸ |
ರೂಪಲಲಿತಯೌವನಸೌಭಾಗ್ಯಕ |
ಲಾಪರಿಣತನಪೂರ್ವ ನರೇಶ್ವರನಂದನನಿರ್ದೆಡೆಗೆ ||
ಚಾಪಳನೇತ್ರೆ ನಡೆದಳಂಗಜನಿ |
ಕ್ಷೇಪಂ ನೆಲಸಿದೆಡೆಗೆ ನವಮೋಹನ |
ದೀಪಕಳಿಕೆ ನಡೆವಂದದಿ ತಳತಳಿಸಲ್ ಕೈದೊಡವೆಗಳು || ೫೪

ಬರುತ ಬರುತ ಕಟ್ಟಿದಿರೊಳಗೀಕ್ಷಿಸಿ |
ತರುಣತರಣಿನಿಭತೇಜನನಭಿನವ |
ಸುರಭಿಶ್ರೀಮುಖನಂ ವಿಲಸಚ್ಛ್ರೀಕುಲಮಣಿದೀಪಕನಂ ||
ಪುರುಷೋತ್ತಮನಂ ಜಯನೃಪನಂ ಸರ |
ಸಿರುಹವದನೆ ನೂತನರತಿಯುತಿಬಿಂ |
ಧುರಕುವಲಯಲೋಚನೆ ನೂತನಭಾರ್ಗವಿ ನಡೆನೋಡಿದಳು || ೫೫

ಈವಿಧದಿಂ ನಡೆನೋಳ್ಪಭಿನವರತಿ |
ದೇವಿಯ ನಯನಯುಗತ್ರಯ+ಭಾಗದ |
ಧಾವಳ್ಯಂ ನಲವೇಱೆ ವಿರಾಜಿಸಿ ಪಂದಡರುತ್ತಿರಲು ||
ಭೂವರಕುಲಚಂದ್ರನ ಕುರುರಾಜನ |
ಲಾವಣ್ಯಲಸತ್ತನುವಲ್ಲರಿಯೊಳ್ |
ತೀವಿತು ಪುಳಕಂ ತಿಲಕಮಹೀಜದೊಳಲರೇಱುವ ತೆಱದಿ || ೫೬

ಬಱಿಕಾತನ ಲೋಚನಪುತ್ರಿಕೆಗಳ್ |
ಲಲನೆಯ ತಲೆನವಿರೆಂಬ ತಮಾಲದ |
ತೊಳಪಾರವೆಯೊಳ್ತೊಳಲಿ ಪಯೋಧರಪರ್ವತಮಂ ಪತ್ತಿ ||
ಬಳಲಿ ಕರಂ ಬಾಸಯ ಬಡಬಟ್ಟೆಯೊ |
ಳೆಱಿದು ಹೊಳೆವ ಹೊಕ್ಕುಳ್ ತಿಳಿಗೊಳದೊಳ |
ಗೆಳಸಿ ಮುಳುಂಗಿ ವಿನೋದದಿ ಜಲನಾಡಿದುವು ಕೆಲಂಬೊತ್ತು || ೫೭

ಜರತಿಗೆಗಣ್ಣ ಕಡೆಯ ಪಳ್ದಿಂಗಳೊ |
ಳೆಳನಗೆ ಮಿನುಗುವ ಮೊಗದಾವರೆಯೊಳ್ |
ತೊಳಗುವ ಮೆಯ್ಸೊಳಗಿನ ನೀರೊಳ್ ಸುಲಿಪಲ್ಲ ಕ್ಷತೆಗಳೊಳು ||

+. ಭಾಗೆಯ ಕ||

ಕುಗ್ಗಿದಿರ್ದಕ್ಕಿಯ ಕುಸುಮಾಹಾರಿಯ |
ಪೊಳೆವಳಮೀನ ಕರಿಮುಹಕ್ಕಿಯವೊಲ್ |
ಲಲಿತಾಂಗಿಯ ಕಣ್ಗಳ್ ನಲಿದುವು ಭೂವರಕುಲಚಂದ್ರಮನ || ೫೮

ಎಸಲೆಂಬುಗಳ ಹಿಳ್ಕುಹಿಡಿದಾಗಳ್ |
ರಸದಾಳಿಯ ಬಿಲ್ ಬಾಗುವವೊಲ್ ನವ |
ರಸಿಕನ ರೂಪು ಕರಂ ಬಗೆದಾಗಳ್ ಪುಟ್ಟಿದ ಲಜ್ಜೆಯೊಳ್ ||
ಪೊಸಜವ್ವನೆ ಸಿರಿವೊಗೆ ಬಾಗಲು ನಿಂ |
ದೆಸೆಕೆಂಗಂಡು ಕೆಲದ ಕಂಚುಕಿ ರಂ |
ಜಿಸುವ ನವೀನಕುಸುಮಮಾಲೆಯನಿತ್ತು ಸಿರಿದಳಿಂತೆಂದು || ೫೯

ಕುರುಜಾಂಗಣಜನಪದದ ಮಾತಂಗಜ |
ಪುರಪಥನಾಥಂ ಶಶಿಕುಲದೀಪಂ |
ಸ್ಮರರೂಪಂ ಸೋಮಪ್ರಭತನುಜಂ ಸಕಲಕಲಾಪರಿಪೂರ್ಣಂ ||
ಪುರುಷನಿದಾನಂ ಪುರುಚರಿತಂ ಸುರ |
ಪರಿವೃಢವಿಭವಂ ವಿನಯನಿದಾನಂ |
ಚರಮಾಂಗಂ ಜಯಜಾಯಾಪತಿ ಜಯನಿವಗಿವು ಮಾಲೆಯನು || ೬೦

ಎನುತೊರೆದಭಿಜಾತೆಯ ರಂಜಿಪ ನುಡಿ |
ಮಿಸಿದು ಮನಂಬುಗಲತ್ಯಾತುರದಿಂ |
ವನರುಹದಳಸಲ್ಲಲಿತವಿಲೋಚನ ಪೂಮಾಲೆಯನಾಂತು ||
ಅನುರಾಗದಿ ಗುಣರತ್ನಗಭೀರನ |
ಮನಸಿಜನಿಭನೆಡೆಗೈತಂದಳು ಮೋ |
ಹನನಿಭ ಮೆಲ್ಲನೆ ನವಶೃಂಗಾರಶರಭಗೆಯ್ತರ್ಪಂತೆ || ೬೧

ಸುರುಚಿರಸುರಭಿಲತಾಂಗಿ ನಡೆದು ಬಂ |
ದಿರದಾಸತ್ಪ್ರಭುವಂಶನಮೋರುಗೆ |
ಭರದಿಂ ಸೂಡುವ ಪದದೊಳಗಾನವೆಮಂದಾರದ ಮಾಲೆ ||
ಕರಮೆಸೆದುದು ಕುಸುಮಾಯುಧನಾಕೆಯ |
ಕರಯುಗಕಂ ಮತ್ತವನ ಕೊರಲ್ಗಂ |
ಹಿರಿದುಂ ಬಿಡಬೇಡೆನುತಿಕ್ಕಿದ ಮೋಹನಶೃಂಖಲೆಯಂತೆ || ೬೨

ಪೊಸಪೂಮಾಲೆಯನಿಕ್ಕಿ ದ ಬಳಿಕಾ |
ರಸಿಕನ ಹೊರೆಯೊಳಬಲೆ ನಿಂದಿರಲಾ |
ಯೆಸಕಂಗಂಡು ಬಳಸಿ ನಡೆನೋಡುವ ಸಖಿಯರ ಕಣ್ವೊಳಗು ||
ಮುಸುಕಲ್ಮತ್ತ್ತವರಂಗಲದ ತೆಱದಿಂ |
ದಸಮಾಯುಧನೃಪನೋವದೆ ಪಿಡಿದಸ |
ವಸಿಪಂಜರದೊಳ್ ಸಱೆಯಿಟ್ಟಂದವನಂಗೀಕರಿಸಿದುದು ||೬೩

ಅನಿತಱೊಳತ್ಯುತ್ತಮಮಣಿಗಣದಿಂ |
ಮಿನುಗುವ ಪೊಸಮಿಸುನಿಯ ಪೊಂದೇರೊಳ್ |
ಮನಸಿಜನಿಭಜಯಭೂವರನಂ ಸುಕುಮಾರಿ ಸುಲೋಚನೆಯುಂ ||
ಅನುರಾಗದಿ ಕುಳ್ಳಿರಿಪಿ ಬಳಿಕಮಾ |
ಜನತಾಧೀಶನಕಂಪಂ ತತ್ಪುರ |
ಕೆಸಿವಿರಿದಾಂ ಸಂತೋಷದಿ ಬಹುಬಲಸಹಿತವೆ ಕಳುಹಿಗನು ||೬೪

ವಿತತವಿಬುಧಗಣಪೋಷಣಗುಣಸಂ |
ಯುತನುಜ್ಜ್ವಲಸಕಲಕಲಾನಿಧಿಯುವಿ |
ರತಕುವಲಯಮಹಿತಾನಂದಕರಂ ಸತ್ಪಥಗತಿಸಿರತಂ ||
ಹತವೈರಿತಮೋಸಿಕುರುಂಬಂ ಸುವಿ |
ದಿತತೇಜಃಪೂರಾವೃತಲೋಕಂ |
ಸತತಂ ಶೋಭಿಸಿದಂ ಶಶಿಯಂತಾಪ್ರಭುಕುಲಮಣಿಬೇಪಂ ||೬೫

ಇದು ಸುರನರಫಣಿಪರಿವೃಢವಿನಮಿತ |
ವಿದಿತವಿನಯಗುಣಗಣಯುತಜಿನಪತಿ |
ಪದಸರಸಿಜಮದಮಧುಕರನತಿಚತುರಕಲಾಪರಿಪೂರ್ಣಂ ||
ಸದಮಲಚರಿತಂ ಪ್ರಭುರಾಜಂ ಸಂ |
ಮದದಿಂ ರಚಿಸಿದ ಜಯನೃಪಕಾವ್ಯದೊ |
ಳೊದವಿ ಮನೋಹರಮಂ ಪಡದತ್ತೈದನಯ ಮಿಸುಪ ಸಂಧಿ ||೬೬

ಐದನೆಯ ಸಂಧಿ ಸಂಪೂರ್ಣಂ.

# ಷಷ್ಠ ಸಂಧಿ.

— ೦ —

ಸೂಚನೆ ‖ ಸತಿಯಂ ಬೇಡಿ ಸಮರಧರೆಗೆಯ್ದಿದ |
ಸಿತಗನ ರವಿಕೀರ್ತಿಯ ಬಲಮುಂ ಸ |
ನ್ನುತಸಾಹಸಿ ವಿಕ್ರಮಕೇಸರಿಯ ಬಲಮುಂ ಸಜ್ಜುಗೊಂಡುದು ‖

ಸುಗುಣೆ ಸುಲೋಚನೆ ಸುದತೀರತ್ನಂ |
ಬಗೆಯದ ತನ್ನಂ ಜಯಭೂಪಾಲಗೆ |
ಮಿಗೆ ಮೋಹಿಸಿ ಮಾಲೆಯನಿಕ್ಕಿದುದರ್ಕಾದವನಿಪರ ಮುಖಂ ‖
ಪೊಗೆಸುತ್ತಿದ ಪೊಂಗನ್ನಡಿಯಂದದಿ |
ಪೊಗರಳಿದುವು ಪೊಗಸಿನ ಚಂದ್ರಂಬೊಲ್ |
ನಗೆಗೆಟ್ಟುವು ತುಹಿನಂ ತುಱುಗಿದ ತಾವರೆಯೊಲ್ ಕೊರಗಿದುವು ‖೧

ಆನೃಪಸಮುದಯದೊಳ್ ಭರತೇಶ್ವರ |
ಸೂನು ಪರಾಕ್ರಮಶಾಲಿ ಮದೋದ್ಧತ |
ಮಾನಸನತಿನಿಷ್ಠುರಿ ಸಿತಗಂ ರವಿಕೀರ್ತಿವೆಸರ ನೃಪತಿ ‖
ಮಾನಿಸಿ ತನ್ನಂ ನೋಡದೆ ಜಯಭೂ |
ಮೀನಾಥಗೆ ಮಾಲೆಯನಿಡೆ ಕಂಡತಿ |
ಮಾನಂಗೆಟ್ಟು ಮನದ ಖತಿಯಿಂ ತಾನಿಂತೆಂದೊದಱಿದನು* ‖೨

ಛಪ್ಪನ್ನ ಮಹಾರಾಷ್ಟ್ರಂ ಮೊದಲಾ |
ಗೊಪ್ಪುವ ಪೃಥವಿಪರೆಲ್ಲರ್ ತಮ್ಮಯ |
ದರ್ಪಮನುೞಿದೊಂದಿಸಿಸಂ ತಪವಂ ಮಾಡದೆ ತಮಗುಳ್ಳ ‖
ನಿಪ್ಪೊಸತಪ್ಪ ಸುವಸ್ತುವನೆಮ್ಮಯ |
ಜೊಪ್ಪಂಗೆಲ್ಲಾ ಲೋಕವಱಿವಪ್ಪೊಲ್ |
ಕಪ್ಪಂಬತ್ತವರಲ್ಲದ ನಿರ್ನೆರ†ಮಾಗಿರ್ದವರಿಲ್ಲ ‖೩

ಇಂದಾಸ್ತ್ರೀರತ್ನಂ ಪರಸತಿ ತಾಂ |
ಬಂದವನತನಾಗದೊಡೆಯಕಂಪನ |
ಕೊಂದು ಕುಲವನೆಲ್ಲಮನಂತಕನೂರೌತಣಮಂ ಮಾಳ್ಪಂ ‖

---

*. ತೆಂದುಸಿರಿದ. ಖ |    †. ಮಾರಿರ್ದ. ಕ ‖

ಎಂದು ಗಜಱಿ ಘರ್ಜಿಸಿ ತೊಡೆಯಂ ಪೊ |
ಯ್ದೊಂದಿಸಿಸಱೊಳಿರ್ವರ್ಗಂ ಸಚಿವಂ ಭಯ |
ದಿಂದಱ್ಬ್ರ ರವಿಕೀರ್ತಿಗೆ ಕರಯುಗವಂ ಮುಗಿದಿಂತೆಂದಂ ||೪

ಎಲೆ ಮಹಿಪಾ ಮನುವಂಶಲಲಾಮ |
ಚಲಮಂ ಬಿಡು ನೀನವನೊಳಗೆಲ್ಲಾ |
ನೆಲನಂ ನಿಮ್ಮಯ್ಯಗೆ ತೋಳ್ವಲದಿಂ ಸಲೆ ಸಾಧ್ಯಂಮಾಡಿ ||
ಪಲರಾಯರ ಸಬ್ಬಸಮಂ ಕವರ್ದು |
ಜ್ವಲಿಸುವವರ ತಲೆಮಣಿಯಂ ಮಣಿಯಿಸಿ |
ದಲಘುಭುಜಂ ವಿಕ್ರಮಕೌರವಜಯರಾಜಶಶಾಂಕನೊಳು ||೫

ಈತೆಱದಿಂ ಸಚಿವೋತ್ತಮನಾಡಿದ |
ಮಾತ ಮನದಗೊಳ್ಳದ †ಕಿನಿಸತ್ತ್ವಿ |
ಸೀತಂ ಖರಕರಕೀರ್ತಿಕುಮಾರಂ ದೂತರನಟ್ಟಿದನು ||
ಆತನ್ವಂಗಿಸುಲೋಚನೆಯಂ ಸ |
ತ್ಪ್ರೀತಿಯಿನಿತ್ತು ಬದರ್ಗಂಕುಪ್ರದನ ತ |
ತ್ಯಾತುರದಿಂ ವಾರಾಣಸಿಯಧಿಪನಕಂಪನಮಹಿಪನಡೆಗೆ ||೬

ಬಂದಾದೂತನಕಂಪನೃಪತಿಗಿಂ |
ತೆಂದನೆಲೇ ಮನ್ನೆಯ ನಿನ್ನಣುಗಿನ |
ನಂದನೆಯಂ ಸ್ನೇಹದಿನೆಮ್ಮೊಡಮಗೆ ರವಿಕೀರ್ತಿಗೆ ಭರದಿ ||
ತಂದಿತ್ತು ತು ಲ್ಗೆಯ್ದತಿಭರದಿಂ |
ಮಂದೇತರಭಾಗ್ಯಂ§ದಳೆವುದು ಲೇ |
ಸೆಂದತಿನಿಷ್ಠುರವಚನಮನಾಡಲ್ ಕೇಳ್ದವನಿಂತೆಂದಂ ||೭

ಪಱುಗಂಜದೆ ಮಾಱಿಯನುಲ್ಲಂ ಘಿಪು |
ದಿಕ್ಕಿನಯೊನ್ನದ ಪಾತಕಮಂ ಬಗೆಯೊಳ್ |
ತಳೆವುದರಸುಮಕ್ಕಳ ಮತವೇ ಎಂದಾವಾರಣಾಸಿಯ ||
ಪೊಲರಸಂ ರವಿಕೀರ್ತಿಕುಮಾರನ |
ಬಱಿಯಿಂ ಬಂದ ಭಟನೊಳುಡುವ ನುಡಿ |
ಗಳುಮಂ ಕೇಳ್ ಕೆಳರಿ ಜಯಭೂಪರನಿಂತೆಂದೊದಱಿದನು ||೮

†. ಕಿನಿಸುಂ ತವಕದಿ. ಗ|| § ಬಡೆವುದು ಕ|| ¶ ಯಾನದ ಕ||

ಪೆಣ್ಣಂ ಬಱಿದೆ ಬಯಸಿ ಮೊಗಮಂ ಬಾ |
ತಣ್ಣಗೆ ರಣಮಂಡಪದೊಳು ರಕುತದ |
ಬಣ್ಣದ ಬಾಸಿಗಗಟ್ಟಿಸಿ ಮತ್ತೋಪಾನಲಸಾಕ್ಷಿಯೊಳು ||
ಉಣ್ಣದರೂರೊಳಗಣ ದೇವಿಯರಂ |
ನುಣ್ಣಿಸಿದಸಿಧಾರಾಪೂರ್ವಕದಿಂ |
ತಿಣ್ಣನೆ ಕೈಗೂಡಿಸಿ ಭೂತಮುಮಂ ಬಿರ್ನಪ್ರೊಲೆಯಿದ್ದಿಸುವೆಂ ||೯

ಎಂದು ೩ವಿಭಾಡಿಸಿ ತಗುಳಲ್ ದೂತಂ |
ಬಂದಾಕ್ಷಣದೊಳ್ ವಿಕ್ರಮಕೌರವ |
ನೆಂದುದಮನೊರೆಯಲ್ ಕೇಳ್ದರವಿಕೀರ್ತಿಮಹೀಪಾಲಂ ||
ಮುಂದಪ್ಪಪಕೀರ್ತಿಯನಿನಿಸೆಣಿಸದೆ |
ಮಂದೇತರಕೋಪದಿ ಘರ್ಜಿಸುತಿ |
ಘರ್ಗಂದಂ ಪೋಲ್ತುದು ಕೇಸರಿ ಮೊೞಗಂ ಕೇಳ್ದು ಕನಲ್ವಂತೆ ||೧೦

ಉಕ್ಕುವ ಘೃತಕುದಕಂಪೊಯ್ದೊಡೆ ಮೇ |
ಲಕ್ಕುರಿಯೇೞ್ವಂದದಿ ತನಗೆನಸುಂ |
ತಕ್ಕರೊರೆದ ಜೊಕ್ಕೞಿಕೆಯ ನುಡಿ ಕಿವಿಯಂ ಮಿಗೆ ಪುಗೆ ಮಸವ ||
ಮೊಕ್ಕಳಮಾದ ಮುನಿಸು ನಸು ತಗ್ಗದೆ |
ಯುಕ್ತಿವಗೆಯ್ತದ ರವಿಕೀರ್ತಿನೃಪಂ |
ಕಕ್ಕಸಕೋಪಿತನಾಗಿ ರಣಕ್ಕುಜ್ಜುಗವನೆ ಮಾಡಿದಂ ||೧೧

ಬಲಯುತಜಯರವಿಕೀರ್ತಿನೃಪರ ಕೊಳು |
ಗುಳಮಂ ನೋಡುತ್ತೊಡೆಳವೆಯೊಳಲ್ಲದೆ |
ಕಳಿದ ವಯಸ್ಸಿನ ಕಣ್ಗತಿಮಾಂದ್ಯವೆನುತ್ತ ವೃತಾಬ್ಧಿಯೊಳು ||
ಮುೞುಗಿ ಕೆಲಂಪೊೞ್ತುದರ್ ೪ಸೊಪೆ ಮೊ |
ಯ್ಯೊಳೆಯಜರತ್ವಂದಳೆದೆೞ್ದಂದದಿ |
ಜಲರುಹಸಖನಸ್ತಂಗತನಾಗಿ ಬ[illegible]ಕಮುದಯಂಗೆಯ್ದಂ ||೧೨

ಆರವಿಯುದಯದೊಳೆತ್ತಲ್ ಜಯಧರ |
ಣೀರಮಣೀಪತಿಯುಪ್ಪವಡಿಸಿ ನವ |
ನೀರರುಹೋಪಮವದನಂದೊಳೆದಭಿವಂದಿಸಿಯುಬವನನು ||

೩ ವಿಡಂಬಿಸಿ ಗ | ೪. ಸುಧಮಯ್ಯಾಸ ಗ||, ಸುಧೆಮೆಯ್ಯಾಸ ಕ||

ಭೀರುತೆಯಿಂದೆ ನವೋಸ್ತುಗಳಿಗೆ ಮನ |
ಮಾಙ್ಗೆ ಮಣಿದು ಮಾಣಿಕದೊಡವಿಂ ಶೃಂ |
ಗಾರಂಗೆಯ್ದಿರಲಿತ್ತನಕೀರ್ತಿಮಹೀಶನ ಸೇನೆಯೊಳು ||೧೩

ಸೂಱೆಯಿಸಲ್ ನಿಸ್ಸಾಳಮನದಱಾ |
ಭೀಳಧ್ವನಿ ಸರ್ವೋರ್ವೀತಳಮಂ |
ತಾಳಿದನಾನರನಾರಾಯಣನೊಱಗಿದ ಹಕ್ಕೆಯು ಪಾಪಾ ||
ಶೂಲಿಯು ಕಿವಿಯೊಳ್ ಮಾಡುವ ಫಣಿಗಳ |
ಕೇಳುವ ಕಿವಿ ಕೆತ್ತುವ ಕಾರಣದಿಂ |
ವ್ಯಾಲೀಕುಲಕೆ ನಿಜಶ್ರುತಿಶೂನ್ಯಂ ತಾನಂದಿಂತಾಯ್ತು ||೧೪

ಕೂರಸಿಯುಂ ¶ಮಸೆಯಿಪ ಗುಱಮಂ ಮದ |
ವಾರಣತತಿಗಿಕ್ಕುವ ತೇಜಿಗಳಂ |
ತೇರ ನೊಗಕೆ ಹೂಡುವ ಕುದುರೆಗೆ ಕುಱುಹಿನ ಸಂಜೋಗಗಳಂ ||
ಸೇರಿಸುತುಂ ನೂತನಸಂಗ್ರಾಮ |
ಪ್ರಾರಂಭದೊಳನಿತುಂ ಸಂಭ್ರಮದೊಳ್ |
ಬೀಱುತೆ ಮರುಳ್ಗೊಂಡಂದದಿನಾಲ್ದೆಱದತಿಬಲರೆಸಗಿದರು ||೧೫

ಪಾದುವವಧಾರು ಪೃಥಿವಿಪಾಲಕ ಪರ |
ರಾಯಭಯಂಕರ ವಿದಿತಪರಾಕ್ರಮಿ |
ಜೀಯ ಜಯಾಂಗನೆಗಧಿಪತಿಯಾಹವದಕ್ಷಿಣದಿಗಧೀಶಾ ||
ಆಯತವೆಂದೆನುತುಂ ಪ್ರತಿಹಾರನಿ |
ಕಾಯಂ ಚೆಚ್ಚರದಿಂ ಘೂರ್ಣಿಸಿದ |
ತ್ಯಾಯಿನಕೀರ್ತಿಮಹೀಶಂ ಧುರಂಧರೆಗೆಯ್ದುವ ಸಮುದಾಯದೊಳು ||೧೬

ಉರುಕಾಶ್ಮೀರ ಮಗಧ ಮಾಳವ ಗೂ |
ರ್ಜರ |ಗೌಡ ಮುರಸ್ಥಲ ಕೌಸಲ ಬ |
ರ್ಬರ ಭೋಟ ಮಹಾಭೋಟ ಕಳಿಂಗ ಸುರಮ್ಯ ಮಹಾರಾಷ್ಟ್ರ ||
ಮರಹಠ ಪಾಂಚಾಳಾಂಧ್ರ ದ್ರಾವಿಡ |
ವರಕೇರಳ ಕರ್ಣಾಟ ಜನಾಂತದ |
ಧರಣೀಶ್ವರರಾಯಿರಕರಕೀರ್ತಿಮಹಿಪನೊಡನಯ್ದಿದರು ||೧೭

---

¶. ಮಸಸುತ ಕ|| | ಗೌಳಮುರಸ್ಥರ. ಕ.| ಗ||

ದಿಕ್ಕರಿನಿಕುರುಂಬಮನುರುಮುದದಿಂ |
ಧಿಕ್ಕರಿಸುವ ಗಜಘಟೆ ಘನದೊಳ್ ಖುರ |
ವಿಕ್ಕುವ ವಿಕ್ಕ ಮಾನದ ತುರಗಂ ರವಿರಥಮಂ ಪರಿತದೊಳು ||
ಲೆಕ್ಕಂಗೊಳ್ಳದ ತೇರಂತಕನೊಳ |
ಗೆಕ್ಕೆಯೊಳಂ ಹೊಕ್ಕುಳಿಗೊಳ್ವೆನೆನಿ |
ಪ್ಪೆಕ್ಕತುಳದ ಭಟನಿವಹಂ ನಡೆದುದಿಳಾಧಿಪನಂ ಬಳಸಿ ||೧೮

ಜವನಂ ಜಕ್ಕುಲಿಸುವ ಹೆಮ್ಮಾರಿಯು |
ಹವಣಂ ನೋಡದೆ ಕೆಣಕುವ ಮಿಬ್ರುವ |
ನವಗಡಿಸುವ ಭೈರವನಂ ಬಲ್ಬೀರತೆಯಿಂ ದಟ್ಟಿಸುವ ||
ಬವರಕೆ ಬರಲೆನುತುಂ ಕಡೆಗಾಲದ |
ಭವನಲ್ಲಿಗೆ ಭಟ್ಟರನಟ್ಟುವ ಭಟ |
ನಿವಹಂ ನಡೆತಂದುದು ಬಲ್ಗಳಿನಕೀರ್ತಿಮಹಿಪನೊಡನೆ ||೧೯

ಕದನೋದ್ಧತರೆನಿಸುವ ಕಾಲಾಳ್ಗಳ |
ಕುದುರೆಯ ಕೂರಾನೆಯ ಭಟ¶ನಿವಹದ |
ಪದಹತಿಯಿಂ ಧರಿಸಿ ರಜೋಪಮರೂಪದಿನಂಬರತಳಮಂ ||
ಪುದಿದಾಪೃಥಿವೀತಳಮತಿಲಘುವಹ |
ಯದೊಡಾಪೆರ್ಬಲಭಾರಕೆ ತಲೆಮುಟ್ಟಿ |
ಯದೆ ಸುಮ್ಮನೆ ಮಾಣ್ದಪುದೇ ಭೂತಳಮಂ ಪೊತ್ತಹಿಪತಿಯು ||೨೦

ಈತೆಱದಿಂದೆಯ್ತಂದಾಹವಧರ |
ಣೀತಳದೊಳ್ ಮದಹಸ್ತಿರಥಾಶ್ವಪ |
ದಾತಿಯ ಮೂಜುಗಳಂ ನೆಲೆಗೊಳಿಸಿ ಭರತಸುತನಿರಲತ್ತ ||
ಆತೆಂಕಣದಿಗಧೀಶ್ವರನೆನೆ ವಿ |
ಖ್ಯಾತಪರಾಕ್ರಮಶಾಲಿ ಜಯಸ್ತ್ರೀ |
ಪ್ರೀತಿ†ಪದಂ ಜಯಭೂಪತಿ ರಣರಸಿಕಂ ಕದನಕೆ ನಡೆದಂ ||೨೧

ಭುವನಕ್ಕಾಶ್ಚರ್ಯಮೆನಿಪ್ಪೆಮ್ಮಾ |
ಹವಮಂ ನೋಡಲ್ ಬನ್ನಿಮೆನುತ್ತುಂ |
ದಿವಿಜೇಂದ್ರನುಮಂ ದಿಗಧೀಶರುಮಂ ದರ್ವೀಕರಪತಿಯುಂ ||

¶ ನಿಕರದ. ಕ||
† ವಿಟಂ ಕ||

ಹವಣಂ ಮಿಗೆ ಕರೆಯ†ಲ್ವೊಪಂದದಿ ।
ನವಿರಳವಾದ ಸಮರಸನ್ನಾಹದ ।
ವಿವಿಧಮಹಾಭೇರಿಯ ಬಲ್ದನಿ ಬಳಸಿತು ಮುಪ್ಪೊಡವಿಯನು ॥ ೨೨

ತ್ರಿಹುರಮನುರುಪಲ್ ತ್ರಿವಿಲೋಚನನಾ ।
ದ್ರುಹಿಣಚತುರ್ಭುಜರಾದಿಯ ಸುರಬಲ ।
ಸಹಿತಂ ದಿವ್ಯವರೂಥಮನಡರ್ದಯ್ದುವ ತೆಱದಿಂ ತನಗೆ ॥
ವಿಹಿತರ್ ವಿಜಯಜಯಂತಾನುಜರುಂ ।
ಬಹುಭೂಮೀಭುಜರುಂ ತನ್ನೊಡವರೆ ।
ಮಹಿಮಂ ಮಣಿದೇರೇಱಿ ರಣಕ್ರೀಡೆಗೆ ಕಡುಪಿಂ ಬಂದು ॥ ೨೩

ಸೆರಗಂ ಪಾರದ ಸೇನೆಗಳೆರಡಱ ।
ಪರಿಮಿಗಿಲಂ ನೋಡದ ತತ್ಕಾರ್ಯಂ ।
ಬೆರಗಹುದಲ್ಲೆನ್ನದ ಸಮರದ ಸಮಕಟ್ಟಂ ಸಮನಿಸದ ॥
ಹರಣದ ಬಿಯಕೊಂದಿ‡ನಿಸುಮನೆಣಿಸದ ।
ದೊರೆಗಲಿಗಳ್ ಬಿನದಕೆ ನಡೆವಂದದಿ ।
ಹರಿಸಂ ಮಿಗೆ ನಡೆತಂದರಿಳಾಧೀಶ್ವರನಂ ಮೂದಲಿಸಿ ॥ ೨೪

ಈವಿಧದಿಂ§ದಾವಿಕ್ರಮಕೌರವ ।
ದೇವಂ ಮುನ್ನೊಡ್ಡಿದ ರವಿಕೀರ್ತಿಮ ।
ಹೀವರನುದ್ಧತಚಕ್ರವ್ಯೂಹಮನಿದಿರೊಳ್ ಕಾಣುತವೆ ॥
ತೀವಿದ ಮುನಿಸಿಂದವೆ ಬೆಸಸಲ್ ಸೇ ।
ನಾವರರಿಕ್ಕಿದ ಪದ್ಮವ್ಯೂಹಂ ।
ಭೂವಲಯಕ್ಕದ್ಭುತಮಪ್ಪಂತೆಯುಗುರ್ವಂ ತಾಳ್ದುದು ॥ ೨೫

ತಳತಳಿಸುವ ತರವಾರಿಯ ಪೊಳಪುಗ ।
ಳೆಳಮಿಂಚವನಿಪರಿಕ್ಕಿದ ನುಣ್ಗೊಡ ।
ವೆಳಗಿಂದಿರವಿಲ್ ಭಟನಿಕುರುಂಬದ ಬೊಬ್ಬೆಯ ಕಲಕಲನೇ ॥
ಮೊೞಗು ಬಿಡುವ *ಬಿಱುಸರಲೆಱಗುವ ಸಿಡಿ ।
ಲೆಳೆಹೊಱದಾನೆಕುದುರೆಬಲುದೇರಾ ।
ಳ್ವಲವೊಡ್ಡಣಮೊಪ್ಪಿತು ಕಡೆಗಾಲದ ಮುಗಿಲೊಡ್ಡಣದಂತೆ ॥ ೨೬

---

†. ಲ್ಬರ್ಪಂದದಿ ಗ॥ ‡ ನಿಸಂ ಸೆಣಸದ ಗ॥ § ವಿಧು ಗ॥
*. ಬರಸಿಡಿಲೆ ಕ॥ ಗ॥

ಹೊಳಕೆಗೆ ಹೊಸವೀಳೆಯವೀಯೆಂಬ |
ಗ್ಗೞಿಕೆಯ ಪಂತದ ಪಲವಾತುಗಳಂ |
ಗಳಪುವ ಕುಱುಹಿನ ಸಂಜೋಗಗಳಂ ಕುಡವೇೞ್ಕುಡೆನೂಲಂ ||
ಘೞಿಲನೆ ಪಱಿವ ಸಲಂಬೇಡುವ ಭುಜ |
ಬಲಶಾಲಿಗಳುಗ್ರತೆಯಿನುಲಿವ ಕಲ |
ಕಲವುಭಯವ್ಯೂಹದ ದೂರದೊರೆಗಳ ಬಳಸಿನೊಳುಣ್ಮಿದುದು ||೨೭

ಪಡೆವಳರಾಕ್ಷಣದೊಳ್ ಕೈವೀಸಲ್ |
ಕಡೆಗಾಲದ ಪೂರ್ವಾಪರದಿಕ್ಕಿನ |
ಕಡಲೆರಡುಂ ಮೇರೆಯನುಲ್ಲಂಘಿಸಿ ಪಿರಿದುಂ ಘೂರ್ಣಿಸುತ ||
ನಡೆದು ಮಹೀತಳಮಧ್ಯದೊಳದಿರದೆ |
ಕಡುಪಿಂ ತಾಂಗುವ ತೆಱದಿಂದಾಬ |
ಲ್ಪಡೆಯೆರಡುಂ ತಾಂಗಿದುವಾರುಬಟೆಯಿನದ್ಭುತಮಪ್ಪಂತೆ ||೨೮

ಹಸಿದ ಪಿರಿಯಹುಲಿ ಹಸುವಿಂಡಂ ಕಡು |
ಮುಸಕದಿ ಹುಗುವಂದದಿ ಪಂಚಾಸ್ಯಂ |
ಪಸುಳೆವಿಡಿಯ ಪಿಂಡಂ ಕೆಕ್ಕಳಗೆಳರ್ದದಿರದೆ ಹುಗುವಂತೆ ||
ಅಸಹಾಯಪರಾಕ್ರಮದಾಹವರಾ |
ಕ್ಷಸರೆಸಿಪಗ್ಗದ ಭಟಸಂತತಿಯಿದಿ |
ರಸುಹೃದ್ಬಲಮಂ ಲೆಕ್ಕಂಗೊಳ್ಳದೆ ಹೊಕ್ಕಱಿದುದು ಭರದಿಂ ||೨೯

ಮಾಸತಿ ಮಾರುತಸಖಮುಖಕುಂಡಮ |
ನೋಸರಿಸದ ಪುಗುವಂತೆ ಪತಂಗಂ |
ಕೇಸುರಿಯೊಳ್ ಬೀೞ್ವಂತಸುವಿನದೊಂದಾಸೆಗ ಬಗೆಗೊಡದೆ ||
ಮಾಸದದಟಿನಿಂತತಿಭರದಿಂದ ಮ |
ಹಾಸೇನೆಯಗುರ್ವಂ ಕಾಣುತನೆಯು |
ದಾಸೀನದೆ ಹೊಕ್ಕಱಿದುದು ಭಟರೆವೆಹಳಚುವ ಸಮಯದೊಳು ||೩೦

ಎಕ್ಕೆಯೊಳೊಕ್ಕು ಪಳಂಚುವ ಪಾಂಗಿಂ |
ತಕ್ಕು ಮಿಗಲ್ಕೆಕ್ಕತುಳಂ ಪೊರ್ಕುಱಿ |
ಪೊಕ್ಕು ಕರಂ ಖಾಡಾಖಾಡಿಯೊಳುಱದಿಱಿದರ್ ತಮ್ಮೊಳಗೆ ||

†. ದರ್ಂದದಿ. ಗ|

ಲೆಕ್ಕಿಸದ¶ಸುವಱಿದಪುದೆನುತುಂ ದಶ |
ಲಕ್ಕಪಯಿಂಛಾಸಿರಶತಕೋಟಿಬ |
ಲೆಕ್ಕರೊರ್ವರನಿಸುವಱಿಕೆಯ ಸಾಸಿಗರಾ§ಸಮಯದೊಳು ||೩೧

ಕರುಳ್ಗಳೊಳನೂಂಕುತ್ತುಂ ಮೊಗದೊಳ್ |
ಸುರಿತಹ ಬಿಸುನೆತ್ತರನೊರಸುತ್ತುಂ |
ಕರವಾಳಿಂ ಮಿಗೆ ಪೊಯ್ಯಲ್ ಜೋಲ್ವ ತೊವಲನುತ್ತರಿಸುತ್ತುಂ ||
ಸರಲುಗಿಯಲು ಸರಿಗಣೆಯಂ ಮುಱಿಯುತ |
ಮರಳಿಮರಳಿಯಾಳ್ಗಳೊಳೊಡರ್ಚೆ |
ತ್ತರವಣೆಯಿಂ ಪಡಲಿಟ್ಟಂದದಿನುರುಳ್ದುದು ಭಟತತಿ ಭರದಿಂ ||೩೨

ಕಡಿಯಲ್ ಪಾಱುತ ಕೆಡೆವನ್ನೆಬರಂ |
ಬಿಡದಾರುವ ಬೀರರ ತಲೆಮಸಿಯಂ |
ಜಡಿಯುತ್ತುಂ ಕಿತ್ತಡಿಯಂ ನಡೆಯುತ್ತುರುಳ್ವಟ್ಟೆಯ ತಂಡಂ ||
ಮಡಿದುಂ ನುಂ ಪೆಣರ್ದರ ಮುಂದಲೆಯಂ |
ಪಿಡಿದು ಬಿಡದ ಸಾಸಿಗವೆಣದಿಂತಿಣಿ |
ಯೆಡೆವಿಡಿದತ್ತಲರ್ವಱಿಯೊಳ್ ನೋಡುವ ಸುರತತಿ ಪೊಗೞ್ವಂತೆ ||೩೩

ಪಡಲಿಟ್ಟಂದದಿ ಪಟುಭಟನಿವಹಂ |
ಕಡಿಕಂಡಮುಮಾಗುತ ಮುಂಗಡಿಯೊಳ್ |
ಕೆಡೆಯುತ್ತಿರೆ ಕಾಣುತೆ ಕೆಕ್ಕಳಗೆಳರ್ದಶ್ವಾರೋಹಕರು ||
ಕಡೆಯುವತ್ತರದ ಹರಿ ಬಹುರೂಪಂ |
ಪಡೆದು ಕರಂ ಕೆಂಗಣ್ಣಾಸಗುತ್ತುಂ |
ಕಡಹಿಂದೇಱುವ ತೆಱದಿಂ ರಾವುತರೇಱಿಯಿದಿರ್ಚಿದರು ||೩೪

ಈನೆಲನತಿಕರ್ಕಶತರವೆನುತನು |
ಮಾನಿಸದೇಱಿದಕಾಯಿತ್ತೆನುತ ಸಿ |
ದಾನಿಸದಾಮೋಹರಮಂ ಹೊಕ್ಕು ಹೊಱಡಲಳವಲ್ಲೆನುತ ||
ಆನದಯೀಯಸುವಱಿದಪುನೆನುತುಂ |
ಜಾನಿಸದತಿಸಂಭ್ರಮದಿಂ ಮಾಹಳಿ |
ಗಾನಂದದಿನೇಱುವವೊಲು ರಾಹುತರೇಱಿಪರತಿಭರದಿಂ ||೩೫

¶ ದಸ. ಗ|| § ಸಮರ. ಗ||

ಜೋಡ†ನೊಡೆದು ತಡೆಯದೆ ಬೆಂಗಡೆಯೊಳ್ |
$ಮೂಡಿದ ಬಲ್ಲೆಯದಿಂ ಬಲುಚಿಪ್ಪಂ |
ಜೋಡಿಸಿದಾಸೀಸಕಮಂ ಹಱಿದಾಶಿರಮನೆರಡ್ಕಂಡಂ ||
ಮಾಡುವ ಕೂರ್ವಾಳಿಂ ಮೆಯ್ಯಲುವಂ |
ಕೂಡೆ ಕೆದಱುಸುವ ಲೌಡಿಗಳಿಂದಂ |
ರೂಡಿಸಿದಶ್ವಾರೋಹಕಸಂತತಿಯುರುಳ್ದುದವನಿತಳಕೆ ||೨೬
ಆದಱಿಂ ಪೆಡಪಾಜಿನೊಳೊಟ್ಟೈಸಿದ |
ಮದಮಾತಂಗದ ಬಲ್ವಿಣಿಲೇಱಿದ |
ಕದನೋದ್ಧತಮಾನುಷರನಿಪಗ್ಗದ ಮಾವತಿಗರ'ಭರದಿಂ ||
ಕುದುರೆಗಳಾಮೋಹರದೊಳಗುಱಿಯುರು |
ಳ್ದುದನೀಕ್ಷಿಸುತಿನಿವಿರಿದುಂ ಕೋಪದಿ |
ನದಟು ಮಿಗಲ್ಕೇಱುವ ಹಾಣಾಹಣಿಯಿಂದ ನಿಮಿರ್ಚಿದರು ||೨೭

ಇರುಳೊಡ್ಡಿರುಳೊಡ್ಡಿನೊಳಸಿತೋದಧಿ |
ಯುರುವೀಚಿಗಳುಮುರುವೀಚಿಗಳೊಳು |
ಮೊರಡಿಗಳಾಬಲ್ಮೊರಡಿಗಳೊಳ್ ಕಡೆಗಾಲದ ಮುಗಿಲೊಡ್ಡು ||
ಭರದಿಂದಾಕಾಲದ ಕಾರ್ಮುಗಿಲೊಳ್ |
ಪಿರಿದುಂ ಮುಳಿದು ಪಳಂಚುವ ಪಾಂಗಿಂ |
ದೆರಡುಂ ಪವುಜಿನ ಪೇರಾನೆಯು ತಟ್ಟೇಱಿಯಿದಿರ್ಚಿ¶ದರು ||೨೮

ಪಿರಿದುಂ ಕೋಪಾಟೋಪದಿ ಸಗ್ಗದ |
ಪರಿವೃಢನಿಡೆ ಪವಿದಂಡದ ಹತಿಯಿಂ |
ದೆರಡುವೆಂಜಂಕೆ ಹಱಿದು ವಸುಧಾತಳದೊಳಗುರುಳುತ್ತಿರ್ಪ ||
ಧರಣೀಧರತತಿಯೆಂಬಂದದಿ ಪ |
ಕ್ಕರಿಕೆ ಹಱಿದು ರಣಗಹ್ವರಿಯೊಳಗಿರ |
ದುರುಳೆ ಕೆಡೆದ ಬಹುಮದಮಾತಂಗದ ಪಾಜು ವಿರಾಜಿಸಿತು ||೨೯

ಕಱಿಲೆವಿದಿರ ಕಾಡಂ ಕರ್ಮಾಟವಿಯು |
ಪಱಿವಂ ಮೊಗವಾಳಿಯು ಬಲ್ಗಾಡಂ |
ಪೆಳಗಸಕಿಲ ಬನವಂ ಜವನೋವದೆ ಕುಮ್ಮರಿ‡ಗಡಿವಂತ ||

---

†. ನುಗಿದು. ಕ|| $. ಕೂಡಿದ ಗ|| §. ತ. ಕ||ಗ||
¶ದುದು. ಗ|| ‡. ಗಱಿದಂತೆ ಗ||

ಕಳೆದ ರದಂ ಕಡಿದಿಕ್ಕಿದ ಸೊಂಡಿಲು |
ಪೊಳಚಿದ ಕಿವಿ ಕತ್ತರಿಸಿದ ಬಾಲಂ |
ಗಳಿನಾಬಲ್ಲಾನೆಯು ಬವರದ ನಲನತಿವಿಭ್ರಾಜಿಸಿತು ||೪೦

ಹತವಾದಾಯಿಭದೊಡ್ಡಣಮುಂ ಕಾ |
ಣುತ ಕಡುವಿರಿದುರುವಣೆಯಿಂದತಿರಥ |
ರತಿರಥರೊಳ್ ಸಾಹಸಯುತಸಮರಥರೊಡನಾಸಮರಥರು ||
ವಿತತಮಹಾರಥರೊಡನೆ ಮಹಾರಥ |
ರತುಳಪರಾಕ್ರಮದರ್ಧರಥರೊಳು |
ದ್ಧತಭುಜಬಲದರ್ಧರಥರ್ ಕೂಡಿ ಮುಸುಂಕಿ ಪಳಂಚಿದರು ||೪೧

ಸಾರಥಿಗಳ ಬೊಬ್ಬೆಯು ಚಕ್ರದ ಚೀ |
ತ್ಕಾರದ ನೊಗಕಿಕ್ಕಿದ ತೇಜಿಯು ಹೂಂ |
ಕಾರದ ದಿವ್ಯಶಿಳೀಮುಖಮುಂ ಬಡುವೆಡೆಯೊಳು ಶೋಭಿಸುವ ||
ನಾರಿಯು ಟಂಕಾರದ ರಥಿಕರ ಬಿಡ |
ದಾರುಬಟೆಯಿನೊದಱುವ ಮೂದಲೆಗಳ |
ಭೂರಿರವಂ ಧುರಧರಣೀಸತಿ ಜವನಂ ಪೊಗಳ್ವಂತಾಯ್ತು ||೪೨

ಕೆಲಬರ್ ಬಿನ್ನಣಿವಿಲ್ಲವರೆಚ್ಚಾ |
ಜಲಬಾಣಂ ನಳನಳಿಸುತ್ತಂಬರ |
ತಳದೊಳ್ ಪರಿಯುತ್ತಿರಲಾಯೆಡೆಯೊಳ್ ಕೆಲರುರವಣೆಯಿಂದ ||
ಬಲಿದೆಚ್ಚಾಕವಲಂಬಬಬರ ಪಂ |
ದಲೆಗೊಂಡದರೊಳಗುಚ್ಚಳಿಸುತ್ತಿರೆ |
ವಿಲಸದ್ಗಗನನದಿಯು ತಡಿಯರುಣಾಂಬುಜವನದಂತಾಯ್ತು ||೪೩

ಗಾವುದವುಯೊಳೆಲ್ಲಂ ತೀವಿತು ಶರ |
ಜಾಳಮುಱಿದ ಸಾಸಿಗರಸು ಸಗ್ಗಕೆ |
ದಾಳಿಡುವುದಱಿಂ ಸರಸೀರುಹಬಾಂಧವಮಂಡಲದೊಡಲು ||
ಜಾಳಾಂದರವ್ರೇದುದು ಸುರಲೋಕದ |
ಪಾೞೆಲ್ಲಂ ಮನೆಗಟ್ಟಿದುದಲ್ಲಿಯು |
ಲೋಲಾಕ್ಷಿಯರೆಲ್ಲಂ ಸಿಂಗರಿಸಿದರಾಬಲ್ಲವರದೊಳು ||೪೪

ಉಡಿದುಂ ನೊಗನನುಬದ್ಧಾಶ್ವಂಗಳ್ ।
ಮಡಿದುಂ ಮುಂದೇಱಿದ ಸಾರಥಿ ಹೊಡೆ ।
ಗೆಡೆದುಂ ಗಾಲಿಗಳಿರ್ಪ್ಪೋೞೊಡೆದುಂ ಕವಚಂಗಳ್ ಪಱಿದುಂ ॥
ಎಡಬಲದವರೞಿದುಂ ಬಲುಗಾಯಂ ।
ಬಡೆದುಂ ಬಿಡದೆ ಛಲಮನಾರಥಿಕರ್ ।
ಕಡುಗಲಿತನಮಂ †ಮೆಱೆದೆಚ್ಚಾಡಿದರಸು ಕಳವನ್ನೆವರಂ ॥೪೫

ಈಯಂದದಿ ನಾಲ್ಕೈದ ವರೂಥಿನಿ ।
ಕಾಯದ ಹಾಹೆ ನೊಗಂ ಮಡಪಿ ಚ ।
ಛಾಯಮನೋವದೆ ಕುಮ್ಮರಿಗಡಿದಂದದಿ ಬಿೞ್ ಕಾಣುತವೆ ॥
ಆಯತಿಯಿಂದರನೆಲೆಯೊಳ್ ನಲಸಿದ ।
ಜೇಯರೆನಿಪ ಜನತಾಧಿಪವಿತತಿ ಸಿ ।
ರಾಯಸದಿಂ ತಮ್ಮಯ ಚತುರಂಗಬಲಂ ೨ಸೇಱಿದರು ॥೪೬

ಅಂತಕಚಕ್ರೇಶ್ವರನಂತಃಪುರ ।
ಕಾಂತಾಜನದಡಿಯೂಡಲೆನುತ ಕಡು ।
ಸಂತಸದಿಂ ಧುರಧರಣೀ೩ಸತಿ ಪಲವಲತಗೆವಡಲವನು ॥
ತಾಂ ತಾಳಿದಳೆನಲಚ್ಛ ಮುಱಿದು ರಕು ।
ತಂ ತವೆ ಪೊರೆದು ಮಹಾರಥಚಕ್ರದ ।
ತಿಂತಿಣಿ ಬಿೞ್ದ ಕರಂ ಕಣ್ಗೊಪ್ಪಂಬಡೆದುದು ಪರಕಲಿಸಿ ॥೪೭

ಸುರಸಮಿತಿಯುಮಸುರವ್ರಜಮುಂ ಪಿರಿ ।
ದುರವಣೆಯಿಂ ಕಲಹಂಗೈವಂದದಿ ।
ನೆರಡುಂ ವಾಹಿನಿಯೊಳ್ ತಂತಮ್ಮಯ ಮೆಯ್ಗಾಪಿನೊಳಿರ್ಪರ್ ॥
ಉರುತರಭುಜಬಲಶಾಲಿಗಳೆನಿಪನು ।
ಚರವೇತಂಡ ತುರಗರಥಬಲಮಂ ।
ಭರದಿಂದೊಡವೆರಸಿ ಕರಂ ಕೋಪದಿನೇಱಿದರದಟಿಂದ ॥೪೮

ಬಂದು ಬಲಮನೊಂದು ಬಲಂ ನೂಂಕದೆ ।
ನಿಂದುಱದಿಱಿಯುತ್ತಿರೆ ಕಾಣುತುಮರ ।
ವಿಂದಸುಹೃತ್ಕೀರ್ತಿಯ ಪಕ್ಕದ ನಾನಾದೇಶಾಧಿಪರ ॥

---

†. ನೆಱೆ. ಕ॥ ೨ ಸೇಱಿದುದು. ಗ॥ ೩ ಪತಿ ಗ॥

ಗೊಂದಣಮತಿವೇಗದಿ ತಮ್ಮರವೆಸ |
ದಿಂದ ಕಱುತ್ತಾಜಯನೃಪಬಲಮಂ |
ಸಂದಣಿಸಿದ ಬಲವೆರಸಿ ಕರಂ ಮೂವಳಸಂ ಮುತ್ತಿದುದು ||೪೯

ಬಲೆಯೊಳ್ ಸಿಲ್ಕಿದ ಬಾಳೆಗಳೆನೆ ಕುರು |
ಬಲವೆಲ್ಲಂ ಬಾೞ್ವೆಡೆಗಾಣದೆ ಪಂ |
ಬಲಿಸುತ್ತಿರೆ ಜಯನನುಜರ್ ವಿಜಯಜಯಂತಕುಮಾರಕರು ||
ಕಲಿಗಳಕಂಪಸುತರ್ ಹೇಮಾಂಗದ |
ನಲಘುಪರಾಕ್ರಮಿ ರತ್ನಾಂಗದನು |
ಜ್ಜ್ವಲಸಾಹಸಿಗ ಸುಕೇತುವೆಸರ ಭೂಮೀಭುಜರೇಱಿದರು ||೫೦

ಅಂತೈವರು ವಿಕ್ರಮಶಾಲಿಗಳ |
ತ್ಯಂತಕುಪಿತಹುತವಹಮಾನಸರಿನಿ |
ಸಂತರಮಂ ಮಾಡದೆ ಕೆಂಗಣ್ಮಸಗುತ ನಗನಂದನೆಯು ||
ಕಾಂತನ ಪಂಚಮುಖದ ಮೇಂಗಣ್ಣೂರಿ |
ಯಿಂತೀಯಂದಮನನುಕರಿಸಿದುವೆಂ |
ಬಂತಿರೆಯುಗ್ರತೆಯಿಂ ಸಂಹರಿಸಿದರಸುಹೃದ್ವಾಹಿನಿಯ ||೫೧

ಬಡಿಯಿಂ ಬಹ್ವಾಮಲಕದ ಫಳಮಂ |
ಬಡಿಗೊಳಲುದಿರ್ವಂದದಿ ಬೀೞ್ತಿಹ ಬ |
†ಲ್ವಡೆಯಂ ಕಾಣುತ್ತುಂ §ತತ್ಕರಖರಕೀರ್ತಿ ಕುಮಾರಕನ ||
ಬಡನುಂಡೊಡನುಟ್ಟೊಡವೆರೆದಾಡು |
ತೊತ್ತಡವೆಳೆದೆಣ್ಬರ್ ಚಂದ್ರವೆಸರನುೞಿ |
ಪಡೆದುದ್ಧತವಿಕ್ರಮಿಗಳ್ ತಮ್ಮ ಬಲಂ ರಸೇಱಿದರು ||೫೨

ದಂಡಧರನ ಮದವೆಂಟೇರೂಪಂ |
ಕೊಂಡು ಕಡಂಗಿದುವೋ ಕಡೆಗಾಲದ |
ಖಂಡಪರಶುದೇವನ ಮಿಸುವೆಂಟುಂ ಮೂರ್ತಿಗಳಿಂತಪ್ಪ ||
ಗಂಡಂದಂಬಡೆದೆಯ್ದಿದುವೋ ಎನೆ |
ಚಂಡಪರಾಕ್ರಮದಷ್ಟಶಶಾಂಕರ್ |
ಭಂಡಣಮಂ ಪೊಕ್ಕಾನೃಪಪಂಚಕದೊಳಗೆ ಪಳಂಚಿದರು ||೫೩

---

†. ಬಲ್ವಡೆಯಿಂ. ಕ||     §. ತದ್ಭಟರಂಕರ. ಗ||

ಅವರ್ಬೈವರ್ ವಿಕ್ರಮಶಾಲಿಗಳೊಳ |
ಗವಿರಳವಾದಱಿಕೆಯ ಸಾಹಸಿಗರ್ |
ಬವರಂಬೊಕ್ಕುಬ್ಬೆಗವಂ ಮಾಡುತ್ತಿರೆ ಕೆಕ್ಕಳಗೆಳದರ್ ॥
ಜವದಿಂ ಬಂದಾಜಯಭೂನಾಥಂ |
ಜವನಂದದಿ ಬಂದತ್ಯುಗ್ರತೆಯಿಂ |
ಕವಲಂಬೊಂದೊಂದಱಿನಾಯೆಣ್ಬರ ತಲೆಯಂ ಪಱಿಯೆಚ್ಚಂ ॥ ೫೪

ನೆಲದೊಳ್ ನೆರಪಿಯುವರನಾಯೆಡೆಯೊಳ್ |
ನಿಲ[೧]ಲೊಲ್ಲದೆ ರಿಪುಭೂಪರನಿರ್ದರ |
ನೆಲೆಗೆ ರಥಮನದಿರದೆ ಮೊಗಮಾಡಿದ ವಿಕ್ರಮಕೌರವನ ॥
ಅಲಘುಪರಾಕ್ರಮಕಾಮುಕವಕ್ಕದ |
ಬಲಮೆಲ್ಲಂ ಬನ್ನಿೞ್ವರ್ಗನಲೆಯಿದ್ದುದ |
ಬಿಲದೊಳಗಣ[೨]ಬೆಳ್ಳಲಿವಿಂಡಿನವೊಲ್ [೩]ತಳಮಳಗೊಂಡತ್ತು ॥ ೫೫

ಪರಪುರಮಥನಂ ವಿಬುಧೋತ್ಕರಶಂ |
ಕರನಾಹವಸಮಯೋಗ್ರಂ ನುತಬಂ |
ಧುರರಾಜಶಿಖಾಮಣಿ ಭುವನೇಶ್ವರನನ್ಯಸ್ತ್ರೀಸ್ಥಾಣು ॥
ಅರಿಕಾಮಧ್ವಂಸಂ ವೃಷಚಿಹ್ನಂ |
ನಿರುತಂ ಭೂತಾಧಾರಂ ತಾನೆನೆ |
ಕರಮೆಸೆದಂ ರುದ್ರನ ತೆಱದಿಂದಾಪ್ರಭುಕುಲಮಣಿದೀಪಂ ॥ ೫೬

ಇದು ಸುರನರಫಣಿಪರಿವೃಢವಿನಮಿತ |
ವಿದಿತವಿನಯಗುಣಗಣಯುತಜಿನಪತಿ |
ಪದಸರಸಿಜಮದಮಧುಕರನತಿಚತುರಕಲಾಪರಿಪೂರ್ಣಂ ॥
ಸದಮಲಚರಿತಂ ಪ್ರಭುರಾಜಂ ಸಂ |
ಮುದದಿಂ ರಚಿಸಿದ ಜಯನೃಪಕಾವ್ಯದೊ |
ಳೊದವಿ ಮನೋಹರವಂ ಪಡೆದತ್ತಾಱನೆಯ ಮಿಸುಪ ಸಂಧಿ ॥ ೫೭

ಆಱನೆಯ ಸಂಧಿ ಸಂಪೂರ್ಣಂ.

---

೧. ವಿಲ್ಲದೆ. ಗ॥ ೨. ಬೆಳ್ಳರಿ. ಕ॥ ೩ ತಡಹೊಳ ಕ॥ಗ॥

# ಸಪ್ತಮ ಸಂಧಿ

**ಸೂಚನೆ** ॥ ಎಕ್ಕಟಿಗಾಳೆಗದೊಳಗಿನಕೀರ್ತಿಯ |
ನೆಕ್ಕತುಳದ ಭಟನಂ ಗೆಲ್ದು ರಣ |
ರಕ್ಕಸನೆನಿಸುವ ವಿಕ್ರಮಕೌರವಧರಣೀಪಾಲಕನು ॥

ರಣರಾಕ್ಷಸವಿಕ್ರಮಕೌರವನೃಪ |
ನಣಿಯುರವಂ ಪುಗುತರ್ಪಾಗೆ ದಣಿಂ |
ದಣರನೆ ಪೊಯ್ಯ ಮಹಾನಿಸ್ಸಾಣದ ಬಲ್ದನಿಯಂ ಕೇಳ್ದು ॥
ಎಣಿಸಿದರೆರ್ದೆಗೆಟ್ಟರ ಭಯಮುಕ್ತರ್ |
ಪೆಣನಾದರ್ ಪೆಂಪಱಿದರ್ ಜಗುಳ್ದರ್ |
ತಿಣಿದರ್ ತಕ್ಕಱಿದರ್ ಪರಪೃಥವೀಪಾಲಕಬಲದವರು ॥ ೧

ಅದೆಅದೆ ಬಂದಂ ಜಯಜಾಯಾಪತಿ |
ಯದಟರ ದೇವನೆನುತ ತಂತಮ್ಮೊಳ್ |
ಒದರ್ದರ್ ಪೆಕ್ಕಸವಟ್ಟರ್ ಬಿಂಕಂಗಿಡಿದರ್ ಜಕ್ಕಿದರು ॥
ಮದವಱಿದರ್ ಮಾತಾಡಲ್ ಮಱೆದರ್ |
ಕೆದರ್ದರ್ ಕೆಟ್ಟೋಡಿದರಡಿಯಿಡೆ ಮಱೆ |
ಪದಿರ್ದರ್ ಗರಪ್ರೊಯ್ದಂದದಿನಿರ್ದರ್ ಪರನೃಪಬಲದವರು ॥ ೨

ಮುಱಿದುದು ಮುಂ[1]ಗುಡಿಯೊಳಗಡ್ಡಣದಣಿ |
ಬಿಱುತೋಡಿತು ಬಿರುದಿನ ಬಲ್ಲಾ[2]ಳ್ವಡೆ |
ಪೆಱದೆಗೆದುದು ಸೇರಾನೆಯ ಪಾಜಱಿದುದು ತೇಜಿಯ ತಟ್ಟು ॥
ಕಱುಹಂಬಾಯ್ತು ಮಹಾರಥ[3]ರೊಡ್ಡಣ |
ಪುಱ್ಗಲಿ ವಿಕ್ರಮಕೌರವಭೂಪತಿ |
ತಱಿಸಂದಿಱಿಪಱಿತಕ್ಕಿನಕೀರ್ತಿಮಹೀಶನಸೇನೆಯೊಳು ॥ ೩

ಸೆಡೆದಂ ಸಿನ್ಧುಜನಗಿದಂ ಮಾಳವ |
ನಡಿವೆಗೆದಂ ಕೊಂಕಣ ವಂಗಾಧಿಪ |
ನೆಡೆಗೆಟ್ಟಂ ದ್ರಾವಿಡನುಯ್ದಂ ಪಾಂಚಾಳಂ ಮೆಯ್ದೆಗೆದಂ ॥

---

೧. ಗಡಿ. ಕ॥ ೨. ಳ್ವಡೆ ಗ॥ ೩. ದೊಡ್ಡಣ ಗ॥

ಪಡೆವೆಟ್ಟುದನಾಂಧ್ರಂ ಮಗಧಂ ಮಾಱ್ತೆ
ಗಡೆಗೆ ಜಗುೞ್ದಂ ಮರಹತನೞುಕೆಯು |
ಕಡುಗಲಿ ವಿಕ್ರಮಕೇರವನಾಹವಧರೆಯಂ ಪುಗಲೊಡನೆ ॥೪

ಅಲಘುಪರಾಕ್ರಮಿಯಭಿನವರಾಮಂ |
ಕಲಿಗಳ ಕುಲತಿಲಕಂ ಜಯಭೂಪತಿ |
ಚಲದಿಂ ದಿವ್ಯಶ್ರೀಮುಖನಂ ತಿರುವಾಯ್ಗಡೆ ಕಾಣುತವೆ ॥
ನೆಲ ಹೊೞ್ದಂತೊಡ್ಡಣದೊಳಗೊಡ್ಡಿದ |
ಪಲವರಿಧರಣೀಪಾಲಕಸೇನಾ |
ಜಲನಿಧಿಯೆನಸುಂ ಸುಗಿದದಿರುತ ಬೆಱತೋಡಿತು ಪೆಱಗಡೆಗೆ ॥೫

ಅಷ್ಟಶಶಾಂಕರನತಿಬಲರಂ ತನ |
ಗಿಷ್ಟರನೆಕ್ಕತುಳದ ಭಟರಂ ನೆಱೆ |
ನಷ್ಟಂಮಾಡಿ †ಪಿಶಾಚಾನೀಕಕ್ಕುಣಬಡಿಸುತ್ತವರ ॥
ತುಷ್ಟಿಬಡಿಸಿ ಮುಂದಕೆ ನಡತರ್ಪ ವಿ |
ಶಿಷ್ಟಪರಾಕ್ರಮಿ ಜಯಭೂವರನಂ |
ದುಷ್ಟಂ ಖರಕರಕೀರ್ತಿಕುಮಾರಂ ಕಾಣುತ್ತೀಱುವನು ॥೬

ಎನ್ನವರೆಣ್ಬರ ತಪ್ಪಿಂಗೆಲವೋ |
ನಿನ್ನಿರ್ವರ್ ತಮ್ಮಂದಿರ್ ನೀನುಂ |
ನಿನ್ನಯ ಭಾವಂದಿರ್ ಮೂವರು ಸಹಿತಾಜಿಕಾರ್ಗೞುಗುಡು ॥
ಇನ್ನಿರ್ವರ ಸರಿ ನೆಪ್ಪಿನ ಸಪ್ಪಂ |
ನಿನ್ನ ಭವಿಷ್ಯಜ್ಜನ್ಮಕೆ ತೀರ್ವನು |
ತುನ್ನತಿಕೆಯ ಮುನಿಸಿಂದೆೞ್ಚಂ ಜಯನೃಪತಿಯನಿನಕೀರ್ತಿ ॥೭

ತಂತಮ್ಮಯ ಮೊಯ್ಗಾಪಿನ ಹಯಭಟ |
ದಂತಿವರೂಥವ್ಯೂಹವನಾಬಲ |
ವಂತನರೇಶ್ವರರಂ ಕಯ್ದುತ್ತದೆ ನಿರ್ನೆರವಿರಿಯೆನುತ ॥
ಪಿಂತ ‡ನಿಱಿಸಿ ಪಿರಿದುಂ ಕೋಪಾಗ್ನಿ |
ಸ್ವಾಂತರ್ ಸತ್ಪಾಟಕರುದ್ಧತಶರ |
ಸಂತತಿಯಿಂದೆಡೆವಿಡದೆಚ್ಚಾಡಿದರರದಟಂದಾನೃಪರು ॥೮

†. ಪಿಶಾಚರನಿಕರ. ಗ॥ ‡ ನೆಲಸಿ ಗ॥

ಅರಸಾ ನಿನ್ನ ಸುಹೃದ್ಭ್ರವರಜಯ |
ತರುಣಿಯವಗೆ ನಿಡುನಿದ್ದೆಯನೊಡವಿಸಿ |
ಭರದಿಂ ಬರ್ಪೆನೆನುತುಮೆನ್ನಂ ನಿನ್ನೆಡೆಗಟ್ಟಿದಳೆನುತ ||
ಪಿರಿದುಂ ಪಚ್ಚನುಡಿವ ತೆಱದಿಂ ಜಯ |
ನೃಪಾಲಕನಾಕರ್ಣಾಂತಂ ತೆಗೆ |
ದುರುಕೋದಂಡದ ನಾರಿ ಶರಂ ಕರ್ಣಗ್ಗಡ್ಡವಡೆದುದಾಗ ||೯

ಕಡುಪಿಂದೋರೊರ್ವರನಿಸುವೆಸುಗೆಯ |
ನಿಡಿಯಂಬಿನ ಮೊನೆಯೊಂದನದೊಂದಾ |
ನಡುವಳಿಯೊಳ್ ತಾಂಗಲೊಡಂ ಹುಟ್ಟಿದ ಹೊಂಗಿಡಿ ಮತ್ತಮರ ||
ಒಡಲೊಳ್ ಪುಟ್ಟಿದ ಕೋಪಾನಲನಾ |
ಯೆಡೆಯೊಳ್ ಮುಂದುವರಿದು ತನ್ಮಧ್ಯದೊ |
ಳಡಸಿ ಪಳಂಚುವ ಪಾಂಗಿಂ ಕಣ್ಗೆ ಮನೋಹರಮಾದತ್ತು ||೧೦

ನೀಡದೆ ಮೂಡಿಗೆಯಿಂ ಕೈಗೊದಗುವ |
ಹೂಡದ ಮುನ್ನಮೆ ತಿರುವಾಯ್ಗೇಱುವ |
ಜೋಡಿಸಿ ತೆಗೆಯದ ಮುನ್ನಮೆ ಕೆನ್ನೆಗೆ ಬರ್ಪಿದಿರಾದವರ ||
ನೋಡಿಯಿಸದ ಮುನ್ನಾದಸೆಗೋವದೆ |
ನೀಡುಂ ಪರಿವ ಮಹಾದಿವ್ಯಶರಂ |
ರೂಡಿಸಿದತಿಬಲಜಯಭೂಮೀಭುಜನೆಸುಗೆಯೊಳೊಪ್ಪಿದುದು ||೧೧

ನೊಂದೆಚ್ಚಂಬಿನ ಪುಳುಕಂ ಹಿಡಿದ |
ತ್ತೊಂದುಶರಂ ಗಱಿಯುಮಂ ಸೋಂಕಿತು ಮ |
ತ್ತೊಂದುಶರಂ ಪರಿಗಣೆಗೆಯ್ದಿತು ಮೇಣೊಂದು ಶರಂ ಸಮಕೆ ||
ಬಂದುದು ಬಳಿಕಮದೊಂದು ಶರಂ ಖಲು |
ಹಿಂಗಂ ಪಿಂತುಱಿಪಿದುದೊಂದು ಶರಂ |
ಮೊಂದೇತರವಿಕ್ರಮಿಗಳ ಬಿನ್ನಣದೆಸುಗೆಯನೇನೆಂಬಂ ||೧೨

ಈಯಂದದಿ ಕೆಲಪೊೞ್ತುಚ್ಚಾಡಿಯ |
ಜೇಯರತುಳವಿಕ್ರಮಿಗಳ್ ವಿಜಯ |
ಶ್ರೀಯುತರಕ್ಕಟಗಾಳೆಗದೊಳ್ ಕಡುಮುನಿಸುದಳೆದು ಬಳಿಕ ||

ಆಯೆರಡುಂ ಬಲವಮದಿರಲ್ ವಿದ್ಯಾ |
ಸಾಯಕಮಂ ತೊಟ್ಟೆಚ್ಚಾಡುವೆನೆನು |
ತಾಯತಮಾದರ್ ಮೇಲಣ ಸುರತತಿಯುಕ್ಕದಗೊಂಬಂತೆ ||೧೩

ಒರ್ವಂ ಶರಧಿಶರದಿನಿಸಲೊರ್ವನು |
ಮೌರ್ವಾನಲಬಾಣದಿನಿಸಲೊರ್ವಂ |
ದರ್ವೀಕರಬಾಣದಿನಿಸಲೊರ್ವಂ ಗರುಡಾಸ್ತ್ರದಿನಿಸಲು ||
ಒರ್ವಂ ಶಿಖಿವಿಶಿಖದಿನಿಸಲಂತದ |
ನೊರ್ವಂ ವರ್ಷೇಷುವಿನಿಂದಿಸುತಮ |
ಗುರ್ವಿಂದುಜದ ತಮುತ್ತಿರ್ವರ್ ಶುಱುಲಾಳ್ಗಳ್ ಕಾದಿದರು ||೧೪

ಒರ್ವಂ ಗಜಬಾಣದಿನಿಸಲಂತವ |
ನೊರ್ವಂ ಕೇಸರಿಬಾಣದಿನಿಸಲದ |
ನೊರ್ವಂ ಮಸಿದಷ್ಟಾಪದಮಾರ್ಗಣದಿಂದಿಸಲಂತದನು ||
ಒರ್ವಂ ಭೇರುಂಡಾಸ್ತ್ರದಿನಿಸುತಾ |
ಯಿರ್ವರ್ ಸಮಸಾಹಸಿಗರ್ ನೋಡುವ |
ರಿರ್ವಡೆಯೊಲ್ಲಂ ಕಡುಪಿಂ ಕೊಂಡಾಡುವಿನಂ ಕಾದಿದರು ||೧೫

ಆರಾತಿಯನೃಪಪ್ಪವರರೊಳಗಿವರಂ |
ತಾರೆಸಕದ ಸಾಸಿಗರಾರ್ ತುಱುಲಾ |
ಳಾರಗ್ಗದಭಂಟರ್ ತೋಳ್ವಲದವರಾರ್ ಕಲಿಗಳದಾರು ||
ಆರದಟರ್ ಕೂರಿದರಾರ್ ಬೀರರ |
ದಾರೆನುತುಂ ಬಿತ್ತರಿಸಿ ಪೊಗಳ್ದುದು |
ಮಾರುತಪಥದೊಳ್ ನೋೞ್ಪ ಮರುದ್ಗಣಮಾನೃಪತುಂಗರನು ||೧೬

ಅನಿತಱೊಳಾರವಿಕೀರ್ತಿನೃಪಂ ಕಡು |
ಮುನಿಸಿಂ †ಕರ್ಗಲ್ತ್ತಲೆಯುಂ ಕಾಱುವ |
ಘನಮಾರ್ಗಣಮಂ ಬಿಡುವೆನೆನುತ ತಿರುವಾಯ್ಗಿಡುವನಿತಱೊಳು ||
ಮಿನುಗುವ ದೆಸೆಯೊಣ್ಟ್ಲುಂ ಕಾಳೋದಕ |
ವನನಿಧಿಯುವಗವಿಸಿದ ತೇಜನಾದ |
ತ್ತಿನಬಿಂಬಂ ತತ್ಸ್ಸತೆ ಜಗುನೆಯುನಮರ್ದಪ್ಪಿದ ತೇಜನಾಯ್ತು ||೧೭

§. ಬಲ· ಕ||    †· ಕಳ್ಗತ್ತಲೆ· ಕ|| ಗ||

ಇಂತಿದು ದೆಸೆಯಿಂತಿದು ಭೂಮೀತಳ |
ಮಿಂತಿದು ಬಾನಿಂತಿದು ಪರವಾಹಿನಿ |
ಯಿಂತಿದು ನಮ್ಮ ಕಡೆಯ ಬಲಮಿಂತಿದು ರಥಮಿಂತಿದು ಹಸ್ತಿ ||
ಇಂತಿದು ಹಯಮಿಂತಿದು ಬಿಲ್ಕೋಲಸಿ |
ಯಿಂತಿದೆನುತ ಭೇದಿಸಬಾರದ ಬಹು |
ಚಿಂತೆಯೊಳಿರ್ದತ್ತೆರಡು ಬಲಂ ತಚ್ಛರಮಂ ಬಿಡಲೊಡನೆ ||೧೮

ಈತೆಱದಿಂ ಕೃತ್ರಿಮತಮಮಾಹವ |
ಭೂತಲಮಂ ತೀವಲ್ಕದನೀಕ್ಷಿಸಿ |
ಭೂತಪ್ರೇತಪಿಶಾಚಗ್ರಹರಾಕ್ಷಸಭೇತಾಳತತಿ ||
ಓತು ನೆರೆದ ಬಿನದಂಗಾಣುತ ವಿ |
ಖ್ಯಾತಂ ಜಯಭೂನಾಥಂ ಪ್ರತಿವಿ |
ದ್ಯಾತೋಮರಮಂ ಬಿಡಲೊಲ್ಲದೆ ನೋಡಿದನೊಂದರೆಗಳಿಗೆ ||೧೯

ಮಾರಿಯ ಮನೆಬಿಯ್ಯದ ಕಣಜಂ ಮ |
ತ್ತಾರಾಜಕೃತಾಂತನ ಬಳಕೆಯ ಭಂ |
ಡಾರಂ ಮೃತ್ಯುಮಹಾದೇವತೆಯುಗ್ರಾಣಮಗುರ್ವಿಸುವ ||
ಭೂರಿ ಪಿಶಾಚಗ್ರಹಭೇತಾಳಗ |
ಳಾರೋಗಣೆಯ ಗೃಹಂ ತಾವೆನಲಾ |
ದಾರುಣತರಸಂಗ್ರಾಮಧರಾತಳಮತಿಭೀಕರಮಾಯ್ತು ||೨೦

ಅರುಣೋದಕಮವಿರಳಮಾಗಿ ಕರಂ |
ಪರಕಲಿಸಿದ ಕಿನ್ನೆಲದೊಳಗೇಱಿಂ |
ದುರುಳ್ದ ಸಮಸ್ತಮಹಾರಥತುರಗಪದಾತಿಮತಂಗಮದ ||
ಅರಮಕ್ಕಳ ತಿಂತಿಣಿಯಿಂದಾಧಾರ |
ಧರಣಿತಳಂ ಪೋಲ್ತುದು ಬಹುಚಿತ್ರಂ |
ಬರೆದುವಿರಾಜಿಪ ಪಟಮಂ ಪಾಸಿದ ಪರಿಯಂ ಪೊಸಯಿಸು§ತ ||೨೧

ಮತ್ತಮತಂಗಮದಂಗದೊಳೊಜ್ಜರಿ |
ಸುತ್ತ ನೆಲಕೆ ಜಲ್ಲಿಱಿದುಗುತಹ ಬಿಸು |
ನೆತ್ತರಪೊನಲೆಸೆದುದು ಕಳದಿಕ್ಕದ $ನಿಡುಗಣ್ಬಾಳೆಗಳಿಂ ||

§. ವ. ಗ||  $. ನಿಜ. ಗ||

ಬಿತ್ತರವಾದ ಕಡೆಯು ಕುಲಶಿಖರಿಯು ।
ತುತ್ತತುದಿಯೊಳುದಯಿಸಿ ನೆಲಗಾಡಂ ।
ಪತ್ತಿ ಪರಿವ ರಕ್ತೋದವೆಸರ ನದಿಯುಂದಮನನುಕರಿಸಿ ॥ ೨೦

ಹರಿಸದಿನಂತಕನೃಪತಿ ನಿಜಾಂತಃ ।
ಪುರವನಿತಾತತಿಸಹಿತಂ ಕ್ರೀಡಿಪ ।
ವರನಂದನಮುಂ ನಃನಾಕರಮುಂ ಮಿಗೆ ಸೊಗಯಿಸುವಂತೆ ॥
ಉರುತರಪತ್ರಶಿಳೀಮುಖಖಳ್ಗ¶ಮುಂ ।
ಮರುಣಕುವಲಯಕಬಂಧರಥಾಂಗದಿ ।
ಪಿರಿದುಂ ಕಣ್ಗೆ ಮನೋಹರಮಂ ಪಡೆದುದು ಸಂಗರಧರಣಿ ॥ ೨೧

ಗುಡಿಯುಂ ಪೊಯ್ದಾನೆಯು ಪೊಂದೊವಲಿಂ ।
ದುಡಿದ ಪತಾಕಾಪಟಸಂತತಿಯಿಂ ।
ದೆಡೆವಱಿಯದ ಸರವತಿಯಂ ಬಿಟ್ಟು ಕೆಡೆದ§ ಭಲ್ಲೆಯುಮಿಟ್ಟ ॥
ಗಡೆಗಳನೋವದ ಗೇರೆಯುಮಂ ಕೆ ।
ತ್ತಡಸಿ ಕರಂ ಬೆಟ್ಟಿತು ಭೂತಂಗಳ ।
ಗಡಣದ ಪಾಳೆಯುಮಾದಾರುಣಮಪ್ಪಾಹವಧರಣಿಯೊಳು ॥ ೨೨

ಅಡದಿಂದರುಣಜಲಂಗುಡಿದೆಲುವಂ ।
ಕಡಿದು ಮಿದುಳನುಂಡೊಣನರಮಂ ಶಾ ।
ರ್ದಡಸಿ ನೊಣೆದು ನೆಣನಂ ಪಿತ್ತಮನುೞ್ ಪೀರ್ದು ಕರುಳ†ನುಗಿದು ॥
ಸುಡುಬಾಡಂ ಸುಟ್ಟಸುಂಟಗೆಯುಂ ।
ತಡೆಯದೆ ಮೆಲ್ದು ತೊರಳೆಯುಂ $ದಪ್ಪಿಱಿ ।
ದುಡಿದುದಿಱಿದ ಪಲ್ಲಂ ಮುಕ್ಕುವ ಮರುಳೊಪ್ಪಿದುವಂತಲ್ಲಿ ॥ ೨೩

ನಲಿವ ಮರುಳ್ ನಗುವ ಮರುಳ್ ಕೆಕ್ಕಸ ।
ಗೆಲೆವ ಮರುಳ್ ಕೈಪಱಿಗುಟ್ಟುವ ಮರು ।
ಳುಲಿವ ಮರುಳ್ ಕುಣಿವಮರುಳ್ ಕೊಬ್ಬಿಱಿವಮರುಳ್ ಮಿದುಳುಂಡು ॥
ಮಲೆವ ಮರುಳ್ ಮುಮ್ಮುಱಿವ ಮರುಳ್ ತಲೆ ।
ಯೊಲೆವ ಮರುಳ್ ಸೊರ್ಕುವ ಮರುಳರದಂ ।
ಡಲೆವ ಮರುಳ್ಕೂಱಚುವ ಮರುಳೊಪ್ಪಿದುವಾಧುರಧರಣಿಯೊಳು ॥ ೨೪

---

¶. ಯು । ಗರುಣ ಗ॥ಕ॥ §. ಚೆಲ್ಲನಮಿಂಟೆ. ಗ॥
†. ನಗಿದು. ಗ॥ $ ಚಪ್ಪರ. ಗ॥

ಕಕ್ಕಳಗಳ್ ಕೆದಱಿದ ಕೆಂಗೂದಲ್ |
ಮೊಕ್ಕನೊಸಲ್ ¶ನಿಡುಕುಂಗೋಱ್ ಬಿಡುಬಾ |
ಯುಕ್ಕಿಸಿದ ಪಾಬ್ಬಸಿಱಿಡೆ$ಮುಟ್ಟಿಜ ಬಲ್ಗೊಂಡಿಱಿದ ಮೊಲೆ ||
ಮುಕ್ಕುಱಿವಲ್ ಮುದಮೊಗ ನೀಡುಂದೋ |
†ಕಿಕ್ಕಲವಂ ಪೊದನೆಯ್ಯೊಳಸೆವ ಪಲ |
ರಕ್ಕಸಿಯರ ತಂಡಂ ನಡೆತಂದುದು ತದ್ಪುರಧರಣಿಯೊಳು ||೨೭

ಮೊದಲೆ ಮೋಹರದೊಳ್ ಮಣ್ಮುಟುಗೊಂ |
ಡದಟರರಸುಮಕ್ಕಳ ಹೆಟ್ಟುಗೆಯರ್ |
ಮುದದಿಂ §ತೋಳ್ಗಡೆ ಬೇವ ಪಲವು ಕುಂಡಂ ಕಣ್ಗೊಪ್ಪಿದುವು ||
ಕದನವಿಜಯಜಯಭೂರಮಣನ ಜಯ |
ಸುದತಿಯ ನವಮಾಂಗಲ್ಯವಿಧಿಯೊಳಿರ |
ದೊದವಿದ ಹೋಮಾನಲಕುಂಡದ ಭಂಗಿಯುಮಂ ನೆನೆಯಿಸುತ ||೨೮

ಬಂದ ಮಹಾಸಾಹಸಿಗಂಗತ್ಯಾ |
ನಂದದಿ ನಿಱಿನಿಂಬೆಯ ತನಿವಣ್ಣಂ |
ತಂದು ಕುಡುವೆನನುತುಂ ತತ್ಕುಂಡೋದರದಿಂ ಪೊಱಮಡುವ ||
ಮಂದಗಮನೆಯೊರ್ವಳ್ ಮಾಸತಿ ಬಗೆ |
ವಂದು ವಿರಾಜಿಸಿದಳ್ ದ್ರುಪದೇಶ್ವರ |
ನಂದನೆಯುಗ್ರಿಮುಖದೊಳುದಯಿಸಿ ಪೊಱಮಡುವಿರವಂ ಪೋಲ್ತು ||೨೯

ಕಡುಬಿನದದಿನೊಂದು ಮರುಳ್ †ಶಬದಿರ |
ವಡೆದು ನೆಲದೊಳುರುಳ್ದಿರಲದನೀಕ್ಷಿಸಿ |
ದಡಿಗಮರುಳ್ ಮತ್ತೊಂದದು ನಿಜದಿಂ ಪೆಣನೆನುತವೆ ಬಂದು ||
ಅಡಸಿ ಪಿಡಿದು ನುಣ್ಣನೆ ನುಂಗಲ್ಕದ |
ಱೊಡಲಂ ಬಗಿದಾರುತ ಮೇಲಕೆ ಪೊಱ |
ಮಡುವಂದಂ ಪೋಲ್ತುದು ಆನಂದಿನ ಮಾತಃಪಿಯ ತೆಱದಿಂ ||೩೦

ಬಂದು *ಪೆಣಮರ್ಬುಗವಡೆದು ಬಿ |
ಲ್ದೊಂದೆಡೆಯೊಳಗಿರಲಾಯಿ-ಪೊಱಱಿಂ |
ಸಂದಿಸಿ ಮತ್ತಮದೊಂದು ಪೆಣನುಮಂ ತಂದೆರಡಱ ಕೈಗೆ ||

---

¶. ನೆನುಕುಂ ಗ|| $ ಮುಟ್ಟೈಜ ಗ|| †. ಕಿಕ್ಕಲವಂಣದ ಗ||
§. ತೋಳ್ಗೊಡೆ ಗ|| †. ಶಂದಿರ ಗ|| * ಪೆಣಂದಿರ್ಬುಗೆ. ಕ||

ಬಂದೊಂದಸಿಯುಂ ಕೊಟ್ಟು ವಿನೋದದಿ |
ನೊಂದು ಮರುಳ್ ಕಡುಪಿಂ ಕಾದಿಸುತಿ |
ರ್ಪಂದಂ ಪೋಲ್ತುದು ಭೀಮಜರಾಸಂಧರ ಸಮರದಸೊಬಗಂ ||೩೧

ಬಾಕುಳಿತನದಿಂ ಬಳಸಿ ನಿರೀಕ್ಷಿಪ |
ಶಾಕಿನಿಡಾಕಿನಿಭೂತಪ್ರೇತಾ |
ನೀಕದ ಕಣ್ಣೇಱಂದಿನಿವಿರಿದುಂ ತಿಂದಿನಿಸಳ್ಕಸದೆ ||
ಓಕರಿಸುವ ಬೇತಾಳನ ಬಾಯಿಂ |
ದಾಕುರುಳೋವದೆ ಸುರಿದುದು ಶುಷ್ಕಾ |
ನೋಕಹಕೋಟರದಿಂ ಪೊಱಮಡುವಹಿತತಿಯೆಂಬಂದದೊಳು ||೩೨

ಇಂತಪ್ಪದ್ಭುತಮಂ ತೋರ್ಪಸುರರ |
ಸಂತತಿಯುಂ ಮುಂ ತೀವಿದ ಕೃತಕ |
ಧ್ವಾಂತಮುಮಾಜಯಭೂಪತಿ ದಿನಕರ‡ಶರಮಂ ಬಿಡಲೊಡನೆ ||
ತಾಂ ತೆಕ್ಕನೆ ಪರೆದತ್ತು ಸರಾಗದಿ |
ನಂತಕಸಿದ್ಧಂ ತತ್ಸೇನೆಗೆ ಚದು |
ರಿಂ ತವೆ ತೋಱುವ ಹರಿವೋಬಲೆಯೆಂಬಾವಿದ್ಯೆಯು ತೇಜದಿಂ ||೩೩

ಆರವಿಮಾರ್ಗಣಮಂ ಬಿಟ್ಟಾಜಯ |
ಭೂರಮಣನ ತೇರುಂ ಕುದುರೆಯುಮಾ |
ಸಾರಥಿಯುಂ ಕೈವಿಡಿದ ಶರಾಸನಮುಂ ಖಂಡಿಸುವಂತೆ ||
ವೀರಂ ರವಿಕೀರ್ತಿಮಹೀಪಾಲಕ |
ನಾರುತ್ತಿಸೆ ಭರದಿಂ ಮತ್ತೊಂದು ಮ |
ಹಾರಥಮಂ ಜೋಡಿಸಿ§ಯೋಱದನೆವೆಹಳಚುವ ಸಮಯದೊಳು ||೩೪

ಕಡುಗಲಿ ವಿಕ್ರಮಕೌರವಭೂವರ |
ನಡಸಿ ಮುನಿದು ಮಗುಳ್ದಿಚ್ಛೆ ಶಿಲೀಮುಖ |
ವೊಡನೆ ಪರಿದು ಯುಗಬದ್ಧಾಶ್ವಮನೊಂದಂ ತತ್ಸಾರಥಿಯು ||
ತೊಡೆಯಂ ತದ್ರಥಚಕ್ರಮನೊಂದಂ |
ಕಡಿಯಲ್ಕಾರವಿಕೀರ್ತಿನೃಪಂ ಪಡು |
ಗಡೆ ಗತತೇಜಂಬಡೆದ ಪಗಲ ಬಲ್ಲಹನಂದದೊಳಿರ್ದಂ ||೩೫

‡ ನಂಬಂ ಕ||   § ನೇರಿದ. ಖ||

ಪುನರಪಿ ಮಾರ್ಗಣಮಂ ತಿರುವಾಯ್ಗಿಡು |
ವನಿತಱೊಳೊಂದು ಮಹಾರಥಮಂ ತೊ |
ಟ್ಟನೆ ಜೋಡಿಸಿಯುಡದಾರ್ರವಿಕೀರ್ತಿನೃಪಂ ಕೆಕ್ಕಳಗೆಳರ್ದು ॥
ಅನಿಮಿಷರಾಗಗನಾಂಗಣದೊಳ್ ಪೊಗ |
ೞ್ವಿನೆಗಂ ಮಗುೞ್ದುರವಣೆಯಿಂದಿಸೆ ಕಡು |
ಮುನಿಸಿಂ ಜಯಧರಣೀಪತಿ ಪನ್ನಗಶರದಿಂ ತೆಗೆದೆಚ್ಚಂ ॥ ೩೬

ಪೆಡೆ ತತ್ಪಾಣಿತಳಂ ಮಸ್ತಕಮಣಿ |
ನಡುವೆರಲೊಳ್ ಮಿಗೆ ರಾಜಿಸುವೂರ್ಮಿಕೆ |
ನಿಡುಸುಯ್ಯೊಳ್ ಪುಟ್ಟಿದ ಹಾಲಾಹಲದೊಳ್ಳುರಿಯಂತಲ್ಲಿ ॥
ಅಡಸಿದ ಕಿಚ್ಚಿನಲಾಫಣಿಬಾಣಂ |
ಪೊಡವಿಯನೆಲ್ಲಮನುರುಪುವೆನೆನುತಂ |
ಕಡುಮಸಗಿದ ಭಸ್ಮಾಸುರಹಸ್ತದ ತೆಱದಿನಗುರ್ವಿಸಿತು ॥ ೩೭

ನಿಟ್ಟಪರೆವೆ ಸೀವಂದದಿ ತನ್ನಂ |
ಸುಟ್ಟುಂದೋಱುವ ಬೆರಲುಡಿವಂದದೆ |
ದಿಟ್ಟಂ ವಿಕ್ರಮಕೌರವನೆಚ್ಚ ಮಹಾಫಣಿನಾರಾಚಂ ॥
† ಅಟ್ಟಿ ಪಱಿದು ಪಿರಿದುಂ ಘುಡಿಘುಡಿಸುತ |
ತೊಟ್ಟನೆ ರವಿಕೀರ್ತಿಯನಂದಡರಿತು |
ಕಟ್ಟಾಸುರದಿಂ ಬಂದು ವಿಧುಂತುದನಿನನಂ ಪಿಡಿವಂತೆ ॥ ೩೮

ಪಿರಿದುಂ ಕೋಪಾಟೋಪದಿನಾಫಣಿ |
ಶರವೋವದೆ ಬಂದಡರಲ್ ಕಾಣುತ |
ಖರಕರಕೀರ್ತಿಕುಮಾರಂ ಬೇಗದಿ ಗರುಡಶಿಳೀಮುಖಕೆ ॥
ಕರಮಂ ನೀಡಲನಿಲನಂದನನಂ |
ಭರದಿಂ ಪಿಡಿದ ನಹುಷನಜಮಗನಂ |
ಕರಮೆ ನಿರೀಕ್ಷಿಸಿ ಬಿಡುವಂದದಿ ಬಿಟ್ಟುದು ತದ್ವೇಳೆಯೊಳು ॥ ೩೯

ಉರಗಶಿಳೀಮುಖಮಂ ಕೆಟ್ಟೋಡಿಸಿ |
ಖರಕರಕೀರ್ತಿಕುಮಾರಕನೆಚ್ಚಾ |
ಗರುಡಾಸ್ತ್ರಂ ಬಲುಸಿಡಿಲ ತನುಗೆ ಗಱಿ ಮೂಡಿದ ಮಾಳ್ಕೆಯೊಳು ॥

---

† [illegible]

ಪಿರಿದುಂ ಘೂರ್ಣಿಸುತಿರ್ದುರೆ ಕಂಡುರು ।
ತರಕೋಪದಿ ವಿಕ್ರಮಕಾರವಭೂ ।
ವರನಿಸಲೆನುತವೆ ಲಯಕಾಲಾಗ್ನಿಶರಕೆ ಕೈನೀಡಿದನು ॥೪೦

ಮೂಡಿಗೆಯಂಬಿನ ಹಿಳುಕಿಗೆ ಕೈಯಂ ।
ನೀಡಲ್ಕಾಬವರಮನಾಗಸದೊಳ್ ।
ನೋಡುವ ಬಿಟ್ಟೆವೆಗಣ್ಗಳವರ್ ಸಗ್ಗದ ಸದನದ ನೆಲೆಗೆ ॥
ಓಡಿದರೆಣ್ದೆಸೆಯೊಳಿರ್ದುರ್ ದಿಕ್ಕಿನ ।
ಗೂಡಿಂಗೈದಿದರೆಲರುಣಿಗಳ್ ಕೆ ।
ಳ್ನಾಡ ಬಿಲಂಬೊಕ್ಕುವು ನಾನದನಿನ್ನೇನಂ ಬಣ್ಣಿಪೆನು ॥೪೧

ಮತ್ತಾ ಕಾಲಾಗ್ನಿಶಿಖಾಮುಖದಿಂ ।
ಪೊತ್ತಿ ಕರಂ ಪರ್ವಿದ ಕರ್ಪೊಗೆ ನೆಲ ।
ವೊತ್ತಾನೆಯು ಮೆಯ್ಯಂ ಸುತ್ತಿದೊಡವನಿಯೊಳುಳ್ಳದ್ರಿಗಳ ॥
ಹತ್ತಿ ಹಿಡಿಯದಿರ್ದೊಡೆ ಘನತರದ ವಿ ।
ಯತ್ತಲವಂ ಸೋಂಕದೊಡೆ ಚಿರತ್ವಂ ।
ಪೆತ್ತಸಿತಚ್ಛಾಯೆಯಮವಕ್ಕೆ ವಿಚಾರಿಸೆ ತಾನೆತ್ತಣದು ॥೪೨

ಕಡಲೇಳಂ ಪೊಡೆಯಗ್ಗಿ ಘನಾಘನ ।
ದೊಡಲ ಸಿಡಿಲ ಕಿಚ್ಚಂಗಭವಾರಿಯ ।
ನಡುಗಣ್ಣುರಿ ಸಚರಾಚರದಖಿಲಪದಾರ್ಥಂಗಳ ನಡುವೆ ॥
ಅಡಸಿದ ಉಂಕಿಗಳೊಳಗುಗ್ರತೆಯಂ ।
ಪಡೆದುವು ನನಗಿದಿರಾಗಿಯೆನುತ ಕೆಡೆ ।
ನುಡಿವಂದದಿ ಲಯಕಾಲಾಗ್ನಿಶರಂ ಘುಡುಘುಡುಘುಡಿಸಿದುದು ॥೪೩

ಧೀರೋದಾತ್ತಂ ವಿಕ್ರಮಕಾರವ ।
ವೀರನುದಯಗಿರಿಯಂತೊಪ್ಪಿದನವ ।
ನಾರಯ್ಯದೆ ಕಿವಿಮುಟ್ಟೆ ತೆಗೆದ ಕುಂಡಲಿತಧನುರ್ದಂಡಂ ॥
ವಾರಿಜ‡ಬಾಂಧವಮಂಡಲವಾದುದು ।
ನಾರಿಯನೇಱದ ಲಯಕಾಲಾನಲ ।
ನಾರಾಚದ ಮೊನೆಯೊಳ್ ಕೆದರ್ದುರಿಯದೆಜರ್ಚಿಯ ತೇಜನಾಯ್ತು ॥೪೪

---

‡. ನಾಭನ, ಖ॥

ಪಿರಿದುಮಗುರ್ವಿಪ ಲಯಕಾಲಾನಲ |
ಶರಮಂ ಕಾಣುತ ಗಹನಂಗೆಯ್ಯದೆ |
ಭರತೇಶ್ವರನ ಕುಮಾರಂ ಶರನಿಧಿಶರಮಂ ಬಿಡಲೊಡನೆ ||
ಖರಕಿರಣಂಗರ್ಘ್ಯಂಗೊಟ್ಟಂದದಿ |
ಶರಧಿಯಗಸ್ತ್ಯಕರಕೆ ಬಂದಂದದಿ |
ಕರಮೊಯಡಂಗಲ್ ಕಂಡಾಜಯಭೂವರನಿಂತೆಂದೆಣಿಸಿದನು ||೪೫

ತಾನೆಚ್ಚಂಬುಧಿಶರಮಾಲಯಕಾ |
ಲಾನಲಶರದೊಳಡಂಗಿದುದದಱಿಂ |
ನಾನಿವನಂ ತಲೆಗೊಳ್ವೊಡೆ ಬಾರಿಪರಾರಂ ಕಂಡಱಿಯೆಂ ||
ಏನಾದೊಡಮೇನೀಹರಯಂಬರ |
ಮಾನನ್ದದಿನಿರ್ವರುಮೊಡನಾಡಿದ |
ನೂನಪ್ರಿಯದಿಂದಿವನನಿಸುವುದನುಚಿತಮೆಂದೆಣಿಸಿದನು ||೪೬

ಕೊಲಬಾರದು ಬವರದೊಳಾವನುಮಂ |
ಕೊಲದಿರಬಾರದೆನುತ ಜಯಭೂವರ |
ತಿಲಕಂ ಚಿಂತಿಪ ಸಮಯಕೆ ಶೇಷಂ ತಾನಿಹ ಕಿಱ್ನೆಲದಾ ||
ನೆಲೆಯಿಂ ಬಂದಿನಿಪಿರಿದುಂ ಕೋಪದಿ |
ನಲಘುಬಿಲೇಶಯಪಾಶದಿನೋವದೆ |
ಬಲಯುತರವಿಕೀರ್ತಿಯ ತೋಳಂ ಪೆಡಗಟ್ಟಂ ಕಟ್ಟಿದನು ||೪೭

ಪಿರಿದುಂ ಕೋಪದಿನುರಗೇಂದ್ರಂ ಬಿಗಿ |
ದುರಗಮಹಾಪಾಶಂ ಭರತಮಹೀ |
ಶ್ವರನ ಕುಮಾರನ ಭೂಭೃತ್ತಿಲಕನ ಘನತರಗಾತ್ರವನು ||
ಭರದಿಂ ಸುತ್ತಿ ಮನೋಹರಮಾದುದು |
ಶರಧಿಮಥನಮಂದರಭೂಧರಮಂ |
ತುರಿಹದಿ ಸುತ್ತಿ‡ಯಗುರ್ವಿಪ ಶೇಷಂ ತಾನೆಂಬಂದದೊಳು ||೪೮

ಆವೇಳೆಯೊಳಾಫಣಿಪಸ್ತ್ರೀಪ |
ದ್ಮಾವತಿಯೆಂಬವಳೆಯ್ದಿ ಕರುಣದಿಂ |
ದಾವಿಭುರವಿಕೀರ್ತಿಯ ಪೆಡಗಟ್ಟಂ ಬಿಟ್ಟಂತುಸಿರಿದಳು ||

‡ ಯಗು. ಗ||

ಭೂವಳಯದ ಪಾಳಿಯನುಲ್ಲಂಘಿಸಿ |
ಯೀಮುದ್ಯೋಗಮನೊದವಿಸಿ ಬಱಿಕ ಯ |
ಶೋವನಿತೆಯ ತಲೆಯೊಳ್ ಕಱೆಯಂ ಪೊಱಿಸುವುದುಚಿತಮೆ ನಿನಗೆ || ೪೯

ನಿನ್ನೆಗಳೊಳ್ ನಿಮ್ಮಯ್ಯಗೆ ಭರತದ |
ಮನ್ನೆಯರೆಲ್ಲರನೆಱಗಿಸಿ ನಿನ್ನಂ |
ತನ್ನೊಳ್ ಭೇದಂಮಾಡದೆ ನಲ್ಮೆಯನೆಸಗಿದ ನೀಱನೊಳು ||
ಕೆನ್ನಮಿದಿರನಱಿಯದೆ ಹೋಱುವುದಿದು |
ನನ್ನಿಯೆ ನಿನಗೆನುತುಂ ಪದ್ಮಾವತಿ |
ಭಿನ್ನಂಮಾಡಿಯವರ ಬಲ್ಮನಿಸಂ ಕೊಟ್ಟಳು ಮಣಿದೊಡಮಂ || ೫೦

ಇಂತಿರ್ವರ್ ತುಱಿಲಾಳ ಮನದ ಖತಿ |
ಯುಂ ತವೆ ಬಿಡಿಸಿ ಬಱಿಕಮಿರ್ವರುಮಂ |
ಸಂತಂಮಾಡಿ ಸುಖದೊಳಿರಿಮೆನುತಾದರವಚನಮನುಸಿರ್ದಳ್ ||
ಸಂತಸದಿಂ ಪದ್ಮಾವತಿಯುಂ ನಿಜ |
ಕಾಂತನಹೀಶ್ವರನುಂ ಬೆರಸಾಭೂ |
ಕಾಂತರೊಳೊಲವಿಂ ಬೀಱ್ಕೊಂಡುರಗಭುವನಕೆಯ್ದಿದರಿತ್ತ || ೫೧

ನಾನಾತೆಱದುಪಚಾರಂಗಳಿನಾ |
ಭೂನುತಜಯನೃಪತಿಯು ಭರತೇಶ್ವರ |
ಸೂನುವ ಮನದ ಖತಿಯುಮಂ ಬಿಡಿಸಿಯವರುಮಂ ಮತ್ತಱಿದ ||
ಮಾನವಪರಿವೃಢನಿಕುರುಂಬಮುಮಂ |
ಸಾನಂದದಿ ಮನುಚರಿತನಕಂಪನ |
ಹೀನಾಧಂ ನಿಜಪುರಕೆಯನೂನೋತ್ಸಾಹದಿನೆಯ್ದಿಸಿದಂ || ೫೨

ಮುಖ್ಯೇಂದ್ರಾಖ್ಯಾನದಿ ತೇಜೋಪಾ |
ಖ್ಯಾನದಿ ಸರ್ವೋರ್ವೀನುತಧರ್ಮಾ |
ಖ್ಯಾನದಿ ಪುಣ್ಯಜನಾಖ್ಯಾನದಿನಂಬುಧಿಪತಿಯೆನಿಪಾ ||
ಖ್ಯಾನದಿ ರಂಜಿಸುವ ಜಗತ್ಪ್ರಾಣಾ |
ಖ್ಯಾನದಿ ಧನದಾಖ್ಯಾನದಿನೀಶಾ |
ಖ್ಯಾನದಿನಾಶಾಧಿಪರಂತೆಸೆದಂ ಪ್ರಭುಕುಲಮಣಿದೀಪಂ || ೫೩

ಇದು ಸುರನರಫಣಿಪರಿವೃಢವಿನಮಿತ |
ವಿದಿತವಿನಯಗುಣಗಣಯುತ ಜಿನಪತಿ |
ಪದಸರಸಿಜಮದಮಧುಕರನತಿಚತುರಕಲಾಪರಿಪೂರ್ಣಂ ||
ಸದಮಳಚರಿತಂ ಪ್ರಭುರಾಜಂ ಸಂ |
ಮುದದಿಂ ರಚಿಸಿದ ಜಯನೃಪಕಾವ್ಯದೊ |
ಳೊದವಿ ಮನೋಹರಮಂ ಪಡೆದತ್ತೇೞನೆಯ ಮಿಸುಪ ಸಂಧಿ || ೫೪

ಏೞನೆಯ ಸಂಧಿ ಸಂಪೂರ್ಣಂ.

# ಅಷ್ಟಮ ಸಂಧಿ.

ಸೂಚನೆ || ಶ್ರೀಗೆಣೆಯೆನಿಪ ಸುಲೋಚನೆಯೊಳಗನು |
ರಾಗದಿ ನಿಂದು ಮದುವೆಯಂ ನವಸಂ |
ಭೋಗದಿನೊಪ್ಪಿದನಾನರನಾರಾಯಣಜಯಭೂವರನು ||

ಇಂತು ಪೊಬಲನೆಯ್ದಿದ ನರನಾಯಕ |
ಸಂತಾನವನೊಗುವಿಗೆಯುಪಚರದಿಂ |
ಸಂತೋಷಂಬಡಿಸುತ ಮಜುವಗಲೊಳು ತನುಜೆಸುಲೋಚನೆಯಾ ||
ಕಾಂತಕಮಲವದನೆಯ ಮದುವೆಯ-ನ |
ತ್ಯಂತವಿಭವದಿಂ ಕಾಶ್ಮೀ†ರಮಹೀ |
ಕಾಂತಂ ಮಾಡಿದನೀತಜದಿಂದವನಿತಳಂ ಪೊಗಳ್ವಂತೆ ||೧

ಪಸುಳೆದಳಿರ ತೋರಣವಂ ಕಟ್ಟುವ |
ಪೊಸಪಂದಲನಿಕ್ಕುವ ಪಜ್ಜಗುಡಿಗಳ |
ನೊಸೆದೆತ್ತುವ ಚಳೆಯಂಗೊಟ್ಟಂಗಣದೊಳ್ ಕಡೆಯಂಗುಡುವಾ ||
ಎಸಳ್ವಲಿಗೆದರ್ವ ಲಸದಿಬ್ಭಿತ್ತಿಗಳೊಳು |
ರಸಚಿತ್ರಾವಳಿಯಂ ಚಿತ್ರಿಪ ಸಂ |
ತಸದ ಜನದ ಸಂದಣಿ‡ ಮನೆಮನೆದಪ್ಪದೆ ಸಲೆ ಸೊಗಸಿದುದು ||೨

ಹರಿನೀಲದ ಪಳುಕಿನ ನೆಲನಿಂಗದಿ |
ವರ್ಗರಲ ಮಿಸುಪ ವೇದಿಕೆ ಪವಳದ ನಿಲ |
ವರುಣಮಣಿಯ ಕೆಲಸದ ಬೋದಿಗೆ ಹೊಸಹಳದಿಯ ಮಾಣಿಕದ ||
ಸರವುಜ್ಜ್ವಲವಜ್ರದ ಪಡಿವಟ್ಟಗೆ |
ಮರಕತರತ್ನದ ಕೇರ್ ವೈಡೂರ್ಯದ |
ವರಫಲಕಂ ರಚಿಯಿಸಲೊಪ್ಪಿದುದಲ್ಲಿಯ ಮಂಗಲಸದನಂ ||೩

ಹಳಚನೆಸೆವ ಹಂಸಾವಳಿಯಿಂ ಪ |
ಜ್ಜಳಿಸುವ ಪೊಸವಳುಕಿನ ಪಂಚಾಂಗದೊ |
ಳಳವಡಿಸಿದ ಮರಕತಮಣಿಗಂಭದ ಮೇಗಣ ಮಾಣಿಕದ ||

---

†. ರಜಮಹಿ ‡. ಮನೆದಪ್ಪದೆ ಸಲೆಸೊಗಸಿದುದಾಗಾ. ಗ||

ತಳತಳಿಸುವ ಹೂವಿನ ಬೋದಿಗೆಯಂ |
ಬಳಸಿದ ಹರಿನೀಲದ ಲಂಬಣಗಳ್ |
ತಿಳಿಗೊಳದರಗಣಾಬ್ಜವನೋಲಯಿಪಳಿವಾಲೆವೊಲೊಪ್ಪಿದುವು || ೪

ಮುತ್ತಿನ ಮಣಿಗಂಭದ ಮದನಿಕೆಯೊಳ್ |
ಕೆತ್ತಿದ ಕುಲಿಶದ ಕೇಸರಿಗಳ ಚೆ |
†ಲ್ವಿತ್ತರಮಂ ಪಡೆದುವು ಮೂಲೋಕವೆನೆಲ್ಲಮನದಟಲೆವ ||
ಮತ್ತಹಿರಣ್ಯಕಶಿಪುವಂ ಕೊಲ್ವೆನೆ |
ನುತ್ತಾಸ್ತಂಭೋದರದೊಳ್ ಜನಿಸಿ ಕ |
ಋತ್ತುಪ್ಪರಿಪಂದಿನ ನರಸಿಂಹನ ಭಂಗಿಯನನುಕರಿಸಿ || ೫

ಜಳಜಾತದ ಜಂಗುಳಿ ಜಲವಿಹಗಾ |
ವಳಿ ಜಲಚರಜಾಲಂ ನೆಱೆ ಚಿತ್ರಿಸೆ |
ಜಳಕನೆಸೆವ ತೆಳುವಳುಕಿನ ಬಿಂಗದ ಮೇಲ್ಗಟ್ಟೊಪ್ಪಿದುದು ||
ಎಳೆಗತ್ಯಾಶ್ಚರ್ಯವೆನಿಪ್ಪವಂ |
ಗಳನಿಧಿಯಂ ನೋಡುವೆನೆನುತಂಬರ |
ತಳದಿಂದಿೞಿವಮರಾಪಗೆಯಿರವಂ ಪಿರಿದುಂ ನೆನೆಯಿಸುತ || ೬

ತೋರಮುಡಿಯ ತೊಳಗುವ ಬಲ್ತೊಲೆಗಳ |
ಭಾರಂಬೊತ್ತ ಕಟಿಯ ಕಾಂತೆಯರಾ |
ಕಾರದ ಪುತ್ರಿಕೆ ತೀವಿರಲಾಬಿಣ್ಪಿಗೆ ಭೂಪತಿಯೊಡಲಂ ||
ಪೂರಿಸಿದನುರಾಗರಸಂ ಚಿತ್ರದ |
ಕೇರ ಮೊದಲ ಸಂದಿಯೊಳುಣ್ಮಿದವೊಲ್ |
ಕಾರಸೆಗಿಕ್ಕಿದ ಘುಸೃಣರಸಂ ಕಣ್ಗೊಪ್ಪಿದುವಂತಲ್ಲಿ || ೭

ಪಿಂತ ಪಿನಾಕಿ ಪಯೋಜೋದರ ವಿಧಿ |
ವ ಸಂತಾದವರೆಲ್ಲವರಂ ತ ಗಲೆ |
ಯಂತತಿಲಘುಮಾಡಿದ ಗರ್ವಕನೇಂ ಬಡವನೆಱದನಱಿದು ||
ಸಂತಮನೋಲ್ದವನೊಳ್ ಬಿಡಬೇಡೆನು |
ತಂ ತವೆ ಸಾಱುವವೊಲ್ ಕರದೊಳ್ ತೃಣ |
ಮಂ ತಾಳ್ದಿದ ಹರಿನೀಲಮಣಿಯಪುತ್ರಿಕೆಯೊಪ್ಪಿದುವಲ್ಲಿ || ೮

† ಲ್ವಿ. ಕ || ಗ ||

ಧೂಪದ ಧೂಮಶಲಾಕೆ ತಮಾಲಂ |
ದೀಪಾವಳಿ ತುಱುಗಿದ ಪಸುರ್ಗಂಭಮು |
ದೇ ಪೂ ತೀವಿದ ಸಂಪಗೆ ಮುತ್ತಿನ ಲಂಬಣಮಲರ್ಜೊಂಪಂ ‖
ರೂಪವತಿಯರುಲುಹೇ ಕಳಕಂಠಾ |
ಳಾಪಂ ಪಂದಲ್ ಪಲ್ಲವತತಿಯೆನ |
ಲಾಪುಷ್ಪಾಸ್ತ್ರಪ್ರಮದವನಂಬೊಲ್ ಸೊಗಯಿಸಿತಾಸದನಂ ‖ ೯

ಎಳವರೆಯದ ನೀಱೆಯರೊಲವಿಂ ಕ |
ಣ್ಗೊಳಿಪಂದದಿ ಕಟ್ಟುವ ಲಂಬಣಗಳ |
ಹಳಹಳಹಳಚನೆಸೆವ ಹಳದಿಯ ಹರಲೊಳ್ ಮುತ್ತಾಕೆಗಳ ‖
ಜಳತಿಗೆಗಣ್ಗಳ ಕಡೆಯಿಂದುಣ್ಮುವ |
ಬೆಳಗು ಪರಿದು ಪೊಳೆಯುತ್ತಿರಲೆಸೆದುದು |
ವಿಳಸದ್ವೈಡೂರ್ಯದ ಮೋಗಣ ಸೂತ್ರಮು ಮೆಂಬಂದದೊಳು ‖ ೧೦

ಮಂಗಳಸತಿ ಮರಕತಮಣಿದೊಡವಿಂ |
ಸಿಂಗರಿಸಿದವೊಲೆಸೆವ ಪೊಸಜಾಗದ |
ಜಂಗುಳಿಯಿಂ ರತಿಯಭಿಷೇಕದ ಕೊಡನೆನಲೆಸೆವೈರಣೆಯಿಂ ‖
ಅಂಗಭವಾಧ್ವರಿಯಾಕರ್ಷಣಮುಖ |
ಮಂ ಗೆಲೆವಂದು ಮಿಸುಪ ನವಹೋಮದ |
ಸಂಗಡದಿಂ ಸಲೆ ಸೊಗಯಿಸಿದತ್ತಾ ಮದುವೆಯ ಮಣಿಸದನಂ ‖ ೧೧

ಬೆರಲುಂಗುರದ ಬೆರಕೆವಣಿಗಳ ರುಚಿ |
ಸುರಧನುವೆನೆ ಪೊಳೆಯಲ್ ಕಂಕಣರುತಿ |
ಮೊರೆಯಲ್ಕಿಱುಮೊೞಗೆನೆ ಘನಕುಚೆಯರೊಸೆದು ಚಳೆಯಂಗುಡವ ‖
ಪರಿಮಳಜಲದ ಪಲವು ಪನಿಯೆಡೆಯೊಳ್ |
ಕರಶಾಖಾನಖದುಜ್ಜ್ವಲರುಚಿ ಬಂ |
ಧುರಮಾದುದು §ತಳಿವಬ್ಬಿಯೊಳ್ ಮಿನುಗುವ ಮಿಂಚಿನ ತೆಱನಾಗಿ ‖ ೧೨

ಕತ್ತುರಿಯಿಂದನುಮಾಡಿದ ನೆಲದೊಳ್ |
ವೃತ್ತಪಯೋಧರೆಯೊರ್ವಳ್ ಸಂತಸ |
ವೆತ್ತು ಮಸೆದ ಕೂರುಗರಿಂ ರೇಖಿಸಿ ಬಿನ್ನಣದಿಂದಲ್ಲಿ ‖

---

§. ತನಿ ಖ।

ಮುತ್ತಿನ ರಂಗವಲಿಯನನುಗೆಯ್ಯಲ್ |
ಚಿತ್ತಭವನ ಸತ್ಕೀರ್ತಿಲತೆಯ ಪೊಸ |
ಬಿತ್ತಂ ಹಂತಿವಿಡಿದು ಬಿತ್ತುವ ಭಂಗಿಯನನುಕರಿಸಿದುದು ||೧೩

ಮೃಗಧರಕಾಂತದ ಪಡಲಿಗೆಯೊಳ್ ನವ |
ಮೃಗಮದಕರ್ದಮಮಂ ತೆಗೆದೀಕ್ಷಿಪ |
ನಗೆಗಣ್ಗಳ ಚಂದ್ರಿಕೆಯಿಂದೊಸರಿ ಜಲಂ ತೀವಲ್ಕಲ್ಲಿ ||
ಸೊಗಯಿಪ ಮುದ್ದುವೊಗಂ ಪ್ರತಿಬಿಂಬಿಸೆ |
ಮುಗುದೆಯರದನಂಭೋರುಹವೆನುತುಂ |
ಬಗೆದು ತೆಗೆಯಲುದ್ಯೋಗಿಸಿ ಬಱಿಯೊಳ್ ಲಜ್ಜೆವಡೆದರಾಗ ||೧೪

ಜ್ವಳಿಸುವರುಣಮಣಿದೀಪಶಿಖಿಗೆ ಕ |
ಜ್ಜಳಮಂ ಭಿತ್ತಿಯ ಚಿತ್ರದ ಲತೆಯಲ |
ರ್ಗಳಿಯಂ ಮಿಸುಪ†ಯ್ರಣೆಯ ಕಳಶದುದಕಕೆ ನೀಲೋತ್ಪಲಮಂ ||
ಪಳಿಕಿನ ಫಲಕಕ್ಕಂಗಜವೀರನ |
ವಿಳಸಜ್ಜಯವೃತ್ತದ ಲಿಪಿಯಂ ಕ ||
ಣ್ಗೊಳಿಪಂದದಿ ತೋಱುವುದಲ್ಲಿಯ ಸತಿಯರ ‡ನಡುಗಣ್ಬೆಳಗು ||೧೫

ಕಳಶದ ಕೊನೆಯೇಱಿದ ಕಾಂಚನದೊ |
ಳ್ವೆಳಗಿನ ಮುಕುರದ ಮುಂಗಡೆಯಿರಿಸಿದ |
ಪಳಿಕಿನೆಸಳ ಪೂವಟ್ಟಲೊಳರಿಸಿನದಕ್ಷತೆಗಳನಿಡಲು ||
ಜ್ವಳಿಸುವುದಯಭೂಧರದುಪರಿಮದೊಳ್ |
ತಳತಳಿಸುವ ತರುಣಾರ್ಕನಿದಿರ ಸಿತ |
ಜಳರುಹದಳಮಧ್ಯದ ಕೇಸರಮೆಂಬಂದದೊಳೊಪ್ಪಿದುದು ||೧೬

ಎಸಳ ಕಱಂಕೆಯೊಳೆಯನಿಡುಗೊನರಿ |
ಟ್ಟಸಿತೋತ್ಪಲಲೋಚನೆಯರ್ ಮಿಗೆ ಸಂ |
ತಸದಿಂ ತುಱುಗೆವೆಯೆತ್ತಿ ನಿರೀಕ್ಷಿಸಲಾಕಣ್ಗಳ ನಡುವೆ ||
ಮಿಸುಗುವ ತಾರಾರುಚಿ ಪರಕಲಿಸಿದೊ |
ಡೆಸಕಂಬಡೆದತ್ತಾಕಿಱುವಟ್ಟಲ |
ಪೊಸನುಣ್ಬುಳಿಕು ತೃಣಂಬಿಡಿದೊಪ್ಪುವ ಹರಿನೀಲದ ತೆಱದಿ ||೧೭

† ಯಿರಣೆ. ಗ||　　‡ ನಿಡು. ಕ||

ಕಳಿಯುದ ಕಾಲದ್ವೀಪಾಂತರದೊಳ್ ।
ತೊಳಪ ಸುಲಗ್ನಮಹಾರತ್ನಮನಾಂ ।
ಗಳಿಸುವೆನೆನುತಾಲಗ್ನಗನೆಂಬ ವಣಿಗ್ವರನೆಯ್ತಂದು ॥
ಜಳಪಾತ್ರಾಂಭೋನಿಧಿಯೊಳ್ ನಡೆಯಿಪ ।
ವಿಳಸದ್ಘಟ್ಟೃತ್ರದ ಭಂಗಿಯುಮ್ಪೋಲ್ ಪ ।
ಜ್ವಳಿಸುವ ಗಳಿಗೆಯು ಪೊಸಪೊಂಬಟ್ಟಲ್ ಕರಮೆ ವಿರಾಜಿಸಿತು ॥೧೮

ಬಳಿಕೊಳ್ಪಂದುಗೆಮಾಯ್ದಱಿಯಾಳಿಯು ।
ರಲಘುಪ್ರಿಯದಿಂದಮೆ ವಿರಚಿಸೆ ಕ ।
ಣ್ಗೊಳಿಸುವ ಷೋಡಶವಿಧದ ವಿಭೂಷಣಮಾನೃಪನಂದನೆಗೆ ॥
ಲಲಿತಂಬಡೆದುದು ಕಱೆಯಿಲ್ಲದೆ ತಳ ।
ತಳಿಸುವ ಶಶಿಬಿಂಬಕೆ ಪದಿನಾಱುಂ ।
ಕಲೆ ಮೆಯ್ವಡೆಯಲ್ ಕಡುಪಿರಿದುಂ ವಿಭ್ರಾಜಿಸುವಂದದೊಳು ॥೧೯

ಆವೆಣ್ಣಂ ‡ಸಿವಿಗೆಯನೇಱಿಸಿ ನವ ।
ರೂಪವತಿಯರು§ನ್ಮದಕಳಕಂಠಾ ।
ಳಾಪದ ರತಿಯ ವಿಪಂಚೀಸ್ವರದ ಮನೋಜಾತಂ ಪಿಡಿದ ॥
ಚಾಪಜ್ಯಾಟಂಕೃತಿಯ ಸೊಗಸನಪ ।
ಲಾಪಿಸುವ್ರೊಳ್ವಾತಿನ ಕಂಚುಕಿಯರ್ ।
ಚಾಪಲಲೋಚನೆಯರ್ ಕೊಂಡಾಡುತ್ತೆಯ್ದಿದರೊಗ್ಗಿನೊಳು ॥೨೦

ಅಳಿಕುಂತಳದಬ್ಜೋಪಮಲೋಚನ ।
ದೆಳದಳಿರ್ದುಟಿಯ ಶಶಾಂಕಮುಖದ ನವ ।
ಕಲಶಕುಚದ ಸುರಲತಿಕಾಹಸ್ತದ ಹರಿಮಧ್ಯದ ಮಿಸುಪ ॥
ಪುಳಿನ ತಳಮನೇಳಿಸುವ ನಿತಂಬದ ।
ವಿಳಸತ್ಕದಳೀಸದೃಶಾಂಕದ ಪ ।
ಜ್ವಳಿಪಲತೆಗೆವಜ್ಜೆಯ ಸಖಿಯರ್ ಬರೆ ಬಂದಳ್ ಶಶಿವದನೆ ॥೨೧

ಸುರಭಿಶರನ ಸುಲಲಿತಕೀರ್ತಿಶ್ರೀ ।
ಧರೆಯಿಂ ದಿಗ್ವಲಯಕೆ ಪಾಱುವೆನೆನು ।
ತುರುಮುದದಿಂದೆಯ್ತಂದಾಪಾಱುಂಗುಪ್ಪೆ$ಗಡರಿದಂತೆ ॥

‡. ಶಿಬಿಕೆ ಖ॥ §. ನ್ನತ ಖ॥ $. ಮನಡರ್ವಂತೆ. ಖ॥

ವರಮಣಿಮಯಮಂಡಪಸೋಪಾನಮಂ |
ನಿರದೆಯುದ್ಧತ ಪಿರಿದುಂ ವೈಭವದೊಳ್ |
ತರಳನಯನೆ ಮುತ್ತಿನ ಮೆಟ್ಟಕ್ಕೆ ನೆಡೆಗೆಯ್ದಳತ್ತ ‖ ೨೨

ಮಂಗಲಮಯಲಗ್ನದೊಳೊಲವಿಂ ಲಲಿ |
ತಾಂಗಿಯುರಾಬ್ಧಿಕಮಂ ನಿರ್ವರ್ತಿಸಿ |
ರಂಗುವಡೆದ ನವರತ್ನಮಕುಟಕುಂಡಲಕಂಠಿಕೆಕಡಗಂ ‖
ಉಂಗುರಮುಳ್ಳ ನಿಡುದೋಳ ತೊಡವು $ಪೊ |
ಪ್ಮಾಂಗಾಲ್ಯಸದನದಿಂ ಕೈಗೈಯಲ್ |
ಜಂಗಮಕಲ್ಪಕುಜಂ ಪೂವಾಂತವೊಲರಮಗನೊಪ್ಪಿದನು ‖ ೨೩

ಸರ್ವ್ವೋಹನರಾಜ್ಯಾಧಿಪತಿತ್ವದ |
ಕರ್ಮ್ಮಸರನ ಯುವರಾಜ್ಯಶ್ರೀಯುಂ |
ನಿರ್ಮ್ಮದದಿಂ ಧರಿಯಿಸುವುದೆನುತ ಕಡುವಿಂದುಂ ಹರಿಸದೊಳು ‖
ಸರ್ಮ್ಮತದಿಂ ರತಿಕಟ್ಟುವ ತೆಱದಿಂ |
ದರ್ಮ್ಮಕೆತ್ತಕಮಣಿಮಯಕಂಠಿಕೆಯುಂ |
ಸುಮ್ಮಾನದಿನೊರ್ವಳ್ ಸುಕುಮಾರನ ಕೊರಲೊಳ್ ಕಟ್ಟಿದಳು ‖ ೨೪

ಕೆಂಬಟ್ಟೆಯ ಮೃದುತಲ್ಪದೊಳೆಸೆದವ |
ಲಂಬಿಪ ಪೊನ್ನಪಡವಿಯರುಣಾಭ್ರಂ |
ಕೊಂಬಿನೊಳಿಟ್ಟ ಕದಂಬಮಣಿಯರುಚಿಯಾರಚನೆಯನಾಂತು ‖
ಇಂಬುವಡೆದ ಸುರಧನು ಮತ್ತಲ್ಲಿ ತೆ |
ಱಂಬೊಳೆದೊಪ್ಪುವ ಪೊಸಕುಡುಮಿಂಚುಮ |
ಡಂಬಂದದಿನದನೇಱಿ ಕುಮಾರಂ ಕಣ್ಗೆ ವಿರಾಜಿಸಿದಂ ‖ ೨೫

ಕಾಳೋದಧಿಯೊಳಗಡೆ ಕಡಲುರಿ ಕಾ |
ರ್ಗಾಳದ ಕಾರ್ಮುಗಿಲೊಳ್ ಮುಗಿಲಗ್ನಿ ತ |
ಮಾಲವನಾಂತರದೊಳ್ ಪಂಚಮಹಾಶರನುದ್ಧತತೇಜಂ ‖
ಡಾಳಿಸಿ ಪಲವುಂ ಪರಿಜಾದಂದದಿ |
ಕಾಳದೊಳುಜ್ಜ್ವಲಿಸುವ ಕರದೀಪ |
ಜ್ವಾಲೆ ಕರಂ ಕಣ್ಗೆಸೆದುದು ತತ್ಸುಕುಮಾರೋದ್ವಾಹದೊಳು ‖ ೨೬

$ ಪೊಸ | ಮೇಂ. ಗ‖

ಉಡುಪಾನನೆಯರುಲಿವ ಧವಲಧ್ವನಿ |
ಯುಡಿಸಿದ ಕಹಳೆಯೆನಲ್ ಪೊನ್ನಂದಳ |
ವಡರಿದ ಮದವಣಿಗನ ಮುಂದೆಯ್ದುವ ನೃಪತಿಲಕರ ಪಲವು ||
ಕೊಡೆಯಾಗಸಮಂ ಪಂದಲಿಸುತ್ತಂ |
ನಡೆತರ ನನೆವಿಲ್ಲಂ ರಿಪುದುರ್ಗಕೆ |
ನಡೆಯಿಪ ಗಡಣದ ನಡೆಚಪ್ಪರಮೆನಲೆಸಕವಡೆದುದಾಗ ||೨೭

ತುಂಬಿವಸುಳೆ ಝಂಕರಿಸುವ ತಪನೀ |
ಯಾಂಬುಜವೋ ಚಿತ್ತದ ರತಿಯಾದುವ |
ಕಂಬುಗಳೋ ಎಂಬಂದದಿ ಕೇಳ್ವರ ಕಿವಿಗಮುದರ್ಗಣಿಸಾಗಿ ||
ಇಂಬುವಡೆದ ಶೋಭನವಂ ಪಾಡುವ |
ಬಿಂಬಾಧರೆಯರ ನಿಜವಾನಿತವುಖ |
ಬಿಂಬವುವಾನುಸ್ಗೊರಲುಂ ಕಣ್ಗೆ ಮನೋಹರವೆಯ್ದಿದುದು ||೨೮

ಕಡುಸೊಗಯಿಸುವುಗುರ್ವೆಳಗುಮನಲರ್ಗ |
ಣ್ಗೆಡೆವೆಳಗುಮನೊಡಗಲಸುತ್ತಕ್ಷತೆ |
ಯಿಡುವ ನಿಬಿಡಕುಚೆಯರ ಮಧ್ಯದೊಳೆಯ್ತಂದಂದಳವಿಳಿದು ||
ಸಡಗರದಿಂ ಮಧುಪರ್ಕವಿಧಿಯನಾಂ |
ತುಡುಪಮುಖಿಯ ಮುಂದಣ ತೆಱೆಯೊತ್ತಿನ |
$ ಬಿಡುಮುತ್ತಿನ ಮೆಟ್ಟುಕ್ಕಿವೆಡಗೆಯೋಱದನರವಾಗನಾಗ ||೨೯

ಅನ್ನೆಗಮುತ್ತಮಲಗ್ನದ ಬರವಿನ |
ಸನ್ನೆವಱಯಿನೋಸರಿಸುವ ಜವನಿಕೆ |
ಯುನ್ನೋಡುವ ಜನಜಾಲದಿನಂಗಜನೃಪವರನನುಮತದಿ ||
ರನ್ನದ ಮಂಡಪವೆಂಬಂಕದ ಕಳ |
ದಿನ್ನಗೆಗಣ್ಣ ಕಡೆಯ ಕೂರಸಿಯಿಂ |
ಚೆನ್ನಿನೆಸೆವ ಮದವಕ್ಕಳ್ಮಸಾಳಂದದಿನೊಪ್ಪಿದರು ||೩೦

ಪಿಟ್ವಿ ಪುಳಕವೆಸಕದ ಮೋಹನದೊಳ |
ಗಾಟ್ವಿ ಮಸಂ ಮೆಯ್ಸುವಿರ § ಮೊದಲ್ಗಳು |
ಗುಟ್ವಿ ಬೆಮರ್ ಪೆಱರ್ಱವ ಧೀರತ್ವಂ ವೈವರ್ಣತ್ವವನು ||

---

$ ಸಡಗರಿಸಿದ ಕ|| § ಮೊದ. ಕ||

ತಾಳ್ವ ಮೊಗಂ ತವಕಿಪ ತನು ತೊಳಂ ।
ಗೊಳ್ವಂಗಂ ಹರ್ಷಜಲಂ ತೀವಿದ ।
ಬಳ್ವಳಿಕೆಯ ನೋಟಂ ಕಣ್ಗೊಪ್ಪಿದುವಾನ್ಯಮಿಥುನದೊಳು ॥೩೧

ಮದವನ್ಮದನಮತಂಗಜಮಿಥುನಂ ।
ಸದಮಲತರನವಶೀಕರಮಂ ಸ ।
ಮ್ಮದದಿಂ ಭಾಸಿಪ ಭರಿಕ್ಕೆಯೆತ್ತುತ್ತೊಂದೊಂದರ ಮೇಲೆ ॥
ಉದುರಿಸುವಂತುನ್ಮತ್ತಪ್ರಾಯದ ।
ಮದವಕ್ಕಳ್ ಮೌಕ್ತಿಕದಕ್ಷತೆಯಂ ।
ಪದಪಿಂದೋರೊರ್ವರ ಮಣಿಮಯಮಸ್ತಕದೊಳ್ ಚೆಲ್ಲಿದರು ॥೩೨

ಜಾಮಾತೃವ ಕರದೊಳ್ ತನುಜಾತೆಯ ।
ತಾಮರೆಗೈಯನಕಂಪಮಹೀಶಂ ।
ಪ್ರೇಮದೊಳಿತ್ತಿಯೆಱೆವ ಮೃಗನಾಭಿವಿಮಿಶ್ರಿತಜಲಧಾರೆ ॥
ಹೇಮಕಲಶಕುಕ್ಷಿಯಿನಿೞಿತಂದಭಿ ।
ರಾಮತೆಯಂ ಪಡೆದುದು ಚೆನ್ನೇಸಱ ।
ಕೋಮಲಗರ್ಭದೊಳುದಯಿಸಿಯಿೞಿವೆಳಜಗುನೆಯಿದೆಂಬಂತೆ ॥೩೩

ಪಿಡಿವಿಡಿವಿಡಿಯದೊಡಂಗಭವಂ ತಾಂ ।
ಪಿಡಿಯಿಪನೀಗಳ್ತಂಗೆಯೊಳೆನುತಂ ಕೈ ।
ಪಿಡಿಪಡಿಮೊಗದ ಸರಸಗಾತ್ರಿಯರ ಸುರತರತಿಬಿಡದಡರ್ವ ॥
ಪಿಡಿಯ ನಡೆಯ ಪೀವರಕುಚಯುಗಳದ ।
ಪಿಡಿನಡುವಿನ ಪೆಣ್ಮಣಿಯುಂಗುಟಮಂ ।
§ ಪಿಡಿಸಿದರಾಚಾತುರ್ಯಚತುರ್ವದನನ ಕರತಳದಿಂದ ॥೩೪

ಹೋಮದ ಹೊಸದಳ್ಳುರಿ ಹೊಗರುಣ್ಮುವ ।
ಹೇಮನಗಂ ತದ್ವಲಯದೊಳೆಸೆವ ।
ಶ್ರೀಮದ್ಗಂಡಶಿಖರಿ ¶ ಯೆನಲೊಪ್ಪುವ ಸಪ್ತಪದಿಯ ಮೇಲೆ ॥
ಆಮಾನವಚಂದ್ರಂ ತತ್ಕರದಿಂ ।
ಪ್ರೇಮದಿನಭಿನವರೋಹಿಣಿಯೆನಿಪಾ ।
ಭಾಮೆಯ ಮೃದುಪಾದಂಬಿಡಿದತಿಪಮದದಿಂ ಮೂವಳಸಿದಿನು ॥೩೫

§ ಪಿಡಿಯಿಸಿದಾದಾಚರ್ಯ ಗ॥ ¶ ಸಾಲೊ. ಗ॥

ಈವಟಪಕ್ವಫಲವೆ ಮೆಯ್ಯಂ ಪಿಡಿ |
ದೀವಿಧುಮಂಡಲಮೇನುಜ್ಜ್ವಲಿ‡ಪೀ |
ಶ್ರೀವದನಕ್ಕೆಣೆ ಗಡ । ಕಡುಚೋದಿಗಮಂ ಸಲೆ ಚೆನ್ನಾಗಿ ||
ಭಾವಿಸಿ ನೋಡಿಯೆನುತ ತೋಱುವವೊಲ್ |
ಭಾವಕಿಯರ್ ಮಾಣಿಕಮಣಿದೀಪಂ |
ತೀವಿದ ಮೌಕ್ತಿಕದಾರತಿಯಂ ಪಿಡಿದೆತ್ತಿದರಾಪ್ರಿಯರ್ಗೆ ||೩೬

ಅಂಗಜಪಂಚಫಣೋರಗನಾದಿ |
ವ್ಯಾಂಗದೊಳುದ್ಭವಿಸಿದ ಕಿಱುಮುತ್ತಿನ |
ಜಂಗುಳಿಯಂ ತದ್ವದನಂಗಳನೋವದೆ ಹೆಱುವಂದದೊಳು ||
ಮಂಗಳಮಯಮೂರ್ತಿಗಳೆನಿಪಾವಿಧು |
ನಂಗಳ ಮಣಿಮಸ್ತಕದೊಳ್ ನವಶತ |
ತಳಂಗಳನಿಕ್ಕುವ ನೀಲಾಂಬಕಿಯರ ನಿಡುಗೈಯೊಪ್ಪಿದುವು ||೩೭

ಮುಕುರಮುಖದ§ ಮುಗುಳ್ದಬ್ಜಕುಚಂಗಳ |
ಸಕಲಶಶಾಂಕಲಲಿತನಿಟಿಲದ ನವ |
ಪಿಕವಚನದ ಪೊಸಪೀಲಿದುಱುಂಬಿನ ಪಿಂಡುಪಟ್ಟವೆಗುರುಳ ||
ವಿಕಸಿತವಿಚಕಿಲಸೌಗಂಧದ ಚಂ |
ಪಕನಾಸಿಕದ ನಪೀನಪ್ರಮದಾ |
ಪ್ರಕರಂ ತತ್ಪ್ರಭುವಂಶನಮೇರುವನೊಲವಿಂ ಹರಸಿದರು ||೩೮

ಹರವರಿಯಾಗಿ ಹಲವು ದಿಙ್ಮುಖದೊಳ್ |
ಪರಕಲಿಸಲಿ ನಿನ್ನ ಯಶೋವಲ್ಲರಿ |
ಹರವಸದಿಂ ನಿನಗದಿರಾದಗಿಯರೆನಿಪ್ಪಾರಾತಿಗಳ ||
ಹರಣಂ ಹಾವನೆ ಹಾರಲಿಯೆನುತುಱಿ |
ಹರಸಿ ತಳಿದರಳೆಮುತ್ತಿನ ಸೇಸೆಯ |
ಹರಲಂ ಹೊಸಹರೆಯದ ಮುತ್ತೈದೆಯರರಸನ ಸಿರಿದಲೆಗೆ ||೩೯

ತದನಂತರದೊಳುಱಿದ ವಿಧಗಳನುರು |
ಮುದದಿಂ ತೀರಿಸಿ ಸೌಂದರತೆಯ ಸಂ |
ಪದದೊಳ್ ಸಜ್ಜುಕಸರನಂ ರತಿಯಂ ಗೆಲ್ದ ಬಿರುದನಾಂತು ||

---

‡ ಸುವ. ಖ ||   §. ಮುಗುಳ್ದಂಬುಜಕುಚಗಳ. ಕ ||

ಮುದವೆತ್ತಾ ಮುದವಕ್ಕಳನುತ್ಸಹ |
ಮೊದವೆಯೊನಗೆವಾಡಂ ಪಾಡುತ ಕಡು |
ಚದುರೆಯರಾಳಿಯರೊಲವಿಂ ಮನೆದುಂಬಿಸಿದರ್ ವಿಭವದೊಳು ||೪೦

ಮನೆದುಂಬಿಸಿ ಮತ್ತಾ ನೃಪಮಿಥುನವ |
ನನುರಾಗದಿ ಪಲಪರಲ ಪಸೆಗಳೊಳ |
ಗಿನಿಸು ಗಳಿಗೆ ಕುಳ್ಳಿರಿಸಿ ಹರಸಿಯೇಳಿಸಿಯಾಯೆಡೆಯಿಂದ ||
ಮಿನುಗುವ ಮಂಚಮನೇಱಿಸಿ ಪೊಸಪೂ |
ಪನಿನೀರ್ಗರ್ಪೂರವೀಳೆಯ ಸಿರಿಗಂ |
ಪಿನ ಪುಟಕೆಗಳನಿರಿಸಿದರ್ ಸಂಭ್ರಮದಿಂದವಳಾಳಿಯರು ||೪೧

ನೀನೆಳಗಿಳಿಗರನೇಱಲ ಪಣ್ಗಡು |
ನೀನಂಚೆಗೆ ಪಾಲೆಱೆ ನೀನಳಿಗೆ ನ |
ವೀನಕುಸುಮರಸವಿಡು ನೀನಾಬಾಳಾಂಕಿಗೆ ಕೊಟ್ಟಿಕ್ಕು ||
ನೀನನ್ಯಭೃತಕ್ಕಾ ಮ್ರದ ಕೊನರ್ಗುಡು |
ಸಾನಂದದಿನೆನುತಿಳಿಲೆಯ ಬಳಸಿನ |
ಮಾನಿನಿಯರ್ ಜಾಣ್ಣುಡಿದೊಯ್ಯನೆ ಮನೆಯಿಂ ಜಾಱಿದರತ್ತ ||೪೨

ಮೊಲೆಗಳ ಮೇಲೆ ದುಕೂಲದ ಸೆಱಗಂ |
ಬಲಗೈಯೊಳ್ ಪಿಡಿದೊಯ್ಯನೆಡದ ಕರ |
ತಳದ ಬೆರಲನಲರ್ಗಣ್ಗೆ ಮಱೆಯುಮಂ ಮಾಡಿ ಮೊಗಂಬಾಗಿ ||
ಕೆಲದಿನಿಯನನೋವದೆ ಕಿಕ್ಕಣ್ಣಿಂ |
ದೊಲವಿನೊಡನೆ ಬರೆದಾನಸುನಾಣಿಂ |
ಲಲಿತಲತಾಂಗಿ ನಿರೀಕ್ಷಿಪ ಬೆಡಗನದೇನಂ ಬಣ್ಣಿಪೆನು ||೪೩

ಪೊಂಜೆಳೆಮಂಚದ ಮೇಲೆ ಪೊರೆಯೊಳೇ |
ಜುಂಜಾವನೆ ಲಜ್ಜಾತುರೆ ಕಾಂಚನ |
ಕಂಜವದನೆ ತಲೆವಾಗಿರೆ ಕಾಣುತ ಮನದೊಳಲಂಪು ಕರಂ ||
ಸಂಜನಿಯಿಸೆ ತಿರ್ದುತ ಕುಟಿಲಾಳಕ |
ಮಂಜರಿಯುಂ ಮೆಲ್ಲನೆ ಮೆಯ್ಮುಸುಕಿದ |
ಮುಂಜೆಱಗಂ ಜಾಱಿಸಿ ಜಾಣಿಂದಿನಿಯಂ ಪ್ಪಾಯ್ಸೋಂಕಿದನು ||೪೪

ಕುರುಳಂ ತಿರ್ದಿ † ಕುಡುಕಿ ಸವಿದುಟಿಯಂ |
ವರಕಲಶಸ್ತನತಟದೊಳ್ ಪಲ್ಲವ |
ಕರವಿಟ್ಟೊಯ್ಯನೆ ಸೋಂಕಿ ಕದಪನಲುಗಿಸಿ ಪುಳಕಂಗಳನು ||
ಮುರಿದೇಱಿಸಿ ಕಾತರಮಂ ಕೊನರಿಸಿ |
ಮರಳಿ ಮರಳಿಯುಮರ್ದಪ್ಪಿಯುರಸನೆಳ |
ವರೆಯದ ವನಿತೆಯು ನಾಣಂ ಪಿಂಗಿಪ ನೆರೆದಂ ನಲ್ಮೆಯೊಳು ||೪೫

ಚುಬುಕಾಗ್ರಮನೊಯ್ಯನೆ ಪಿಡಿದಲುಗಿಸಿ |
ಕಬಳಂಗೊಂಡು ಸೊಗಸುದಂಬುಲಮಂ |
ನಿಬಿಡಕುಚಕೆ ಪೇರುರಮಂ ಸಂಧಿಸಿ ಬೆಂಗಡೆ ಭಾರ್ಯೆಪಾ ||
ಕಬರಿಯನಱಿದು ನಖಕ್ಷತಕುಸುಮ |
ಸ್ತಬಕಮನಂಗಲತಿಕೆಗಾಗಿಸಿ ತ |
ನ್ನಬಲೆಯ ಬಗೆಯಂ ಬಂದಿವಿಡಿದು ಕೂಡಿದಸಾಕಾದಲನು ||೪೬

ಅರಲ ಸರಲ ಸೊನ್ನಾರಂ ಪಲಪೂ |
ಪರಕಲಿಸಿದ ಪಾಸೆಂಬಗ್ಗಿಟದೊಳ |
ಗಿರಿಸಿ ಮಿಸುನಿಗರುಗಳನುಗುರಿಕ್ಕಿತದ ಮಾಣಿಕವತ್ತಿಗೆಯು ||
ಬೆರಸಿಯಲಂಪಿನ ಕೇಳಾಗಾರಮನಿ |
ಟ್ಟುರುಪಿ ರತೋದ್ದೀಪನದುರಿಯಿಂ ಕಡು |
ವಿರಿದುಂ ಸ್ವಚ್ಛಂದದಿನಮರ್ದಪ್ಪಿದರೊಲ್ಮೆಯೊಳಾಪ್ರಿಯರು ||೪೭

ಅವಳ ಮುಖಾಬ್ಜಕೆ ತನ್ನ ಮುಖೇಂದುಗೆ |
ಯುವಳ ಕುಚಾದ್ರಿಗೆ ತನ್ನುಗುವರ್ಜ್ಜರ |
ಕವಳ ನಯನಭೃಂಗಕೆ ತನ್ನಯ ಮೂಗ್ಗಿನ ಸಂಪಗೆಗೆ ||
ಅವಳೂರುಮನೋಭವಗಜಹಸ್ತಕೆ |
ತವಕದಿ ತನ್ನಯ ಕೇಸರಿಮಧ್ಯಕೆ |
ಯುವನಿಪನರಸುತನದಿ ಕೆಳೆತನಮಂ ಮಾಡಿ ನೆರೆದನಾಗ ||೪೮

ವರಮೋಹಮನೋಧರ್ಮಮೆ ಧರ್ಮಂ |
ಸುರತಸಮಯಮೆ ಸಮಯಮಂಗಜನೇ |
ಪರದೈವಂ ಪ್ರಿಯದರ್ಶನಮೆ ಲಸದ್ದರ್ಶನಮೆಂದೆಂಬಾ ||

---

† ಕುಡ್ಡಿಕಿ. ಕ ಗ.

ಕೊರಲ ಸರದ ಗುರುಮಂತ್ರಮನಿರದು ।
ಚ್ಚರಿಸಿ ಬೞಿಕ ಮುದ್ರೆಯನಿಡುವಂದದಿ ।
ಹರಿಸದಿನುಗುರ್ಗಲೆಯಿಟ್ಟನರಸನಂಗನೆಗಾಸುರತದೊಳು ॥ ೪೯

ಪೊಸಮಂಚದ ಮೇಗಣ ಕೆಂಬಟ್ಟೆಯು ।
ಮಿಸುಗುವ ಪಾಸೆಂಬಕ ಡದೊಳು ನವ ।
ಘುಸೃಣವಿಮಿಶ್ರಿತಗಂಧರಜಮನಂಗದೊಳಿಟ್ಟೊತ್ತುರದಿ ॥
ನಸುಸಡಿಲಿದ ತಕ್ಕೆಯು ವಿನ್ನಾಣದಿ ।
ನಸವಾಯುಧನೃಪನೀಕ್ಷಿಸುತಿರೆ ಭರ ।
ವಸದಿಂ ಮೋಹನಮಲ್ಲಗಲಹಮಂ ಮಾಡಿದರಾಪ್ರಿಯರು ॥ ೫೦

ಕಿಱುಮುತ್ತಿನ ಮಣಿಯೆಂಬ ಶಿಶುಗಳಂ ।
ಹೆಱುವ ಸಮಯದೊಳಗಾವೇದನೆಯಿಂ ।
ದುಱದೆ ನರಲ್ವ ಸುಕರಶಂಖದ ಮಾೞ್ಕೆಯೊಳಾಸುಸಿಲಿಂದ ॥
ಕಿಱುಬೆಮರ್ವನಿಯೊಗೆವವಸರದೊಳ್ ಬಾ ।
ಯ್ದೆಱೆಯದೆ ಬಣ್ಣಿಸರಮನುಚ್ಚರಿಸುವ ।
ನೆಱೆವೆಱೆಮೊಗದಬಳೆಯು ನುಣ್ಗೊರಲತಿರಂಜನೆವಡೆಯಿತ್ತು ॥ ೫೧

ಸುದತಿಯು ಸುಕುಮಾರಾಂಗ ಲತಿಕೆಯೆನೆ ।
ಮೃದುಕರತಲಪದತಲ ಪಲ್ಲವಮೆನೆ ।
ಪುದಿದಲಘುಸ್ತನ ಕೃತಕಾಚಲಮೆನೆ ಪೊಕ್ಕುೞ್ ಸರಸಿಯೆನೆ ॥
ಸದಮಲತರಲಾವಣ್ಯಂ ಕೃತ್ರಿಮ ।
ನದಿಯೆನೆ ನಿಡುಸುಯ್ಯೆಮೆಲ್ಲೆಲರೆನೆ ಸ ।
ಮ್ಮದದಿಂ ಸುರತವನಕ್ರೀಡೆಯೊಳೆಸೆದಂ ಭೂಮೀಶ್ವರನು ॥ ೫೨

ಸೆಳೆಮಂಚದ ಕಾಲೆಂಬ ರವಣೆಕೋ ।
ಲೊಳಗೊಪ್ಪುವ ಪಾಸೆಂಬ ಕವಳಿಗೆಯೊ ।
ಳೆಳಜೌವನೆಯುವಯುವಮೊಂದೆಂಬ ಲಸತ್ಪುಸ್ತಕದೊಳಗೆ ॥
ತೊಳಗುವ ಮದನಾಗಮಪಂಚಿಕೆಯಂ ।
ತಳುವದೆ ಬರೆವಂದದಿನುಗುರ್ಗೊನೆಯಿಂ ।
ಕಲೆಗಳ ನಿರದಿಟ್ಟಂ ಪ್ರಿಯನೆಂಬ ಸುಮೋಹನಪಂಡಿತನು ॥ ೫೩

ಮುಗುಳ್ದೆಯ ನೆಲೆಮೊಲೆಯೆಂಬ ಮಿಸುನಿಗುಂ |
ಡಿಗೆಗಳನುರದೊಳಗಿಟ್ಟುಜ್ಜ್ವಲಿಸುವ |
ಮೊಗದಿಂ ಮೊಗಕೆ ಮಿಸುಪ ತಾಂಬೂಲದ ರಸಮಂ ಮುಕ್ಕುಳಿಸಿ ‖
ಉಗುಳುತ ನಳಿಗುರುಳೆಂಬ ತೆರೆಗಳಂ |
ಮಿಗೆ ಕಲಕುತ ಸುರತಾಂಬೋನಿಧಿಯೊಳ |
ಗೊಗುಮಿಗೆ ತೇಂಕಾಡಿದನರಸಂ ಮದನಾಗ್ನಿ ತವಿಪ ತೆರದಿ ‖ ೫೩

ಉರುಹರ್ಷಾಶ್ರುಜಲದ ತನುಗಂಧದ |
ಸಿರಿಗಂಪಿನ ಸುಲಿಪಲ್ಲಕ್ಷತೆಗಳ |
ತರಳವಿಲೋಚನಕುಮುದದ ಸವಿದುಟಿಯಮೃತದುಗುರ ಸೊಡರ ‖
ಸುರಭಿಶ್ವಾಸಲಸದ್ಧೂಪದ ಬಂ |
ಧುರಕುಚಫಲದರ್ಶನೆಯಿಂ ಪ್ರಾಣೇ |
ಶ್ವರನಂ ಪೂಜಿಸಿ ಪಡೆದಳ್ ಸತಿ ಸಂಮೋಹನಮುಕ್ತಿಯನು ‖ ೫೪

ಮೊಱೆಯನುಱಿದ ಪೊಲ್ನುಡಿ ಮೊನೆಮಸೆವ |
ಕ್ಕಱು ಬಾಯ್ದೞೆಗೆಡೆವಿಡದಡೆಯಾಡುವ |
ನಱುದಂಬಲವೆಡಮಱಿಯದ ಕೊರಲುಲಿಯೆವೆಯಲುಗದ ನೋಟ ‖
ಸಱಿಬಿಡದಪ್ಪು ರಸವನೊಸರ್ವಿಂದುಟಿ |
ಕುಱುಪನಿಡುವ ಕೂರುಗುರಱಿದಲಸಿಕೆ |
ನೆಱೆಸೊಗಯಿಸಿದುವು ನವಸುರತಕ್ರೀಡೆಯೊಳಾದಂಪತಿಗೆ ‖ ೫೫

ಕೊರಲೊಳೆಸೆವ ಕೂಜಿತದ ಸುಮಂತ್ರದಿ |
ಬೆರಲ ಕೊನೆಯ ಬರೆಪದ ಬಾಸುಱಿ ಬಂ |
ಧುರಯಂತ್ರದಿ ಷೋಡಶಕಲೆಗಳ ಕಾಲಮನಱಿದುಪಚರಿಪಾ ‖
ವರತಂತ್ರದಿನಿನಿಸಿದುಟಿಯೌಷಧದಿಂ |
ತರುಣಿಯ ಮೆಯ್ಯಾಲಸ್ಯದ ರುಜೆಯಂ |
ಪಿರಿದುಂ ಪಿಂಗಿಸಿದಂ ಪ್ರಿಯದಿಂ ಪ್ರಿಯನೆಂಬಱಿಕೆಯ ವೈದ್ಯಂ ‖ ೫೬

ತೋರಮೊಲೆಯ ಬಲ್ಗೊಡದ ಬೆಮರ ಪೆ |
ನ್ನೀರಂ ಮೀಯಲೆಱೆದು ಬಾಯ್ಗೂಟಮ |
ನಾರೋಗಣೆಯಿತ್ತುಲರ್ಗಣ್ಗಳ ಬೊಂಬೆಯ ಪಡಿನೆೞಲೆಂಬಾ ‖

ಚಾರುವಿಚಿತ್ರಾಂಬರಮಂ ಪೊದೆಯಿಸಿ |
ಕೂರುಗುರ್ಗಳೆಯಾಭರಣಮನಿಟ್ಟು ಮ |
ನೋರಮಣನನುಪಚರಿಸಿದಳಂಗನೆಯಾನವಸುರತದೊಳು ||೪೭

ಜನ್ನನಲಿವ ಕಲಿಗಂಟು ಕದಕ್ಕದಿ |
ಪುನ್ನತಕುಚತಟದೊಳ್ ನರ್ತಿಪ ಪೊಸ |
ರನ್ನದ ಪಂಚಸರಂ ಕಬಪಂ ಚುಂಬಿಪ ಕಿವಿಯೋಲೆಗಳ ||
ಚೆನ್ನಿಯಿದ್ದಲ್ ನೊಸಲೊಳ್ ಕುಣಿವಳಕಂ |
ಪೊನ್ನಂದುಗೆಯ ರ್ಝಣತ್ಕೃತಿಗಳ ರವ |
ದಿನ್ನೆೞಿಸೊಗಯಿಸಿದಳ್ ಸುದತೀಮಣಿಯಾಪುಂಭಾವದೊಳು ||೪೮

ಅಳಕಾನೀಕವಳಿಗಳಂ ತಾಡಲ್ |
ಪೆಳತಿಗೆಗಣ್ ಬೆಳ್ಳರಲಂ ತಾಡಲ್ |
ನುತೋಳ್ ಕೊಂಬುಗಳಂ ತಾಡಲ್ ಚೆಂದುಟ ಕೈಪಜ್ಜೆಗಳು ||
ಎಳದಳಿರಂ ತಾಡಲ್ ತೆಂಗಡೆಯಿಂ |
ಸುೞಿವ ಸುರಭಿವಾಯುವ ತಾಟನದಿಂ |
ತಳುವದೊಲೆವ ಲತೆಯಂತೆಯುಪರಿರತದಂಗನೆಯೊಪ್ಪಿದಳು ||೪೯

ಸಿರಿಮೊಗವೆಂಬ ಶಶಾಂಕನ ನೆಮ್ಮಿದ |
ಕುರುಳೆಂಬೆಳಗತ್ತಲೆ ಮುತ್ತಿದುದೆನು |
ತುರುಮುದದಿಂ ಪೆಱಗಡೆ ನಲಿದಾಡುವ ತಮದೊಡ್ಡಣದಂತೆ ||
ಕೊರಲ ಸರದ ಕಿಱುಮೊೞಿಗಂ ಲಾಲಿಸಿ |
ಹರಿಸಂ ಮಿಗೆ ನರ್ತಿಪ ನವಿಲಂತಿರ |
ಮುರುಳ್ವ ಕಬರಿ ಕುಣಿದುದು ಬೆಂಗಡೆ ಪುರುಷಾಯಿತದಂಗನೆಗೆ ||೫೦

ಅಳಿಕದೊಳಿೞಿವಳಕಗಳೆಂಬೆಳಗ |
ತ್ತಲೆಯಂ ನುಣ್ಗೊರಲೊಳು ರಂಜಿಸುವುಗು |
ಗರ್ಗಲೆಯೆಂಬರವೆಱಿಯಂ ಕಾಣುತ ನಡನಡುಗುವ ಕೋಕಮೆನೆ ||
ನೆಲೆವೆರ್ಚಿದ ನಿಡುಸುಯ್ಯೆರಲುಪದಿ |
ನಲುಗುವ ಪೊಂದಾವರೆಗಳ ಮುಗುಳೆನೆ |
ಲಲನಾಮಣಿಗೆ ಕದಕ್ಕದಿಸುದುವು ಕುಚಂ ಪುಂಭಾವದೊಳು ||೫೧

ಪಸುಳೆವರೆಯುದಂದಿಂದವೆ ತನ್ನೊಡ |
ನೊಸೆದೆರವಿಲ್ಲದೆ ಕೂಡಿ ಕೆಲಂಬಾ |
ಲ್ದೆಸಕವಡೆದ ನಿದ್ರಾತರುಣಿಯನಾಧರಣೀಪಾಲಕನು ||
ಅಸಿಯುಳದೊರ್ವಳ್ ದೊರಕಲ್ಕಾಣು |
ತ್ತಸವಸದಿಂ ಪೊಱಮಡಿಸಿದನೆಂತೆನೆ |
ಪೊಸತಂ ಕಂಡು ಪೞದನಿಱುಕೆಯ್ವುದೆ ನಿರ್ನೆರವಿಹದುಂಟೇ ||೬೩

ಬೆಳತಿಗೆಗಣ್ಣ ಬೞಲ್ದುೞಿದ ಬಳೆ |
ಬಲುಹುಡುಗಲ್ ಬೀಯಲ್ ನುಣ್ಗುರುಳಿ |
ಬೞಲಲ್ ಸುಯ್ ತಡಬಡಿಸಲ್ ಬಾಯ್ಗುಟ್ಟಂ ದಣಿಯುತ್ತಿರಲು ||
ನೞತೋಳವುರ್ದಪ್ಪುಗೆ ನಸು ಜರಿಯಲ್ |
ಕಲೆಗಾಡುವ ಕಯ್ಯಲಸಲ್ ಬಗೆ ನೆಱೆ |
ಮುೞುಗಲಿಸಿದಿನೊಳ್ ಸುಸಿಲ ಕಡೆಯ ಮೂರ್ಛೆಯನೈದಿದರವರು ||೬೪

ಕೆಂಜೆರೆಗಣ್ ಕೆದರ್ದೊಪ್ಪುವ ಕುಂಕೆ |
ಕಂಜಕುಸುಮಪರಿಮಳಮುಣ್ಮುವ ಪೊಸ |
ಪೊಂಜೆಳೆವೆಯು' ಪೊಗರೇಱುವ ಮೊಗವುಚ್ಚಳಿಸುವ ನಿಡುಸುಯ್ಲು ||
ಗುಂಜಿದಳಕತತಿ ಗುಜ್ಜುವಡೆದ ಮೊಲೆ |
ರಂಜಿಸೆ ರತ್ಯಂತಶ್ರಮಜಲಮುಂ |
ಮುಂಜೆಱಗಿನ ಮೊಲ್ಲೆಲರಿಂದಾಱುಸುತೊಪ್ಪಿದಳಾತರುಣಿ ||೬೫

ಉಗುರಿಱುತದೊಳುಣ್ಮುವ ಕಲೆಯುಸುಕೆಯು |
ಮುಗುಳ್ನಿಸುದುರಿದ ಮಲಯುರುಹವು ಮಗ |
ಮಗಿಸುವ ಮಲ್ಲಿಗೆ ಮೊಳೆವಳಬಮುರ್ವನಿ ಪೊಸವಾವಿನ ಮೊಗ್ಗ ||
ಪೊಗರೇಱುವ ಮೊಗಮುಂಬುರುಹಂ ಬೆಂ |
ಡೊಗೆವಲರ್ಗಣ್ ಕುವಲಯಮಾಗಲ್ಕಾ |
ಮುಗುದೆಯು ಸುಸಿಲ ಕಡೆಯೊಳ್ಕಸರಲ ಕರುವಿನಂತೊಪ್ಪಿದಳು ||೬೬

ಬೞಲದೆ ಬಹುರತಿಬಂಧಕ್ರೀಡೆಗೆ |
ಕಳಿಯದಲಂಪಂ ಬಗೆಯೊಳ್ ಪೋಃಪುಳಿ |
ಗೊಳಿಸುವ ಬಲ್ಲಹನುಜ್ಜ್ವಲಿಪಾನನವುಂ ತುಱುಗೆವೆಗಳನು ||

ಹಳಚಕದೆ ನೀಡುಂ ನಿಟ್ಟಿಪ ನೀರ್ಜಯು ।
ತಳತಳಿಸುವ ಒಳತಿಗೆಗಣ್ಣಳ ತನಿ ।
ವೆಳಗೆ ಬಲಿದು ಬೆಳಗಾದಂದದಿ ಹಳಹಳಚಕನೆ ಬೆಳಗಾಯ್ತು ॥೬೭

ಅಚಕೆನ್ನೇಸಱುದಯದೊಳ್ಕೆಲದ ಸು ।
ಲೋಚನೆನೆಸಹಿತುಪ್ಪವಡಿಸಿ ನವಹಿಮು ।
ರೋಚಿರ್ಮಂಡಲಮುಖಮಂ ತೊಳೆದರ್ಚಿಸಿಯರ್ಹತ್ಪ್ರತಿಯಂ ॥
ಆಚಾರ್ಯರ ಪದಯುಗದೊಳ್ ನೊಸಲಂ ।
ಚಾಚಿ ವಿಭೂಷಣಮಿಟ್ಟು ಸುರಭಿನಾ ।
ರಾಚಂ ನವತನುವಿಡಿದಂದದಿ ಕುವರಂ ಕಣ್ಗೊಪ್ಪಿದನು ॥೬೮

ಅರಿಜಯನವನೀಚಕ್ರಾಧೀಶ್ವರ ।
ನುರುವಿಭವಂ ಶ್ರೀಮುಖನತಿಸೌಮ್ಯಂ ।
ತರುಣೀಜನಮನ್ಮಥನಾಹವರಾಕ್ಷಸನಧಿಕಪ್ರಭವಂ ॥
ವರವಿಕ್ರಮನುನ್ನತಶುಭಭಾವಂ ।
ಸರಸಜನಾನಂದಕರಂ ವಿಭುವ ।
ತ್ಸರವೆಂಬಂದದಿನತಿಶೋಭಿಸಿದಂ ಪ್ರಭುಕುಲಮಣಿದೀಪಂ ॥೬೯

ಇದು ಸುರನರಫಣಿಪರಿವೃಢವಿನಮಿತ ।
ವಿದಿತವಿನಯಗುಣಗಣಯುತಜಿನಪತಿ ।
ಪದಸರಸಿಜಮದಮಧುಕರನತಿಚತುರಕಲಾಪರಿಪೂರ್ಣಂ ॥
ಸದಮಲಚರಿತಂ ಪ್ರಭುರಾಜಂ ಸಂ ।
ಮುದದಿಂ ರಚಿಸಿದ ಜಯನೃಪಕಾವ್ಯದೊ ।
ಳೊದವಿ ಮನೋಹರಮಂ ಪಡೆದತ್ತೆಂಟನೆಯ ಮಿಸುಪ ಸಂಧಿ ॥೭೦

ಎಂಟನೆಯ ಸಂಧಿ ಸಂಪೂರ್ಣಂ.

*

# ನವಮ ಸಂಧಿ.

—— 0 ——

**ಸೂಚನೆ** ॥ ಭರತೇಶನ ಬೞಿಗೆಯ್ದಿ ಮಗುೞ್ದವ ।
ಸರದೊಳ್ ಗಂಗೆಯೊಳಾದುಬ್ಬೆಗಮಂ ।
ಪರಹರಿಸಿದಳಾಗಂಗಾದೇವತೆ ಜಯನೃಪಚಂದ್ರಮಗೆ ॥

ಬೞಿಕ ಸುಲೋಚನೆಯಿಂ ನೇರ್ಗೞಿಯಳ್ ।
ನಳಿನವಿಲೋಚನೆ ಲಕ್ಷ್ಮೀಮತಿಯಿಂ ।
ವಿಳಸದ್ವೈಭವದಿಂ ರವಿಕೀರ್ತಿಗೆ ಕೈದಾರೆಯನೆಱೆದು ॥
ಇಳೆಗಧಿನಾಥನಕಂಪನರೇಂದ್ರಂ ।
ಲಳಿತಾಂಬರಗಜಭೂಷಣತುರಗಾ ।
ವಳಿಯಿಂದೊಸಗೆಗೆ ಬಂದ ನರಾಧೀಶರನುಪಚರಿಸಿದನು ॥ ೧

ಇಂತುಪಚಾರಂ ಮಾಡುತ್ತವರಂ ।
ಸಂತಸದಿಂ ಬೀೞ್ಕೊಟ್ಟು ಬೞಿಕ ಭೂ ।
ಕಾಂತನಕಂಪಂ ಸುಗುಣೆ ಸುಲೋಚನೆಗಂ ಲಕ್ಷ್ಮೀಮತಿಗಂ ॥
ಚಿಂತಾರತ್ನಂ ಚೈತನ್ಯಂಬಡೆ ।
ದಂತಡುವಲಿಯಂ ದಣಿವಂತಿತ್ತು ।
ಕಂತುಸದೃಶಜಯನೃಪನಂ ರವಿಕೀರ್ತಿಯುಮಂ ಬೀೞ್ಕೊಟ್ಟಂ ॥ ೨

ಪೀಯೂಷಾಂಬುಧಿಯಿಂ ಭಾರ್ಗವಿವರ ।
ಸಾಯಿಂದ್ರಾವರಜಂ ಪೊಱಮಡುವಂ ।
ತಾಯತನೇತ್ರೆ ಸುಲೋಚನೆಗೂಡಿಯಕಂಪನ ನಗರಿಯನು ॥
ಆಯತಿಯಿಂದವ ಪೊಱಮಟ್ಟಂ ಜಯ ।
ಜಾಯಾಪತಿ ಜಯಭೂವರನಭಿನವ ।
ಕಾಮಭವಂ ಖರಕಿರಣಪ್ರಭವಂ ಕುಲಿಶಾಯುಧವಿಭವಂ ॥ ೩

ಎಡಬಲದೊಳಗೆಣ್ಬರ್ ಕೋಮಲೆಯರ್ ।
ಪಿಡಿಯನಡರಿ ಚಾಮರಮಂ ಬೀಸಲ್ ।
ಪೊಡವಿಯೊಡೆಯರೆಣ್ಬಾಸಿರಮಕುಟಧರರ್ ಬಿಡದೋಲೈಸಿ ॥

ನಡೆತರೆ ನವಪಟ್ಟದ ಪೇರಾನೆಯ |
ನಡರಿ ಕರಂ ಪೊಗೞ್ವಕ್ಕರಿಗರ ಪೊಸ |
ನುಡಿಯುಂ ಲಾಲಿಸುತಾಪುರವಂ ಪೊಱಮಟ್ಟನವನಿಪಾಲಂ || ೪

ಪೊಡವಿ ನೆಱೆಯದಾಪಡೆಗೆ ಫಣೀಶನ |
ಪೆಡೆ ಸತುಗುಂದಿತದಱ ಬೆಣ್ಪಿಗೆ ಬಾರ್ |
ಗಡಿಗೆಟ್ಟಿತು ತತ್ಪದದಿಂದೊಗೆದು ನೆಗೆವ ಧೂಳೀತತಿಗೆ ||
ಪೊಡೆವ ಪಲವು ವಾದ್ಯಧ್ವನಿಗೆಣ್ದೆಸೆ |
ಗಡೆಯುಂ ಸಾಲದು ನಿಮಿರ್ವ ಪತಾಕೆಯೊ |
ಳಡಿಗೆಟ್ಟಿತು ಪವಮಾನಂ ಮತ್ತದನೇನಂ ಬಣ್ಣಿಸೆನು || ೫

ವಾರಾಣಸಿಯನೊಲವಿನಿಂ ಪೊಱಮ |
ಟ್ಟಾರಾಜೇಂದ್ರಶಿಖಾಮಣಿ ತನ್ನಯ |
ಭೂರಿಬಳಂಬೆರಸಳಕಾನಗರಿಗೆ ದಂಡುನಡೆವ ತೆಱದಿ ||
ಧಾರಿಣಿ ಡಿಳ್ಳಯಿಸುವವೊಲ್ ಬಡಗಣ |
ದಾರಿವಿಡಿದು ನಡೆತಂದಾಜಂಗಮ |
ವಾರಿಧಿಯಂತೆ ವಿರಾಜಿಪ ಗಂಗಾನದಿಯ ತಡಿಗೆ ಬಂದು || ೬

ಎನ್ನಂ ಧರಿಯಿಪ ಭುಜದೊಳ್ ಜಯಸತಿ |
ಯುನ್ನತ್ಕೆಯಿನಿರಿಸುವುದೌಚಿತ್ಯವೆ |
ಇನ್ನವಳಂ ಪಿಡಿದಸಿಧಾರೆಗೆ ಪೊಱಮಾಡಿಸುವದನ್ನೆವರ ||
ನಿನ್ನಂ ನೋಡೆನೆನುತಾನೃಪನೊಳ್ |
ತನ್ನ ಮೊಗಂದಿರುಗಿದ ಭೂಭಾಮೆಯ |
ಬೆನ್ನೊಳೆಸೆವ ಮುತ್ತಿನ ವೇಣಿಯವೋಲ್ ಸೊಗಯಿಸಿತಾಸಿಂಧು || ೭

ಗರಗರನೆಯ್ದುವ ಗಂಗಾದೇವಿಗೆ |
ಧರಣೀದಯಿತೆ ಧವಲಚಾಮರವಂ |
ಹರಿಸವೊದವೆ ಹಲವಂ ಡಾಳಿಸುವಂದದೆ ಪಲಪಸುಗೊರ್ಡೆಯುಂ ||
ಪಿರಿದುಂ ಪಿಡಿದೊಲ್ದೆತ್ತುವ ತೆಱದಿಂ |
ಕರವೊಪ್ಪುವೆ ಕಾಶಪ್ರಸವಂ ಸುರು |
ಚಿರತರುನಿಕುರುಂಬಂ ಬೆಳೆದೊಪ್ಪಿದುವಾವಿಕ್ಕೆರೆಗಳೊಳು || ೮

ಫಲವರ್ಣದ ಪಾವಸೆಗಳ್ ಪತ್ತಿದ |
ಸೆಲೆಯಾಸಿಂಧುಸುದತಿ ಕೈಗೈಯಲ್ |
ಜ್ವಲಿಸುವ ಪಂಚಮಣಿಯ ಪಚ್ಚಂಬೊಲ್ ಕಣ್ಗೆ ವಿರಾಜಿಸಿತು ||
ಕಲಕುಸುಮದ ಜಂಗುಳಿಯಿರ್ತಡಿಯೊಳ್ |
ಗಿಳಿಯ ಭಕುತತಿಂತಿಣಿಯಾತೀರ್ಥಮ |
ನೊಲವಿಂದರ್ಚನೆಗೆಯ್ವಂದದಿನತಿರಮ್ಯಂದಾಳ್ದುದು ||೯

ಹರನಗಲಲ್ಕುದ್ಭವಿಸಿದ ವಿರಹದ |
ಪಿರಿದುಂ ಕಲ್ಕಲದೊಳ್ ಪಲವಗಲುಂ |
ಪರಿಯಲ್ ಪುಟ್ಟಿದ ಘನಪಾಂಥಶ್ರಮದಳುರ್ವ ನಿದಾಘದೊಳು ||
ಉರಿವ ಬಿಸಿಲ ಬಳ್ವಂಕೆಯೊಳಂಗದೊ |
ಳಿರದುದಯಿಸಿದಾಸ್ವೇಟಕಮೆನೆ ಬಂ |
ಧುರವಾದುವು ಭಾಗೀರಥಿಯೊಳಗುಣ್ಮುವ ಬೊಬ್ಬುಳಿಕೆಗಳು ||೧೦

ಕರಮೆ ಕುಮಾರ್ಗಂಬಿಡದೆ ಚರಿಸುತನ |
ವರತಂ ಬಿಡದೆ ಕುಜಾತಿಸಮಿತಿಯುಂ |
ಪಿರಿದು ತಟಸ್ಥಂಮಾಡಿದ ದಾರುಣಮಪ್ಪಾದೋಷವನು ||
ಪರಿಹರಿಸುವೆನೀತೆಱದಿನೆನುತ ಕ |
ಮ್ಮರಿವಿದ್ದಂತುತ್ತುಂಗಶಿಲೆಗಳಿಂ |
ಭರದಿಂ ಬಿದ್ದು ಪರಿವ ಬಲ್ದೊಱೆಯುಮತಿಬಂಧುರವಡೆಯಿತ್ತು ||೧೧

ಪೆರಲುದ್ದದ ದಂಟುಡಿದ ಕನಕಸರ |
ಸಿರುಹಲಸತ್ಕೇರಕವೊಂದು ತೆಱಂ |
ದಿರಿದು ವಿರಾಜಿಸಿದತ್ತಾವರ್ತದ ನಟ್ಟನಡುವ ನಿಂದು ||
ಪರಿರಂಜಿಸುತಿರ್ಪಾಜಲದೇವತೆ |
ಯುರ ಪಜ್ಜಳಿಸುವ ಪಾಣಿತಳದೊಳತಿ |
ಭರದಿಂ ತಿರುಗುವ ಪೊಸಪೊಂಬೊಗರಿಯು ಪರಿಯಂ ಪೊಸಯಿಸುತ ||೧೨

ನೀರಂ ತರಲೆನುತಮೆ ಬಂದಾಕಾ |
ಲೂರೂರ ಕುಟುಂಬಸಿತಂಬಿನಿಯರ್ |
ತೀರಂಬೊಕ್ಕು ಮೊಗೆಯೆ ಬಾಗಲ್ಕಾಕೆಗಳ ಕರದ ಕೊಡನುಂ ||

ತೋರವೊಲೆಯ ಸಾಲುಂ ಸೊಗಯಿಸಿದುವು ।
ವಾರಿನಿಧಿಯಜಲಮಂ ತರಲೆನುತವೆ ।
ಭೋರೆನೆ ಬಂದು ಮುಸುಂಕಿದ ವೃತ್ತಪಯೋಧರವೆಂಬಂತೆ ॥ ೧೩

ಮತ್ತೆ ಮರಾಳಗಮನೆಯರ್ ಮೊಗೆಯಲೆ ।
ನುತ್ತೆ ಕೊಡನನುದಕದೊಳಗಾಳಿಸೆ ಜೆ ।
ಲ್ಪಿತ್ತರವಾದುದು ನವ್ಮೀಮೋಹಕರಂಡಕದಂತೆಸೆವ ॥
ವೃತ್ತಕುಚಕ್ಕೆಣೆಯೆನುತತಿಗರ್ವ್ವಂ ।
ಬೆತ್ತುವು ತಾವಿವೆನುತ ಕಡುಮುಳಿಸಿಂ ।
ದೊತ್ತಿ ಘುಡುಕುನೀರದ್ದುವ ತೆಱನಂ ತೋಱುವ ಪೊಂಗಿನೊಳು ॥ ೧೪

ಮೊಗೆದುದಕವನೊಯ್ಯನೆ ನುಣ್ಗೊಡನಂ ।
ಮುಗುದೆಯರೆರಡುಂ ಜೆಂದಳದಿಂದವೆ ।
ನೆಗಪಿ ಮನೋರಾಗದಿ ರಂಜಿಪ ಸಿರಿದಲೆಯೊಳಗೇಱಿಸಲು ॥
ಬಗೆಗೊಳಿಸಿತು ಬಲ್ಲವರಂ ತಮ್ಮಯ ।
ಮೊಗವೆಂಬಪರಂಜಿಯ ಕನ್ನಡಿಯೊಳ್ ।
ಸೊಗಯಿಪ ತಳಿರನಿರಿಸಿ ಪೊಸಕಳಸಮನೇಱಿಸುವಂದದೊಳು ॥ ೧೫

ಉರಿವ ಬಿಸಿಲ ಹೊತ್ತಿನೊಳೆಯ್ತರುತತಿ ।
ಭರದಿಂ ಜಳಕಂ ಪೊಕ್ಕು ಮುೞುಂಗುವ ।
ಸುರಭಿಲತಾಕೋಮಲೆಯರ ಮೇಲುದುಮಾನಿಡುದಲೆನವಿರುಂ ॥
ಪರಕಲಿಸುತ ತೇಲಿ ಕರಂ ಸೊಗಯಿಸಿ ।
ತುರುಮುದದಿಂ ತೊಳ್ವೆಣ್ಕೆಸುಗುವ ಕ ।
ಸ್ತುರಿಯಂ ಚಂದನವಂ ಕಣ್ಗೊಳಿಪಂದದಿ ಲೇಪಿಸಿದಂತೆ ॥ ೧೬

ಈತೆಱದಿಂ ಶೋಭಾಕರವಡೆದಾ ।
ಸ್ರೋತಸ್ವಿನಿಯ ಬಲದ ತಡಿವಬಿಯೊಳ್ ।
ಭೂತರುಣೀಪ್ರಾಣೇಶಂ ತನ್ನ ಚತುರ್ಬಲವಂ ಬಿಡಿಸಿ ॥
ಆತರಳಾಕ್ಷಿ ಸುಲೋಚನೆಯುಂ ವಿ ।
ಖ್ಯಾತರ್ ವಿಜಯಜಯಂತಾನುಜರಂ ।
ಪ್ರೀತಿಯಿನಿರವೇೞ್ದವರೊಳ್ ತಾನಿಂತೆಂದು ನಿರೂಪಿಸಿದಂ ॥ ೧೭

ಸಾವಂ $ಮಾಡದಯೋಧ್ಯಾಪುರವರ |
ಕೀಮೆಯ್ಯೊಳ್ ನಡೆದಾಚಕ್ರಿಗೆ ಸು |
ಪ್ರೇಮದೊಳಭಿವಂದಿಸಿ ಮಗುೞ್ವನ್ನಬರಲ್ಲಿರಿ ನೀಮೆನುತ ‖
ಭೂಮೀಶ್ವರರರೆಬರ್ ತನ್ನೊಡವರೆ |
ಸೋಮಾನ್ವಯ§ತಿಲಕಂ ನವಪಟ್ಟದ |
ಸಾಮಜಮಸ್ತಕವಡದರ್ಗನದಿಯಂ ದಾಂಟಿ ನಡೆದು ‡ಬಂದು ‖೧೮

ಪುರವಂ ಪೊಕ್ಕು ಪುರಂಧ್ರಿನಿಕಾಯದ |
ತರಳಕಟಾಕ್ಷರುಚಿಯ ಬಲ್ಪೊನಲೊಳ |
ಗುರುಮುದದಿಂ ತೇಂಕಾಡಿ ನಡೆದು ರಾಜಾಗಾರಮನೆಯ್ದಿ ‖
ಭರತೇಶಂಗಭಿವಂದಿಸಿ ಬೞಿಕಿನಿ |
ವಿರಿದುಂ ಸಂತೋಷದಿ ಬೀೞ್ಕೊಂಡಾ |
ಕುರುರಾಜಂ ಮಗುೞ್ದುಂ ಮುಂ ಪಾಯ್ದಾಗಂಗೆಯೊಡದ ತಡಿಗೆ ‖೧೯

ವಿದಿತೋದಧಿಯುಪಕಂಠದೊಳುಜ್ಜ್ವಲಿ |
ಪುದಯಶಿಖರಿಯುಪರಿಮದುಡುಪತಿಯೆನೆ |
ಕದಿರಂ ಕೆದರ್ದ ಪಲವು ಕೆಂಬರಲ ವಿಭೂಷಣಮಂ ತೊಟ್ಟು ‖
ಪದಪಿಂ ಪರಿವ ನದಿಯ ತೀರದೊಳು |
ನ್ಮದಕರಿಯುರುಮಸ್ತಕವನಡರಿ ಸಂ |
ಮದದಿಂ ವಿಶ್ರುತವೈಭವವಿಬುಧಾಧೀಶ್ವರನೆಸದಿರ್ದಂ ‖೨೦

ಮತ್ತಾ ಮಹಿಪಾಲನ ಪೆಂಬೞಿಯುಂ |
ಪತ್ತಿ ನಡೆವ ನೃಪಸಂತತಿಯೋೞಿದ |
ಮತ್ತಗಜದ ಹಂತಿ ಕರಂ ಕಣ್ಬಗೆಗತಿರಂಜಿಸಿದತ್ತು ‖
ಬಿತ್ತರದಿಂದೆಸೆವುಪ್ಪುಗಡಲನಿರ |
ದೊತ್ತಿ ಕರಂ ಕಪಿಕಟಕಂ ಬಲ್ಪಿಂ |
ಪೆತ್ತೋವದೆ ಕಟ್ಟಿದ ಸೇತುವಿನಂದಮನಂಗೀಕರಿಸಿ ‖೨೧

ಇಂತತಿಶೋಭೆವಡೆದ ವೈಭವದಿಂ |
ಕಂತುನಿಭಂ ತೊಱೆಯಂ ಪಾಯ್ವಲ್ಲಿ ಕೃ |
ತಾಂತಲುಲಾಯಂಬೊಲ್ ದಾರುಣತರಮಪ್ಪಾಕಾರವನು ‖

$. ಮಾಡಲ. ಖ‖ §. ಕುಲತಿಲಕಂಪಟ್ಟ. ಕ‖ ‡. ಬಂದಂ. ಕ‖

ತಾಂ ತಳೆದೊಂದು ಮಹಾನಕ್ರಂ ತ ।
ದ್ದಂತಿಯ ಪೀನನಿತಂಬಂ§ಬಿಡಿದಿನಿ ।
ಸುಂ ತಡೆಯದೆ ಮತ್ತೊಂದು ಮಹಾಗಾಧದ ಕಡೆಗೆೞೆಯಿತ್ತು ॥ ೨೨

ಕರಗುವ ಕರಿಯು ಮುಗಿಲ ಕೊನೆಯೇಱಿದ ।
ತರಣಿ ಸಮುದ್ರದೊಳಗುಳ್ವಂದದಿ ಮಡ ।
ಕರಿಯುಂ ಮಸ್ತಕವೇಱಿದ ಮನುಜೇಶ್ವರನುಂ ಮಡುವಿನೊಳು ॥
ಭರದಿಂ ಮುೞುಗುತ್ತಿರಲಿರ್ತಡಿಯೊಳ್ ।
ನೆರೆದ ಜನದ ಕಲಕಲಮಾಸಂಜೆಯೊ ।
ೞರದೆ ಪಲುಂಬುವ ಪಲವುಂ ಪಕ್ಕಿಯ ಪಱಿಯೆನಲೊಪ್ಪಿದುದು ॥ ೨೩

ಉಗ್ರಮುಖದ ನಕ್ರಂ ಪಿಡಿದೆೞೆದು ದು ।
ರಾಗ್ರಹದಿಂ ತನ್ನಂ ತದ್ದಂತಿಯ ।
ನಾಗ್ರಾಗಾಧದ ಮೊತ್ತಮೊದಲ್ಗತಿಭರದಿಂದೆೞೆತಪ್ಪಾ ॥
ನಿಗ್ರಹಕೊಂದಿನಿಸಗಿಯದೆ ಬೞಿಕೇ ।
ಕಾಗ್ರಹೃದಯನಿಜತತ್ತ್ವಂ ನರನಾ ।
ಥಾಗ್ರಣಿ ಜಲಕೇಳೀಲೀಲೆಯೊಳೊಸೆದಿರ್ಪಂದದಿನಿರ್ದಂ ॥ ೨೪

ಅದೆ ಮುೞುಗಿದನದೆ ಮುೞುಗಿದನರಸಂ ।
ನದಿಯ ಮಹಾಗಾಧದದೊಳೆನುತಂ ಕಡು ।
ಬೆದರ್ದರ್ ಕೆಲರೆರ್ದೆಗೆಟ್ಟರ್ ಕೆಲರೞ್ತಂಗೆಟ್ಟರ್ ಕೆಲರು ॥
ಅದಿರ್ದರ್ ಕೆಲರತ್ತರ್ ಕೆಲರೋವದೆ ।
ಗದ†ಗದಪಂ ಕೊಂಡರ್ ಕೆಲರೞುಗುಲಿ ।
ಬಿದಿಯುಂ ಬೈಯುತುಮಿರ್ದರ್ ಕೆಲರೊಡಲಂ ಪೊಸೆದರ್ ಕೆಲರು ॥ ೨೫

ಮಡುವಂ ಪುಗಲೆಳಸುವ ಮಾನಿನಿಯರ್ ।
ಪಿಡಿದಲೆ ಶಿಖಿಮುಖಮೊದಲಾದವೞೊಳ ।
ಗೊಡಲಂ ಬಿಡಲುಜ್ಜುಗಿಸುವ ಲೆಂಕರ್ ನೋಡಲೊಡನೆ ಮೂರ್ಛೆ ॥
ವಡುವ ಸಹೋದರರರುಹತ್ತಪಮಂ ।
ಪಡಲೆಳಸುವ ಮಾನ್ಯರ್ ಮಹಿಪಾಲಂ ।
ಸಡುನೀರಂ ಪುಗುವಾಗಳ್ ಸಂದಣಿಸಿದರಾಕಟಕದೊಳು ॥ ೨೬

§ ಬಿಡದಿ ಖ॥ † ಗಾಪಂ. ಕ॥

ನಸುಗೆಂಪೇಱಿದ ನಾಸಾಮುಕುಳದ |
ಬಿಸುಸುಯ್ಯಲ ಬಿಟ್ಟುರುಳ್ದ ಮುಡಿಯ ಬಿಡ |
ದೊಸರ್ವರಶ್ರುಕಣಂ ತೀವಿದ ತುಱುಗೆವೆಗಣ್ಣ ಬೆರಲ ಪಜ್ಜೆ ॥
ಪಸರಂಗೊಂಡ ಪಯೋಧರದೞುವಂ |
ಬಿಸುಟ ಮನದ ಮೇಲುದಟ್ಟ ಸೆಱಂಗಂ |
ಮುಸುಕದ ಮೆಯ್ಯಂತವುರಂ ಪಿರಿದುಂ ಶೋಕವಡೆದುದಾಗ ॥ ೨೭

ಮೋಹರಿಸಿದ ಮಮತೆಯೊಳೆಯ್ತ್ತರುತತಿ |
ಹಾಹಾಕ್ರಂದನಮಂ ಮಿಗೆ ಮಾಡು |
ತ್ತಾಹೆಣ್ಮಣಿ ಹಿರಿಯರಸಿ ಸುಲೋಚನೆ ನಿಶ್ಚಲಮತಿಯಾಗಿ ॥
ಮೋಹನಮೇ ಅಸುವಾದುದರಿಂದ ಮ |
ನೋಹರರೂಪನ ಮೊಗಗಾಣ್ಬನ್ನೆಬ |
ರಾಹಾರಶರೀರನಿವೃತ್ತಿಯೆನುತ್ತ ನಿವಿರಿದಾಡಿದಳು ॥ ೨೮

ಏಮಾತೋ ಮತ್ಪ್ರಾಣಾಧೀಶಂ |
ತಾಮೊದಲುಜ್ಜುಗಿಸಿದ ಬಲ್ಗಜ್ಜಮೆ |
ನೇಮವೆ ತನಗೆನುತವೆ ತನುವಿನದೊಂದಾಸೆಗೆ ಬಗೆಗುಡದೆ ॥
ಸಾಮಜಗಮನೆ ಸುಲೋಚನೆಯಾವು |
ದ್ಧಮನದಿಯ ಹೆಮ್ಮಡುವಂ ಹೊಕ್ಕಳ್ |
ತಾಮರಸನಿವಾಸಿನಿ ತವರೂರಂ ತವಕದಿ ಹುಗುವಂತೆ ॥ ೨೯

ಇನ್ನೀಶೀಲವತಿಯ ಸದ್ಗುಣದ |
ತ್ಯುನ್ನತಿಕೆಯದುಂಟಾದೊಡಮೀನೀರ್ |
ತನ್ನಿಂ ತಾನೇ ಬತ್ತಲಿಯೆನುತಲರ್ವಟ್ಟೆವಿಡಿದು ನೋಲ್ಪ ॥
ಪನ್ನಗಪವನಪಭಕರೆಟುಂ ದೆಸೆ |
ಗನ್ನೆಯರನಿಮಿಷತತಿ ಜೋಯಿಸರುಂ |
ಕೆನ್ನಂ ಚಿಂತಿಸಿ ತಮ್ಮೊಳ್ ಗುಜುಗುಜುಗುಟ್ಟುವ ಸಮಯದೊಳು ॥ ೩೦

§ಎಳಮೀಂಗಣ್ಣ ಸುಲೋಚನೆ ಪುಗುವೆಡೆ |
ಯೊಳಗಾಬಱತ ನದಿಯೊಳವನೀಶ್ವರ |
ಕುಲಚೂಡಾಮಣಿ ಪೆರಾನೆಯ ಪೆಗಲೇಱಿ ವಿರಾಜಿಸಿದಂ ॥

§· ಎಳಮಿಂಗ ॥

ತಳುವದಗಸ್ತ್ಯಂ ಪಾನಂಮಾಡಿದ |
ಜಳಭಾಂಡಾಗಾರದ ನಡುವೆ ಕರಂ |
ತೊಳಗುವ ಮೈನಾಕಮಹೀಧ್ರದ ಮಣಿಶಿಖರದ ಮೂರ್ತಿಯೊಳು ||೩೧

ಬತ್ತಿದ ಬಲ್ವೊೞೆಯೊಳಗಡೆ ನಡೆದು ನೃ |
ಪೋತ್ತಂಸಂ ಮಣಿಮಸ್ತಕವೇಱಿದ |
ಮತ್ತಗಜಮನುರುಮುದದಿಂದ್ಯಾಸ್ರೊಗಬಣ್ಣಿಗದರ್ಗಳ ||
ವೃತ್ತಸ್ತನದುನ್ನತಗುಣಭೂಷಣೆ |
ಪತ್ತಿಯುವನ ಪರ್ಯಂಕಮನಡರ್ದರ್ಗಳ |
ಪೆತ್ತು ನಿರೀಕ್ಷಿಸಲಾಮಡುವಿನ ಸೆಳೆನೀರೀತಜ್ಞನಾಯ್ತು ||೩೨

ತೊಳಗುವ ಶುಕ್ತಿಯೊಳಗೆ ಮುನ್ನಿನ ರೂ |
ಪೞಿದು ಬೞಿಕ ಬಲ್ಮಣಿಯಪ್ಪಂದದೆ |
ಸೆಳೆನೀರಾಮಡುವಿನೊಳವರಿರ್ವರ್ ನೋಡುವ ಸಮಯದೊಳು ||
ತಳತಳಿಸುವ ತನುರುಚಿಯಿಂ ನೆಱೆ ಕ |
ಣ್ಗೊಳಿಸುವ ಸೌಂದರ್ಯಮನನುಕರಿಸುವ |
ಲಳನಾರೂಪಮದಾಯಿತ್ತಾಬಿಸವಂದಮನೇನ್ಪೊಗೞ್ವೆಂ ||೩೩

ಎಳವಿಱಿಂಬೊಣರ್ ಕಣ್ ಬಿಸವಲ್ಲರಿ ತೋಳ್ |
ನಳಿನಂ ಮುಖಮುಮಳ್ವಕ್ಕಿ ಕುಚಂ ತರೆ |
ವಳಿ ಮಳಲೊಟ್ಟಿಲ್ ಕಟಿ ಕೂರ್ಮಂ ಪದಮಾಪಾವಸೆ ಬಾಸೆ ||
ಸುೞಿ ಸುಲಲಿತನಾಭೀವಲಯಂ ಬೂ |
ಬ್ಬುಳಿಕೆ ಪರಡು ನೀರ್ ಮಯ್ಯಾಗಲ್ಕಾ |
ಲಳಿತತರಂಗಿಣಿ ಕಡುಚೆಲ್ವಿಕೆಯಿಂ ತಳೆದ ತರುಣಿಯಾಯ್ತು ||೩೪

ಚಂದ್ರಮುಖಂ ಚಟುಲಚಕೋರಾಕ್ಷ ಮೃ |
ಗೇಂದ್ರಲಸನ್ಮಧ್ಯಂ ಮೃದುಪಲ್ಲವ |
ರುಂದ್ರತಳಂ ರುಚಿರಾಧರಮಂಗೋದ್ಭವಕರವಲ್ಲಕಿಯು ||
ಮಂದ್ರಸ್ವರಮತಿರಂಜಿಪ ಕಾಯಂ |
ಸಾಂದ್ರವಿಲಾಸಂ ಕಣ್ಗೆಸೆಯಲ್ ಮನು |
ಜೇಂದ್ರನ ಮನಕಚ್ಚರಿ ಪೆರ್ಚಿರೆ ಜಲಜಾಯಿ ಸೊಗಯಿಸಿದಳು ||೩೫

ಈವಿಧದಿಂ ಕಣ್ಗೊಪ್ಪವಡೆದಳಂ |
ದೇವಸ್ತ್ರೀಯೆಂಬುದನೆ ತಿ ದು ತ |
ದ್ಭೂವರನುಂ ಭುವನಸ್ತುತೆ ಸುರುಚಿರಗಾತ್ರೆ ಸುಲೋಚನೆಯುಂ ||
ಆವಾರಣವಿಲಸನ್ಮಸ್ತಕದಿಂ |
ದೋವದಿಬಿದು ಹರಿಸದಿನಾಕೆಯು ಕೆಂ |
ಹಾವರೆಯೆಸಳ್ವಜ್ಜಗೆ ಮುಬ್ಬುದರಮಳ್ಕಿಯು ಮಾಟ್ಕಿಯೊಳು ||೩೬

ವಿನಮಿತರಾದ ವಿಮಲಗುಣನಿಳಯರ |
ನನುನಯದಿಂ ಪಲವುಂ ಸೂಬ್ ಪರಸು |
ತ್ತನಿಮಿಷಪತಿ ನವವಿಧಮಣಿಮಯಮಂಡಪಮೊಂದಂ ರಚಿಸಿ ||
ವಿನಯದಿನದಱೊಳಗಿರಿಸಿ ಬಿಬ್ಕಿ |
ವಿನುತಚತುರ್ದಶನದಿಯಂಬುಗಳಂ|
ಕನಕಕಲಶದೊಳ್ತೀವಿ ದಣಿವವೊಲ್ ಮಿಸಿಸಿದಳೊಲವಿಂದ ||೩೭

ಬಿಳಿಕ ಲಲಿತಬಹುಚಿತ್ರಾಂಬರದಿಂ |
ಜ್ವಲಿಸುವ ಪಲವು ಪರಲ ತೊಡವಿಂ ಕ |
ಣ್ಗೊಳಿಸುವವೊಲ್ ಶೃಂಗರಿಸಿ ಬೆಳರ್ವ ಮುತ್ತಿನ ಮಣಿಯಕ್ಷತೆಯಂ ||
ತಳಿದು ಸರಾಗದಿನಾದಲೆಯೊಳ್ಕನ |
ವೆಳಸಿ ಪರಸಿ ಸುಕುಮಾರಾಂಗಮನೆಳ |
ದಳಿರ್ಗೈಯಿಂದೆ ತಡವಿ ಕೊಂಡಾಡಿದಳಾದಂಪತಿಗಳನು ||೩೮

ಇಂತತ್ಯುಪಚರಮಂ ಮಾಡಿದ ನವ |
ಕಾಂತಕಲಾಭೃದ್ಬಿಂಬಮುಖದ ಸುರ |
ಕಾಂತೆಗೆ ಸುಗುಣೆ ಸುಲೋಚನೆ ಕಮಲಸದೃಶಕರಮಂ ಮುಗಿದು ||
ಸಂತಸದಿಂ ಬಿನ್ನವಿಸಿದಳೀತೆ |
ದಿಂ ತುಬ್ಬಿಲವಿಳ್ ವಿಕ್ರಮಕೌರವಭೂ |
ಕಾಂತಂಗೀಯುಪಸರ್ಗಮದೇಕಾರಣದಿಂದೊದವಿದುದು ||೩೯

ಎಂದು ಸರಾಗದಿ ವಿಜ್ಞಾಪನಮಂ |
ಮಂದಸ್ಮಿತಮುಖಿ ಮಾಡಲ್ಕೇಳ್ದಾ |
ಬಂದುಗೆವಾಯ ಭಗೀರಥನಂದನೆಯಿಂತು ನಿರವಿಸಿದಳು ||

---

‡ ವಿಾಯಿಸಿ. ಖ||

ಇಂದೀವರಲೋಚನೆ ನಿಂಗೆ ಲಾಲಿಸು ।
ಹಿಂದಣವತ್ಸರದೊಳ್ ಜಯಭೂಪಂ ।
ಬಂದ ಬಸಂತಸಮಯದೊಳ್ ಬನಮಂ ನೋಡಲ್ §ನಡೆತಂದು ॥೪೦

ಬನಕೆ ನಡೆದು ಬಕುಳದ ಬಾವನ್ನದ ।
ಘನಸಾರದ ತರುಮೊದಲಾದವಱೊಳ್ ।
ಬಿನದಿಸುತಮೆ ಬಳಸಿದ ಬಹುಬಂಧುಜನಂಬೆರಸುತ ಬಂದು ॥
ನನೆಕೊನೆವೋದ ನವಾಮ್ರದ ನೆೞಲೊಳ್ ।
ಮನಮಂ ತನುವಂ ಬೇರ್ಕೆಯ್ದೊರ್ದಂ ।
ಮುನಿಕುಲತಿಲಕಂ ಯೋಗದೊಳಿರೆ ಕಂಡಂ ಜಯಭೂವರನು ॥೪೧

ಕಾಲಂ ಮೊದಲಾಗಿಯುಮಿಂದುವರಂ ।
ಪಾಲೊಳ್ ನೀರೆರವಿಲ್ಲದೆ ಕೂಡಿದ ।
ಪ್ರೋಲೊಡವೆರದುಂ ನಚ್ಚಿರಲೆನ್ನಂ ತಾನೆ ಬಹಿಷ್ಕರಿಸಿ ॥
ಮೇಲಣ ಮುಕ್ತಿಗೆ ಪೋಗಲೆಳಸಿ ತಾ ।
ನಾಳೋಚಿಸಿತೀಯಾತ್ಮನೆನುತ್ತಾ ।
ಸ್ಥೂಳವ್ಯಥೆಯಿಂ ಬಡವಾದಂತಾಮುನಿತನು ಕೃಶವಾಯ್ತು ॥೪೨

ಮತ್ತಾಮುನಿನಾಥನ ತನುತನುವಂ ।
ಪತ್ತಿದ ನವವಲ್ಲಿಯ ಕಿಸಲಯಮುಂ ।
ಸುತ್ತಿದ ಸರ್ಪಸಮಿತಿಯ ಫಣಾಮಣಿಗಣಮುಂ ಕಡುಗರ್ಪಂ ॥
ಪೆತ್ತಮಲಿನತೆಯುಮತಿರಂಜಿಸಿದುವು ।
ಚಿತ್ತಜನಂ ಸುಡಲೆಂದು ತಪೋಗ್ನಿಯ ।
ಪೊತ್ತಿಸುವುರಿಯುಂ ಕೆಂಡಮುಮಾಧೂಮಮುಮೊಪ್ಪುವ ತೆಱದಿ ॥೪೩

ತೊಳಗುವ ನಿಜತತ್ತ್ವಮನೀಕ್ಷಿಪ ಮುನಿ ।
ಕುಳತಿಲಕನ ನಿಸುಗುವ ಮುಂಗೈಯೊಳ್ ।
ಬಳಸಿದ ಬಳಲತೆಯೊಳಗುಡಿಯೊಪ್ಪಿದುವಾವುದ್ಗಮಶರನ ॥
ಬಳಕೆಲ್ಲಂ ಕಟ್ಟಿದ ಬಲ್ಬಿರುದಿನ ।
ವಿಳಸತ್ಕಂಕಣದಂದದಿನುಪಶಮ ।
ಲಳನೆಯ ಮಂಗಲದೊಳ್ ಕಟ್ಟಿದ ಮಂಗಲಸೂತ್ರದ ತೆಱದಿ ॥೪೪

---

§· ನಡೆತಂದಂ ಕ॥

ಮೆಯ್ದಿನಲುಗುರನಿಡದ ಬಹುವಿಧರಂಜೆ |
ಯೆಯ್ದಲ್ ಮದರ್ಣ್ಣದ ಮಚ್ಚರದಿಂ |
ಬಯ್ವೊಡೆ ಬಗೆದಾರದ ಬಹಿರಂಗದ ಮಾತಿಗೆ ಕಿವಿಗುಡದ ||
ಪೊಯ್ವೊಡೆ ಮೆಯ್ದಗೆಯದ ಪುಸಿಮಾತಿಗೆ |
ಬಾಯ್ದಗೆಯದ ವೈರಿಗಳೞಿತದ ಬ |
ಲ್ಗೆಯ್ದಿಗೆ ಸಾಗಿಯದ ಯತಿಕುಲತಿಲಕನನವನೀಪತಿ ಕಂಡಂ ||೪೫

ತಾವರೆಯರಲಂ ತರುಣಾಶೋಕದ |
ಪೂವಂ ಕನ್ನೆಯ್ದಿಲ ಬಿರಿಮುಗುಳಂ |
ಮಾವಿನ ನನೆಯಂ ಮಲ್ಲಿಗೆಯರಲಂ ಪದಕಿಟ್ಟೆಱಗಿದನು ||
ಆವರ್ಣಿಗೆಯಾಹವದೊಳಗಣ್ಮದೆ |
ಭಾವೋದ್ಭವನ್ಯೈಗಣೆಗಳನೊಪ್ಪಿಸಿ |
ಯಾವಸಿರಿದ ಭೀರುತೆಯಿಂ ಬಂದು ಪದಕ್ಕೆಱಗುವ ತೆಱದಿ ||೪೬

ವಿಲಸದ್ವಜ್ರಾವರ್ತಾಂಕಿತಕರ |
ತಲನವನೀಸುರಲೋಕಸ್ತುತನಿನ |
ಕುಲತಿಲಕಂ ಲಕ್ಷ್ಮೀಧರಶೋಭಿತನುರುಧಿರೋದಾತ್ತಂ ||
ಬಲವಂತಂ ಜಡಧಿವಿದಾರಣನು |
ಜ್ವಲತೇಜಂ ರಘುವೀರನ ತೆಱದಿಂ |
ದಿಳೆಯೊಳಗತಿವಿಭ್ರಾಜಿಸಿದಂ ಸತ್ಪ್ರಭುಕುಲಮಣಿದೀಪಂ ||೪೭

ಇದು ಸುರನರಫಣಿಪರಿವೃಢವಿನಮಿತ |
ವಿದಿತವಿನಯಗುಣಗಣಯುತ ಜಿನಪತಿ |
ಪದಸರಸಿಜಮದಮಧುಕರನತಿಚತುರಕಲಾಪರಿಪೂರ್ಣಂ ||
ಸದಮಲಚರಿತಂ ಪ್ರಭುರಾಜಂ ಸಂ |
ಮದದಿಂ ರಚಿಸಿದ ಜಯನೃಪಕಾವ್ಯದೊ |
ಳೊದವಿ ಮನೋಹರವಡೆದತ್ತೊಂಭತ್ತನೆಯ ಮಿಸುಪ ಸಂಧಿ ||೪೮

ಒಂಭತ್ತನೆಯ ಸಂಧಿ ಸಂಪೂರ್ಣಂ.

# ದಶಮ ಸಂಧಿ.

ಸೂಚನೆ || ಮುನಿವರನಿಂ ಸದ್ಧರ್ಮದ ತೆಱನಂ |
ಮನದೆಱಕಂ ಮಿಗೆ ಕೇಳ್ದನುನಯದಿಂ |
ಜನತಾನಾಯಕಜಯಧರಣೀಪತಿ ಮಗುೞ್ದಂ ಪುರವರಕೆ ||

ಎಱಕಂ ಮನದೊಳೊದವೆ ತಾವರೆಗಾ |
ಲ್ಗೆಱಗಿ ಕರಂ ಭೀತಿಯೊಳ್ಪರ್ಮನಾ |
ಡೆಱೆಯನ ಚಿತ್ತದ ಭಕ್ತಿಲತೆಗೆ ಸದ್ಧರ್ಮಾಮೃತಜಲಮಂ ||
ಎಱೆದು ಸಲಹಬೇಕೆನುತುಂ ಸತ್ಯ |
ಕ್ಕೆಱವಟ್ಟೆನಿಸುವ ಜತಿರಾಯಂ ಕ |
ಣ್ದೆಱೆದಾನನಮಂ ನೋಡಿ ಬೞಿಕ ಹರಿಸಂ ಮಿಗೆ ಹರಸಿದನು ||೧

ಪರಸಿದ ಯತಿಕುಲತಿಲಕಗೆ ಕೈಮುಗಿ |
ದರಮಗನಿಂತೆಂದಂ ಜತಿರಾಯಾ |
ಧರೆಯೊಳ್ ಧರ್ಮದೊಳುತ್ತಮಧರ್ಮಮದಾವುದು ನಿರವಿಸೆನೆ ||
ಒರೆದಂ ಹಿಂಸಾನೃತವಂಚನಪರ |
ತರುಣೀರತಬಹುಕಾಂಕ್ಷೆಗಳಂ ನೆಱೆ |
ಪರಿಹರಿಸುವುದುತ್ತಮಮೆನುತವಱ ತೆಱನನಿರದಿಂತೆಂದು ||೨

ಕೊಲೆಯಿಂ ಸಾವೆಡೆಯೊಳಗಾಜೀವಕೆ |
ಸಲೆ ದುಃಖಂ ಜನಿಯಿಪುದಾದುಃಖದ |
ಫಲಮಾಕೊಂದವನಂ ನರಕಾವನಿಯೊಳಗುದಯಿಸಿ ಬೞಿಕ ||
ಪಲವಗಲಪ್ಪನ್ನೆವರಂ ದುಃಖದ |
ಜಲನಿಧಿಯೊಳ್ ತೇಂಕಾಡಿಪುದದಱಿಂ |
ಕೊಲೆಯಂ ಮಱೆವುದು ಸದ್ಧರ್ಮ ಕಣಾ ಭವ್ಯಜನೋತ್ತಂಸಾ ||೩

ದೈವಾಧೀನದೆ ಕಾಲಕ್ಕೊದಗುವ |
ಸಾವಂ ಮುನ್ನಮೆ ನೆನೆನೆನೆದನಿಶಂ |
ನೋವುತ್ತಿಹುದಾತ್ಮಂ ಮತ್ತಾನೋವನ್ಯರಿನೊದವಿದೊಡೆ ||

ನೋವನವರ ಮೇಲೆಂತುಟು ಬಿಡುವುದು ।
ಜೀವನವಿಹಪರದೊಳಗದಱಿಂದಾ ।
ಜೀವವ್ಯಥೆಯುಂ ಬಿಡುವುದೆ ಧರ್ಮಂ ಭವ್ಯಜನೋತ್ತಂಸಾ ॥ ೪

ಕೊಂದ ಪಗೆಯುನಾಕೊಲೆಯಿಂ ಸತ್ತವ ।
ನೊಂದಾಗಿರ್ದಹಿತರ್ಪೊರ್ದಲಾಗಿಯು ।
ಪೊಂದಿನಿಸುಂ ಕೊಲ್ಲದೆ ಸುಮ್ಮನಿರರ್ ನಿಶ್ಚಯುವುದಱಿಂದ ॥
ಬಂದಾಗುದಯಿಸಿ ಪಳೆದಾತನುವಂ ।
ಹೊಂದಿಸಿದನನಾಜೀವಂ ಮುಂದಕೆ ।
ಕೊಂದಿಕ್ಕದೆ ನಿರ್ನೆರವುಂತಿರ್ಪುದು ಭವ್ಯಜನೋತ್ತಂಸಾ ॥ ೫

ಹಿಂದಣ ಭವದೊಳ್ಬಾಯುಕ್ಕೆನ್ನಂ ।
ಕೊಂದೆಯುಲಾಯೆನುತುಂ ಕಡುಮುನಿಸಂ ।
ತಂದು ಪಚಾರಿಸಿ ನಾನಾತೆಱದುಪಸರ್ಗಮನಾಹಗೆಗೆ ॥
ತಂದು ಕರಂ ಕೊಲ್ವುದು ಬಲ್ಗರಮುದ ।
ಱಿಂದಾಹಿಂಸೆಯು ದಂದುಗವುಂ ನೆಱೆ ।
ಸಂದೆಗವಿಲ್ಲದೆ ಬಿಡುವುದು ಧರ್ಮಂ ಭವ್ಯಜನೋತ್ತಂಸಾ ॥ ೬

ಏನೊಂದೀಗಳ ಬಿತ್ತಿದ ಬೀಜವು ।
ನೂನಫಲವುನಂದಿಂಗೀವಂದದಿ ।
ತಾನೊಬ್ಬರ ವ್ಯಾತಿಗೆಣಿಸಿದ ದೋಷಂ ನಿಮಿಷಕ್ಕೊರ್ವರ್ಪ ॥
ಆನದೊಗೆದು ಬಿ ಕಱಿವ ನಿಗೋದ ।
ಸ್ಥಾನವನೀವುದು ವ್ಯಾತಿಗೆಣಿಸದ ಸೈ ।
ಪಾಸಿಜಸಾಖ್ಯಾಮೃತಪದವೀಯುದೆ ಭವ್ಯಜನೋತ್ತಂಸಾ ॥ ೭

ಏನೇನವರಿಚ್ಛೈಸಿದ ವಸ್ತುವ ।
ನಾನದೆಯೊಲಿದು ಕುಡುವುದತ್ಯುತ್ತಮು ।
ದಾನಂ ತತ್ಫಲದಿಂ ಸುರಸುಖಮುಪ್ಪುದು ನಿಜದೇಹಕ್ಕೆ ॥
ತಾನೇಅತಿಹಿತವೆನಿಸುವ ಜೀವನ ।
ದಾನದ ಫಲವುಪವರ್ಗಮನಾಗಿಸಿ ।
ಮಾನಿತಸೌಖ್ಯವನೀಯದೆ ನಿಲ್ವುದೆ ಭವ್ಯಜನೋತ್ತಂಸಾ ॥ ೮

ಕೊಲೆಯೆಂಬುದು ಸಂಸಾರಕೆ ಸಂಕಲೆ ।
ಕೊಲೆಯೆಂಬುದು ನಾರಕದೊಳ್ವರ್ಗಲೆ ।
ಕೊಲೆಯೆಂಬುದು ಭವಭವದೊಳ್ ಜೀವನವಂ ಬಿಡದಡರ್ವ ಹೊಲೆ ।
ಕೊಲೆಯೆಂಬುದು ಘನತರದುಃಖದ ಬಲೆ ।
ಕೊಲೆಯೆಂಬುದು ಭೀಭತ್ಸದಗುಂದಲೆ ।
ಕೊಲೆಯನದಱನುೞವುದೆ ಸದ್ಧರ್ಮಂ ಭವ್ಯಜನೋತ್ತಂಸಾ ॥೯

ಪುಸಿ ಪುಣ್ಯೋಪಾರ್ಜಿತಕನುಚಿತವಾ ।
ಪುಸಿ ನಾಲಗೆಯ ಕೊನೆಗೆ ಕತ್ತರಿಯಾ ।
ಪುಸಿ ಪೃಥಿವಿಗೆ ಪುೞುವಗೆಯಾ ಪುಸಿ ನರಕದ ಕಾರಾಗಾರ ॥
ಪುಸಿ ಪುೞುವಿನ ಕೊಂಡಕೆ ಸಂಗಡವಾ ।
ಪುಸಿಯತಿದುಃಖಕೆಯಾಡುಂಬೊಲನಾ ।
ಪುಸಿಯಂ ಬಿಡುವುದು ಸದ್ಧರ್ಮಕಣಾ ಭವ್ಯಜನೋತ್ತಂಸಾ ॥೧೦

ಉಂಟಾದುದನಿಲ್ಲೆಂದಿಲ್ಲದುದನು ।
ಮುಂಟೆಂದಾಗುರುದೈವದ ಹೊರೆಯೊಳ್ ।
ತುಂಟತನದಿ ಹುಸಿದಾಹುಸಿ ತನಗೇೞಂಟು ದಿವಸದೊಳಗೆ ॥
ಕಂಟಕವಂ ಮಾೞ್ಪುದು ಮುೞುಭವದೊಳ್ ।
ಟೆಂಟಣಿಪುದು ದುಃಖಮನದಱಿಂದವ ।
ಗೆಂಟುಂಮಾಡುವುದಾಹುಸಿಯಂ ಕೇಳ್ ಭವ್ಯಜನೋತ್ತಂಸಾ ॥೧೧

ಮೞ್ದುಂ ಪುಸಿದು ನುಡಿವ ಹುಸಿ ಸಿರಿಯಂ ।
ಪೞಪಡಿಪುದು ಸಂತಾನಂ ಕೆಡಿಸುವು ।
ದೞನಂ ತೆಗೞಿಸುವುದು ಪೞಯಂ ಪುಟ್ಟಿಸುವುದು ಮುಱುಭವಕೆ ॥
ನೆಱ್ದುಃಖಂಬಡಿಪುದು ತಾನಱಿದದ ।
ನುಱಿಯೊಱಲಿದೊಡದು ಮಾಡುವ ದುಃಖದ ।
ತೆಱನಂ ನಾನೇನೆಂದಱಿಯೆಂ ಕೇಳ್ ಭವ್ಯಜನೋತ್ತಂಸಾ ॥೧೨

ಕಳವಂ ಕನ್ನದ ಬಾಯೊಳಗಱದೊಡೆ ।
ಪೊೞಲೊಳ್ ತಿರಿವ ತಳಾಱರ್ ಕಂಡೊಡೆ ।
ಯೆೞೆಯಧಿಪತಿ†ಯಱಿದೊಡೆ ತಡೆಯದೆ ತಲೆಯಂ ಹೊಯಿಸಲ್ ಸತ್ತು ॥

† ಕೇಳ್ದೊಡೆ. ಕ॥

ಇಱಿದು ನರಕಭೂಮಿಯು ಹೆರ್ಚುೞಿಯೊಳ್ |
ಮುೞುಂಗಿ ನೆಗೆದು ಜೀವಿಸುತಿಹರದಱಿಂ |
ಕಳವಂ ಮಱೆವುದು ಸದ್ಧರ್ಮ ಕಣಾ ಭವ್ಯಜನೋತ್ತಂಸಾ ||೧೩

ಕಳವು ತನುವನಿರದೊಕ್ಕುವ ಕಳವಾ |
ಕಳವು ನರಕದೊಳ್ ಕಾಡುವ ಕಳವಾ |
ಕಳವು ತನಗೆ ಬೇಕೆಂದು ಬಗೆದು ಭಾವಿಪ ಮಾನಸವಿಕಳಾ ||
ಕಳವುಜ್ಜ್ವಳಚಿತ್ತದ ಕಳಕಳವಾ |
ಕಳವಿಳೆಗನ್ಯಾಯದ ಮೊಕ್ಕಳವಾ |
ಕಳವಂ ಬಿಡುವುದೆ ಸದ್ಧರ್ಮ ಕಣಾ ಭವ್ಯಜನೋತ್ತಂಸಾ ||೧೪

ಗಂಡನಿಱಿದು ಹಜ್ಜೆಗ ಬಲ್ಸೇಣಂ |
ಕೊಂಡೆಲ್ಲರ್ ಛೀ ಎಂಬಂತೆಳೆವರ್ |
ದಂಡಂಗೊಂಡಾಜ್ಞೆಯನೊದವಿಪನರಸಂ ಮಱುವುಟ್ಟಿನೊಳು ||
ಹಿಂಡಿಹಿಱಿದು ದಂಡಿಸುವುದು ನಾರಕ |
ಮಂಡಳಿಯತಿಕೋಪದಿನದಱಿಂ ಸ್ತ್ರೀ |
ವೆಂಡಿರನೆಳಸುವುದನುಚಿತ ಕಾಣಾ ಭವ್ಯಜನೋತ್ತಂಸಾ ||೧೫

ಅತಿಕಾಂಕ್ಷೆಯನಾವಂ ಮಾೞ್ಪನವಂ |
ಸತತಂ ಹಿಂಸೆಗೆ ಬಗ್ಗುವನಲ್ಲನ |
ನೃತಕಂಜುವನಲ್ಲಂ ಕಳವಿಂಗೆ ಸುಗಿವನಲ್ಲಂ ಪರರ ||
ಸತಿಯು ರತಕ್ಕೆಳಸುವನಲ್ಲಂ ದು |
ರ್ಗತಿಗೆಯುಗಿವನಲ್ಲಂ ಮತ್ತದಱಿಂ |
ದತಿಕಾಂಕ್ಷೆಯನುೞಿವುದೆ ಸದ್ಧರ್ಮಂ ಭವ್ಯಜನೋತ್ತಂಸಾ ||೧೬

ದುರಿತವನಂ ಬೆಳೆವುದಕೆ ಹೊಲಂ ಕೊಲೆ |
ಪರಕಲಿಸಿದ ನವದೋಹಲಮನೃತಂ |
ಪರಿಕಾಲುದಕಮುದಕೆ ಕಳವನ್ಯಸ್ತ್ರೀರತಮೋ ಗೆಯ್ಮೆ ||
ಪರಿರಕ್ಷಣೆಯತಿಕಾಂಕ್ಷೆಯುದಱಿನವು |
ನಿರುತಂ ಪೊರ್ದದೊಡೆಲ್ಲಿಯು ಸಂಸೃತಿ |
ಯುರುಕ್ಲೇಶಮೆಲ್ಲಿಯದು ವಿಚಾರಿಸೆ ಭವ್ಯಜನೋತ್ತಂಸಾ ೧೭ ||

ಮುಂದಣ ಜನ್ಮಕ್ಕಣ್ಬ ಘೋರದಶನ |
ಕ್ಕಿಂದಡುವಡಿಗೆಗೆ ಕೊಲೆಯೊಲೆ ಹುಸಿ ಕಲ |
ಪೊಂದಿದ ಕಳವುದಕಂ ಪರನಾರೀರತವಿಂಧನವಾಸೆ ||
ಮಂದೈಸಿದ ಕಿಚ್ಚಿದಱಿಂದಿಂತಿವ |
ನೆಂದುಂ ಸಮನಿಸದಿರ್ದೊಡೆ ದುರಿತಮ |
ನೆಂದುಂ ಭುಂಜಿಸನದು ನಿಜ ಕಾಣಾ ಭವ್ಯಜನೋತ್ತಂಸಾ || ೧೮

ಕ್ರೋಧಂ ದುರ್ಗತಿಕೃದ್ಭವಹಿಂಸಾ |
ಸಾಧನಮಮೃತಾಲಾಪಕಲಾಪಾ |
ರಾಧನಮುರುಚೌರ್ಯೋದಿತದುರ್ಧರದುಃಖಜನನಮೆಂಬಾ ||
ವ್ಯಾಧಿ ಪರಸ್ತ್ರೀಗಮನೋದಿತಬಹು |
ಬಾಧೆ ಮನಃಪೀಡಿತಕಾಂಕ್ಷಾಸಂ |
ಬಾಧಮದಱಿನದು ಪೊಲ್ಲಮೆ ಕಾಣಾ ಭವ್ಯಜನೋತ್ತಂಸಾ || ೧೯

ನಿರುತಂ ಮಾನಕಷಾಯದೆ ಕೋಪಾಂ |
ಕುರಮುಪ್ಪುದು ತತ್ಕ್ರೋಧೋದ್ರೇಕದಿ |
ಪರಜೀವವ್ಯಥೆಯುಹುದಾವ್ಯಥೆಯಿಂ ನರಕ ತಿರಿಕಜನ್ಮಂ ||
ದೊರೆಕೊಂಬುದು ತಜ್ಜನ್ಮದಿನತಿದು |
ರ್ಧರದುಃಖಂ ಬಿಡದದಱಿಂದದನುೞ್ |
ಪರಿಹರಿಸುವುದಿದು ಸದ್ಧರ್ಮ ಕಣಾ ಭವ್ಯಜನೋತ್ತಂಸಾ || ೨೦

ಮಾಯಮನಾವಗಮಂತಸ್ಥಳದೊಳ್ |
ಬೀಯಂಮಾಡದೆ ನಿಱಿಸುವ ದುರಭಿ |
ಪ್ರಾಯದ ಮೊಲಗೆತ್ತಲೆಯಿಂದಱನಂ ಭಾವಿಸಬಾಜೀವಂ ||
¶ಆಯುಂ ತವೆ ತೀರ್ದು ನಪುಂಸಕನುಂ |
ಸ್ತ್ರೀಯುಂ ತಾನಾಗುದಯಿಸಿ ದುಃಖದೊ |
ಳಾಯಾಸಂಬಡುತಿಹುದದು ಕಾಣಾ ಭವ್ಯಜನೋತ್ತಂಸಾ || ೨೧

ಏನನೊರೆವೆನತಿಲೋಭಂ ಲೋಕಕೆ |
ಹೀನಂ ತನ್ನಂ ಭೋಗಿಸಲೀಯದು |
ದಾನಂ ಮೊದಲಾದಱನಂ ಮಾಡಿಸಲೀಯದು ಭವಭವಕೆ ||

¶. ಆಯುಷ್ಯಂ ತೀರ್ದು. ಖ.

ನಾನಾದುಃಖವನುಣಿಸದೆ ನಿಲ್ಲದು ।
ತಾನದಱಿಂದಿಹಪರವೆರಡರ್ಕಂ ।
ಮಾನಿತಸುಖಮಂ ಕುಡದದು ಕಾಣಾ ಭವ್ಯಜನೋತ್ತಂಸಾ ॥ ೨೨

ದಾರುಣತರಸಂಸಾರತಟಾಕ ।
ಕ್ಕೇರಿಯತಿಕ್ರೋಧಂ ವೀಚಿಯಹಂ ।
ಕಾರಂ ತೋರ್ಪಾವರ್ತಂ ಮಾಯೆಯಗಾಧಂ ಬಹುಲೋಭಂ ॥
ಘೋರದುರಿತಪರಿಪಾಕದಿ ಜೀವನ ।
ಮಾರಯಲನಿಮಿಷದಂತಿಹುದದಱಿಂ ।
ಕ್ರೂರಕಷಾಯಮನುೞಿವುದೆ ಧರ್ಮಂ ಭವ್ಯಜನೋತ್ತಂಸಾ ॥ ೨೩

ಆವುದು ಹಿಂಸಾನೃತಚೌರ್ಯಪರ ।
ಸ್ತ್ರೀವಶಗತಬಹುಕಾಂಕ್ಷೆಗಳಂ ನೀಂ ।
ಭಾವಿಸಬೇಡೆಂಬುದು ವೇದಂ ಮತ್ತಾ ವೇದಂಮೊದಲೊಳ್ ॥
ಆವನ ಮುಖದೊಳ್ ಜನಿಯಿಸಿತವನೇ ।
ದೈವಮವನರೂಪಂಬೊತ್ತನೆ ಗುರು ।
ಪಾವನವವನ ಶಿಷ್ಯನೆ ಸದ್ಭಕ್ತಂ ಭವ್ಯಜನೋತ್ತಂಸಾ ॥ ೨೪

ನಿರುತಂ ನಂಬುವ ತೆಱದಿನಹಿಂಸಾ ।
ಪರಮೋಧರ್ಮಎನುತ್ತೊರೆದವನೇ ।
ಗುರುವಾತನ ಸಮ್ಯಗ್ದರ್ಶನ ನವಬೋಧಚರಿತ್ರಗಳೇ ॥
ವರರತ್ನತ್ರಯಮಾಮೂಮಣಿಯಂ ।
ಧರಿಸಿದವನೆ ಸದ್ಭಕ್ತಂ ಮತ್ತವ ।
ಗುರುಸುಖಮೀವ ಮುಕುತಿಯಹುದರಿಂದೇ ಭವ್ಯಜನೋತ್ತಂಸಾ ॥ ೨೫

ಈಪರಿಯಿಂ ಸದ್ಧರ್ಮಧರ್ಮನಿ ।
ರೂಪಣಮಂ ತಿಳಿಪಂದದಿ ಸುಮನ ।
ಶ್ಶಾಪಮದಾಪಹರಣನಭಿನವತೀರ್ಥಂಕರನೆಂದೆನಿಪಾ ॥
ತಾಪಸನೊರೆಯಲ್ಕಾ ವಚನಸುಧಾ ।
ಕೂಪಾರದೊಳಿರದಾಳಿದರಾಪೃ ।
ಥ್ವೀಪಾಲೋತ್ತಂಸನುಮಾಸಭೆಯ ಸುಜನರುಂ ಸಂತಸದೊಳ್ ॥ ೨೬

ಮೊದಲಾ ಮುನಿಪತಿಯುಪಶಾಂತತ್ವಕೆ |
ಪದಪಿಂ ತಂತಮ್ಮಯ ವೈರಂದೊ ತ್ರಿ |
ದದಿರದೆ ನಿಂದು ನಿರೀಕ್ಷಿಪ ಪಶು ಪುಲಿ ಕರಿ ಹರಿ ಫಣಿ ಪರ್ದು ॥
ರದನಿಯುರಸುಮಿಗಗಳ್ ಮತ್ತಾತನ |
ಮೃದುಮಧುರಸುಧರ್ಮನಿರೂಪಣಮಂ |
ಹೃದಯಂಬುಗೆ ಕೇಳ್ದು ಕರಂ ಹರಿಸಂಬಡೆದುದನೇಪೊಗಳ್ವೆಂ ॥ ೨೭

ಆಗಳಿಗೆಯೊಳಾಯೆಡೆಯೊಳ್ ಸ್ತ್ರೀಪು |
ನ್ನಾಗವೆರಡು ತನ್ಮುನಿವಚನಮನನು |
ರಾಗದಿ ಶುಭಭಾವನೆಯಿಂ ಕೇಳ್ದಲ್ಲಿಂ ಮುಂದಕೆ ನಡೆದು ॥
ಪೋಗಿ ಪೊದಲ್ದಾತುರದಿಂ ಸಮಸಂ |
ಭೋಗಕ್ರೀಡೆಯೊಳಾಲಿಂಗಿಸಿದುವು |
ಹೂಗಣೆಯುಂ ಹುರಿಗೂಡಿದ ಸಂಮೋಹನಪಾಶದ ತೆಱದಿ ॥ ೨೮

ಇತ್ತಲವನಿಭರ್ತಾರಂ ಮುನಿವಂ |
ಶೋತ್ತಂಗನ ನುಣ್ಣುಡಿಯಂ ತನ್ನಯ |
ಚಿತ್ತಂಬುಗೆ ಕೇಳ್ದಿಡಿದಾಮರೆಗಿರದೆಱಗುತ ಬೀಳ್ಕೊಂಡು ॥
ಮೊತ್ತದರಸುಮಕ್ಕಳ್ವೆರಸತಿಮುದ |
ಮತ್ತಮರಾಧೀಶ್ವರವೈಭವದಿಂ |
ಚಿತ್ತಜಕೇಳಿಯೊಳಿರ್ಪಾವುರಗಮಿಥುನದೆಡೆಗೆಯ್ದಿದನು ॥ ೨೯

ಸುರತಾಂತ್ಯದ ಸೌಖ್ಯದೊಳುದ್ಭವಿಸಿದ |
ಪರವಶದಿಂ ನಿಲ್ತಂದು ತಲೆಯುನತಿ |
ಭರದಿಂ ಬಾಗಿದ ಪೆಣ್ವಾವುಗಳನಿವಿರಿದುಂ ಸೊಗಸಿದುವು ॥
ಸ್ಮರಕೇಳೀನವಮೋಹನವಲ್ಲರಿ |
ಯೆರಡುಂ ಮುರಿದು ಬೆಳೆದು ತೆಂಕಣ ತೆ |
ಳ್ಳೆರಲಲೆಯಲ್ ಧರಣೀತಳಕೋವದೆ ಬಾಗುವ ಭಂಗಿಯೊಳು ॥ ೩೦

ಸ್ಮರಕೇಳಿಯೊಳೀಯಂದದೊಳಿರ್ಪಾ |
ವುರಗಮಿಥುನಮಂ ನೃಪನೊಡನೆಯ್ದುವ |
ಪರಿಜನದೊಳಗೊರ್ವಂ ದುರುಳಂ ಮುಂ†ಗುಡಿಯೊಳ್ ಕಾಣುತವೆ ॥

† ಗಡ. ಖ।

ಕರದ ಬಡಿಯಿನತಿಭರದಿಂದಿಡೆ ಗೋ |
ಣ್ಮುರಿದು ನೆಲಕೆ ಬೀಳ್ತಿರುತಿರ್ಪಿಕ್ಕೋಲೆ |
ಯ-ರಸನನುಜ್ಞೆಯಿನಾಯ್ತನುತಂ ಮುನಿದಸುವಂ ನೀಗಿದುವು ||೩೦

ಮೊದಲಾಮುನಿವಂಶೋತ್ತಮನಾಡಿದ |
ಸದಮಲಧರ್ಮನಿರೂಪಣಮಂ ಸ |
ಮ್ಮದದಿಂ ಕೇಳ್ದುಶುಭಭಾವನೆಯಿಂದಾ‡ಸ್ತ್ರೀಫಣಿ ಸತ್ತು ||
ಒದವಿದ ಪುಣ್ಯಫಲದಿ ಧರಣೀಂದ್ರನ |
ಹೃದಯಸರೋಜಶ್ರೀಯೆಂದೆನಿಸುವ |
ಸುದತೀಮಣಿ ಪದ್ಮಾವತಿಯಾದುದು ಕೇಳ್ ಕೈರವನೇತ್ರೇ ||೩೨

ಉದಯಿಸಿದಾಕ್ಷಣದೊಳ್ ಪದ್ಮಾವತಿ |
ಮುದವತ್ಪ್ರಿಯಿಕೆಯಾಗಲ್ ಫಣಿಪತಿ |
ವದನಮನೀಕ್ಷಿಸುತಿಂತೆಂದಂ ಮುಂ ಹೂನ್ಯದ ಫಲದಿಂದೆ ||
ಸುದತೀಮಣಿಯೆನಗಾದೆಯೆನಲ್ಕಾರು |
ಮುದದಿಂತೆಂದಳ್ ಮುನಿವಚನದೊಳೊದ |
ವಿದ ಸ್ನೆಪಿನೊಳೀತೆನಾಯ್ತಲೆ ಕೇಳ್ ಜನಪತಿಯಿನ್ನೊಂದ ||೩೩

ಇನಿಸಾಪರಾಧಂಮಾಡದಳೆನ್ನಂ |
ಮನುಜೇಶಂ ಜಯಭೂಪತಿ ಕೊಲಿಸಿದ |
ನೆನುತಿಂತೆಂದೆಳಲೇ ಪತಿ ನೀನೆನ್ನಿಚ್ಛೆಯನೊದವಿಪೊಡೆ ||
ಮುನಿದವನಂ ಕೊಲಬೇಕೆಂಬಾನುಡಿ |
ಗೆನತುಂ ಕೋಪದಿನೆಯ್ದಿ ಕುಮಾರನ |
ಮಿನುಗುವ ಸೆಜ್ಜೆಮನೆಗೆ ನಟ್ಟಿರುಳೊಳ್ ಬಂದನ ರಗರಾಜಂ ||೩೪

ಪಳಿಕಿನ ಶಯ್ಯಾಗೃಹದೊಳ್ ಕುಲಿಶದ |
ಸೆಳೆಮಂಚದ ಮೇಲೊಱಗಿದ ನೃಪಕುಲ |
ತಿಳಕನನೋವದೆ ಕೊಲಲೆನುತೊಂದಸಿತಾಹಿಯ ರೂಪವನು ||
ತಳೆದಾತಲೆದೆಸೆಯೊಳ್ ನಿಂದಹಿಪತಿ |
ಪೊಳೆದಂ ಸರಸಿಯ ನಡುವಣ ತಿಟ್ಟಿನ |
ಕಳಹಂಸನ ಕೆಲದೊಳ್ ಪೆಳೆದೊಱಗಿದ †ಬೆಳದಾಮರೆಯಂತೆ ||೩೫

‡. ಫಣಿಸ್ತ್ರೀ. ಖ||　　†. ಬೆಳ್ದಾ. ಖ||

ಇದು ಗೃಹರವೊ ತದ್ಭೂವಿಶ್ವರಗೆ |
ತ್ರಿದ ಒಳ್ಗೊಡೆಯರುಣೋಪಲಕಳಶವೊ |
ಇದು ಮುತ್ತಿನ ಕಂಭದ ಪೊಸಸೊಡರೊಎನೆ ಮಿಗೆ ಸೊಗಯಿಸುತ ||
ಒದವಿದ ಮುನಿಸಿಂದಾಮನುಜೇಶನ |
ನದಿರದೆ ಪೊಯ್ವೆನೆನುತ ತಲೆದೆಸೆಯೊಳ್ |
ಪದಪಿಂ ನಿಂದ ಫಣೀಂದ್ರನ ಪೆಡೆವಣಿ ಪಿರಿದುಂ ಜ್ವಲಿಯಿಸಿತು ||೩೬

ಅನಿತಱೊಳರಸುಮಗಂ ಧರಣೀಂದ್ರಂ |
ಮುನಿದು ಕರಂ ತನ್ನಂ ಕೊಲಬಂದುದ |
ನಿನಿಸಱಿಯದೆ ಕಣ್ದೆಱೆದಾತನ್ನಯ ತೋಳ ಹೊರೆಯೊಳಿರ್ಪಾ ||
ವನಿತೆ ಜಯಾವತಿಯೆಂಬವಳೊಡನಿಂ |
ತೆನುತುಸಿರ್ದಂ ನಾನಿಂದಿನ ದಿನದೊಳ್ |
ಮುನಿಪತಿಯುಂ ಬಂದಿಸಿ ನಂದನದೊಳ್ ತಿರುಗುವ ಸಮಯದೊಳು ||೩೭

ಆನಱಿಯದ ತೆಱದಿಂ ಮುಂದೆಯ್ದುವ |
ಮಾನಸನೊರ್ವಂ ಮನಸಿಜಕೇಳಿಯೊ |
ಳಾನಂದಿಪ ಫಣಿಯುಂ ನಿಷ್ಕಾರಣದಿಂ ಕೊಲೆ ಕಂಡವನ ||
ಮಾನಂಗಿಡಿಸಿದೆನಂತದಱಿಂದೆನ |
ಗೇನಾಯ್ತಾಳೆಸೆಗಿದುದಾಳ್ದಂಗೆಂ |
ಬಾ§ನಾಣ್ಣುಡಿಯಿಂ‡ದಾಪಾಪದ ಫಲವೆನ್ನಂ ತಟ್ಟುವುದು ||೩೮

ಎಂದು ನುಡಿದು ಬಿಸುಸುಯ್ವುರಮಗನಂ |
ಕೊಂದು ಬಿಸುಟ್ಟಪೆನೆನುತ ಬಂದಹಿಪತಿ |
ಯೊಂದಿನಿಸಪರಾಧಂಮಾಡದನಂ ವಾಯಕೆ ಕೊಲಲೆಂದು ||
ಬಂದೆನೆನುತ ತತ್ಕ್ರೋಧಮನುಡುಗಿಸಿ |
ಮಂದೇತರಕಾರುಣ್ಯಹೃದಯನಾ |
ನಂದದಿ ತನ್ನ ಮನೋಹರಮಪ್ಪಾಕಾರಂದೋಱಿದನು ||೩೯

ಪಲವು ಪರಲ ಕೀಲಣೆಯಿಂದೊಪ್ಪುವ |
ವಿಲಸದ್ವಿಮಲವಿಭೂಷಣಮಂ ಸಿರಿ |
ದಲೆಯೊಳಗಿಟ್ಟು ಕಿರೀಟದ ಪೆರಕೆವಣಿಯ ಕಾಂತಿಗಳಿಂದ ||

---

§ ನುಣ್ಣುಡಿ ಖ. ‡ ದಪವಾದದ, ಕ.

ಲಲಿತಧವಳವರ್ಣಾಂಗದ ನವಪರಿ |
ಮಲದಿಂದಾಧರಣೀಂದ್ರಂ ನೃಪಕುಲ |
ತಿಲಕನ ಕಣ್ಬಗೆಗತ್ಯಾಶ್ಚರ್ಯಂಬಡೆದು ವಿರಾಜಿಸಿದಂ ‖ ೪೦

ಈಪರಿ ಪರಿರಂಜಿಸ ಫಣಿಪರಿವೃಢ |
ನಾಪೃಥವಿಪಗಿಂತೆಂದಂ ಭೂತದ |
ಯಾಪರಗುಣಿ ನಿನ್ನಂ ನಿಷ್ಕಾರಣದಿಂ ಕೊಲಬಂದೆನ್ನ ‖
ವ್ಯಾಪಾರಕೆ ನೀನೇ ಕ್ಷಮಿಸೆಂದು ನಿ |
ರೂಪಿಸಿ ದಿವ್ಯಾಭರಣಸುವಸನವಿ |
ಲೇಪನಮಂ ನೆಸೆದಂತಾಗುವವೊಲ್ ನಿಯಮಿಸಿಯೊಲಿದಿತ್ತಂ ‖ ೪೧

ಕಾಲನನಾದೊಡಮಾಹವಧರೆಯೊಳ್ |
ತೋಳಂ ಬಿಗಿವ ಬಿಲೇಶಯಪಾಶಮ |
ನಾಲಲಿತಾಂಗಗೆ ಕೊಟ್ಟಹಿಪತಿ ತನ್ನಯ ಕೀೞ್ನೆಲಕಿೞಿದಂ ‖
ಬಾಲಕಿ ಕೇಳತ್ತಲ್ ತತ್ಪುರುಷ |
ವ್ಯಾಲಿ ಮಡಿದು ಪೆಂತರಿಯಾಗುದಯಿಸಿ |
ಕಾೞ್ವೆಸರನಾಂತು ಕರಂ ಪಿಂತಣ ಭವವನೆ ನೆನೆಯಿತ್ತು ‖ ೪೨

ಎನ್ನಂ ನೋಡದೆ ನಿಷ್ಕಾರಣದಿಂ |
ತನ್ನನುಚರನಿಂ ಕೊಲಿಸಿದ ಹಗೆಯಂ |
ಬನ್ನಂಬಡಿಸಿ ಕೊಲಲ್ಬೇಕೆನುತಂ ನಕ್ರಾಕಾರವನು ‖
ತಾನ್ನೆರೆ ತಳೆದು ತರಂಗಿಣಿಯೊಳ್ ಪಾ |
ಯ್ವುನ್ನತಗುಣಿ ಜಯನೃಪನಡರ್ದಿಭಮಂ |
ಕೆನ್ನಂ ಪಿಡಿದು ತೊರೆಯ ಕಮ್ಮಡುವಿನ ಕಡೆಗೆೞೆಯಿತ್ತಾಗ ‖ ೪೩

ಇದು ಜಯಭೂವರಗಾದುಪಸರ್ಗಂ |
ಸುದತೀಮಣಿ ನಿನ್ನಯ ಸೌಶೀಲ್ಯದ |
ಸದಮಲಮಹ ಮಾಹಾತ್ಮ್ಯಗೆ ಬಂದಾನೇ ಹೆಱಹಿಂಗಿಸಿದಂ ‖
ಮುದದಿಂ ಗಂಗಾಪರಮೇಶ್ವರಿಯೀ |
ನದಿಯಧಿದೇವತೆಯೆನುತ ನುಡಿದು ಸ |
ಮ್ಮದದಿಂದವರಂ ಬೀೞ್ಕೊಡುತಮದೃಶ್ಯಂದಾಳ್ದಳತ್ತ ‖ ೪೪

ಬೀಡಂ ಬಿನದದಿ ಪೊಕ್ಕು ಸುಲೋಚನೆ |
ಗೂಡಿ ಮನೋರಾಗದಿನಂದಿನ ಪಗ |
ಲೋಡಿ ಮಗುಳ್ವನ್ನಬರಂ ತದ್ಗಂಗಾತೀರದೊಳಿರ್ದು ||
ಮೂಡುವ ಮುನ್ನೇಸಱ ಬಿಂಬಂಬರ |
ಸಾಡಂಬರದಿಂದೆೞ್ದು ನಡೆದನಾ |
ನಾಡೆಱೆಯುಂ ನಲವಿಂ ತನ್ನಯ ಹಸ್ತಿನ ಪುರವರಕಾಗಿ ||೪೫

ನಾಡ ಸಿರಿಯನೀಕ್ಷಿಸುತಂ ಕೆಱೆಮೆಯ |
ಕಾಡಂ ಕಾವ ಕಮಲಲೋಚನೆಯರ |
ಗಾಡಿಯನೀಕ್ಷಿಸುತಂ ಪ್ರಿಯದಿಂ ಸೌರಭ್ಯಶರಾಸನನಾ ||
ಆಡುಂಬೊಲನೆನಿಪಾರಮೆಯೊಳಗೆಡೆ |
ಯಾಡುತ್ತಿರ್ಪ ವಿಟೀವಿಟರಂ ನಡೆ |
ನೋಡುತ ನಡೆತಂದಂ ತದ್ರಾಜಶಶಾಂಕಂ ನಿಜಪುರಕೆ ||೪೬

ಬಂದಪನವನೀಶ್ವರಚೂಡಾಮಣಿ |
ಯಿಂದುಕುಲದ ರಾಜಂ ಜಯಭೂವರ |
ನೆಂದಾಪೊೞಲ ಪುರಂಧ್ರಿನಿಕಾಯಂ ತಂತಮ್ಮಯ ಮೊಗದ ||
ಮುಂದೆ ಮುಸುಂಕಿದ ಫಣಿಯಂ ಬಿಸುಟೆ |
ಯ್ತಂದತ್ಯಾತುರದಿಂ ಬೀದಿಗಳೊಳ್ |
ಮಂದೈಸಿದ ಜನಮಂ ಕಂಡಿನಿಸುಂ ಸುೞಿಯದೆ ನೋಡಿದರು ||೪೭

ಬಳ್ವೞಿಮೊಗದಬಲೆಯರುರದಿಂದೆ ಸ |
ಡಿಲ್ವ ಸೆಱಂಗೆತ್ತದೆ ಕಟಿಯಿಂದೆ ಕ |
ಱಲ್ವ ಕನತ್ಕಾಂಚಿಯನೋಸರಿಸದೆ ಜಗುಳ್ವಂದುಗೆಯಿಡದೆ ||
ಸೇಲ್ವ ಮುಡಿಯನೋವದೆ ಬೞಿಕಾಬಾ |
ಗಿಲ್ವಾಡದ ಕಾಪಿನವರ್ ಬಗ್ಗಿಸಿ |
ನಿಲ್ಲೆನೆ(?)ವಿಲ್ಲದೆ ನಡೆದೀಕ್ಷಿಸಿದರ್ ನವಮನಸಿಜನಿಭನ ||೪೮

ರಂಗುದುಟಿಯ ರಾಜೀವಾಂಬಕದೆಳ |
ದಿಂಗಳ್ವಣಿಯ ನವೀನಲತಾಂಗದ |
ತೇಂಗಾಯ್ಮೊಲೆಯ ತೊಳಪ ತೆಳ್ವಸಿಱರಸಂಚೆವಸುಳೆನಡೆಯ ||

ಭೃಂಗಾಳಕದಭಿನವಕಂದರ್ಪಭು [
ಜಂಗಭುಜದ ನವಮೋಹನಶರಧಿತ |
ರಂಗವಳಿಯು ತರಳಾಕ್ಷಿಯುರೆಯ್ದೀಕ್ಷಿಸಿದರ್ ನೃಪನ ‖೪೯

ಬಾಗಿಲ್ವಾಡದ ಬಹುಮಣಿಗುರುಜಿನ |
ದೇಗುಲಗಳ ಪಲವುಂ ಶಿಖರಂಗಳ |
ಭೋಗಧಿಪರ ಗೃಹಗಳ ಪ್ರೊಃವಮದಿಲಂಗಣದ ಮರದ ಕೊನೆಯು ‖
ಮೇಗೆ ಮಿಸುಪ ಮಿಗಗಣ್ಣಬಲೆಯುರನು |
ರಾಗದಿ†ನಿನಿವಿರಿದುಂ ನೋಡಿದರಾ |
ಪೂಗಣೆಗೆಣೆಯೆನಿಪ ಕುಮಾರನನಾವಸುಧಾವಲ್ಲಭನ ‖೫೦

ಆಕಾಶಸ್ಫಟಿಕದ ಮಾಡವನಡ |
ದರ್ಕುವರನನೊಲಿದನಮಿಷತೆಯಿನಾ |
ಲೋಕಿಪ ನವನೀಲಾಂಭೋರುಹದುಲ್ಲಸಿತವಿಲೋಚನದ ‖
ರಾಕೇಂದುವಿನಂದದ ಮೊಗದವರ್ಗಳ್ |
ನಾಕಸತಿಯುರೊ ನಭಶ್ಚರಿಯುರೊ ತಾ |
ರಾಕಾಂತೆಯುರೋ ಗರುಡಗಣಿಕೆಯುರೊ ಎನೆ ಮಿಗೆ ಮುಸುಗಿದರು ‖೫೧

ಸ್ಮರಪುಷ್ಪವದುನ್ನತಮೂರ್ತಿತ್ರಯ |
ಕರನಿಧಿಖಂಡವಚಕ್ರಮುನಿಷದಿ |
ಗ್ಗರವಿಧಿಗಳ ವನಿತೆಯುರೆನೆ ನಿಂದೇಕದ್ವಿತ್ರಿಚತುಷ್ಕಾ ‖
ಶರಷಟ್ಸಪ್ತಾಷ್ಟನವಾಂಚಿತಭೂ |
ಸುರಸಂಖ್ಯೆಯಿನಲ್ಲಲ್ಲಿದರ್ಭೂ |
ವರಕುಲಚೂಡಾಮಣಿಯುಂ ನೋಡಿದರಾಪುರವನಿತೆಯುರು ‖೫೨

ಬಚ್ಚಬಯಲ ತೇಜದಿಂ ಬಗೆಗೊಳಸಿ ಪ |
ಬಚ್ಚನೆಸೆವ ಪಳಿಕಿನ ಮಾಡಗಳೊಳ್ |
ಮೆಚ್ಚಿ ಮಹೀಶನನೀಕ್ಷಿಪ ಸತಿಯುರ ನಾಸಾಚಂಪಕದಿಂ ‖
ಉಚ್ಚಸ್ತನಪಂಕಜಕುಟ್ಮಲದಿಂ |
ದಚ್ಚವೆಳಗುಗಣ್ಗಳ ಮಲ್ಲಿಗೆಯಿಂ |
ದಚ್ಚರಿಯಾಯ್ತೀಕ್ಷಿಸುವರ ಕಣ್ಗೆ ನಭಂ ಪೂವಡೆದಂತೆ ‖೫೩

† ನೆನೆಬಿ. ಕ‖

ನಗೆಗಣ್ಗಳ ನನೆಯ ಸರಲ್ಗಣ್ಗಳ |
ಮಿಗೆಗಣ್ಗಳ ಮೀಂಗಳ ಮುೞುಗಣ್ಗಳ |
ಬಗಸೆವಡೆದ ಕಣ್ಗಳ ಬಂಡುಣಿಗಣ್ಗಳ ಮದನನ ಗೇಣಾ ||
ಪೊಗರ್ಗಣ್ಗಳ ಪೊಳೆವಲರ್ಗಣ್ಗಳ ಬೆಳ |
ತಿಗೆಗಣ್ಗಳ ಬೆಳದಾವರೆಗಣ್ಗಳ |
ಸೊಗಯಿಪ ಸೊರ್ಕಂಗಣ್ಗಳ ಸುದತಿಯರೀಕ್ಷಿಸಿದರ್ ನೃಪನ ||೫೪

ತಾವರೆ ತುೞಿಗಿದವೋಲ್ ಕನ್ನೆಯ್ದಿಲ |
ಪೂವಲಿಗೆದಱಿದವೋಲ್ ಮುಱಿಮೀಂಗಳ |
ದಾವಣಿಗಟ್ಟಿದವೋಲ್ ಬೆಳ್ದುಂಗಳ ಹಕ್ಕಿಯ ಹಸುಳೆಗಳ ||
ಲಾವಣಿಗೆಯೆ ಮುಸುಕಿದವೋಲ್ ಬಂಡುಣಿ |
ಯಾವಲ್ಬಂದೆಱಿದವೋಲ್ ಕುವರನ |
ಲಾವಣ್ಯಾಂಗಮನಡರ್ದುವು ಪುರಸತಿಯರ ಕಣ್ಗಳ ಬೆಳಗು ||೫೫

ಸಿರಿವಚ್ಚೆಯ ಪೞಿಕಿಂ ಕಂಡರಿಸಿದ |
ಕರುವೆನೆ ಕಾರ್ಗಾಲದ ಕುಡುಮಿಂಚಿನ |
ತಿರುೞಿಂ ತೀರಿಸಿ ತಿರ್ದಿದ ರೂಪೆನೆ ಪೊಸಮುತ್ತಿಂ ಕಡೆದಾ ||
ಪರಿಜೆನೆ ಪಜ್ಜೞಿಸುವ ತಿಳಿವೞಿಕಿನ |
ಪರಲಿಂ ಚೀಲಣಿಸಿದ ಚಿತ್ರಮುಮೆನೆ |
ಕರಮೊಸೆದಂ ಭೂಪತಿ ಪುರಸತಿಯರ ಕಣ್ಗಳ ಕದಿರಿಂದ ||೫೬

ಮತ್ತೊರ್ವಳ್ §ಮಧುರಾಂಬಕಿಯುರುಮುದ |
ವೆತ್ತು ನಿರೀಕ್ಷಿಪ ನಿಡಿಯಲರ್ಗಣ್ಗಳ |
ತುತ್ತತುದಿಯ ಬೆಳ್ವೆಳಗೆರಡುಂ ಮಿಸುಗುವ ಕಿಱ್ಬರಿಗಳನು ||
ಪತ್ತಿ ಪರಿಯಲಂಗಜನವನೀಶ್ವರ |
ನುತ್ತಮಿಕೆಯ ಚೆಲ್ವಂ ಕುಡು ಕೊಲ್ವೆನೆ |
ನುತ್ತಮೆ ಬೆಳ್ಳಿಯ ಹಗರಿಟ್ಟಂದದಿ ಕಣ್ಗೆ ವಿರಾಜಿಸಿತು ||೫೭

ತವಣಿ ತೆರಳಲಾಕಡೆಗೆಯಲವರ್ಗೆ |
ದಿರವ ಮೊರಡಿದಾಪುರೆಯ ಬನಂಬೊಲ್ |
ಕರಮೆ ತೊಱೆದ ಕಾತರಚಿತ್ತದಿನಾವೀಧಿವಿಡಿದು ಬರ್ಪ ||

---

§. ಮದಿರಾಂಬಕಿ. ಖ||

ಅರಮಗನೇಕಡೆಗೆಯ್ದಲ್ಕಾಕಡೆ ।
ಗುರುಮುದದಿಂ ಕರುಮಾಡವಡರಿ ಮೊಗ ।
ಮುಱಿದು ನಿರೀಕ್ಷಿಪ ನಗರಿಯ ನಾರಿಯರೊಪ್ಪವಡೆದರಾಗ ॥೫೮

ಬಾಲಪ್ರಾಯದಿನಿಂದುವರಂ ತ ।
ನ್ನಾಲಯಮಲ್ಲದೆ ಮತ್ತೊಂದಿನಿಸುಂ ।
ಕಾಲಿಟ್ಟಂಗಣಮಂ ಕಂಡಱಿಯದ ಮಾನಿ ಮಱೆದು ಮೆಯ್ಯ ॥
ಮೇಲಣ ಕೊಱತೆಯನಱಿಯದೆ ನೆಱೆಜನ ।
ಜಾಲದ ನಡುವೆ ನೃಪನನೀಕ್ಷಿಸುವುದು ।
ಬಾಲಕಿಯಂದಮಿದಲ್ತೆನುತುಂ ಮುದುಪಾಱ ಪಲುಂಬಿದಳು ॥೫೯

ಬಾರದುದಂ ಕಡುಬಯಸಿ ಬ್ರತಂಗೆ ।
ಟ್ಟೇರಚ್ಚೆಯೊಳಿರ್ದೊಡೆ ನಿನ್ನಾತಂ ।
ಕೊರಿದನದಱಿಂದಾರಱಿಯದವೋಲ್ ನಡೆಯೆಂಬಳ ಮಾತಾ ॥
ಆರಯ್ಯದೆ ನೋಟದ ಸೊರ್ಕಿಂದ ಕು ।
ಮಾರನ ಬೆನ್ನಂ ಬಿಡದೆಯ್ತಂದಳ್ ।
ಕೋಱಿಯದೊರ್ವಳೊಲುಮೆವಡೆದೊಡಲಂ ತಾಗಿದ ತೆಱಸಾಗಿ ॥೬೦

ಅತನುಸದೃಶನಾದೊಡಮಿವನಲ್ಲದೆ ।
ಪತಿಗಳ ಪಿತೃಸಮವೆಂದೆಣಿಸುವ ನೃಪ ।
ಸುತೆಯರ ಸಹಚರಿಯರ ಮುಖದಿಂದೊಲಿಸುವೆವೆಂಬ ಸತಿಯರು ॥
ಮತಿಯಂ ಮಱೆದು ಮರುಳ್ಗೊಂಬಾಹದಿ ।
ಬತೆಯರ್ ಬೆನ್ನಂಬಿಡದ ನವಪ್ರಾ ।
ಯಿತೆಯ‡ರೆಸೆದರವನೀಶಂ ಬೀದಿವಿಡಿದು ನಡೆತರ್ಪಾಗ ॥೬೧

ಇಂಗಡಲೊಳ್ದೊರೆಯಂ ಬಗಿದೆಯ್ದುವ ।
ಜಂಗಮಕಲ್ಪಮಹೀರುಹವೋ ಬೆ ।
ಳ್ದಿಂಗಳ ಬೆಳ್ಳದೊಳಗೆ ಬಿನದದಿ ತೇಂಕುವ ಕುಸುಮಾಯುಧನೋ ॥
ಶೃಂಗಾರಸ್ರೋತಸ್ವಿನಿಯೊಳಗೆ ಬೆ ।
ಡಂಗಿಂ ಬರ್ಪಂಚೆಯ ಮಱಿಯೋ ಎನ ।
ಲಂಗನೆಯರ ಕಣ್ಬೆಳಗಿನ ಕಾಱ್ಪೂರದೊಳಾವಿಭು ನಡೆದಂ ॥೬೨

‡ ರವನಿಪತಿ ಸಂಭ್ರಮದಿಂ ಬೀದಿಯೊಳೆಯ್ತರ್ಪಾಗ ಖ॥

ಅರಮನೆಮುಟ್ಟೇತೆಱದಿಂ ಬಂದಾ |
¶ದರದಿಂ ತನ್ನೊಡನೆಯ್ದಿದ ನೃಪರೊಳ |
ಗರೆಬರನೀಕ್ಷಣದಿಂ ಕೆಲರಂ ಸಿರಿದಲೆಯೊಲೆಪದಿ ಕಿೞಿದಂ ||
ಬೆರಲ ಕೊನೆಯ ಸನ್ನೆಯೊಳರ್ದವರಂ |
ಸರಿಯುಂ ನವಸರಸಾಳಾಪದಿ ಕರ |
ಸರಸಿಜಮಂ ಮುಗಿದವರಂ ಬೀೞ್ಕೊಟ್ಟನವನಿಧವಪಾಲಂ ||೬೩

ಸಲೆ ಕಮಲಾನಂದಕರಂ ಭೂಭೃ |
ತ್ಕುಲಮಸ್ತಕವಿನ್ಯಸ್ತಸುಪಾದಂ |
ದಳಿತಮಹಾದೋಷಂ ಸದ್ವೃತ್ತಂ ರುಚಿರಜಗಚ್ಚಕ್ಷು ||
ಲಲಿತೋದ್ಯತ್ತೇಜಂ ಕುಮುದದ್ವಿ |
ಟ್ಸ್ವಲಭಸುಹೃನ್ಮಿತ್ರಂ ಕಣ್ಗೊಪ್ಪಂ |
ದಳೆದನುದಯಸೂರ್ಯನ ತೆಱದಿಂದಾಪ್ರಭುಕುಲಮಣಿದೀಪಂ ||೬೪

ಇದು ಸುರನರಫಣಿಪರಿವೃಢವಿನಮಿತ |
ವಿದಿತವಿನಯಗುಣಗಣಯುತಜಿನಪತಿ |
ಪದಸರಸಿಜಮಂದಮಧುಕರನತಿಚತುರಕಲಾಪರಿಪೂರ್ಣಂ ||
ಸದಮಳಚರಿತಂ ಪ್ರಭುರಾಜಂ ಸಂ |
ಮದದಿಂ ರಚಿಸಿದ ಜಯನೃಪಕಾವ್ಯದೊ |
ಳೊದವಿ ಮನೋಹರಮಂ ಪಡೆದುದು ಪತ್ತನೆಯ ಮಿಸುಪ ಸಂಧಿ ||೬೫

ಪತ್ತನೆಯ ಸಂಧಿ ಸಂಪೂರ್ಣಂ.

---

¶. ತುರಧಿಂ, ಖ||

# ಏಕಾದಶ ಸಂಧಿ.

———·o:———

ಸೂಚನೆ || ಬಂದ ಬಸಂತದೊಳೆಯ್ದೆ ಬನಕೆ ನಿಜ |
ಸುಂದರಿಯರು ಸಹಿತನುರಾಗದಿ ನವ |
ಕಂದರ್ಪಂ ಜಯಭೂಪತಿ ವನಜಳಕೇಳಿಯೊಳೊಪ್ಪಿದನು ||

ಮೊತ್ತಮೊದಲ್ ಮೊಗಗೆಡಿಸಿದ ಹಿಮರುಜೆ |
ಯೊತ್ತಂಬವನಟ್ಟಿಸುತಂ ಮೆಯ್ಯೊಳ್ |
ಪತ್ತಿದ ದರ್ದುರವಂ ಪಱಿವಡಿಸುತ್ತುದಿರ್ದೆಲೆದಲೆಗಳೊಳು ||
ಮತ್ತೆ ಚಿಗುರನಿರದೊದವಿಸುತೂದುವ |
ಮೆತ್ತನೆಲರ ಮದೊರ್ತ್ತಿ ವನೌಷಧಿ |
ಗುತ್ತಮವೈದ್ಯಂ ಬರ್ಪಂದದಿ ಬಂದೆಸೆದುದು ನವಚೈತ್ರಂ || ೧

ಅನುರಾಗಮನೊದವಿಸುತಂ ಕುವಲಯ |
ಕಿನಿವಿಲ್ಲಂಗತಿಹಿತವಂ ಮಾಡುತ |
ಘನತರಸಂಮದವಂ ನಮನಿಸುತ ವನೌಷಧಿಸಂತತಿಗೆ ||
ಮುನಿದು ತೊಲಗಿದ ವಿಟೀವಿಟುಸವಿತಿಗೆ |
ಯೆನಸುಂ ದುಃಖಮನಾಗಿಸುತಂ ಸಂ |
ಜನಿಯಿಸಿದುದು ಜೈವಾತೃಕಮಂಡಲದಂದದಿನಾಚೈತ್ರಂ || ೨

ರಾಗರಹಿತರಿಲ್ಲಿರ್ದೊಡೆ ತೊಲಗಿ ವಿ |
ಯೋಗಿಜನಂ ಪುಗವೇಡನುದಿನಸಂ |
ಭೋಗಂಗುಂದದವರ್ಬಿಡಜೇಡೀಮಾತಂ ಮೀಱಿದೊಡೆ ||
ಪೂಗಣೆಯಂ ಮುನಿಸಿಂ ಕೊಂಡು ಕರಂ |
ಕೂಗದೆ ಬಿಡನೆನುತವೆ ಸಾಱುವವೊಲ್ |
ಕೋಗಿಲೆಗಳ್ ಪುಗಿಲೆನುತುಲಿದುವು ತದ್ವನಚೂತಮನೇಱಿ || ೩

ತಳಿರಾದುದು ತರುಣಾಶೋಕಂ ಪೊಸ |
ಕಳಿಕೆ ಕವಲ್ತುದು ಮಾಮರದೊಳ್ ನೀರ್ |
ತಿಳಿದುದು ಪೂಗೊಳದೊಳ್ ದಾಂಗುಡಿ ತೋಱಿದುದು ಲತಾಳಿಯೊಳು ||

ತೊಳಗುವ ಮಾನವ್ರತದುದ್ಯಾಪನೆ |
ಕಳಕಂಠದೊಳಾದುದು ಬಡಬಡಕನೆ |
ಸುಳಿದುದು ಸುರಭಿಸಮೀರಂ ಬಂದ ಬಸಂತದ ಸಮಯದೊಳು ||೪

ವಿರಹಾವಸ್ಥೆಯು ದಂದುಗವೆಯ್ದಿದ |
ತರುಣಿಯರಳಕಭ್ರಮರಮನೊಳ್ಪಡಿ |
ಯರಗಿಳಿಯಂ ನೆಲೆಮೊಲೆಯಮಳ್ವಕ್ಕಿಯನಕ್ಷಿ ಚಕೋರಿಯನು ||
ಭರವಶದಿಂ ಮಿಡಿದಿಲ್ಲಿಂದಿಸಲೆನು |
ತರಲಸರಗೆ ಮಧು ನೀಡುವ ಪಕ್ಷಿಯು |
ಪರಲೆನೆ ಪಿಂದೆಸೆದುವು ಮಾಮಿಡಿಗಳ್ ಪಲ್ಲವದೆಡೆಗಳೊಳು ||೫

ಸೆಳೆಗೊಂಬಂ ಸಾಲ್ವಿಡಿದೈವಣ್ಣದ |
ಗಿಳಿ ಗೀರ್ವಾಣಧನುಸ್ಸೆನೆಯಲರ್ಗ |
ಳೆಳದುಂಬಿಯು ಜಂಗುಳಿ ಕಾಮರ್ಮುಗಿಲೆನೆ ಸೊನೆ ಬಲ್ಮೊನೆಯೆನೆ ||
ತಳಿರ್ಗಳ್ ಮುಗಿಲುರಿಯೆನಲಾಮಾಮರ |
ದೊಳಗೆಯುಲಿವ ಕೋಗಿಲೆಯ ರವಂ ಕ |
ಹ್ಗಳಿಸಿತು ವಿರಹಿಮರಾಳನನಂಜಿಪ ಬಲ್ಮೊಬಗಿನ ತೆಱದಿ ||೬

ಬಡವೆಳೆದೆಳೆಯಲತೆಯ ಕೆಂದಳಿರ್ಗಳ್ |
ಬಡಗಾಳಿದು ಸೋಂಕಿಂ ಪೊಸಪಲಸಿನ |
§ನಿಡುವಣ್ಣಂ ಪೊಡೆಯುತ್ತಿರೆ ಚೈತ್ರವೆಸರ ಮುಟ್ಟಂಗಾಱಿಂ ||
ಪೊಡೆಯುಲರಣಾಗನ ನಾಟಕಗೃಹದೊಳ್ |
ಪಡಿಯಱವಕ್ಕಿಯುಲಹಿನುಗ್ಗಡಣೆಗೆ |
ಗಡಣದೆ ಕುಲಿಶಪಿನದ್ಧಮುರಜಮಂ ನುಡಿಸುವ ತೆಱನಾಯ್ತು ||೭

ರಂಜಿಸುವುಡುವಳ್ಳಿಯ ಪೂವಂಡಂ |
ಭುಂಜಿಸಲೆನು‡ತೊಳಗಡೆ ನಿಂದಾಭೃಂ |
ಗಂ ಜೆನುಗಲ್ ಬಲ್ಲವರಂ ಬಗೆಗೊಳಿಸಿತು ನಂದನವನಿತೆ ||
ನಂಜುಗೊರಲನಳಿಕದ ಲೋಚನದ ಧ |
ನಂಜಯನುಗ್ರತೆಯಂ ನೆಱೆ ¶ನಂದಿಪ |
ಕಂಜಾಸ್ತ್ರನ ಮುಂದೊದುವಶಂಖಧ್ವನಿಯೆಂಬಂದದೊಳು ||೮

§. ನಿಡಿ. ಖ.| ‡. ತ ಕುಳಿತುವೊಳಗಡೆ ಭೃಂ. ಕ|| ¶ ನಮಿಯಿಪ ಕ.| ಗ||

ಸತತಂ ಗತಿಯೊಳ್ ಸೌಮಮನೊಡರಿಸಿ |
ಲತಿಕಾಕುಟ್ಮಲದಳಮಂ ಭೇದಿಸಿ |
ನುತನವಸೌರಭ್ಯಮನಾಱಡಿಗೊಲವಿಂ ದಾನಂಗೆಯ್ದು ||
ಅತಿದಂಡಿಸುತ ವಿಯೋಗಿವಿಟೇವಿಟ |
ತತಿಯಿಂ ಚತುರೋಪಾಯೋಪೇತ |
ಕ್ಷಿತಿಪಾಲಕನಂದದಿ ತೀಡಿದುದು ವಸಂತಸಮಯವಾಯು ||೯

ಹರನ ಹಣೆಯ ದಿಟ್ಟಿಯ ಬಲ್ಗಿಚ್ಚಿಂ |
ದುರಿವಂಪುರವಣೆಯಿಂ ಮುಂ ಪೀರ್ದ |
ಸ್ಮರನ ಮಹಾಪ್ರಾಣಸಮೀರಣನಂ ಮಗುಳ್ದಂತಕಸರ್ಪಂ ||
ವಿರಹಿಜನಮನೀಯಂದದಿ ಕೊಲಲೆನು |
ತಿರದೂಪದೊಡೆಲ್ಲಿಯದೀದಕ್ಷಿಣ |
ಮರುತಂಗಾವಿರಹಿವಿತಾನಮುಮಂ ನೆಱೆ ಬೆದಱಿಸುವ ಬಗೆ ||೧೦

ಇಂತು ಜನಮನಾನಂದಿಸಿ ಬಂದ ಬ |
ಸಂತದೊಳಾವಿಕ್ರಮಕೌರವಭೂ |
ಕಾಂತಶಿರೋಮಣಿ ಸುಕವಿನಿಕರಪಿಕವಿಲಸನ್ಮಾಕಂದಂ ||
ಸಂತಸದಿಂದ ಸುಲೋಚನೆ ಮೊದಲಾ |
ದಂತಪುರದ ವನಿತಾಜನದೊಡನೆ ಲ |
ತಾಂತಶರಂ ಬರ್ಪಂದದಿ ವನಕೇಳೀಲೀಲೆಗೆ †ನಡೆದಂ ||೧೧

ಸಿಂಗವಸುಳಿನಡುವಿನ ಸಿರಿಮೊಗದೆಳ |
ದಿಂಗಳ್ವಣೆಯ ನವೀನಲತಾಂಗದ |
ಜಂಗುಳಿದುಂಬಿಗುರುಳ ಜಂಬೀರಫಲೋಪಮಕುಚಯುಗದ ||
ಜಂಗಮಕಲ್ಪಲತಾಂಗದ ಮದನಮ |
ತಂಗಗತಿಯ ಮಾಂದಳಿರ್ವರ್ಣ್ಣಿಗೆಗಾ |
ಲಂಗನೆಯರ ತಂಡಂ ನಡೆದುದು ನರನಾಯಕನಂ ಬಳಸಿ ||೧೨

ಪಿಡಿಯ ಪಿಣಿಲ ನೇಱುವ ಪಿಡಿನಡುವಿನ |
ಮಡದಿಯರೆಡಬಲನಂ ಬಿಡದೆಯ್ದಲ್ |
ನಡುವೆ ನರೇಂದ್ರಲಲಾಮಂ ಪಟ್ಟದ ಗಜದ ತಲೆಯನಡರಿ ||

† ಬಂದಂ. ಖ.||

ನಡೆದಂ ನಂದನವನಕಾಸಗ್ಗಿಗ |
ರೊಡೆಯುಂ ನಾಕಾಂಗನೆಯುರ್ವೀರಸುತ |
ನಡೆವ ವಿಲಾಸದಿ ವನಕೇಳೀಲೀಲೆಗೆ ಸಂಭ್ರಮದಿಂದ ||೧೩

ಹರಿಸದೊಳಿಂತು ನಡೆದು ಬನಮಂ ಪೊ |
ಕ್ಕರಸನನುಜ್ಞೆಯೊಳಾಅಂತಃಪುರಂ |
ಸುರಯಿಯು ಮೊಗ್ಗೆಯುನಿರವಂತಿಯು ಪೂವಂ ಪೊಸಪಡ್ತಳಿಯು ||
ಬಿರಿಮುಗುಳಂ ಬಕುಳದ ಬಲ್ಲನೆಯುಂ |
ಸುರಹೊನ್ನೆಯು ಸಜ್ಜಕವುಂ ಸಂಪಗೆ |
ಯುರಲಂ ಕೇದಗೆಯೆಸಳಂ ತಿಱಿತಿಱಿದಾಡಿದುದಂತಲ್ಲಿ ||೧೪

ಬಟ್ಟಿಕ ವಿಮಲಮಣಿಗಣಭೂಷಣಮಂ |
ಕಳೆದು ಕರಂ ಹರಿಸದಿನೊಪ್ಪುವ ಪರಿ |
ಮಳಯುತನವ್ಯಕುಸುಮಸಕಲಾಭರಣಮನಾಮಸ್ತಕದಿಂ ||*
ತೊಳಪಲತೆಗೆಗಾಲ್ವರೆಗಂ ತೊಟ್ಟಳ |
ಕಳಭನಿಭಾಳಕಿಯರ್ ಕಡುಚೆಲ್ವಂ |
ದಳೆದರನನ್ಯಜಮಾರ್ಗಣದಿಂ ‡ಮೂಡಿದ ಮೂರ್ತಿಗಳಂತೆ ||೧೫

ಏಲಾಪಕ್ವಫಲಂಗಳನೇಱಿಲೆ |
ವಾೞಯು ಪೊಸಹಗಿನಿಂ ಮುಡಿವಾಳದ |
ಮೊಳಮುಮಂ ಕಾಶ್ಮೀರದ ಪೂವಂ ಮುಱುಗದ ಕಿಱುಗೊನರಂ ||
ಬಾಳಾಶೋಕದ ಬಡದಳಿರಂ ನವ |
ಕಾಳಾಗರುವಿನ ಸೆಕ್ಕೆಗಳಂ ತಿಱಿ |
ದಾಳೋಲವಿಲೋಚನೆಯರ್ ವಿಹರಿಸಿದರ್ ಕಡುಹರಿಸದೊಳು ||೧೬

ತರುಣಕುರಂಗವಿಲೋಚನೆಯೊರ್ವಳ್ |
ಹರಿಸದಿ ಹೊಸಹಳುಕಿನ ಬಟ್ಟಲೊಳಿ |
ಟ್ಟಿರವಂತಿಯು ಪೂವಂ ತೆಗೆದುರುವೇಣೀಮೂಲದೊಳಿಡಲು ||
ಪಿರಿದುಂ ವಿಭ್ರಾಜಿಸಿದತ್ತು ಸುಧಾ |
ಕರಮಂಡಲದುದರದ ನವಕಲೆಯುಂ |
ಸ್ಮರವೆಸರ ವಿಧುಂತುದಗೊಲವಿಂದುಣಬಡಿಸುವ ಭಂಗಿಯೊಳು ||೧೭

‡. ಮೂಡಿದ. ಕ||

ತರ್ವಜ್ಜೆಯು ತರುಣಲತಾಮಧ್ಯದ ।
ಬೆಳುಗಾಯ್ಮೊಲೆಯು ಲಸದ್ಬಿಂಬಾಧರ ।
ದೆಳಜವ್ವನೆ ಮುಡಿಗಿಕ್ಕಿದ ಮರುಗದ ಕಿಱುಗೊನರೊಪ್ಪಿದುದು ॥
ಜಳಜಾಸ್ತ್ರಂ ತಾನಲ್ಲದುೞಿದರಂ ।
ತೊಳಗುವ ಮೋಹಫಲಂ ತೀವಿದ ಪೊಸ ।
ವೆಳಸಂ ಪುಟ್ಟಲ್ವೇಡವೆನುತ ಕಟ್ಟಿದ ಸೊಪ್ಪಿನ ತೆಱದಿ ॥೧೮

ಮದಪಿಕವಾಣಿಯದೊರ್ವಳ್ ಮೊಲೆಗಳ ।
ತುದಿಯೊಳ್ ಕಲ್ಹಾರದ ಪೂದುಂಬಿದ ।
ಕದಳೀಸಾಳಂಬಿಡಿದಿರಲಾಕಂಪಂ ಕೊಳಲೆನುತಲ್ಲಿ ॥
ಮುದದಿಂ ಹಂತಿವಿಡಿದು ಕುಳಿತಳಿಗಳ್ ।
ಚದುರರ ಚಿತ್ತಂಗೊಳಿಸಿದುವಂಗಜ ।
ಸುದತಿ ಸರಾಗದಿ ನುಡಿಸುವ ವೀಣೆಯ ನಡೆಯೆಂಬಂದದೊಳು ॥೧೯

ಮಿಸುನಿಯ ಬಟ್ಟಲವೊಲ್ ಸಲೆ ಸೊಗಯಿಪ ।
ಕೊಸಗಿನ ಬಿರಿಮುಗುಳೊಳು ಕೆಂಜಾದಿಯ ।
ಪೊಸಮುಗುಳಂ ತಿಱಿದಿಕ್ಕಿ ತರುಣಕದಳೀಪತ್ರಂಬೊದಿಸಿ ॥
ಅಸಿಯಳ್ ಪಿಡಿದಿರಲಾಕಂಪಂ ಮಾ ।
ಸಿಸಲಳಿ ಕುಳಿತು ಜೆನುಗುತಿರಲಾಕ್ಕೈ ।
ಯೆಸಕಂಬಡೆದುದು ರತಿ ನುಡಿಸುವ ರಾವಣಹಸ್ತದ ತೆಱದಿ ॥೨೦

ತಿರಿದು ತಿರಿದು ಭಿಕ್ಷಂಬೇಡುತ ಬ ।
ರ್ಪರಲುಣಿವಸುಳಿಗಳಂ ಕಾಣುತ ಕಡು ।
ವಿರಿದುಂ ಕಾರುಣ್ಯದೊಳವರುಣಿಸಂ ಬಡಿಸುವ †ಭಂಗಿಯೊಳು ॥
ಸರಸಿಜಸನ್ನಿಭಲಲಿತಾನನೆಯುರ ।
ವರನೀಲಾಂಬಕವೆಱಗಿ ಬಳಸೆ ನವ ।
ಪರಿಮಳಯುತಕುಸುಮಸ್ತಬಕಂಬಡೆದುವು ತಿಲಕಮಹೀಜಂ ॥೨೧

ಸುರಭಿಕುಸುಮಮಂಜರಿಯಂ ಬಕುಳದೊ ।
ಳುರುಮುದದಿಂದಾನಿಸುವೆನೆನುತ ನವ ।
ಹರಿಣವಿಲೋಚನೆಯೊರ್ವಳ್ ಮದಿರಾರಸಮಂ ಮುಕ್ಕುಳಿಸಿ ॥

†. ಮಾಳ್ಕೆ. ಖ.

ತುರಿಹದಿ ತೂಪಿಱಿದುಗುಳ್ವಾಸೀರ್ಪನಿ |
ಸಿರಿವೊಗದಿಂ ಸೂಸಿತು ಮೃಗಲಕ್ಷ್ಮೀ |
ದರದಿಂ ಜನಿಯಿಸಿ ಜಲ್ಲಿಱುವೆಳಗದಿರ್ದೊಂಗಲಿವೆಂಬಂತೆ ||೨೨

ಇರುಳಿನಿಯನೊಳೀತೆಱದಿಂದಾನಿನಿ |
ಪಿರಿದುಂ ಮುದದಿ ಲತಾವೇಷ್ಟನಮಂ |
ಬಾರುತರಮಪ್ಪಾಲಿಂಗನಮಂ ವಿರಚಿಸಿದೆನೆನುತ್ತ ದನು ||
ತರುಣಲತಾಂಗಿಯದೊರ್ವಳ್ ನೆಱೆ ಬ |
ಲ್ಲರ ಬಗೆಗೞಪುವ ತೆಱದಿಂ ನೂತನ |
ಕುರವಕವಿಟಪಿಯನಪ್ಪಿ ಕರಂ ಪೊಸಪೂವಂ ಬಿಡಿಸಿದಳು ||೨೩

ಖತಿಯಿಂ ಕಣ್ಣಲುಗದೆ ನೋಡುತ ಖಂ |
ಡಿತಭರ್ತಾರಿಕೆಯೊರ್ವಳ್ ನಡೆತಂ |
ದತಿಮೃದುಪದದಿಂದೊದೆವ ಸಮಯದೊಳಗಪರಾಧಂಗೆಯ್ದು ||
ಚತುರಂ ತಾಂ ಮುಂ ನೆಮ್ಮಿದಶೋಕ |
ಕ್ಷಿತಿರುಹದಲ್ಲಿ ಹೊಳೆದು ವಿಲಸದ್ವಿಕ |
ಸಿತಸುಮನೋಮಂಜರಿಗಳನಾಗಿಸಿದಂ ಕಡುಜಾಣ್ಮೆಯೊಳು ||೨೪

ಎನಗೀರೂಪು ಸಹಜಮಿನಿವಿಲ್ಲನ |
ವನಿತೆಯ ರೂಪಂ ವಂಚಿಸಿದುದು ಹುಸಿ |
ವನದೇವತೆ ನೀನೇ ನೋಡೆನುತತಿಭರದಿಂ ದಿವ್ಯವನು ||
ಎನಸುಂ ಪಿಡಿದು ನಡೆವ ತೆಱದಿಂದವೆ |
ವನಜವದನೆಯೊರ್ವಳ್ ಕರಯುಗದೊಳ್ |
ಮಿನುಗುವ ಚೆಂದೆಂಗಿನ ಕಾಯಂ ಪಿಡಿದೆಯ್ದಿದಳತಿಮುದದಿ ||೨೫

ಅರಲ ಸರಲನೆಂಬರಸಂ ತನ್ನಯ |
ಗರಣೆ ರತಿಗೆಯೀಕೆಗಳ ವಿಲಾಸವು |
ನುರವಣೆಯಿಂ ದಂಡಂಗೊಳಬೇಕೆನುತಾಗ್ರಹದಿಂ ಪಿಡಿದು ||
ತರಿಸಿ ಸೆಱೆಯ ಮನೆಯೊಳಗಿಟ್ಟಂದದಿ |
ಸುರಭಿಕುಸುಮಲತಿಕಾಗೃಹದೊಳ್ ಕೆಲ |
ರರವಿಂದಾನನೆಯರ್ ಕುಳಿತು ಕರಂ ಕಣ್ಗೆ ಸೊಗಯಿಸಿದರು ||೨೬

ಬೇರಿಂ ತುದಿವರೆಗಂ ಬಿಡದುದಯಿಸಿ |
ರಾರಾಜಿಪ ಸುಮನೋಮಂಜರಿಗಳ |
ಭಾರಕೆ ಬಾಗಿದ ಲತೆಯಂ ಲೀಲೆಯಿನೆಡಗೈಯೊಳಗಾಂತು ||
ಚಾರುಘುಸೃಣಕರ್ದಮಮಂ ಪೂಸಿದ |
ವಾರಿಜಮುಖಿಯೆಸೆದಳ್ ಮುನಿದೋಪರ |
ನಾರಯ್ಗೊಲಿಸಲೆನುತ ಬಿಲ್ವಿಡಿದಾವಶ್ಯಮುಖಿಯ ತೆಱದಿ || ೩೭

ವಾಸನೆಗೆಯ್ವೆನೆನುತ ತಿಱಿದೊರ್ವಳ್ |
ನಾಸಾಚಂಪಕಕಿಡುವೆಡೆಯೊಳ್ ನಿ |
ಶ್ವಾಸದ ನಿಜಪರಿಮಳಮಂ ನೀಡುಂ ನೋಡುವ ನಡುಗಣ್ಣ ||
ಭಾಸಿಪ ತಾರಾರುಚಿಯುಂ ಪಿರಿದುಂ |
ಬಾಸಣಿಸಲ್ ಕನ್ನೆಯ್ದಿಲ ಪೂವಂ |
ದಾಸಂಪಗೆಯುರಲಿಂ ಬಂಡುಣಲೆಱಗಿದುದೊಂದಳಿಕಳಭಂ || ೩೮

ಅನುರಾಗದಿನೀತೆಱದಿಂ ವಿಹರಿಸಿ |
ಬನದೊಳ್ ಬೞಿಕವನಿಪನನುಮತದಿಂ |
ವನರುಹದಳಸಲ್ಲಲಿತವಿಲೋಚನೆಯರು ಸಂದಣಿಗೊಂಡು ||
ವಿನುತಾಂಬುಕ್ರೀಡೆಗೆನುತ್ತುಂ ತ |
ದ್ವನಮಂ ನೋಡಲಿಳೆಗೆಯಿೞಿದಿಂದುವಿ |
ದೆನೆ ರಾಜಿಪ ನಿರ್ಮಲನೀರೇಜಾಕರಕಿರದೆಯ್ದಿದರು || ೩೯

ಅರಸಂಚೆಯ ಚಾವಡಿಯುಮಳ್ವಕ್ಕಿಯ |
ಸುರತಗೃಹಂ ಸಾರಸವಕ್ಕಿಯ ಬೀ |
ಡರಲುಣಿಯಾರೋಗಿಪ ಸದನಂ ಕೊಳರ್ವಕ್ಕಿಗಳುಲಿಗಲಿವ ||
ಗರುಡಿ ಸಿರಿಯ ಶಯ್ಯಾಸದನಂ ನವ |
ಸುರಭಿಸದಾಗತಿಗಳುಗುವ ನೆಲವನೆ |
ಯರಲಂಬನ ಜಯನಾಲಯಮೆನಲಲರ್ಗೊಳನತಿರಂಜಿಸಿತು || ೪೦

ಬನವೆಸ ಬಂಡುಣಿವಕ್ಕಿಯ ಬಳಗ |
ಕ್ಕನುರಾಗದಿನಾರೋಗಣೆಗೆಯಿಸುವೆ |
ನೆನುತ ಮಿಸುಪ ಮಿಸುನಿಯ ಕೆಲವಟ್ಟಲನೊಂದೋರಣದಿಂದ ||

ಅನುಗೆಯ್ದಿರಿಸಿದ ಬೆಳ್ಳಿಯ ಪರಿಯಾಣ ।
ಮನೆ ಹೊಂದಾವರೆಯೆಲೆಗಳ್ ತೀವಿದ ।
ವಿನುತಾಂಭೋಜಾತಾಕರಮತಿಶೋಭಾಕರವಡೆಯಿತ್ತು ॥ ೨೧

ಕೆಂದಾವರೆಯೆಸಳ್ಗಳ್ ಪೊಸಕೇಸರಿ ।
ಮಂದೈಸಿದ ಮಧುಕರತತಿ ಹೊಗೆ ಮಕ ।
ರಂದಂ ಬೆರಸಿ ನೆಗೆವ ಸೀರ್ವನಿ ಹೊಂಗಿಡಿ ನೀರ್ವಕ್ಕಿಗಳ ॥
ಸಂದಣಿಯುಲಿ ಮಂತ್ರಮದಾಗಲ್ಕದ ।
ಱಿಂದ ಕೊಳಂ ಮದನಾಧ್ವರಿ ವಿರಹಿಯ ।
ಬಿಂದಕ್ಕೆಸಗಿದ ಮಾರಣಮುಖಕುಂಡದವೋಲ್ ತೊಳಗಿದುದು ॥ ೨೨

ಇದು ವನವನಿತೆ ನಿರೀಕ್ಷಿಪ ಕನ್ನಡಿ ।
ಯಿದು ಬನವೆಣ್ಣ ಕೊರಲ ದೇವರ ಹೊ ।
ನ್ನಿದು ಬನಸಿರಿ ಮಧುಗೆತ್ತಿದ ಪಳಿಕಿನ ನೀರಾಜನಪಾತ್ರೆ ॥
ಇದು ಬನದರಸಿಯ ನೊಸಲ ಬಿಳಿಯ ಬೊ ।
ಟ್ಟಿದು ಬನಗನ್ನೆಯ ನಾಭಿಯೆನಲ್ಕಡು ।
ಚದುರರ ಚಿತ್ತಂಗೊಳಿಸಿದುದಾನಿರ್ಮಲತರಕಾಸಾರಂ ॥ ೨೩

ಮೀನ ಮಿಸುಪ ಜಂಗುಳಿಯಿಂ ತೊಳಗುವ ।
ಬಾನಂ ಬಗೆಗೊಳಿಸುವ ಕರಿಯಿಂದ ನ ।
ವೀನವಿಪಂಚಿಯುಮಂ ಸುಳಿಯಿಂದಮೆಸಗುವೆಳವಿಯ ಬೆಳೆಯಂ ॥
ಮಾನಿತಮಪ್ಪ ತೆರೆಯಿನತಿರಂಜಿಸು ।
ವಾನವನಾಟಕಸದನಮನಾಳದಿ ।
ನೂನೇತರರಥಮಂ ಗೆಲೆವಂದತ್ತಾನಿರ್ಮಲಸರಸಿ ॥ ೨೪

ತರಳತರಂಗಧವಳಚಾಮರಮಂ ।
ವರಜಲಜಾಯೆಯರೊಲವಿಂ ಬೀಸು ।
ತ್ತಿರೆ ಕವಿಗಳ್ ಪೊಗೞುತ್ತಿರೆಯಳಿಯೆಂದೆಂಬೆಕ್ಕಲಗಾಣಂ ॥
ಸ್ಮರಮೋಹನಗೀತಮನಾಳಾಪಿಸು ।
ತಿರೆ ಪದ್ಮಾಸನವೆಡದೋಲಗಗೊ ।
ಟ್ಟಿರಸಂಚಿ ಮಹಾವಿಭವದಿನಿರಲೊಪ್ಪಂಬಡೆದುದು ಸರಸಿ ॥ ೨೫

¶. ಸಿ. ಖ॥

ವಿಳಸದ್ಗಂಧವಹಶ್ರೇಷ್ಠವನಾ ।
ವಳಿಯುಲರ್ಗಂಪಿನ ಮೂಲದ ನದಿನಿ ।
ರ್ಮಳಜಲದತಿಶೀತಲಮಂ ನೀರ್ಮೂಪುಗಳಾಮೋದಮುಮಂ ॥
ಬೆಲೆಗೊಂಡಾಬಲ್ಮೊಚ್ಚಿಯಂ ತಲೆಗಿ ।
ಟ್ಟಳಿತತಿಯೆಂಬಱಕೆಯ ಸುಂಕಿಗರಂ ।
ಸಲೆಯೊಡಬಡಿಸುತ್ತಾತಿಳಿಗೊಳದಿಂ ಮೆಲ್ಲನೆ ತೆರಳಿದನು ॥೩೬

ರಮಣೀಯಮನೀಯಂದದೊಳೆಯ್ದಿದ ।
ಕಮಲಕುಮುದಕುವಲಯಕಲ್ಹಾರೋ ।
ದ್ಗಮಮೊದವಿದ ನಳಿನಾಕರದೊಳಗಡೆಗತ್ಯಾನಂದದೊಳು ॥
ಕಮನೀಯೋಂದುಮುಖದ ಲಸಮಾನ ।
ಭ್ರಮರಾಳಕಿಯರ್ ನಡೆದರ್ ತಾರಾ ।
ರಮಣಿಯರಮೃತಾಂಭೋರಾಶಿಯನೊಲವಿಂ ಪುಗುವಂದದೊಳು ॥೩೭

ತಡಿಯೊಳ್ ನಿಂದ ತನೂದರಿಯರ ತಳಿ ।
ರಡಿವಿಡಿಪೊಳ್ದಿರೆಯೆಸೆದುವು ನಿಮ್ನೋ ।
ನಿಡುಗ್ಗೈಕಣ್ಮೊಲೆಮೊಗಮೇಗಾಲ್ಗಳ ಚೆಲ್ವಮನಾನೊಸೆದು ॥
ಪಡೆದ ಮೃಣಾಳೋತ್ಪಲಕೋಕಲಸ ।
ಜ್ಜಡರುಹಕೂರ್ಮನಿಕಾಯಕೆ ತಡೆಯದೆ ।
ಕುಡಿಮೆಂದಾಕಾಸಾರಜಲಂ ಕಾಲ್ವಿಡಿದೆಱೆವಂದದೊಳು ॥೩೮

ಬಂದ ಬಸಂತಬನಕೆ ಬಲ್ವಿಸಿಲೊಳ್ ।
ಬಂದು ತೊಳಲಿ ಬಸವಱದೆನ್ನೆಡೆಗೆ ।
ಯ್ತಂದಿರಲಾಯೆನುತಂ ಕೊಳರ್ವಕ್ಕಿಗಳುಲುಹಿಂದುಪಚರಿಸಿ ॥
ಇಂದುಲಲಿತವದನೆಯರ್ಗಮಳ್ದಿರೆಗೈ ।
ಯಿಂದೆ ಕೊಳಂ ಕುಡುವರ್ಘ್ಯಮಿಪ್ಪೋಎಂ ।
ಬಂದದಿನತಿರಮ್ಯಂಬಡೆದುವು ಶೀಕರಮಾಸಮಯದೊಳು ॥೩೯

ವಿರಹಂ ನಮಗೆ ಮುಸುಂಕಿದ ಸಮಯದೊ ।
ಳೆರಲ ಸರಗೆ ಕಡೆಯಂಬುಗಳಾಗು ।
ತ್ತಿರು ಮಣಿಯಿಂ ನಮ್ಮಸುಗಳನಪಹರಿಸಿದುವೀಪೂಮೆನುತ ॥

ಪಿರಿದುಂ ಕೋಪದಿ ಕಿೞ್ತಿಡುವಂದದಿ |
ಕರಿಕರನಿಭಕರದೆಳಜವ್ವನೆಯರು |
ಸರಸೇಂದೀವರಸಂಕುಲಮಂ ಕಿೞ್ತೀಡಾಡಿದರಾಗ ||೪೦

ಮೊಗೆದು ಮೊಗೆದು ಭರದಿಂದೋರೊರ್ವರ |
ಮೊಗಮೊಗದೊಳ್ ಚೆಲ್ಲುವ ಮೇಲಕೆ ಪುಟ |
ನೆಗೆವ ಧುಡುಂಮುೞುಂಪೊಯ್ದು ತಿರಿವ ತೇಂಕಾಡುವ ಮುಕ್ಕುಳಿಪ ||
ಉಗುಳ್ವ ನಲಿದು ಪರಿಮುೞಿದಾಡುವ ಬಿಡ |
ದಗುೞ್ವ ಬೞಿಕ್ಕೇೞ್ವಬಲಾನಂತತಿ |
ಯೊಗುಮಿಗೆಯುಂಬುಕ್ರೀಡೆಯೊಳರಸನ ಬಗೆಯುಂ ಬಂಧಿಸಿತು ||೪೧

ಕಳಶಕುಚಕೆ ಪಡಿನೋಡುವ ತೆಱದಿಂ |
ಪೊಳೆಪುಣ್ಮುವ ಪೊಸಮಿಸುನಿಯ ಗುಂಡಿಗೆ |
ಗಳನುರದೊಳಗಿಟ್ಟುಮುಲಾಂಬುವಿನೊಳ್ ತೇಂಕಾಡುತ್ತಿರ್ಪಾ ||
ಲಳನೆಯರಲಘುನಿತಂಬದ ಸಾಲ್ಗಳ್ |
ತೊಳಗಿದುದಲರ್ವಿಲ್ಲನ ಸಂಮೋಹನ |
ಜಳರಾಶಿಗೆ ಕಟ್ಟಿದ ಸೇತುವಿನೊಂದಿರವಂ ನೆನೆಯಿಸುತ ||೪೨

ಪಿರಿದುಂ ಪ್ರಿಯತಮರೊಲವಂ ಬಯಸುವ |
ತರುಣೀಜನಕಂಗಭವಾಗಮದೊಳ್ |
ಕರಣಂಗಳ್ ಪಲವುಂಟು ವಿಚಾರಿಸಲವಱೊಳ್ ಮೋಹಿಸುವಾ ||
ಪುರುಷಾಯಿತಮೇ ಮುಖ್ಯಮೆನುತ್ತದ |
ನುರುಮುದದಿಂ ಕೆಲದೆಳೆಯರ್ಗಱಿಪುವ |
ಪರಿಯಿಂ ಪದ್ಮಾನನೆಯೊರ್ವಳ್ ತಿಳಿನೀರೊಳ್ ತೇಂಕಿದಳು ||೪೩

ಗುರುಕುಚದಲಘುನಿತಂಬದ ತೂಕದ |
ಸರಿಮಿಗಿಲಂ ಪಿಡಿದೆತ್ತಿ ನಿರೀಕ್ಷಿಪ |
ಪರಿಯಿಂ ಪ್ರಾಣೇಶ್ವರನಂಗೈಯುಂ ತನುಮಧ್ಯದೊಳಿಡಲು ||
ತರುಣೀಮಣಿಯೊರ್ವಳ್ ಪೂಗೊಳದೊಳು |
ಹರಿಸಂ ಮಿಗೆ ತೇಲಿದಳತ್ಯುತ್ತಮ |
ವರವಜ್ರದ ಪುತ್ತಳಿ ತಿಳಿನೀರೊಳ್ ಬಿಡೆ ತೇಲುವ ತೆಱದಿ ||೪೪

ತಿಳಿನೀರ್ ಪುಗದಂದದಿ ನಾಸಿಕವಂ ।
ಲಳಿತಾಧರವಂ ಹಾವಸೆಹತ್ತಿದ ।
ತಳದಿಂ ಮುಚ್ಚಿ ಪಿಡಿದು ಕೆಂದಾವರೆಯರಲ ಕೊಳದ ನಡುವೆ ॥
ಮುೞುಂಗಿ ಬೞಿಕ್ಕೆೞ್ವಬಲೆಯ ವದನಂ ।
ತಳತಳಿಸಿತು ರಾಹುಗ್ರಸ್ತೋದಯ ।
ವಿಳಸದ್ವಿಮಲಸುಧಾಕರಮಂಡಲಮತಿಶೋಭಿಸುವಂತೆ ॥೪೫

ಬೆಳಗಿದ ಪೊಸಬಳ್ಳಿಯ ಕೊಪ್ಪರಿಗೆಯೊ ।
ಳೆಳಜವ್ವನೆಯೊರ್ವಳ್ ಕುಳಿತಾತಿಳಿ ।
ಗೊಳದೊಳಗಾಡುತ್ತಿರಲಾಬಗೆ ಬಲ್ಲರ ಬಗೆಗೊಳಿಸಿದುದು ॥
ತಳತಳಿಸುವ ಸಂಪೂರ್ಣಶಶಾಂಕನೊ ।
ಳೆಳಸಿ ಕರಂ ಪುರುಷಾಯುತವಂ ಕ ।
ಸೊಗ್ಗಿಪಂದದಿನೆಸಗುವ ರೋಹಿಣಿಯಂದಮನಂಗೀಕರಿಸಿ ॥೪೬

ಸುರಭಿಕುಸುಮಕರ್ದಮಮಂ ಮಯ್ಯೊಳ್ ।
ಗೊರೆದೆಳದಳಿರ್ವಸನೆಯೊಳ್ ಕೆಂಜಾದಿಯ ।
ಬಿರಿಮುಗುಳ್ವಾಸಿನೊಳೊಱಗಿದಿನಿಯಳಂ ಪಿಡಿದೋಪಂ ತಂದು ॥
ಸರಸಿಯೊಳದ್ದಿ ತೆಗೆದ ಬಗೆಯಾತಿಬಂ ।
ಧುರಮಾದುದು ನವಮೋಹಾಯುಧಮಂ ।
ಸ್ಮರನುರಿಯೊಳ್ ನೆಱೆ ಕಾಸಿ ತೆಗೆದು ನೀರೂಡುವ ಮಾೞ್ಕೆಯೊಳು ॥

ಜೀವೇಶಂ ಜೀರ್ಣಾಟವಿಯೊಳೋವದೆ ।
ತೀವಿದ ತಿಳಿನೀರೊತ್ತುವ ಪದದೊಳ ।
ಗಾವಧು ಕರಿಯುವಸನದ ಸೆಱಂಗಂ ಮುಸುಕಲು ಮುದ್ದುಮೊಗಂ ॥
ಪಾವಸೆಯಂ ಮುಱಿಗೊಂಡೊಪ್ಪುವ †ಪೊಂ ।
ದಾವರೆಯೆನೆ ನಸು ಮುಗಿಲಾವರಿಸಿದ ।
ಜೈವಾತೃಕಮಂಡಲಮೆನೆ ತಳೆದತ್ತತಿಬಂಧುರತೆಯನು ॥೪೮

ವಾರಿಜಮುಖಿ ಚೆಲ್ಲುವೆನೆಂದೆತ್ತಿದ ।
ನೀರಂಡೆಯ ನೀಲದ ರುಚಿಯುಂ ಲಲಿ ।
ತಾರುಣಕರಪಲ್ಲವದ ಸುರಂಗುಂ ಸೂಸಲಿದಿರ ಸತಿಯಾ ॥

† ಕೆಂದಾ. ಖ॥

ತೋರವೊಲೆಗಳೊಪ್ಪಂಬಡೆದುವು ಸಂ |
ಧ್ಯಾರುಚಿಯುಂ ಪೊಳೆವೆಳಗತ್ತಲೆಯುಂ |
ಸೇರಿಸಿ ತಳತಳಿಸುವ ಹೊಸಹೊನ್ನಜವಳಿವೆಟ್ಟನ ತೆಱದಿ ||೪೯

ಎಳಸಿ ಕರಂ ಪ್ರಿಯತಮನೋವದೆ ಜೇ |
ಕೊರ್ಬಿಯನೊತ್ತುವ ಪದದೊಳ್ ಮೆಯ್ಮುರಿ |
ದೆಳೆಯಳ ಮುಡಿಯುಂ ತಾಗಿ ಬಱಿಕ ಬೆಂಬೞಿಯೊಳ್ ಜಳಧಾರೆ ||
ಆೞಿವ ಸಮಯದೊಳಗಿಂದಿರೆಯಣುಗನ |
ತೊಳಗುವ ಪೀಲಿಯ ಪೞಿಯಿಗೆಗಿಕ್ಕಿದ |
ಪಳಿಕುವಣಿಯ ದಂಡಂಬೋಲ್ ಕಣ್ಗತಿರಂಜನೆದಾಳಿದುದು || ೫೦

§ವಿಳಸದ್ವಿಮಲಾಬ್ಜದ ಕಳಿವೂವಿಂ |
ಕಳೆದೆಸೆವೆಸಳ ನಡುವೆ ತಮ್ಮಯ ಕರ |
ತಳದ¶ಘುಡುಂವಿಱಿವೊಯ್ಲಿಂದೇೞ್ವಮಲಾಂಬುಕಣಂ ಬಿೞ್ದು ||
ತಳತಳಿಸುತ್ತಿರೆ ತರುಣಿಯದೊರ್ವಳ್ |
ಸುರುಚಿರಶುಕ್ತಿಯುದರದೊಳ್ ಜನಿಯಿಸಿ |
ದೆಳಮುತ್ತೆಂದು ತೀಱಯಲುದ್ಯೋಗಿಸಿ ಲಜ್ಜೆವಡೆದಳಾಗ ||೫೧

ರಾಕೇಂದುವಿನಂದದ ನಿಜವದನದ |
ನಾಕಲತಾಲಲಿತಾಂಗದ ವಿಬುಧಾ |
ನೇಕಪಮೃದುಗಮನದ ನವಮದಿರಾಂಬಕದಮೃತಾಧರದ ||
ಆಕಾಮಿನಿಯರ್ ಪೊಱಮಡುವಂಬುರು |
ಹಾಕರಮತಿಶೋಭಾಕರವಡೆದುದು |
ಲೋಕಜನನಿ ಬಹುರೂಪುವಡೆದು ಪೊೞಮಡುವಿಂಗಡಲಂತೆ || ೫೨

ಅಂಬುಕ್ರೀಡಾನಂತರದಿಂದೆ ನ |
ವಾಂಬುರುಹಾಕರಮಂ ಪೊಱಮಟ್ಟು ನಿ |
ತಂಬಿನಿಯರ ಹಸ್ತಸ್ವಸ್ತಿಕದ ನಡುವೆ ಕಿಕ್ಕಿಱಿಗೊಂಡು ||
ತುಂಬಿದ ಮೊಲೆಗಳ್ ಚದುರರ ಚಿತ್ತ |
§ಕ್ಕಿಂಬಾದುವು ಬಳಸಿದ ಬಿಸಲತಿಕೆಯೊ |
ಳಿಂಬಿಂದಮರ್ದಪ್ಪಿದ ಪೊಣರ್ವಕ್ಕಿಯ ಪರಿಯಂ ಪೊಸಯಿಸುತ ||೫೩

§. ವಿಲಸಿತ ಖ|| ¶. ಗುಡುಂ ಕ|| §. ಬೋ. ಕ||

ಸಸಿಯೊಳ್ ಸುಧೆಯು ಕಣಂ ಕಲಶಂಗಳೊ ।
ಳೊಸೆದಿಟ್ಟಮಲಾಕ್ಷತೆ ಕನಕಗರ ।
ಬಸಿಱೊಳ್ ಮುತ್ತು ಮೊರಡಿಯೊಳ್ ವಜ್ರಂ ಕಮಲದೊಳರಲ ರಸಂ ॥
ಮಿಸುಗುವವೊಲ್ ಮೊಗ ಮೊಲೆ ರೋಮಾವಳಿ ।
ಯೆಸಕದ ಕಟಿ ಕರ ಚರಣದೊಳತಿರಂ ।
ಎಸೆದುವು ಜಲಕೇಳಿಯು ಕಡೆಯೊಳ್ ಜಲಬಿಂದುಗಳಬಲೆಯರ್ಗೆ ॥ ೫೪

ಮುಱಿದ ಮುಖದ ಮೆಯ್ಮುಟ್ಟಿದ ಚುಬುಕದ ।
ತಿರಿದ ತಳೋದರದಡುಕುಂಗಾಲ್ಗಳ ।
ಬಿಱಿದುಂ ನನೆದ ತಲೆಯು ನಿಡುಗೊಂದಲ್ ನೆಲದೊಳುರುಳದಂತೆ ॥
ಸರಿವಳಿಯಿಂ ಮೊದಲಂ ಪಿಡಿದೆತ್ತಿದ ।
ಕರಯುಗಳದ ಕನ್ಯಾಜನವೊಪ್ಪಿದು ।
ದರಲ ಸರಂ ಚಿತ್ರಿಸಿದ ತ್ರಿಭಂಗಿಯು ಚಿತ್ರದ ತೆಱನಾಗಿ ॥ ೫೫

ಇಂತು ವಿರಾಜಿಸುವಂಬುಕ್ರೀಡಾ ।
ನಂತರದೊಳ್ ತನ್ನಂ ಬಳಸಿದ ನಿಜ ।
ಕಾಂತಾನಿಕುರುಂಬದ ಕಣ್ಗಂ ಮನಮುಂ ದಣಿವಂದದೊಳು ॥
ಸಂತಸದಿಂ ಸರ್ವಾಭರಣಾಂಬರ ।
ಮಂ ತವೆ ಕೊಟ್ಟು ಬಱಿಕಮೆಸೆದಂ ಭೂ ।
ಕಾಂತನನನ್ತವಿಭವಯುತನುಜ್ಜ್ವಲವಿಶದಯಶಃಕಾನ್ತಂ ॥ ೫೬

ಹೂವಿನ ಹೊತ್ತಿಂ ಗೋಧೂಳಿಯು ಹೊ ।
ತ್ತಾವರಿಪನ್ನೆವರಂ ತದ್ವನದಿಂ ।
ಮೂವಿನ ಸಸಿಯನಡರಿ ಪೂದುಂಬಿದ ನವಮಲ್ಲೀಲತೆಯಾ ॥
ಕಾವಣದೊಳಗಣ ಕಿಱುದಳಿರ್ವಸೆಯೊಳು ।
ಭಾವೋದ್ಭವಸಮರೂಪಂ ಬಳಸಿದ ।
ತಾವರೆಮೊಗದ ತನೂದರಿಯರೊಳೋಲಗಮಿರ್ದೊಪ್ಪಿದನು ॥ ೫೭

ಅನಿತಱೊಳಬ್ಬಿಯೊ ಪಗಲ್ ಪಡುದೆಸೆಯೊಳ್ ।
ಮಿನುಗುವ ಕೆಂಪು ಮುಗಿವ ನೂಱಿಸಳ್ವೊ ।
ಜಿನುಗುವ ದೇಗುಲವಱ ಮುಸುಳಿಸುವಲರ್ವಟ್ಟೆ ಬಿಸುಪನುಱಿದು ॥

ಇನಕಾಂತೋಪಲವುಲಿವ ಖಗಾವಲಿ |
ಯನುಮಾದವಂಕುರಿಸುವ ಜಾರಾತತಿ |
ಘನವೇದನೆಯಿನುರುಳ್ವೆಣೆವಕ್ಕ ಕರಂ ಕಣ್ಗೊಳಿಸಿದುದು ||೫೮

ಉಕ್ಕುವುದಧಿಯುಜ್ವಲವರ್ಪ್ಪಳವೆಲೆ |
ಯಿಕ್ಕುವ ಸಸಿ ಹರಿಸಂಬಡೆವಿಂಗದಿ |
ವರ್ಕಿಕ್ಕಯೊಸೆತೆಯೀ ಸ್ಯಂದೂಪಲಪ್ರೋಡುವ ಜಾರಾವಿತತಿ ||
ಚೊಕ್ಕಳವಳಗಾವರಿಸುವವನಿತಳ |
ವಕ್ಕಜಾಗೊಂಬ ವಿರಹಿಗಳ್ ನೆಯ್ದಿಲ |
ತಕ್ಕನುದಯಗಿರಿಶಿಖರನುನೇಜಲ್ ಪಿರಿದುಂ ಸೊಗಸಿದುದು ||೫೯

ಆನವಶಶಿಯುದಯಬೊಳಾವನವಂ |
ಸಾನಂದದಿ ಪೊ ಮಟ್ಟಂಪಳವಡ |
ದಾರ್ನಾರಿಯರೆಲ್ಲಂ ತನ್ನೆಡಬಲನಂ ಬಿಡದೆಯ್ದುತಿರೆ ||
ಮಾನನಿಧಾನಂ ಜಯನೃಪತಿಲಕಂ |
ತಾನುಜ್ಜ್ವಲಮಣಿಶಿಬಿಕೆಯನೇಱಿಯ |
ನೂನೋತ್ಸಾಹದಿ ಬಂದು ಪೊಱಲ್ವೊಕ್ಕರಮನೆಗೆಯ್ದಿದನು ||೬೦

ಈಯಂದದಿ ಮಣಿಮಂದಿರಮಂ ಪೊ |
ಕ್ಕಾಯಿರುಳೊಳ್ ತನ್ನೆಡಗಡೆಯೊಱಗಿದ |
ತೋಯಜಗಂಧಿ ಸುಲೋಚನೆಸಹಿತ ತೊಱೆದ ಕಾತರದಿಂದ ||
ಆಯತಿಯಿಂ ರತಿಶಾಸ್ತ್ರದ ಸದಭಿ |
ಪ್ರಾಯಮಱಿದು ಬೆಳಗಪ್ಪನ್ನೆವರಂ |
ಕಾಯಜಕೇಳಿಯೊಳಿರ್ದನವನಿಪಾಲಕಚೂಡಾರತ್ನಂ ||೬೧

ಸರಸಪುರುಷಸಮುದಾಯಕೆ ಮಿತ್ರಂ |
ಧರಣಿತಳಕೆ ರಾಜಂ ರಿಪುವಸುಧಾ |
ವರವಿಪಿನಕ್ಕಂಗಾರಂ ಶ್ರುತಕೆ ಬುಧಂ ನೃಪಚರಿತಕ್ಕೆ ||
ಗುರು ವಾಕ್ಪ್ರಲಸತ್ಕಾಭಾರ್ಗವವರ |
ನೆರೆವರ್ಗಿನನಂದನನನಲತಿಬಂ |
ಧುರನಾದಂ ಸಪ್ತಗ್ರಹದಂತಾಪ್ರಭುಕುಲಮಣಿದೀಪಂ ||೬೨

ಇದು ಸುರನರಫಣಿಪರಿವೃಢವಿನಮಿ-ತ ।
ವಿದಿತವಿನಯಗುಣಗಣಯುತಜಿನಪತಿ ।
ಪದಸರಸಿಜಮದಮಧುಕರನತಿಚತುರಕಲಾಪರಿಪೂರ್ಣಂ ॥
ಸದಮಳಚರಿತಂ ಪ್ರಭುರಾಜಂ ಸ ।
ಮ್ಮದದಿಂ ರಚಿಸಿದ ಜಯನೃಪಕಾವ್ಯದೊ ।
ಳೊದವಿ ಮನೋಹರವಡೆದುದು ಪನ್ನೊಂದನೆಯ ಮಿಸುಪಸಂಧಿ ॥೬೩

ಪನ್ನೊಂದನೆಯ ಸಂಧಿ ಸಂಪೂರ್ಣಂ.

# ದ್ವಾದಶ ಸಂಧಿ.

—— o ——

ಸೂಚನೆ || ಪಾರಿವದಿಂ ಜಾತಿಸ್ಮರಣಂ ತನ |
ಗಾರಯಿಂದುದಯಿಸಿ ಮುನ್ನಿನ ಜನ್ಮಮ |
ನಾರಾಜೀವವದನೆಯೊರೆದಳ್ ನಿಜಪತಿಜಯನೃಪನೊಡನೆ ||

ಕೆದರ್ವ ತಮಂ ಕೆಟ್ಟೋಡುವ ಕುಲಟೆಯ |
ರೊದರ್ವ ಪಲವು ದೇಗುಲವೞ್ ಸಂತಸ |
ಮೊದವುವ ಚಕ್ರಮುಡುಗುವುತ್ಪಳವಲರೇೞುವ ಶತಪತ್ರಂ ||
ಮುದವೆತ್ತುಲಿವ ಖಗಂ ತಣ್ಣನೆ ಸುೞಿ |
ವುದಯಪವನನುಡುಗುವ ತಾರಾತತಿ |
ಸದಮಲವಡೆದಾಶಾಮುಖಮೊಪ್ಪಿದುದಾಪನಿಪೊೞ್ತಿನೊಳು ||೧

ಭೂವಲಯದೊಳ್ನಿಸೆಡೆದೆಱಪಿಲ್ಲದೆ |
ತೀವಿದ ಕೞ್ತಲೆಯೆಂಬ ತಮಾಲಲ |
ತಾವಿಪಿನಮನುೞ್ರಿ ದಹಿಸಿ ಕಿಡಿಸಬೇಕೆನುತ ಬಡಬವಹ್ನಿ ||
ದೇವದಿಶಾಭಾಗದ ಮುನ್ನೀರಿಂ |
ದೋವದೆ ಪೊಱಮಡುವಂದಮನೀಕ್ಷಿಪ |
ಭಾವಜ್ಞರ ಬಗೆಗುದಯಿಸಿ ಬಿಸುಗದಿರಂ ಮುಂ ಮೂಡಿದನು ||೨

ಆವುದಯದೊಳಭಿನವರತಿ ಪಟ್ಟದ |
ದೇವಿಯು ತೋಳ್ವಾಸಿಂದುಪ್ಪವಡಿಸಿ|
ತಾವರೆಮೊಗದೊಳ್ದರ್ಹಾಲಯಮಂ ಮೂರ್ಮೊ ತಿರಿದು ಬಂದು ||
ದೇವರ ದೇವನನರ್ಚಿಸಿ ಬೞಿಯೊಳ್ |
ತೀವಿದ ಮಣಿದೊಡವಿಂ ಕೈಗೈದು ಮ |
ಹೀವರನುಪ್ಪರಿಗೆಯನಡರ್ದೋಲಗದೊಳಗತಿರಂಜಿಸಿದಂ ||೩

ಉದಯೋರ್ವೀಧರದುಪರಿಮದೊಳಗತಿ |
ಮುದದಿಂ ಸಾಸಿರಗದಿರನೆಸೆವವೋಲ್ |
ಸದಮಲತೇಜೋಯುತನವನೀಶ್ವರನುಪ್ಪರಿಗೆಯ ಮೇಲೆ ||

ಪದಪಿಂದೋಲಗವಿರಲಂತಲ್ಲಿಗೆ |
ಚದುರೆ ಸುಲೋಚನೆಯೊಳ್ಪಸದನವಿ |
ಟ್ಟೊಪ್ಪಿದವಿದ ಸಖಿಯರೊಡನೆ ತಾನಾಯೆಡೆಗೊಲವಿಂದೆಯ್ದಿದಳು ॥೪

ಸುರಲೋಕಕೆ ದಾಳಿಡುವಂಗಜನೃಪ |
ವರನ ಚತುರ್ಬಲದಂತೆ ವಿರಾಜಿಪ |
ಗುರುಕಟಿತಟದ ರಥಾಂಗದ ಪೆರ್ಬುತ್ತುಂಗಳ ಕಾಲಾಳ ॥
ಪರಿವ ಪುನದ ಕುದುರೆಯ ನಡೆಯಾನೆಯ |
ತರುಣಿಯರಾಮಣಿಹರ್ಮ್ಯಮನಡರ್ದರ್ |
ತರಳವಿಲೋಚನೆ ಶುಕಶಿಶುವಚನೆ ಸುಲೋಚನೆಯಂ ಬಳಸಿ ॥೫

ಕಂದರ್ಪನ ದೀವದ ಕಳಹಂಸೆಯ |
ಸಂದಣಿ ಸಗ್ಗವೃಂಜಿಯೊಳಾಡಲ್ ಪೇ |
ಕೆಂದು ನಭೋಮಾರ್ಗಕೆ ಭೂತಳದಿಂ ಮೆಲ್ಲನಡರುವಂತೆ ॥
ಮಂದಗತಿಯ ಮಾನಿನಿಯರ್ ಸಂತಸ |
ದಿಂದುಪ್ಪರಿಗೆಯ ಮೇಗಡೆಗಡರಿದ |
ರಿಂದೀವರಲೋಚನೆ ಶಶಿವದನೆ ಸುಲೋಚನೆಯಂ ಬಳಸಿ ॥೬

ನೀರನಿಧಿಯ ನಿಜನಂದನನಲ್ಲಿಗೆ |
ತಾರಾಂಗನೆಯರೊಡನೆ ಬರೆ ಮನವೊಸೆ |
ದಾರೋಹಿಣಿ ಬರ್ಪಂದದಿ ನೆರೆದಾಳಿಯರೊಡನಾಸುದತಿ ॥
ನೇರಾಣಿಯ ಮಾಡದ ಮೇಲೆಸೆವ ಮ |
ನೋರಮಣನ ಬಳಿಗೆಯ್ದಿಯೆಡದ ಕಡೆ |
ರಾರಾಜಿಪ ರನ್ನದ ಗದ್ದುಗೆಯನಡರಿ ಕಣ್ಗೊಪ್ಪಿದಳು ॥೭

ಕೆಂಬಜ್ಜೆಯ ಕೇದಗೆಯೆಸಳುಗುರ್ಗಳ |
ಕಂಬುಲಲಿತಕಂಧರದ ಕನತ್ಕಾ |
ದಂಬಗತಿಯ ಕಾಂಚನಲತಿಕಾಂಗದ ಕಳಕಂಠಸ್ವನದ ॥
ಅಂಬುಜದಳಲೋಚನದಭಿನವರೋ |
ಲಂಬಾಲಕದ ನಿಬಿಡಕುಚಯುಗದ ನಿ |
ತಂಬಿನಿಯರ ತಂಡಂ ನಿಂದುದು ನೀಲಾಂಬಕಿಯಂ ಬಳಸಿ ॥೮

ಮುತ್ತಿದ ಮುಂಬಿಸಿಲೊಳಗವನೀಪತಿ |
ಯೊತ್ತಿನ ಪೆಣ್ಮಣಿಗಳು ಪೊಸಪವಳದ |
ಪುತ್ಥಳಿಯೆನಲವರಿಕ್ಕಿದ ಸಿರಿಗಂಪುತ್ತಮಘುಸೃಣಮೆನೆ ||
ಹತ್ತುಸರದ ಮುತ್ತುರುಣಮಣಿಗಳನೆ |
ವೃತ್ತಕಬರಿಯಲರಸುಗೆಯ ಪೂವೆನೆ |
ಸುತ್ತಿದ ದುಗುಲಂ ಚಂದಿರಗಾವಿಯ ನಿಱಿಯೆನಲೊಪ್ಪಿದುವು ||೯

ಅಡಸಿದ ಕತ್ತಲೆಯಿಂ ಸಂಕೋಚಂ |
ಬಡೆದಿರಿ ತಾವರೆಗಳಿರಾ ವಿರಹಂ |
ಬಡೆದಿರಿ ಕೋಕಂಗಳಿರಾಎನುತಾಮಿತ್ರನವಱ ಮೆಯ್ಯಿಂ ||
ತಡವಿದನೆಂದೆನೆ ಕರದಿಂ ತನ್ನೃಪ |
ನೊಡನುಪ್ಪರಿಗೆಯನೇಱಿದ ಸತಿಯರ |
ಕಡುರಂಜಿಪ ಮೊಗಮೊಲೆಗಳ ಮೇಗುಜ್ಜ್ವಲಿಸಿದುದೆಳವಿಸಲು ||

ಭಾಳದೊಳಿಕ್ಕಿದ ಬಡಮೆಱಿಪೊಟ್ಟಂ |
ಸ್ಥೂಲಪಯೋಧರಕಿಕ್ಕಿದ ತಾರಾ |
ಮಾಲೆಗಳಿಂ ಮಿಂಬುಗಳನೇಳಿಪ ಮಾಣಿಕಮಣಿದೊಡವಿಂ ||
ನೀಲಶ್ಯಾಮಲಕೋಮಲಗಾತ್ರದ |
ಬಾಲೆಯರರೆಬರೆನೆದರಿನಕಿರಣದ |
ದಾಱಿಗೆ ಸುಗಿದರಸನ ಮಱಿಪೊಕ್ಕ ನಿಶಾನಾರಿಯರಂತೆ ||೧೧

ಎಡಬಲದೊಳಗೆಡಗಲಿಸಿದಬಲೆಯರ |
ನಡುವೆ ನರೇಂದ್ರಲಲಾಮಂ ಪಟ್ಟದ |
ಮಡದಿವೆರಸಿಯಳಕಾನಗರಿಗೆ ಪಾಸಟಿಯಮರಾವತಿಗೆ ||
ಪಡಿ ಫಣಿಪತಿಪತ್ತನಕೆಣೆಯೆನಿಸುವ |
ಕಡುಸಿರಿಯಿಂ ತಾಳಿದ ಪೊೞಲಂ ಪಗ |
ಲೊಡೆಯನುದಯಕಾಲದೊಳನುರಾಗವೊದವೆ ನಡೆನೋಡಿದನು ||೧೨

ಪಡೆವಳ್ಳರ ಪರದೇಶಾಧೀಶರ |
ನಡೆವಳಿಗರ ನಲ್ಕೆಯ ಸಚಿವರ ಭಟ |
ರಡಪವಳರ ಬೆಜ್ಜರ ವಾಗ್ಮಿರರ ಕುಮಾರರ ಬಿರ್ದಿನರ ||

ಕಡುಸೊಗಯಿಪ ಮಣಿಮನೆಯಂಗಣಮಂ |
ತೊಡೆವ ಚಳೆಯಮಿಕ್ಕುವ ಪೊಸಪೂವಲಿ |
ಗುಡುವ ಮಡದಿಯರ ಮೊತ್ತಂ ಕಣ್ಗೊಪ್ಪಿದುದಾವುದಯದೊಳು ||೧೩

ಗಱಿಪುವ ಕೈವಾರಿಗಳ ರವಂಗೇ |
ಳ್ದಱಿಮನವಂ ಮಾಡದೆ ಕುತ್ತಂಕದ |
ಕಳಕೆ ನಡೆವ ಮಾಸಾಳ್ಗಳ ಕಂಬಿಯವರ ಕರೆ†ಪಕ್ಕೆಱ್ದ ||
ತಳುಮಾಡದೆ ಪೊಱಮಡುವೆಕ್ಕಟಿಗರ |
ತುಱಿಲಾಳ್ಗಳ ತಂತಮ್ಮುದ್ಯೋಗಕೆ |
ಹೊಱಲಂ ಹೊಱಡುವ ಪೌರಜನದ ಸಂದಣಿಯೊಪ್ಪಿದುದಾಗ ||೧೪

ಸಿಂಗರಿಸುವ ಪೆಲೆವೆಣ್ಗಳ್ ಬಿನದ |
ಕ್ಕಂಗಣಮಂ ಸಾರುವ ಬಿಡುವೆಣ್ಗಳ್ |
ಬಂಗದೆ ಹಣಿಗಿ ನಡೆವ ಬೆಸವೆಣ್ಗಳ್ ಬೇಱೂರ್ಗೆಯ್ದಲ್ಕೆ ||
ಅಂಗವಿಸುವ ನೇಹದಿ ಬಲ್ಲಹನ ಮ |
ನಂಗರಗುವಪ್ಪುಲ್ ದೈನ್ಯವರೆದ ವಚ |
ನಂಗಳನುಸಿರುವ ಮನೆವೆಣ್ಗಳ್ ಸೊಗಸಿದುದಾವುದಯದೊಳು ||೧೫

ಅರೆಎಡೆ ಪಲವಸಿವಿಡಿವಭ್ಯಾಸಕೆ |
ಗರುಡಿಪುಗುವ ವಾಹಳಿಮಾಡುವೆನೆನು |
ತರೆಎಡೆಯೊಳಗನ ಹಲ್ಲಣಿಪರೆಎಡೆಯೋದುಗಲಿಯೆ ನಡೆವ ||
ಅರೆಎಡೆ ಕೋಱಿತಗರುಲಾವುಗೆಗಳ |
ಧುರಕೋವದೆ ಮೋಳೆಯುಮಂ ವಿರಚಿಸು |
ವರಮಕ್ಕಳ ಮೊತ್ತಂ ಪುರದೊಳಗೆಸೆಯಿತ್ತಾವುದಯದೊಳು ||೧೬

ಕೆಲವೆಡೆ ಕಡುಹರಿಸದಿ ಸಿಂಗರಿಸುವ |
ಕೆಲವೆಡೆ ಕರ್ಮಮಾಡದ ಕಾರುಜೇಱುವ |
ಕೆಲವೆಡೆ ಕೆಳದಿಯರೊಡವರೆ ವಿದ್ಯಾಮಂಟಪಕೆಯ್ತರ್ಪ ||
ಕೆಲವಡೆ ಕೇರಿಗಳೊಳಗೆಡೆಯಾಡುವ |
ಸಲೆ ಸೊಬಗರನೀಕ್ಷಿಸೆಯಾತುರದಿಂ |
ತಲೆವಾಗಿಲನೆಯ್ದುವ ನೃಪನುತೆಯರೆಸೆದರಾವುದಯದೊಳು ||೧೭

---

†. ಪಂ ಗೇಳ್ದು. ಖ||

ಬಂದೊರೆಯುಚ್ಚೈಶ್ಶ್ರವಕೆಂಬಂದದಿ |
ನಂದವಡೆದ ಜಾತ್ಯಶ್ವಸಮಿತಿಯುಂ |
ಮಂದುರದಿಂದ ತೆಗೆವ ಮೆಯ್ದುಡವ್ರುವ ಜೋಡಿಪ ನೇಣಿಂದ ||
ಕಂದಮನೊಯ್ಯನೆ ಮಣಿಯಿಪ ಲೋಹವು |
ನೊಂದಿಪ ಹಿಡಿತವಿಡಿವ ನಸು ಬೆಮರಿಪ |
ಮಂದೇತರವಾಹಳಿವೂಡುವ ಕಜ್ಜಂ ಕಣ್ಗೊಪ್ಪಿದುದು ||೧೮

ಎಡೆವಿಡದಿಳೆಯಧಿಪನ ಗೃಹಕೆಯ್ತ |
ರ್ಪಡಪವಳರ ಉಜ್ಜರ ಪೆಸವಕ್ಕಳ |
ಪಡಿಮುಜರೆಕ್ಕಟಿಗರ ಲೆಕ್ಕಿಗರೆಸೆವ ರಕ್ಷಳೆಂಬಾಯುತರ ||
ನಡೆವಳಿಗರ ನಚ್ಚಣಿಗರ ಪೊಸಪೂ |
ವಡಿಗರ ಗರವಟಿಗರ ಕೋಲ್ಕಾಯ್ತರ |
ನುಡಿಗಾಜರ ಮಾಳ್ವರರ ಸಂದಣಿ ಸಲೆ ನೊಗಯಿಸಿತಾಗ ||೧೯

ಪರಭೂಪರ್ ತಮ್ಮಯ ದರ್ಪಮನುಳಿ |
ದುರುಭೀತಿಯಿನುಳ್ಕೊಡವೆಗಳಂ ಕರಿ |
ತುರಗರಥಾವಳಿಯಂ ತರುಣೀರತ್ನಮನಾನೃಪವರಗೆ ||
ತ್ವರಿತದಿ ಕಾಣಿಕೆಗುಡಲೆನುತಾಪುರ |
ವರದ ಪೊಱಗೆ ಬಿಟ್ಟಿರ್ದುದಯದೊಳೆ |
ಯ್ತರಲಾಸಂದಣಿ ಪೆರ್ಬಾಗಿಲೊಳಿರದೊಪ್ಪವಡೆದುದಾಗ ||೨೦

ಇಂತೆಳನೇಸಱುದಯಕಾಲದೊಳ |
ತ್ಯಂತವಿಲಾಸಂಬಡೆದಾಪುರವುಂ |
ಕಂತುಸದೃಶಜಯಭೂವರನುಂ ನಿಜಕಾಂತೆ ಸುಲೋಚನೆಯುಂ ||
ಸಂತಸದಿಂ ನೋಡುತುಮಿರಲೊಂದೆಡೆ |
ತಿಂತಿಣಿಗೊಂಡರವುಕ್ಕಳೂಲವಿನಿಂ |
ಪಂತಿವಿಡಿದು ಪಾರಾವತಮಂ ಪಾಱಿಸಲೆನುತೊಪ್ಪಿದರು ||೨೧

ಸಸುಮಿಡುಕುತ ಮೆಲ್ಲನೆ ಮುಂದಕೆ ನಡೆ |
ಪೆಸಕದ ಪೆಣ್ಣಂ ಪಿಡಿದು ಭರದಿ ಸವಿ |
ಪುಸುಕೆ ನಿಶಿತಚಂಚುವನದಱೊಳ್ಪಾಯ್ದೆಱೆಯೊಳಗಿಂಬಿಟ್ಟು ||

ಪೊಸವೇಟದ ಬೀಜಮನಿಡುವಂದದಿ ।
ನೊಸೆದು ಕುಡುಕನಿತ್ತೊಲವಿಂ ತಡೆಯದೆ ।
ಸುಸಿಲಂ ಗೆಯ್ವ ಕಪೋತಮನಾನೃಪಮಿಥುನಂ ನೋಡಿದುದು ॥ ೨೨

ಬಿಟ್ಟ ಹವಣನಿನಿಸುಂ ಮೀಱದೆ ನಲ ।
ಮುಟ್ಟೆ ಪರಿವ ಪವಮಾನಪಥಮನುೞಿ ।
ಮುಟ್ಟೆ ಮುೞುಂಗುವ ಪೆಣ್ಣಂ ಪಿಡಿದು ಕರೆವ ಕರೆಪಂಗೇಳ್ದು ॥
ಬಿಟ್ಟ ಸುೞಿಯೊ ಬಿಡದಾಗಸದಿಂದಂ ।
ನಟ್ಟನಿಳೆಗೆ ಬೀೞುವ ಪಾರಾವತ ।
ದೊಟ್ಟಜಯಾನೃಪಮಿಥುನಮನುಱೆ ಮಚ್ಚಿಸಿ ಕಣ್ಗೊಪ್ಪಿದುದು ॥ ೨೩

ಅಂಗಜಕೀರ್ತಿಲತಿಕೆಯಾಗಸದೊ ।
ತೊಂಗಲ್ವಾದಂದದಿನುಡುನಿಕ ।
ರಂಗಳ್ ಪಗಲುದಯಿಸಿ ಪರಿದಾಡುವವೊಲ್ ನೃಪನಂದನರು ॥
ಪಿಂಗದೆ ಪಾಱಿಪ ಪಾರಾವತವಿಹ ।
ಗಂಗಳನಾನೃಪವರನುಂ ಕನಕಲ ।
ತಾಂಗಿ ಸುಲೋಚನಯುಂ ಕಣ್ಮನವಿಡಿವಂದದಿ ನೋಡಿದರು ॥ ೨೪

ಪರಿಮಱಿ ಯಾಡುವ ಪಾರಿವನಕ್ಕಯು ।
ನರವಿಂದವಿಲೋಚನೆ ಕರಮೀಕ್ಷಿಸಿ ।
ತೊರೆದ ಮುಜವೆಯಿಂದಮೆ ಮಣಿಗದ್ದುಗೆಯೊಳ್ ಮೆಯ್ಯಿಕ್ಕಿದಳು ॥
ಸುರಭಿಶರಂ ತನ್ನಯ ಸತಿಗಾಕೆಯು ।
ವರರೂಪಂ ಕಳಲೆನುತಮುದೃಶ್ಯ ।
ಕರಣದಿನೆಯ್ದಿ ತಳೆದ ಕಿಕ್ಕಿನ ಸೂಕ್ಕೋಯೆಂಬಂದದೊಳು ॥ ೨೫

ಆಲುಗದ ಮಯ್ಯಾಡದ ಸುಯ್ಯುರದೊಳ್ ।
ನೆಲೆಗೊಳ್ಳದ ಮೇಲುದು ಬಳುಕುವ ಕೊರ ।
ಲುಲುಹಿಲ್ಲದ ಕರಣಂ ಕೇಳದ ಕಿವಿ ಪಿರಿದುಂ ಭಾರೈಪ ॥
ಅಲರ್ಗಣ್ಣೊವೆ ಸಲೆ ಸೊಗಯಿಸಲಾಸ ।
ಲ್ಲಲಿತಲತಾಂಗಿಯು ಮೂರ್ಛೆಯು ಚೆಲ್ವಿಕೆ ।
ಗೆಲೆವಂದುದು ರತಿಯಾರ್ಜಿಪ ರನ್ನದ ಪುತ್ತಳಿಯಂದವನು ॥ ೨೬

ತರುಣಿ ಸುಲೋಚನೆಗಾದ ಮಱವೆಯುಂ |
ಭರದಿಂ ಕಂಡಸುಗೀಶಂ ಜಯಾಭೂ |
ವರಚಿಂತಾಮಣಿ ತಾನಾಮೂರ್ಛೆಯನತಿವೇಗದೊಳಯ್ದು ||
ಪಿರಿದೆಸೆದಂ ತಮ್ಮಿರ್ವರ್ಗೊಂದೇ |
ಹರಣಂ ನಿಶ್ಚಯಮೆಂಬುದನಾಯೆಡೆ |
ನೆರೆದ ಸಖೀಸಖಸಮುದಾಯಕ್ಕಱಿಕೆಯ ಮೊೞ್ಪಿಂಗದೊಳು || ೨೭

ಅರಸನುಮರಸಿಯುಮಿರ್ವರೊಡನೆ ನಸು |
ತೊರೆದ ಮಱವೆಯಿಂದವೆ ಮಯ್ಯಿಕ್ಕಲು |
ನೆರೆದಂತಃಪುರದ ನಿತಂಬಿನಿಯರ್ ಬೆದರ್ದುಪಚಾರವನು ||
ಸುರಭಿಕುಸುಮಸಾರಂ ಹಿಮಜಲಮಲ |
ಯರುಹದ ವೀಜನಮಂಬಿಮೆಱಂದಿನಿ |
ಪಿರಿದುಂ ಮಾಡಿ ಬೞಿಕ ಮಮತೆಯೊಳಲರ್ಗಣ್ಣಂ ತಱಿಸಿದರು || ೨೮

ನನೆಯ ಸರಲನರ್ಚಿಪ ದೇವತೆಯುಂ |
ವನಜಭವಂ ಚಿತ್ರಿಸಿ ನಯನೋನ್ಮೀ |
ಲನಮಂ ಮಾಡಿ ವಿರಾಜಿಪ ತೆಱದಿಂದಲರ್ಗಣ್ಣಂ ತೆಱೆದಾ ||
ಅನಿತಱೊಡನೆ ಜಾತಿಸ್ಮರಣಂ ಸಂ |
ಜನಿಯಿಸೆ ಹಾ ! ರತಿವರ ಹಾ ! ರತಿವರ |
ಎನುತ ಪಿರಿದು ಹಳವಳಿಸಿದಳಾಪರಭೃತಲಲಿತಾಲಾಪ || ೨೯

ಜನತಾಧಿಪಜಯಜಯಜಾಯಾಪತಿ |
ಗನಿತಱೊಳೊಡನೆಯೆ ಜಾತಿಸ್ಮರಣಂ |
ತನಗುಮಿರದೆ ಜನಿಯಿಸೆ ರತಿವರ ರತಿವರ ನೀನಿಲ್ಲದೆಯೋ ||
ಎನುತ ಸುದತಿ ಕಳವಳಿಸಿದ ಕಥನವ |
ನೆನಸುಂ ತಾನಱಿದಿರ್ದಂ ಜನರಂ |
ಜನೆಯಂ ಮಾಡುವೆನೆನುತ ಮನೋರಾಗದಿ ಕೇಳಿದನಿಂತು || ೩೦

ಎಲೆಯೇಣಾಂಕವದನೆ ನಿನ್ನೆರ್ದೆಯೊಳ್ |
ನೆಲಸಿತು ಮಱವೆಯದೇಕಾರಣದಿಂ |
ಬೆಳೆ ರತಿವರಯೆಲೆ ರತಿವರಯೆನುತುಂ ಮಱುಕದಿ ನೆನೆನೆನೆದು ||

ಸಲೆ ಪಲುಬುವುದೇ ನೀನಿದನೆನ್ನೊಳ |
ಗಲಸದೆ ತಿಳಿವಂದದೆ ಪೇಳೆನುತಾ |
ಯಿಳೆಯಧಿಪತಿ ನೃಪರಾಜಶಶಾಂಕಂ ಹರಿಸದಿ ಕೇಳಿದನು ||೩೧

ಈತೆಱದಿಂ ಬೆಸಗೊಂಡಸುಗೀಶಂ |
ಗಾತನ್ವಂಗಿ ಸುಲೋಚನೆಯೆನಸುಂ |
ಪ್ರೀತಿಯಿನರುಣಾಂಬುರುಹೋಪಮಹಸ್ತದ್ವಯಮಂ ಮುಗಿದು ||
ಮಾತಂ |ಮನಸುವಿಡಿದು ಲಾಲಿಸು ವಿ |
ಖ್ಯಾತಯೆನುತ ಬಿನ್ನವಿಸಿದಳಾಕಲ |
ಘಾತಕಮಲನಿಜಮುಖಿ ಕರ್ಪುರದಂಬುಲವಾಯುಂ ತೆಱೆದು ||೩೨

ಹೃದಯದೊಳನವರತಂ ಮನೆಗಟ್ಟಿದ |
ಮದನನ ಮಾನಿತಮಪ್ಪಾಜಸಮಂ |
ವಿದಿತೋಜ್ಜ್ವಲತೇಜಮುಮಾಬಾಯ್ದೆಱೆಯಿಂ ಪೊಱಮಡುವಂತೆ ||
ಮುದದಿಂ ಸುಲಿಪಲ್ತೊಂಡೆದುಟಿಯ ಪೊಸ |
ಕದಿರುಣ್ಮುತ್ತಿರೆ ತತ್ಪ್ರಿಯತಮನೊಳ್ |
ಮದಕೋಕಿಲನಿಭಲಲಿತಾಲಾಪೆ ನುಡಿದಳೀತೆಱದಿಂದ ||೩೩

ಹರಿಣದೆಱೆಯ ಚಿತ್ತೈಸೀಧರಣಿಗೆ |
ಕುರುಕಂಭಂ ತಾನೆನೆ ಸೊಗಯಿಪ ಸುರ |
ಗಿರಿಯ ಸುರಪದೆಸೆಯೊಳ್ ಭೂಭಾಮೆಯ ಬೈತಲೆಯೆಂಬಂತೆ ||
ಪರಿದುಮೆಸೆವ ಸೀತಾಸ್ರೋತಸ್ವಿನಿ |
ಯೆರಡುಂ ¶ಕೆಱೆಯೊಳ್ ಪದಿನಾಱುಂ ನಾ |
ಡಿರುತಿರ್ಪುವು ಮತ್ತದಱ ಮರುತ್ಸಖದಿಕ್ಕಿನ ದೇಶದೊಳು ||೩೪

ಇಳೆಯೆಂಬಿಳೆಲೆಯ ಪೀನಸ್ತನದೊಳ್ |
ತೊಳಗುವ ಪೊಸಮಿಸುನಿಯ ಪದಕಮದೆನೆ |
ನಳಿನಾವತಿಯೆಂಬ ಜನಾಂತಂ ಸಲೆ ಸೊಗಯಿಸಲಂತದಱ ||
ವಳೆಯದ ರನ್ನಗಳೆನೆ ಗ್ರಾಮಂಗಳ್ |
ಪೊಳೆಯಲದಱ ನಾಯಕಮಣಿಯಂದದಿ |
ಲಳಿತೋತ್ಕಟಮಾದುದು ಪದ್ಮಿನಿವೆಸರ್ವಡೆದ ಮಹಾನಗರಿ ||೩೫

|. ಮನದೆ. ಖ||    ¶. ಕಡೆ. ಖ||

ಆಪಟ್ಟಣಕೆ ಜಗತ್ಪಾಲಂ ಧರ |
ಣೀಪತಿಗಳ ಕುಲತಿಲಕಂ ಪಟ್ಟದ |
ಚಾಪಳಲೋಚನೆ ಸುಭಗೆ ಕುಬೇರಶ್ರೀಯೆಂಬಳ ಕೂಡಿ ||
ಶ್ರೀಪುರುಷೋತ್ತಮರಂತಿರೆಯುವರೊಳು |
ರೂಪಗುಣಾನ್ವಿತವೈಶ್ಯಾನ್ವಯಮಣಿ |
ದೀಪಂ ಧನಪತಿಕಾನಾತ್ಮಖ್ಯಂ ಸುಖದಿಂ ಬಾಳುತ್ತಿಹನು ||೩೬

ಏನಂ ಬಣ್ಣಿಸುವೆಂ ಮತ್ತಾತನ |
ನೂನಸುಕೃತದೊದವಂ ಮನೆಯೊಳ್ ಸುರ |
ಧೇನು ಕರೆಯುತಿರ್ಪುದು ತನ್ನಯ ಕೈಯೊಳು ಚಿಂತಾರತ್ನಂ ||
ತಾನುಣ್ಣೆ ನೆಲಸಿರ್ಪುದು ಗೆಯ್ಯದ ಕಾ |
ಳೇನಂದನಫಲವಿಂದೀವುದು ದಿವಿ |
ಜಾನೋಕಹವೋವದೆ ಕುಡುವುದು ಬೇಡಿದುದಂ ಹಿತ್ತಲೊಳು ||೩೭

ಆವೈಶ್ಯಪ್ರಭುವಿನ ನಿಜಸತಿ ಹೊಂ |
ದಾವರೆಮೊಗ್ಗಿನ ಮೊಲೆಯ ಪೊಸಬಂದುಗೆ |
ಪೂವಾಯ್ದೆಳೆಯ ಬಗಸೆಗಣ್ಗಳ ರಾಯಂಚೆವಸುಳೆನಡೆಯಾ ||
ದಾವಣಿದುಂಬಿಗುರುಳ ಗಿಳಿನುಡಿಗಳ |
ಭಾವಕಿಯುತ್ತಮನಾಯಿಕೆ ಸಕಲಕ |
ಲಾವಿದೆಯಪ್ರಿಯದತ್ತೆವೆಸರನಾಂತೊಳ್ಪಮನೆಯಿದ್ದಳು ||೩೮

ಅವರೆಸೆದಾಡುವಮಲವಣಿಹರ್ಮ್ಯದ |
ನವವಿಧಮಾಣಿಕ್ಯದ ಲೋವೆಗಳೊಳು |
ಭುವನಂಗಟ್ಟ ಮುದದಿ ರತಿವರರತಿಸೇನೆವೆಸರನಾಂತು ||
ಧವಳರುಚಿಯನಂಗೀಕರಿಸಿದ ಪಾ |
ರಿವದಮಳ್ಪಕ್ಕಿಗಳಾಮನೆಯೆಲ್ಲಕೆ |
ಸವಿನಯಮಂ ಪುಟ್ಟಿಸಿಯನವರತಂ ಸೌಖ್ಯಂಬಡೆದಿಹುವು ||೩೯

ಕರುಣಂ ಮಿಗೆಯೊಳ್ಗುಡುಕುಗಳಂ ಮುಂ |
ಬರಹಿ ವಿನೋದದಿ ಮೇಯಿಸಿ ಬಟ್ಟಿಕುಣ್ಚಿ |
ಹರಿಸದಿನಾಹೆಣ್ಣಕ್ಕಿಯನುಡೆನಿಟ್ಟವಟ್ಟಿಯೊಳಡಂಗಿಸುತ ||

ವಿರಹವನಾಗಿಸಿ ಗಂಡಿಗೆ ಬಳ್ಳಿಕಾ |
ಚುರಡಜ ವೊಗಗಾಣಿಸಿ ಕೆಲಯಿಸಿ ನವ |
ಸುರತಂಗೆಯಿಸುವಳಂಗನೆಯಾಪಾರಿವದಮುಳ್ಳಕ್ಕಿಯನು ||೪೦

ಧರೆಯೊಳ್ ದುಷ್ಕರ್ಮದೊಳಾಚರಿಸದ |
ನರರೇಗತಿಗೆ ನಡವರೆನೆ ಕೇಳ್ದಾ |
ನರಕಕ್ಕೀಯಂದದಿನಿ ವರೆನುತ್ತಿಬ್ಬೀವ್ರವು ಭೂತಳಕೆ ||
ಸಿರಿದುಂ ಸತ್ಕಾರದೊಳೊಲಪಿಂದಾ |
ಚರಿಸಿದರೇಗತಿಗೆಯ್ದುವರೆನಲಾ |
ಸುರಲೋಕದ ದೆಸೆಗೋವದ ಪಾಱುವ್ರವಾಪಾರಿವಕ್ಕಿ ||೪೧

ಮಂದೇತರಮುದದಿಂದೆ ವಣಿಗ್ವರ |
ಸುಂದರಿಯಾಪಾರಾವತವಂ ಬಗ |
ವಂದು ಸಲಹಿ ಹಿರಿದಬ್ಬುತ್ತೆಯೊಳಂ ಪಲಪಗಲಂ ಕಳೆಯುತಿರೆ ||
ಬಂದಾನೊಂದು ದಿನದ ನಡುವಗಲೊಳ್ |
ಕಂದರ್ಪವಿದಾರಣನೆನಿಸಿದ ಮುನಿ |
ವೃಂದಾರಕನೊರ್ವಂ ಚರಿಗೆಗೊಳಲ್ ಪುರವರಕೆಯ್ದಿದನು ||೪೨

ಸುದತೀಜನಮಂ ಮುನ್ನಪ ತೊಟ್ಟಿದಾ |
ಸುದತೀಶೋಣಿತಮಾಂಸಮನನ್ನುಳ್ |
ಪುದುಗಿಸಿ ಕೊಂಡಿರ್ಪುದು ಮತವಲ್ಲನುತಾಯತಿಕುಲತಿಲಕಂ ||
ಬದಲಾ ರುಧಿರರಸಮಾಂಸಮನಲ್ಲಿಂ |
ಪದಪಿಂ ಪ್ರೊಟಮಾಡಿಸಿದನೋ ಎನಲೊ |
ಪ್ಪಿದುದಂಗಂ ಬಱಿಯೆಲು ನರದಿಂದರ್ಗದ ಜಂತ್ರದ ತೆಱದಿ ||೪೩

ತಪದಭಿವೃದ್ಧಿಗೆ ತನುವಿರಬೇಕೆನು |
ತಪಗತದೋಷಾಲಂಕೃತನಾಪದ |
ದುಪಹತಿ ತಪ್ಪದು ಸೂಕ್ಷ್ಮಪ್ರಾಣಿಗೆನುತ್ತೊಂವಾಱುವರಂ ||
ಚಪಲತೆಯಿಲ್ಲದೆ ನೆಲನಂ ನೋಡು |
ತ್ತುಪವಾಸಾಂತರದೊಳ್ ಬಡಬಡನಾ |
ಕ್ಷಪಣಂ ಚರಿಗೆಗೊಳಲ್ ನಗರೀವೀದಿಯೊಳಿರದೆಯ್ದಿದನು ||೪೪

ವರಮುನಿ ಭಾವರಿಗೊಡುವುದನಟ್ಟಿದಾ |
ದರದಿಂ ವೈಶ್ಯವನಿತೆ ತಲೆವೀದಿಗೆ |
ಭರದಿಂ ಬಂದು ಪಲವು ತೆಱದರ್ಚನೆಯಂ ಚಿಬ್ಬಿಲೊಟ್ಟು ||
ಸ್ಮರಮಾತಂಗಸದೃಶಮೃದುಗಮನದ |
ತರುಣೀಜನವೆಡಬಲದೊಳ್ ಮುದದಿಂ |
ಬರೆ ಬಂದಳ್ ತಾನವರಂ ನಿಲಿಸುವೆನೆಂಬಬಿಲಾಷೆಯೊಳು ||೪೫

ಭಕತಿ ಬಗೆಯನ್ನೞ್ ಸಜ್ಜೆವಿಡಿದಿರೆಯು |
ತ್ಸುಕದುತ್ಸಾಹಂ ಪೊಱಪೊಣ್ಮುತ್ತಿರೆ |
ಚಕಿತಕುರಂಗವಿಶಾಲವಿಲೋಚನೆಯಂಗಣದಿಂದೆಯ್ದಿ ||
ಅಕಳಂಕವ್ರತಿಪತಿಯರುಣಾಂಬುಜ |
ವಿಕಸತ್ಪದಪಂಕೇಜಕೆ ಕುಟಿಲಾ |
ಳಕಷಡಯನಸಮಿತಿಯನೆಗಿಸಿದಳ್ ವಿಧಿಪೂರ್ವಕದಿಂದ ||೪೬

ಯತಿಪತಿಯೆನ್ನ ಮನೆಗೆ ಬಿಜಯಂಗೆ |
ಯ್ದತಿಪುಣ್ಯವನಾಗಿಸಿ ಕುಡಿವೆನುತಾ |
ಶತದಳಸಲ್ಲಲಿತವಿಲೋಚನೆ ತಾಂ ನಿಱಿಸುವ ಸಮಯದೊಳು ||
ರತಿವರನುಂ ರತಿಸೇನೆಯುಮಾಂಬು |
ನ್ನತಿಕೆಯ ವೆಸರ ಕಪೋತಮಿಥುನಮಾ |
ಯತಿಗುರುಣಾಂಘ್ರಿಯುಗದ ಮುಂಗಡೆಯೊಳಗದಿರದೆ ಪೊರಱಿದುವು ||

ಪಾರಿವವಕ್ಕಿ ಪದದ್ವಯದಿದಿರೊಳ್ |
ಘೋರನೆ ಬಿೞ್ಗ ಪೊರೞಲಾಮುನಿವೃಂ |
ದಾರಕನಾಭಾವರಿ ಮುಱಿದಾಪುರವರದ ಬಹಿರ್ವನದ ||
ಮಾರಾರಿಯ ಮಂದಿರಕೆ ನಡೆಯಲಾ |
ವಾರಿಜಮುಖಿ ಕೈಸೇರಿದ ನವಚಿಂ |
ತಾರತ್ನಂ ಕೆಟ್ಟಂದದಿ ಪಿರಿದುಂ ಮಲುಮಲ ಮಱುಗಿದಳು ||೪೮

ಕಡುಬಡವಂ ಕೈಸೇರಿದ ಕಸವರ |
ಮೊಡನೆ ಬಯಲ್ಪಡೆಯಲು ಮಱುಗುವವೋಲ್ |
ಸಡಗರವಡಗಿ ವನಜಮುಖಿಯಾಪಾರಿವಮಾಮುನಿಪತಿಯಾ ||

ಅಡಿಯೊಳ್ ಪೊರಳ್ದು ನಿಮಿತ್ತಮನಿನಿಸುಂ ।
ತಡೆಯದೆ ಕೇಳ್ವೆನೆನುತ ನಗರಿಯ ಪೊಱ ।
ಗಡೆಯ ಬನದ ಬಸದಿಗೆ ಜತಿರಾಯನ ಬಳಿವಿಡಿದಯ್ದಿದಳ್ ॥೪೯

ಬನಮಂ ಪೊಕ್ಕು ಬಸದಿಯಂ ಬಲವಂ ।
ದನುರಾಗದಿನರುಹನನಭಿವಂದಿಸಿ ।
ಮುನಿನಾಥನ ಮೆಲ್ಲಡಿದಾವರೆಗೆ ನಮಸ್ಕಾರಂಮಾಡಿ ॥
ವನಜೋಪಮಕರಯುಗಮಂ ಮುಗಿದೆಲೆ ।
ಮುನಿಪಾ ಖಗಮಿಥುನಂ ಪೊರಳ್ದಿರವಂ ।
ವಿನಯದಿ ನಿರೂಪಿಸವೇಳ್ಕೆನುತಂ ಬಸಗೊಂಡಳ್ ವೈಶ್ಯಸತಿ ॥೫೦

ಈಪರಿ ವಿಜ್ಞಾಪನಮಂ ಮಾಡಿದ ।
ಚಾಪಳನೇತ್ರೆಯ ವದನಮನೀಕ್ಷಿಸಿ ।
ತಾಪಸನಿರದಿಂತೆಂದಂ ಮಗಳೇ ನೀಂ ಬೆಸಗೊಂಡುದನು ॥
ಆಪಾರಿವಕ್ಕಿಗಳ್ ಬರೆದು ತಾ ।
ವೇ ಪೇಳ್ವುವು ಪೋಗನುತವ ಬೀಳ್ಕೊಡೆ ।
ಲಾಪೊಂಬಸದಿಯನಾಗಳ್ ಪೊಱಮಟ್ಟೆಯ್ದಿದಳಾಲಯಕೆ ॥೫೧

ಬರುತಾಬಲ್ಪೆಱೆಮೊಗದ ತನೂದರಿ ।
ತರಿಸಿ ತೊಳಪ ಬೆಳ್ಳಿಯ ಪಲಗೆಗೆ ಕ ।
ಸ್ತೂರಿಯ ಮಿಸುಪ ರಜಮಂ ಪರಕಲಿಸುತ್ತಾಪಾರಿವಗಳನು ॥
ಬರಿಸಿಯೊಲೇ ಪಾರಿವವೇ ಮುನಿವರ ।
ಚರಣದ ಮುಂಗಡೆಯೊಳ್ ನೀವಬರೆದೆ ।
ಪೊರಳ್ದಿರವಂ ನೀವೊರೆಯಿಮೆನುತ ಕಡುನೇಹದ ಕೇಳ್ದಳ್ ॥೫೨

ಪ್ರಿಯದತ್ತೆಯ ಮಾತಂ ಲಾಲಿಸುತಸು
ನಯದಿಂ ರತಿವರನೆಂಬ ಕಪೋತಂ ।
ಪ್ರಿಯಮಂ ನೋಳ್ಪವರ್ಗುದಯಿಸಿ ಮಾಣಿಕ್ಯದ ಪೊಸಪಲಗೆಯನು ॥
ನಯದಿಂ ಸೋಲಿಪ ಚಂಚುವಿನಿಂ ನಿ ।
ಶ್ಚಯದಿಂ ಬರೆದುದು ನೂತನಕಸ್ತೂ ।
ರಿಯ ರಜಮಂ ಪರಕಲಿಸಿದ ಫಲಕದ ಮೇಗೀತೆಱದಿಂದ ॥೫೩

ವಿತತವೃಣಾಲವತೀಪ್ರುರವರದಭ |
ಪತಿಯಪ್ರತಿಮನುಕೇತುನೃಪಂ ಗುಣ ||
ವತಿಯೆಂಬಂಗನೆಗೂಡಿಯರನುಗೆಯ್ಯುತ್ತಿರಲಂತಲ್ಲಿ ||
ರತಿವರ್ನಾಂ ತಾನೆಂಪೊಬ್ಬ ವಣಿ |
ಕ್ಪತಿಗವುವನ ಸತಿ ವಿವುಲಶ್ರೀಗಂ |
ಗತಸೌಂದರ್ಯಂ ಭವಸೇನಾಖ್ಯತನುಜನುದ್ಭವಿಸಿದನು || ೫೪

ಆನಗರಿಯೊಳಿರ್ಪಂ ತತ್ ಳಭವ |
ಸೇನನ ವೂವಂ ಶ್ರೀದತ್ತಾಖ್ಯಂ |
ವೂನಿಯವಗವೂತನ ಸತಿ ಗಂಧಶ್ರೀಗಂ ಜನಿಯಿಸಿದ ||
ಪೀನಸ್ತನ ರತಿವೇಗಯೆನಸ್ನ್ಯಯ |
ಸೂನುಗ ಕುಡು ನೀನೆನುತುಂ ತದ್ಭವ |
ಸೇನನ ಜನಕಂ ಬೇಡಿದೊಡಾಕೆಯ ತಂದೆ ನುಡಿದನಿಂತು || ೫೫

ಸೋದರರದಳಿಯಂಗಣ್ಗಿಯಸೀವುದು |
ಾದಿನಿಯೊಳಗುಳ್ಳುದು ಭಾವಾ ಕೇ |
ಳಾದೊಡೆ ನಿನ್ನ ವುಗಂ ದುಷ್ಟಂ ಬಾಯೊಳಗೊಂದಕ್ಕರವುಂ ||
ಓದಿದುದಿಲ್ಲದರಿಂದಾನಾತಂ |
ಗೀದರಹಸಿತಾನನೆಯಂ ಕುಡುವುದು |
ಸಾದರವುಲ್ಲೆನುತಾಶ್ರೀದತ್ತಂ ಬಿಟಿನುಡಿಯಾಡಿದನು || ೫೬

ಆನುಡಿಯಂ ತಾನುಂ ಕೇಳ್ದುಭವ |
ಸೇನಂ ಸೋದರವೂವನೊಳಿಂದಂ |
ನಾನೀರಾಜುಬರಿಸ ಪರಿಯಂತಂ ಪರದೇಶಕ್ಕೆಯ್ದಿ ||
ಸಾನಂದದಿ ವಿದ್ಯಾಭ್ಯಾಸಂಗೆ |
ಯ್ದೀನಗರಿಗೆ ವುಗುಳ್ದವನ್ನಬರಂ ವು |
ತ್ತೀನಾರಿಯನಾರ್ಗಂ ಕುಡಬೇಡೆನುತವೆ ವೂತಾಡಿದನು || ೫೭

ಈನುಡಿಯಂ ವೂವನೊಳೆ ನುಡಿದು ವು |
ತ್ತಾನಗರಿಯನಸವಸದಿಂ ಪೊಱವು |
ಟ್ಟಾನಂದದಿ ಬಹುಜನಪದವುಂ ಪೊಕ್ಕೆಲ್ಲಾವೋದಂಗಳಂ ||

ತಾನೋದಿ ಮಗುಳ್ದಿನ್ನುಂ ತದ್ಭವ ।
ಸೇನನ ದುಷ್ಕರ್ಮದ ಫಲದಿಂ ಮುಂ ।
ತಾನನ್ನಯಿಸಿದ ವರುಷದ ಮೇಲೆಣ್ಬಗಲೆಯ್ತರಲಿತ್ತು ॥ ೫೮

ಭವಸೇನಂ ಕುಱಿತ ದಿನಂ ಕಳಿದುದು ।
ನವಯೌವನವಿಂದಾಯ್ತೆನ್ನ ತನೂ ।
ಭವೆ ರತಿವೇಗೆಗೆನುತ್ತಾ ಶ್ರೀದತ್ತಂ ತತ್ಪುರವರದ ॥
ರವಿದತ್ತಂಗಂ ಜಯದತ್ತೆಗಮು ।
ದ್ಭವಿಸಿದ ರಸಿಕಸುಕಾಂತಂಗವಳಂ ।
ಸವಿನಯದಿಂದುದ್ವಹನಂಮಾಡಿದನಾಪೊೞಲೊಕೆಯೊಳು ॥ ೫೯

ಆಮುಱುವಗಲೊಳ್ ದೇಶಾಂತರದಿಂ ।
ತಾಮುಸವಂ ಮಾಡದೆ ಪೊೞಲಂ ಪೊ ।
ಕ್ಕಾಮಾವಂ ನಿಜಸುತೆ ರತಿವೇಗೆಯನೊಸೆದು ಸುಕಾಂತಂಗೆ ॥
ಪ್ರೇಮದಿ ಧಾರೆಯೆಱೆದ ವಾರತೆಯಂ ।
ಕಾಮುಕಭವಸೇನಖಳಂ ಕೇಳ್ದು ।
ದ್ದಾಮಕುಪಿತಮಾನಸನಾದಂ ಜವದಿಂ ಜವನಂದದೊಳು ॥ ೬೦

ಎನಗೆಂದಿರ್ದೇಣಾಂಕವದನೆಯಂ ।
ದಿನವೆಂಟಱ ಪೆಚ್ಚಂ ಬಗೆಯೊಳ್ ಬಗೆ ।
ದನುಜೆಯ ಮಗನಿವನೆಂದು ಮುಳಿಕಗೊಳ್ಳದೆ ನೋದರಮಾವಂ ॥
ವಿನಯಮನೊಕ್ಕು ವಿಚಾರಿಸದನ್ನಿಗ ।
ಗನುನಯದಿಂ ಕೊಟ್ಟನಲಾ ಯೆನುತುಂ ।
ಮುನಿಸಂ ದುರ್ಜನಭವಸೇನಂ ಬಗೆಯೊಳಗೋವದೆ ಬಲಿದಂ ॥ ೬೧

ಎನ್ನತ್ತೆಯ ನಿಜನಂದನನಿರ್ದಂ ।
ತನ್ನಿಗನಂ ಬೇಡೆನ್ನದವಗೆ ತಾ ।
ನುನ್ನತಿಕೆಯಿನೊಲಿದಾರತಿವೇಗೆಯುಮಾಂ ಪ್ರಿಯತರದಿಂದೆ ॥
ತನ್ನಂ ವರಿಯಿಸಿದ ಸುಕಾಂತನುಮಂ ।
ಕೆನ್ನಂ ಸಾಧಿಸಿ ಮುಣ್ಮಲಿಗೊಳಿಸದೂ ।
ಡೆನ್ನೀಜನ್ಮಮಿದೇಕೆನುತಂ ಭವಸೇನನೆಣಿಸುತಿರಲು ॥ ೬೨

ಇತ್ತ ಸುಕಾಂತನುಮಾರತಿವೇಗೆಯು |
ಮುತ್ತಮರೂಪಯುತರ್ ಸಿರಿಯುಂ ಪುರು |
ಷೋತ್ತಮನುಂ ಕೂಡಿದ ತೇಜದಿಂದಮೊಜಲ್ದತಿಮುದದಿಂದ ||
ಮತ್ತೆ ಪಲವುಪಗಲಂ ಸುಖದಿಂ ಕಳೆ |
ಯುತ್ತಿರೆ ಬಂದ ಬಸಂತದೊಳಾಪುರ |
ದೊತ್ತಿನ ವನಕೆ ವನಕ್ರೀಡಾಕಾರಣದಿಂದೆಯ್ದಿದರು ||೬೩

ತಳುವದೆ ತನು ತನ್ನಯ ಬೆಂಬಳಿಯೊಳ್ |
ನೆಲಂಬಿಡದೆಯ್ದಿಪ ತೇಜದಿಂದಾ |
ಲಳನಾಮಣಿರತಿವೇಗೆಯನೊಲವಿಂದಾವೈಶ್ಯಕುಮಾರಂ ||
ಕಳಿಯುದಲಂಪಿಂ ಕೂಡಿ ನಡೆದು ಬನ |
ದೊಳವೊಕ್ಕಂಗಜನುಂ ರತಿಯುಂ ಮನ |
ವೆಳಸಿ ಕರಂ ಕ್ರೀಡಿಸುವಂದದಿ ವನಕೇಳಿಯೊಳೊಪ್ಪಿದರು ||೬೪

ಮಾವಿನ ತಣ್ಣೆಳಲೊಳ್ ವಾಸಂತಿಯ |
ಕಾವಣದೊಳ್ ನವಲತಿಕಾಮಂಟಪ |
ದೋವರಿಯೊಳ್ ಪನಿನೀರ್ಗಳ ಕಾಲೊಳ್ ಕೃತ್ರಿಮಶೈಲದೊಳು ||
ತಾವರೆಯಲಗೊಳದೊಳು ಪುಳಿಲೊಟ್ಟಲೊ |
ಳಾವರವಧುಗಳ್ ಚೈತ್ರನುಮಾವನ |
ದೇವತೆಯುಂ ಕ್ರೀಡಿಸುವಂದದಿ ವಿಹರಿಸಿ ಕಣ್ಗೊಪ್ಪಿದರು ||೬೫

ಲತೆಗೆಸೆವಾಲಿಂಗನದಿಂ ಪಾರಾ |
ವತಕೆ ಮಿಸುಪ ಚುಂಬನದಿಂ ಲಾವುಕ |
ತತಿಗೆ ಕೊರಲ ಕೂಜಿತದಿಂ ಬಾಳಾಂಕಿಗೆ ಸವಿವಾತುಗಳಿಂ ||
ಅತಿರಂಜಿಸುವಮಳ್ಗಬ್ಬಿಗೆ ತವೆಯದ |
ರತಿಯ ಪರಿಣತೆಯಿನಾವೋಹಿಪ ದಂ |
ಪತಿಗಳ್ ಮುಂ ಗುರುವಾಗಿ ಕರಂ ಕ್ರೀಡಿಸಿದರ್ ವನದೊಳಗೆ ||೬೬

ಈವಿಧದಿಂ ವನಜಲಕೇಳಿಯನೊಸೆ |
ದಾವೈಶ್ಯೋತ್ತಮನುಂ ರತಿವೇಗೆಯು |
ವೋವದೆಯೊಂದು ಲತಾಗೃಹದೋವರಿಯೊಳ್ ಸುಸಿಲಂಗೆಯ್ದು ||

ತೀವಿದ ಪರವಶದಿಂ ಮೆಯ್ಯಿಕ್ಕರ ।
ಲಾವೇಳೆಯನುಜ್ಞೆ ಸಾಧಿಸಿಯಾದು ।
ಭಾವಿ ಖಳಂ ಭವಸೇನನಿಱಿದು ಕೊಂದಂ ಕಡುಮುನಿಸಿಂದ ॥ ೬೭

ಅತಿಪಾತಕಿ ಭವಸೇನನ ಕೈಯಿಂ ।
ಗತಜೀವಂಬಡೆದ ಸುಕಾಂತನುಮಾ ।
ರತಿವೇಗೆಯುಮಾಹಾರ್ಯದ ಲೋವೆಯು ಹೊರೆಯೊಳ್ ಮನೆಗಟ್ಟಿ ॥
ಸತತಂ ಸುಖಿಯಿಪ ಪಾರಿವಪಕ್ಕಿಗೆ ।
ರತಿವರನುಂ ರತಿಸೇನೆಯುಮೆಂಬು ।
ನ್ನತಿಕೆಯ ಹೆಸರಂ ಹಡೆದು ಜನಿಸಿ ಬೆಳೆದುವು ನಿರ್ವ್ರಾತ್ತಿನೊಳು ॥ ೬೮

ಮನೆಯೆಲ್ಲಕೆ ಮುದ್ದಾಗಿ ಬೆಳೆದು ನಾ ।
ವನುದಿನದಿಂದಿರುತಿಂದಿನ ದಿನದೊಳ್ ।
ಮುನಿನಾಥನ ಮೆಲ್ಲಡಿಯಂ ಕಾಣಲೊಡನೆ ಜಾತಿಸ್ಮರಣಂ ॥
ಜನಿಸಿದ ಕಾರಣದಿಂದೀಜನ್ಮದ ।
ಘನ†ದುಃಖದ ನಿರ್ಜರೆಗೆ ನಿಮಿತ್ತಂ ।
ವನಿತಾಮಣಿ ಪೊರೞ್ದಿವು ನಾಮೊಂದು ಬರೆದು ತೋಱಿತು ಪಕ್ಕಿ ॥ ೬೯

ಇಂತು ಸವಿಸ್ತರದಿಂ ತಮ್ಮಯ ಜ ।
ನ್ಮಾಂತರಮಂ ಬರೆದಱಿಪಿದ ಪಕ್ಕಿಗೆ ।
ಕಾಂತಕಲಾಭೃದ್ಬಿಂಬವದನೆಯತ್ಯಾಶ್ಚರ್ಯಂಬಟ್ಟು ॥
ಸಂತಸದಿಂ ಮೆಯ್ದಡವಿ ಸುಹೃಜ್ಜನ ।
ಸಂತತಿಯಂ ಕರೆಯಿಸಿ ಬೞಿಕಾವೃ ।
ತ್ತಾಂತಮನವರೊಳೊರೆದು ಸವಿಗುಡಕಂ ಕೊಟ್ಟೋವಿದಳಾಗ ॥ ೭೦

ಆಪಾರಿಪದಮಳ್ಗಳ್ ಮುನಿನಾಥನ ।
ರೂಪಂ ಕಂಡಡಿಯಲ್ಲಿ ಪೊರೞ್ದುದ ।
ನಾಪಳಕದೊಳ್ ಬರೆದ ತಮ್ಮಯ ಮುನ್ನಿನ ಜನ್ಮದ ತೆಱನಂ ॥
ಭೂಪಾಲಜಗತ್ಪಾಲಂ ಕೇಳ್ದವ ।
ನಾಪೊಗಸಿನೊಳ್ ಕರಸಿ ಮುನ್ನವೆಬರೆ ।
ಪಾಪರಿಯಂ ತಾನಾಗಳ್ ಬರೆಯಿಸಿಯಕ್ಕಜಮೆಯ್ದಿದನು ॥ ೭೧

---

†. ಕರ್ಮದ. ಕ॥

ಇಂತಾಪಾರಿವವಾಪುರವರದೊಳ್ |
ಸಂತಸಮಂ ಸರ್ವರ್ಗಾಗಿಸಿ ನಿ |
ಶ್ಚಿಂತಂ ಪ್ರಿಯದತ್ತಾವೈಶ್ಯಸ್ತ್ರೀಯಾಲಯದೊಳಗಾಡಿ ||
ಸಂತಸಮಿರ್ದಪು ಮತ್ತಾ ಪ್ರಾಣೇಶಾ |
ಕಂತುಸದೃಶರೂಪಾ ಜಯಾಧರಣೀ |
ಕಾಂತಾ ಎನುತ ನುಡಿದ ನಲ್ಲಳ ನುಡಿಗೇಳ್ದನಾನೃಪತಿ || ೨೨

ಪರಿರಂಜಿತಪುಷ್ಕರಯುತಹಸ್ತಂ |
ನಿರುತಂ ನವದಾನೋಪೇತಂ ಬಂ |
ಧುರಮಣಿಮಸ್ತಕನುರುಬಲಯುತನವನೀಭೃದ್ಗಣಕಾಂತಂ ||
ಸುರುಚಿರಮೃದುತರಮಾರ್ಗಸಮೇತಂ |
ಹರಿದಿಜ್ಮಾತಂಗದ ಪಾಂಗಿಂದಾ |
ಧರೆಯೊಳಗತಿವಿಭ್ರಾಜಿಸಿದಂ ಸತ್ಪ್ರಭುಕುಲಮಣಿದೀಪಂ || ೨೩

ಇದು ಸುರನರಫಣಿಪರಿವೃಢವಿನಮಿತ |
ವಿದಿತವಿನಯಗುಣಗಣಯುತಜಿನಪತಿ |
ಪದಸರಸಿಜಮದಮಧುಕರನತಿಚತುರಕಲಾಪರಿಪೂರ್ಣಂ ||
ಸದಮಳಚರಿತಂ ಪ್ರಭುರಾಜಂ ಸಂ |
ಮುದದಿಂ ರಚಿಸಿದ ಜಯನೃಪಕಾವ್ಯದೊ |
ಳೊದವಿ ಮನೋಹರಮಾದುದು ಪನ್ನೆರಡನೆಯ ಮಿಸುಪ ಸಂಧಿ || ೨೪

## ಹನ್ನೆರಡನೆಯ ಸಂಧಿ ಸಂಪೂರ್ಣಂ.

# ತ್ರಯೋದಶ ಸಂಧಿ.

ಸೂಚನೆ || ಖಗಯುಗಮೞಿದು ಖಚರನೃಪನುದರದೊ |
ಳೊಗೆದು ಗಮನಯುದ್ಧದೆ ಮಂಗಲಮಂ |
ಮಿಗೆ ಹಡೆದವನಿಯನಾಳ್ವ ಕಥನಮಂ ಸತಿಯೊರೆದಳ್ ಮಿಭಾಗೆ||

ಚಿತ್ತೈಸೆಲೆ ಚಿತ್ತೇಶಾ ಸಂತಸ |
ವೆತ್ತಾ ಪಾರಾವತದಂಪತಿಯಿರ |
ಲತ್ತ ಸುಕಾಂತನುಮಂ ರತಿವೇಗೆಯುಮಂ ತದ್ವನದೊಳಗೆ ||
ಮತ್ತಹೃದಯಭವಸೇನಂ ಕೊಲಲಾ |
ಪತ್ತನದರಸಾವಾರತೆಗೇಳ್ದು ಕ |
ಱುತ್ತವನಂ ಸಮವರ್ತಿಯ ಮುಖಮಂ ಹೊಗಿಸಿದನಾಕ್ಷಣದಿಂ ||೧

ಈತೆಱದಿಂದರಸಂ ತಲೆವೊಯಿಸಲ್ |
ಪಾತಕಿ ಭವಸೇನಂ ಪಿರಿದುಂ ಕೋ |
ಪಾತುರನಾಗಿಯೞಿದು ಬೞಿಕಾಪ್ರಿಯದತ್ತೆಯ ಸದನದೊಳು ||
ಮಾತೇಂ ಮನೆವೆಕ್ಕಾಗಿ ಜನಿಯಿಸಿ ಕ |
ಪೋತಮಿಥುನಮಂ ಮುನ್ನಿನ ವೈರಮ |
ನೇ ತವೆ ನೆನೆದು ಮುನಿದು ಕೊಂದಂ ಮನೆಯೆಲ್ಲ ಮಱುಗುವಂತೆ ||೨

ಈತೆಱದಿಂ ರತಿವರವೆಸರ್ವಡೆದ ಕ |
ಪೋತನೞಿದು ವಿಜಯಾರ್ಧಾದ್ರಿಯ ವಿ |
ಖ್ಯಾತೋತ್ತರವಿಲಸಚ್ಛ್ರೇಣಿಯ ಗಾಂಧಾರವಿಷಯದಲ್ಲಿ ||
ರೀತಿಯನಾಂತ ಸುಸೀಮಾನಗರಕೆ |
ನೀತಿವಿದಂ ರವಿಗತಿಖಚರೇಂದ್ರಂ |
ಭೂತಳಮಂ ಪಾಲಿಸುತಿರ್ಪಂ ಪುರುಷೋತ್ತಮನಂದದೊಳು ||೩

ಆವಿದ್ಯಾಧರರಾಜಂಗಂ ರಾ |
ಜೀವೋಪಮಲೋಚನೆ ಶಶಿಕಾಂತಾ |
ದೇವಿಗವೊಗೆದು ಕನಕವರ್ಮಕುಮಾರಕನಾಮಮನಾಂತು ||

ಭಾವಭವಂ ಬಂದಾಯಿಂದಿರೆಗಿಂ ।
ದ್ರಾವರಜಂಗುದ್ಭವಿಸಿ ಸಮಸ್ತೋ ।
ರ್ವೀವಳಯಮನೆಲ್ಲಂ ರೂಪಿಂ ನೆಱೆ ಮೋಹಿಸಿಯೊಪ್ಪಿದನು ॥೪

ನರ್ಮಸತೀನವಸುಮನೋಧರ್ಮಂ ।
ನಿರ್ಮಲತರಚರಿತಮನೋಧರ್ಮಂ ।
ದುರ್ಮುಖರಿಪುಧರಣೀಪಾಲಕಸಂತತಿಗಭಿನವಧರ್ಮಂ ॥
ಕರ್ಮಕಲಂಕರಹಿತಸದ್ಧರ್ಮಂ ।
ನಿರ್ಮಾಯಂ ನಿರುಪಮಗುಣವರ್ಮಂ ।
ಪೆರ್ಮೆವಡೆದನವನೀಮಂಡಲದೊಳಗಾಕಾಂಚನವರ್ಮಂ ॥೫

ರತಿರಮಣನ ರಾರಾಜಿಪ ರೂಪಂ ।
ಶತದಳಸಂಭವನಿನಿಸಿಲ್ಲದೆ ತೆಗೆ ।
ದತಿಚತುರಿಂ ನಿರ್ಮಿಸದಿರ್ದೊಡೆ ಮತ್ತಾಖಚರೇಶ್ವರನಾ ॥
ಸುತಗಬಲಾಜನಮಂ ನೆಱೆ ಮೋಹಿಪ ।
ನುತಸೌಂದರ್ಯಂ ತಾನೆಲ್ಲಿಯದಾ ।
ಅತನುತ್ವಂ ಮತ್ತಾಅಲರ್ವಿಲ್ಲಗೆ ಭಾವಿಸಲೆಲ್ಲಿಯದು ॥೬

ಸ್ಮರಗಜಕುತ್ತಮಮದವೇಱುವವೊಲ್ ।
ಸುರಭಿಶರಕೆ ಬಾಸಟಮೇಱುವವೊಲು ।
ಹರಿಣಧರಗೆ ಹದಿನಾಱುಕಲೆಗಳೇಱುವವೊಲ್ ನಂದನಕೆ ॥
ವರಮಧುಋತುವೇಱುವವೊಲ್ ವಿದ್ಯಾ ।
ಧರರಾಯನ ಮಿಸುಕುವ ರೂಪಿಗೆ ಹೊಸ ।
ಹರೆಯಂ ಬಂದುದು ಬಾಂಬಟ್ಟೆಗವೆಣ್ಗಳನತಿಮೋಹಿಸುತ ॥೭

ಮತ್ತಾವಿಜಯಾಚಲದಾಶ್ರೇಣಿಯೊ ।
ಳುತ್ತಮಗಂಧವಿಷಯಮತಿರುಚಿರಂ ।
ಬೆತ್ತಿರಲದಱೊಳ್ †ಭೋಗಪುರಂ ರಂಜಿಸುತಿರಲದನಾಳ್ವ ॥
ಚಿತ್ತಜಸನ್ನಿಭವಾಯುರಧಂಗಂ ।
ವೃತ್ತಸ್ತನೆ ರುಕ್ಮಿಣಿಗಂ ರತಿವರ ।
ನೊತ್ತಿನೊಳಗೆ ಸತ್ತಾಪಾರಿವವೆಣ್ಬಕ್ಕಿ ಜನಿಸಿ$ತಂದು ॥೮

†. ಪೊಗಪುಮರಂ. ಕ॥ $. ತಾಗ. ಕ॥

ಇಂತವರುದರದೊಳುದಯಿಸಿ ಬಳಿಕಾ |
ಕಾಂತಾವತಿಯೆಂದೆಂಬೊಳ್ಪೆಸರಂ |
ತಾಂ ತಳೆದೆಳಲತೆ ಪಳಿದಲರ್ವಡೆದಂದದಿ ಜೌವನವಾಂತು ||
ಕಂತುಕಣೆಗೆ ಬಿಜ್ಜೋದರರಾಯುರ |
ತಿಂತಿಣಿಯುಂ ಗುಜುವಾಡಿ ಕೆಡಪಿ ಕಡು |
ಸಂತಸದಿಂದಿರ್ಪಳ್ ಸಂಪೂರ್ಣಶಶಾಂಕಲಲಿತವದನೆ ||೯

ಸಣ್ಣಸಸಿಗೆ ಸರಿವಂದ ನೊಸಲ್ ಪೊಂ |
ಬಣ್ಣದ ಪೊಗರಂ ಗೆಲ್ವಂಗಚ್ಛವಿ |
ಬಿಣ್ಣದುವಾದ ಕುಚಂ ಬಿಸಲತಿಕೆಯುನೇಳಿಪ ನಳಿತೋಳು ||
ನುಣ್ಣನೆಸೆವ ಗಿಳಿನುಡಿ ತೊಂಡೆಯು ತನಿ |
ವಣ್ಣಂ ಗೆಲ್ವಿಂದುಟಿ ಮುಜುವುಲ್ಲೆಯು |
ಕಣ್ಣಂ ಗೆಲ್ವಲರ್ಗಣ್ಣೊಪ್ಪಿದುವಾಖಚರತನೂಭವಗೆ ||೧೦

ಎಳಮುತ್ತೆಸೆವ ರದಂ ಮಾಣಿಕಮಣಿ |
ಲಳಿತಾಧರವುಗುರ್ಗಳ್ ವೈಡೂರ್ಯಂ |
ಕುಳಿಶಮಲರ್ಗಣ್ಗಡೆ ಪೊಸಪವಳಂ ಕೋಮಲತರಪಾದಂ ||
ಹಳದಿವರಲ್ ಮೆಯ್ ಹರಿನೀಳಾಳಕ |
ಮಳವಡೆ ಕಣ್ಗೊಪ್ಪಿದಳರಮಗಳು |
ಜ್ವಳಿಸುವ ರತ್ನವಿರಾಜಿತಪಾಂಚಾಳಿಕೆಯೆಂಬಂದದೊಳು ||೧೧

ಪದೆದೀಕ್ಷಿಪ ಪಲ್ಲವಕಪ್ರತತಿಯು |
ಹೃದಯುಕತಿಭ್ರಮಣೆಯುನೊದವಿಪ ಗುಣ |
ದೊದವೆಮಗಲ್ಲದೆ ತಿಳಿದು ವಿಚಾರಿಸೆ ತಮಗಿನಿಸಿಲ್ಲೆನುತ ||
ಮದನನ ಕೈಯೊಳಗಾಡುವ ಪೊಸಚಿ |
ನ್ನದ ಪೊಗರಿಯುನಿನಿವಿರಿದುಂ ನಗುವಂ |
ದದೆ ಹೊಗರೆಸೆವ ಮುಗುಳ್ಮೊಲೆಯೊಪ್ಪಿದುವಾನೃಪನಂದನೆಗೆ ||೧೨

ಕೆಲ್ಲಯಿಸುತ ನೋಡುವ ಕೇಕರದಿಂ |
ಜಲ್ಲಿಜುಂಪೊಳ್ಪೊಳಗುವ ಶೀಕರಣಂ |
ಮೆಲ್ಲನೆ ಮಾತಾಡುವ ಪೊಸಜಾಣ್ನುಡಿ ಸಮ್ಮೋಹನಮಂತ್ರ ||

ಸಲ್ಲಲಿತಾಂಗದರುಚಿಯಾಕರ್ಷಣ ।
ಫುಲ್ಲಸಿತಾಸ್ಯದ ನಗೆ ರಕ್ಕಿನ ರಜ ।
ಮಲ್ಲದೊಡಾಬಿಜ್ಜೋದರಿ ಬಲ್ಲವರಂ ಬಗೆಗೊಳಿಸುವಳೇ ॥೧೩

ಅವಳೆಡಗಡೆಗೆಯುವಳ ಬಲಗಡೆ ಪಡಿ ।
ಯುವಳುಜ್ಜ್ವಲಿಪಾನನಕವಳೀಕ್ಷಿಪ ।
ನವಮುಕುರದ ಪ್ರತಿಫಲವೋ ಪಾಸಟಿಯುಂತದಱಿಂದವಳ್ಗೆ ॥
ಅವನಿತಳದೊ$ಳಗನಂಗನೆನಿಸಿದನ ।
ಯುವತಿಯೆನಿಪ ರತಿಗಿತಿ ಬಿಡುವೆಣ್ಗಳ ।
ದಿವಿಜಗಿವಿಜಸತಿಯರು ಪಾಸಟಿಯೋ ಭಾವಿಸುವರ ಬಗೆಗೆ ॥೧೪

ಈಯಂದದಿನೊಪ್ಪುವ ಬಾಂಬಟ್ಟೆಗ ।
ರಾಯನಣುಗಿ ರಾಜೀವದಳಾಂಬಕಿ ।
ಕಾಯಜಮೋಹನದಾಯಕಿ ತನ್ನಂ ಗತಿಯುದ್ಧದೊಳಾವಂ ॥
ಆಯತಿಯಿಂ ಸಲೆ ಗೆಲ್ಲಂಗೊಂಡವ ।
ನೀಯುಸುಗೀಶ್ವರನೆಂದೆನಿಸುವಭಿ ।
ಪ್ರಾಯಮನಂಬರಚರಜನಪದದೊಳ್ ಡಂಗುರವೊಯಿಸಿದಳು ॥೧೫

ಗೆಲ್ಲವಡೆದು ಮದನನ ಗೇಣ್ಗಣ್ಗಳ ।
ಸಲ್ಲಲಿತಾಂಗಿಯನೊಲಿಸುವವೆಂಬೀ ।
ಬಲ್ಲಿದ ಬಾಂಬಟ್ಟೆಗರೀಪಳ್ಳಿಯ ಪಟ್ಟದ ಶಿಖರದೊಳು ॥
ಉಲ್ಲಸಿತಂಬಡೆದಭವನ ಭವನ ।
ಕ್ಕೆಲ್ಲಂ ಬನ್ನಿಮೆನುತ ಡಂಗುರವಂ ।
ಸಲ್ಲೀಲೆಯೊಳಂ ಹೊಯಿಸಿದನಾಖೇಚರಚಕ್ರೇಶ್ವರನು ॥೧೬

ಆಡಂಗುರದ ದನಿಗೆ ಬಿಜ್ಜೋದರೆ ।
ನಾಡ ಕುವರರೆಲ್ಲರ ಗತಿಯುದ್ಧಂ ।
ಮಾಡುವೆನೆನುತ ರಜತಗಿರಿಗೆಯ್ದಲು ಕೇಳ್ದು ಕನಕವರ್ಮಂ ॥
ನೋಡುವೆನಾನಿದನೆನುತತಿತವಕಂ ।
ಮಾಡಿ ಬೞಿಕ ತಾನಲ್ಲಿಗೆ ನಡೆದಂ ।
ವೇಡೈಸಿದ ತನ್ನೋರಗೆಯಂಬರಚರಭೂಪರ ನಡುವೆ ॥೧೭

---

$. ಳಗಂಗನೆಯೆನಿಸಿದ ನವ· ಖ॥

ಇತ್ತ ಪವನಗತಿಖಚರನರೇಂದ್ರಂ ।
ತತ್ತನುಜಾತೆ ತರಳಲೋಚನೆ ಸ ।
ದ್ವೃತ್ತಸ್ತನೆ ಕಾಂತಾವತಿಯಂ ಸರ್ವಾಭರಣಂದೊಡಿಸಿ ॥
ಮತ್ತಗಜೋಪಮಗಮನದ ಸತಿಯರ ।
ಮೊತ್ತವೆರಸಿ ತದ್ವಿಜಯಾರ್ಧಾದ್ರಿಯ ।
ತುತ್ತತುದಿಯ ಸಿದ್ಧಾಲಯಕೆನಸುಂ ವಿಭವದೊಳೆಯ್ದಿದನು ॥೧೮

ಕನ್ನಡಿಮೊಗದ ಕಮಲದಳನೇತ್ರದ ।
ಭಿನ್ನಕುಚದ ಬಿಸಿನೀನಿಭಹಸ್ತದ ।
ಹೊನ್ನಹೊಗರನೇಳಿಪ ಮೆಯ್ವೊಳಗಿನ ಪೊಂಗುವ ಜಾವಳದ ॥
ಉನ್ನತಕುಚದುಂಗುರವಿಡಿನಡುವಿನ ।
ಚೆನ್ನೆಯರೊಂದೊಗ್ಗಿನೊಳಾಹೆಣ್ಗಳ ।
ರನ್ನೆ ಖಚರಚಕ್ರೇಶನ ನಂದನೆಯೊಡನೊಲ್ದೆಯ್ದಿದರು ॥೧೯

ಬಂದಾಗಿರಿಯ ಬಸದಿಯಂ ಹೊಕ್ಕಭಿ ।
ವಂದಿಸಿಯರ್ಹತ್ಪದಯುಗವಂ $ಮನ ।
ಸಂದು ಮರಾಳಮದಾಲಸಯಾನೆ ವಿಸುಪ ಮಂಡಪಕೆಯ್ದಿ ॥
ನಿಂದಿರಲವಳಭಿಜಾತೆಯದೊರ್ವಳ್ ।
ಸಂದಣಿಸಿದ ಬಾಂಬಟ್ಟೆಗರಾಯರ ।
ನಂದನರ್ಗಿಂತೆಂದಳ್ ಗತಿಯುದ್ಧಂಮಾಡುವ ಬಿನ್ನಣಮ ॥೨೦

ಈವಿಜಯಾದ್ರಿಯ ಬಸದಿಯ ಶಿಖರದ ।
ಲೋವೆಗಡರಿ ಖಜಿಕೆಳೆಯಂ ಬಿಟ್ಟು ।
ಪೂವಿನ ಮಾಲೆ ನೆಲಕೆ ಬೀಳದ ಮುನ್ನವೆಯವಳೊಡವರಿದು ॥
ಆವಾಸವಗಿರಿಗೆಯ್ದಿಯಕೃತ್ರಿಮ ।
ದೇವಾಲಯದಭವನನರ್ಚಿಸಿ ಬಂ ।
ದೋವದದಂ ಪಿಡಿದವನೇ ಪತಿ ಸತಿಗೆಂದಳವಳ ಕೆಳದಿ ॥೨೧

ಆನುಡಿಗೇಳ್ದುತ್ತರವೊತ್ತಿದವೊಲು ।
ಮಾನವಡಗಿ ಬಿಜ್ಜೋದರರೆಲ್ಲ ನಿ ।
ದಾನಿಸುತಿರಲದನಱಿದಿನವೇಗಖಗೇಶನ ನಿಜಸೂನು ॥

ಮಾನವಮದನಕನಕವರ್ಮನೃಪಂ ।
ತಾನಾಗತಿಯುದ್ಧಂಮಾಡುವೆನೆನು ।
ತಾನಂದದಿ ನಡೆತಂದಂ ಮತ್ತಾ ದೇಗುಲದುಪರಿಮಕೆ ॥ ೨೨

ಆಗತಿಯುದ್ಧವ ಮಾಡುವೆನೆನುತಾ ।
ದೇಗುಲದಮಲಮಣಿಯ ಶಿಖರಮನನು ।
ರಾಗದಿನಡರ್ದೊಪ್ಪುವ ಮಾಣಿಕ್ಯದ ಪಟ್ಟಗೆಯೊಳ್ ನಿಂದಾ ॥
ಆಗಸವಟ್ಟೆಗರಾಯನಣುಗನುಂ ।
ಸೋಗೆಮುಡಿಯ ಕಾಂತಾವತಿಯುಂ ಸಮ ।
ವಾಗಿಯುದಯಗಿರಿಯೇಱಿದ ಶಶಿರೋಹಿಣಿಯುಂತೊಪ್ಪಿದರು ॥ ೨೩

ಆಮಣಿಮಯಶಿಖರಮನಡರ್ದೊರ್ವರ್ಗಳ್ ।
ಭಾಮಿನಿಯುವಧಾನವೆನುತ್ತುದ್ಗಮ ।
ದಾಮಮನಿಱಿಯಬಿಡಲ್ಕದು ಬೀಱಿದ ಮುನ್ನ ಜವಳಿಗಾಲಿಂ ॥
ಕೋಮಲೆ ಕಾಂತಾವತಿಯುಂ ನೂತನ ।
ಕಾಮ ಕನಕವರ್ಮನುಮೊಡವರಿದರು ।
ಹೇಮಾಚಲದ ಕಡೆಗೆ ಗಾಳಿಗೆ ಗಱಿಮೂಡಿದ ಮಾಱ್ಕೆಯೊಳು ॥ ೨೪

ಬಾಂಬೊಱೆಯೊಳ್ ಸುರಗಿರಿಗೆ ಪರಿದು ಜಿನ ।
*ಬಿಂಬಕ್ಕೆಱಗಿ ತಿರಿಗಿದ ಖಗೇಂದ್ರನ ।
ಬೆಂಬೞಿಯೊಳಗೆಯ್ದುವ ತಾರಾನಖದುಚ್ಚಪಯೋಧರಂದ ॥
ತೆಂಬೆಲರಂದದುಸಿರ ತಳತಳಿಸುವ ।
ತುಂಬುವೆಱೆಯನೇಳಿಪ ನಗೆಮೊಗದ ನಿ ।
ತಂಬಿನಿಯಂಬರಲಕ್ಷ್ಮಿಯು ತೆಱದಿ ಮನೋಹರಮೆಯ್ದಿಳು ॥ ೨೫

ಅರುಣಾಧರೆಯಭಿನವಚಂದ್ರಾನನೆ ।
ವರಮಂಗಲಗುಣಯುತೆ ಸಾಮ್ಯಕಲೇ ।
ವರೆ ಗುರುನಿಬಿಡಪಯೋಧರೆ ವಿಭ್ರಾಜಿತಕಾವ್ಯಾಲಾಪೆ ॥
ಸುರುಚಿರಮಂದಪ್ರಚುರೆ ತಮಃಕಚೆ ।
ಹರಿನಂದನನವಕೇತುಸಮಾಂಬಿಕೆ ।
ತರುಣಿ ನವಗ್ರಹದಂತೆ ನಭೋಮಾರ್ಗದೊಳಿರದೆಯ್ದಿದಳು ॥ ೨೬

ಎಳೆಯಂಚೆಯನೇಳಿಸುವ ನಡೆಯ ಮಱಿ ।
ಗಿಳಿಯಂ ಮಱುಸುವ ನುಣ್ಮಾತಿನ ಮಿಸು ।
ಪಳಿಗಳ ಸಾಲಂ ಗೆಲ್ವ ಕುರುಳ ಪೊಣರ್ವಕ್ಕಿಯನದಟಲೆವ ॥
ಅಳಘುಸ್ತನದ ಚಕೋರಂಗಳ ಸಂ ।
ಚಳವಂ ಮಿಗುವಕ್ಷಿಯ ಸೋಗೆಯ ಬ ।
ಲ್ವಳವಂ ಗೆಲ್ವ ಮುಡಿಯ ಖಗಸುತೆ ಖಗದಂದದೊಳೆಯ್ದಿದಳು ॥೨೭

ತಳುವದೆ ಬಂದಾಪೊಸಪೂವಿನ ಸರ ।
ವಿಳೆಗಿಱಿಯದ ಮುನ್ನವೆ ಪಿಡಿದಾನೃಪ ।
ತಿಳಕನೊಡನ ಬರಲಾಱದೆ ಚರಮಾಂಗಂ ಬಿಡದಾಱಿ ಸೋಲ್ತು ॥
ಅಳಘುಸ್ತನಯುಗಳದ ಘನಕಬರಿಯ ।
ವಿಳಸತ್ಪೃಥುಕಟಿತಟದಂಬರಚರ ।
ಲಳನೆ ಲಲಿತಮದವತ್ಪ್ರಾಯಿತೆಯನುರಾಗದೊಳೆಯ್ದಿದಳು ॥೨೮

ಪರಿತದೊಳಂ ಸೋಲಿಸಿ ತನ್ನಯ ಸೌಂ ।
ದರತೆಯೊಳಂ ಸೋಲಿಸಿ ಪೊಸಪೂವಿನ ।
ಸರವಿಳೆಗಿಱಿಯದ ಮುನ್ನವೆ ಪಿಡಿದಂಬರಚರಭೂವರನ ॥
ಕೊರಲೊಳ್ ನವಮಂದಾರದ ಮಾಲೆಯ ।
ನರುಣಾಂಬುರುಹೋಪಮಕರಯುಗಲದ ।
ತರುಣೀಮಣಿ ಕಾಂತಾವತಿ ಸೂಡಿದಳತಿಕಾತರದಿಂದ ॥೨೯

ಮಗಳಭಿನವಕಂತುಗೆ ಮಾಲೆಯನಿಡ ।
ಲಗಣಿತಹರ್ಷನನಿಲಗತಿಖಚರಂ ।
ಸೊಗಯಿಪ ವೈಭವದಿಂದವೆ ನೆರೆದ ನಭಶ್ಚರರೊಡಗೂಡಿ ॥
ನಗರಿಗೆ ನಡೆದು ಬೞಿಕ ಸುಮುಹೂರ್ತದೊ ।
ಳೊಗುಮಿಗೆಯೊಲವಿಂದಾಯಿಳೆಯೆಲ್ಲಂ ।
ಪೊಗೞ್ವಂದದಿ ಸದ್ವಿಧಿಯಿಂ ಕಲ್ಯಾಣಂಮಾಡಿದನವರ್ಗೆ ॥೩೦

ಗಿರಿರಾಜಂ ಗೀರ್ವಾಣಾನೀಕದ ।
ಪೊರೆಯೊಳ್ ಪೂಣ್ಮೆವ ವೈಭವದಿಂದಾ ।
ತರುಣಶಶಾಂಕಧರಂಗೆ ಭವಾನಿಯನೊಲಿದೀವಂದದೊಳು ॥

ಹರಿಸದಿನಾಬಿಜ್ಜೋದರರಾಯಂ ।
ನೆರೆದ ನರೇಂದ್ರರ ನಡುವೆ ಸುಕರ್ಮದಿ ।
ಸರಭಿಶರೋಪಮರೂಪಗೆ ನಿಜಸುತೆಯಂ ಧಾರೆಯನೆಱೆದಂ ॥ ೩೧

ಇಂತು ಮದುವೆಯಂ ಮಾಡಿ ಪವನಗತಿ ।
ತಿಂತಿಣಿಗೊಂಡಂಬರಚರಧರಣೀ ।
ಕಾಂತರುಮಂ ಪ್ರಿಯದಿಂದ ಕಳಿಪಿಯೞಿಯನುಮಂ ನಿಜಕಾಂತೆ ॥
ಕಾಂತಾವತಿಯಂ ಬೞಿವೞಿಸಹಿತ ।
ತ್ಯಂತಹರುಷಹೃದಯಂ ಕಳುಹಲು ಸುರ ।
ಕಾಂತಸದೃಶವೈಭವದಿಂ ನಿಜಪುರವರಕೆಯ್ದಿದರವರು ॥ ೩೨

ಪುರವಂ ಪೊಕ್ಕು ಪುರಂಧ್ರೀಸಹಮಾ ।
ದರದಿಂ ಜನಕಜನನಿಗಭಿವಂದಿಸಿ ।
ಹರಕೆಯನಾಂತು ಕನಕವರ್ಮನೃಪಂ ಪಲಪಗಲವನಿಯನು ॥
ಸಿರಿವೆರಸಬ್ಜೋದರನಾಳ್ವಂದದಿ ।
ತರುಣೀಮಣಿ ಕಾಂತಾವತಿಸಹಿತಂ ।
ಪಿರಿದುಂ ಕೀರ್ತಿವಡೆದು ಪರಿಪಾಲಿಸಿದಂ ಮನದೆಱಕದೊಳು ॥ ೩೩

ಆವಿಜಯಾದ್ರಿಯುಭಯಸಾನುವಿನೊಳ್ ।
ತೀವಿರ್ದ ದಶೋತ್ತರಶತಸಂಖ್ಯೆಯ ।
ಭೂವರರೆಲ್ಲವರಂ ತಲೆವಾಗಿಸಿ ಮತ್ತವರೊಳಗುಳ್ಳ ॥
ಆವಾರಣಹಯತರುಣೀರತ್ನಮ ।
ನೋವದೆ ಕಪ್ಪಂಗೊಂಡವನಿಯೊಳೆ ಯ ।
ಶೋವಲ್ಲಿಯನಡರಿಸಿದಂ ತತ್ಖೇಚರಚಕ್ರೇಶ್ವರನು ॥ ೩೪

ಹರನೆನೆ ಸಕಲಕಲಾಭೃತ್ಪೂಜ್ಯಂ ।
ಹರಿಯೆನೆ ಸಲ್ಲಲಿತವಿಚಾರಂ ಸರ ।
ಸಿರುಹಾಸನನೆನೆ ಚತುರಾಸ್ಯಂ ಭಾಸ್ಕರನೆನೆ ಸದ್ವೃತ್ತಂ ॥
ವರಮೃಗಪತಿಯೆನೆ ಮಾತಂಗೋನ್ಮದ ।
ಹರಣಂ ಶಶಿಯೆನೆ ಕುವಲಯರಾಜಂ ।
ಧರೆಯೊಳಗತಿವಿಭ್ರಾಜಿಸಿದಂ ಕಾಂಚನವರ್ಮನರೇಂದ್ರಂ ॥ ೩೫

ಪ್ರಾಯಮಿಱುವ ಪರ್ಯಂತಂ ರಾಜ್ಯ ।
ಶ್ರೀಯಂ ನೃಪನೀತಿಯನುಲ್ಲಂಘಿಸ ।
ದಾಯತಿಯಿಂ ತಾನಾಳೆ ಬೞಿಕ ಕೆನ್ನೆಯ ನರೆಯಂ ಕಂಡು ॥
ಆಯಿಳೆಯಾಣ್ಮಂ ಸಂಸಾರಂ ನೆಱೆ ।
ಹೇಯಮಿದೆಂದಾತ್ತಮದೀಕ್ಷೆಯನಾ ।
ಪ್ರೇಯಸಿಸಹಿತ ತಳೆದನವನೀತಳನೊಲ್ಲನುಱುವ ತೆಱದಿ ॥ ೩೬

ಸಂಜೆಯ ಕೆಂಪು ಸೊಬಗುಪ್ರೊಣವುಲ್ಲ ಧ ।
ನಂಜಯನೇಱ್ಗ ಸಕಲಬಂಧುಜನಂ ।
ಮಂಜಿನ ಮುಗಿಯ ಮಾಹಿಮೆ ಮಹದೈಶ್ವರ್ಯಂ ಸುರಧನು ಸುತರು ॥
ಬಾಂಜೊಡರಿದಿರರಿಸಿನ ಹರೆಯಂ ಘನ ।
ರಂಜನೆ ರಾಜ್ಯದೊದವು ಮಾತ್ರದಕಿಸಿ ।
ಸಂಜದೆ ಮುಗ್ಗವನೆಗ್ಗನೆನುತ ಕೊಂಡಂ ಜಿನದೀಕ್ಷೆಯನು ॥ ೩೭

ಯತಿರೂಪಂಬಡೆದು ತಪಂಮಾಳ್ಪ ।
ವ್ರತಿ ಕಾಂಚನವರ್ಣನುಮಾಕಾಂತಾ ।
ಪತಿಯುಂ ಪಿಂತಣ ಭವದೊಳ್ ಪಾರಿವಮಾಗಿರಲಂತದನು ॥
ಹತಿಸಿದ ಮಾರ್ಜಾಲಂ ಕೆಲದಿನದೊಳ್ ।
ಗತಜೀವಂಬಡೆದಾನಾಡೊಳ್ ದು ।
ರ್ಮತಿ ವಿದ್ಯುಚ್ಚರವೆಸರೊಳ್ ಜನಿಯಿಸಿ ಕನ್ನಕಳಂಗಲ್ತಂ ॥ ೩೮

ಬಂದಾನೊಂದು ದಿನಂ ವಿದ್ಯುಚ್ಚರ ।
ನೆಂದೆಂಬಾಚೋರಂ ಕಗ್ಗೊಲೆಯಿಂ ।
ತಂದಪೆನರ್ಥಮನೆನುತ ಬರುತಮಿದಿರೊಳ್ ಮಾಮರದಡಿಯೊಳ್ ॥
ನಿಂದ ಕನಕವರ್ಣಮುನೀಶ್ವರನಂ ।
ನಂದಿಸಿ ಮುಂದಕೆ ನಡೆಯಲ್ಕಾ ಕಳ ।
ವೊಂದಿನಿಸುಂ ದೊರಕದಿರಲ್ ನೋಡದತಿಕೋಪದಿ ತಿರಿಗಿದನು ॥ ೩೯

ಈಸವಣನ ನಾಂ ಕಟ್ಟಿದಿರೊಳ್ ಕಂ ।
ಡಾಸಕುನದ ಫಲದಿಂದಂ ಕಳವೆನ ।
ಗೋಸರಿಸಿತ್ತೆನುತಿನಿವಿರಿದಂ ಮುಳಿದಾವಿದ್ಯುಚ್ಚರನು ॥

ಕೇಸರಿಯಂತೆ ಕರಂ ಕೆಕ್ಕಳಗೆಳ ।
ದುರ್ಗಸುರಕವರ್ಗದಿ ಕೊಲ್ವೆನಿವನನೆನು ।
ತಾಸಂಯಮಿಯಿರ್ದಾವಮಾವುರದ ನೆಟ್ಟಿಲ್ಗಿರದೆಯ್ದಿದನು ॥ ೪೦

ಕಲ್ಲಿಂದಿಟ್ಟು ಕರಂ ಬಡಿಯಿಂದವೆ ।
ನಿಲ್ಲದೆ ಬಡಿದು ಬಜ್ಜಲ ಬಲ್ಪೊಯ್ಲಿಂ ।
ದೆಲ್ಲೆಡೆ ಬಾಸುಳನೇಳಿಸಿ ಕೈಕಾಲೋವದೆ ಹಗಜಿಟ್ಟು ॥
ಚೆಲ್ಲಯದಿಂ ಕದುಕೇಜನಿಜದು ಕ ।
ಣ್ಣಾಲ್ಲಿ ಮಣಲ್ಸಣ್ಣಮನೆ ಗಿಡಿದು ತಪಂ ।
ಪೊಲ್ಲ ಮುನಿಸಿನಿಂ ಬಾಧಿಸಿದಂ ಜತಿರಾಯನನಾಖಳನು ॥ ೪೧

ಇಂತತಿಕೋಪಂ ತುರಖಳನಾಮುನಿ ।
ಕಾಂತಶಿಖಾಮಣಿಯುಪಸರ್ಗಮನಿನಿ ।
ಸುಂ ತಳುವದೆ ಮಾಡುತ್ತಿರಲಾಜತಿರಾಯಗೆಜಗಲೆಂದು ॥
ಕಾಂತಾವತಿಕಂತಿಕೆಯತಿಭರ್ ।
ಸ್ವಾಂತಾಕ್ರಾಂತೆ ದಯಾಪರಗುಣಯುತೆ ।
ಸಂತಸದಿಂದ ಬರುತ ನೋಡಿದಳವನೆಸಗುವಕೃತ್ಯವನು ॥ ೪೨

ಎಲೆ ಪಾತಕಿ ಕೇಳ್ದಗ್ಧಸೆಯಾಗಸ ।
ನೆಲಹೊಜದಂತಪ್ಪೀಕೊಲೆಯಿಂ ನೀ ।
ನಲಸದೆ ಜತಿರಾಯಗೆ ಮಾಡುವುದುಚಿತವೆ ಬಿಡುನೀಡೆಂದು ॥
ಪಲಸೂಳ್' ಕಾಂತಾವತಿಕಂತಿಯರುಳ್ ।
ಪಲುಬುತ್ತಿರೆ ತತ್ಕ್ರೋಧೋದ್ರೇಕಂ ।
ನೆಲೆಗೊಳೆ ತತ್ಖಳನಾಕೆಯುಮಂ ಕೊಲಲೆನುತ ಬಗೆದನಾಗ ॥ ೪೩

ಇವನೊಡನಿವಳಂ ಕೊಲ್ಲದೆ ನಾನಿರ ।
ಲಿವಳೀನೆಲನೆಲ್ಲಕೆಯಿಾತೆಜನಂ ।
ತವಕದಿನುಸಿರದೆ ಸುಮ್ಮನಿರಳೆನುತ್ತವೆ ಮತ್ತಾಕೆಯನು ॥
ಜವದಿಂ ಕೊಲ್ವೆನೆನುತ ಕಡುಮುಳಿಸಿಂ ।
ಜವನಂದದಿನುಪಸರ್ಗಂಮಾಡಿದ ।
ನವನಿಪಚೂಡಾಮಣಿ ಚಿತ್ತಯಿಸಾ ವಿದ್ಯುಚ್ಚರಚೋರಂ ॥ ೪೪

ಮುಳಿಸಂ ಮನದೊಳ್ ಬಲಿದು ಬಳಿಕ್ಕಾ |
ಗಳಿನೊಳವರನೊಂದೇ ರಜ್ಜುವಿನಿಂ |
ತಳುವದೆ ಬಿಗಿದು ಬಳಿಕ ಹುಳ್ಳಿಯು ಹೊಱೆಯುಂ ಹಲವಂ ತಂದು ||
ಬಳಸಿನೊಳೆಡದೆಱಪಿಲ್ಲದಿರಿಸಿ ಮು |
ಣ್ಮಱಿಯುಂ ಬೇಗದಿ ಮಾಡ್ಪನೆನುತ್ತಾ |
ಖಳನೋವದೆ ಬಲ್ಗಿಚ್ಚಂ ನಾಲ್ದೆಸೆಯೊಳಗಿಟ್ಟುರುಹಿದನು ||೪೫

ಹೇಯುಂ ತಪ್ಪದು ತನು ಜೀವನುಪಾ |
ದೇಯುಂ ತಪ್ಪದು ತಾನೆನಿಸುವಘ |
ಪ್ರಯುಮನಾಪ್ತನಿನಱಿದಾ ಆತ್ಮನನಾನಿಜತತ್ತ್ವದೊಳು ||
ಆಯುತಿಯಿಂದ ನಿಱಿಸಿ ತನುವಂ ಮು |
ತ್ತಾಯುತಿ ದೀರ್ಕೆಯ್ಯಲ್ಕಾತನುವಂ |
ನೋಯಿಸಲಾನೋವಂ ಪರಮಾತ್ಮನನೆಂತುಟು ತಟ್ಟುವುದು ||೪೬

ಆವುರಿವುರಿಯಿಂದಮೆ ಕೋಮಲತನು |
ಜೀವ ಸಮಯದೊಳ್ ಬಗ್ಗದೆ ನಿಜಮಂ |
ಭಾವಿಸಿ ಕಾಂಚನವರ್ಣಪ್ರತಿ ಕಾಂತಾವತಿಕಂತಿಯರುಂ ||
ಸಾವಂ ಪಡೆದು ಬಳಿಕ ಕನಕಪ್ರಭ |
ದೇವಂ ಕನಕಪ್ರಭೆಯೆಂಬ ಮಹಾ |
ದೇವಿವೆಸರನಾಂತೊಸೆದು ಮೊದಲ ಸಗ್ಗದೊಳುದ್ಭವಿಸಿದರು ||೪೭

ಪುಟ್ಟಿಲೊಡನೆ ಪಸುಗೂಸುತನಂ ಪೆಱು |
ಪಟ್ಟುದು ಬಳಿಕಿಱಿಯದ ಜವ್ವನಮುಳ |
ವಟ್ಟುದು ಬಯಸಿದ ಬಗೆಯಿನೆಸೆವ ಮಾಣಿಕದೊಡವಂ ಮುಡಿಗೆ ||
ಇಟ್ಟೊಡೆ ಕೊರಗದ ಪೊಸಪೂಮಾಲೆಯ |
ನುಟ್ಟೊಡೆ ಮಾಸದ ಚಿತ್ರಾಂಬರಮಂ |
ಕೊಟ್ಟುವು ಕಲ್ಪಮಹೀಜಾತಂ ಮತ್ತಾಸುರದಂಪತಿಗೆ ||೪೮

ಕಪ್ಪುರದಂಬುಲಗೊಳ್ಳದೆ ಕಮ್ಮಿದ |
ನಪ್ಪ ಹವಳವಾಯ್ದೆಱೆ ಮಿಸಿಸದೆಯೆ ತೊ |
ಳಪ್ಪನೆಸೆವ ತನುಲತೆ ತಿರ್ದದೆ ಕೊಂಕಿದ ಪುರ್ಬುಲತಗೆಯಿಂ ||

ಒಪ್ಪವಿಡದೆ ಕೆಂಪೆಸೆವಡಿದಳಿರ್ಗಳ್ |
ನಿಪ್ಪೊಸತಪ್ಪ ವಿಲಾಸಂ ಸುರಸತಿ |
ಗೊಪ್ಪಂಬಡೆದಮರರ ಮನಮಂ ಹೞಿಸೂಱೆವಿಡಿದುದಾಗ ||೪೯

ಒದದೆ ಸಕಲಾಗಮಶಾಸ್ತ್ರಂಗಳ್ |
ನಾದಂ ತಿಳಿವ ಲಲಿತಚಿತ್ರಂ ಮೊದ |
ಲಾದುವನೆಲ್ಲಂ ಬರೆದು ಕಲಿಯದೆ ಬರೆವ ತೂರ್ಯತ್ರಯಮಂ ||
ಸಾಧಿಸದತಿನಿಪುಣತೆಯಿಂದಱಿವ ಗು |
ಣೋದಯಮಾನಿರ್ಜರಮಿಥುನಕ್ಕರ |
ದಾದುದು ಪೂರ್ವಭವದೊಳವರೆಸಗಿದ ಪುಣ್ಯದ ಫಲದಿಂದ ||೫೦

ಪಳಿಕಿಂ ಪೊಸಯಿಸಿದಾಪರಿಜೋವಿಸು |
ಪೆಳಮುತ್ತಿಂ ಮಾಡಿದ ಮೂರುತಿಯೋ |
ಮಳಯಜದಿಂ ಕಂಡರಿಸಿದ ಕರುವೋ ತೊಳಗುವ ಕಪ್ಪುರದ ||
ಹಳುಕಿಂ ಹಸೆಗೆಯ್ದಿಕ್ಕಿದ ಹಾಹೆಯೊ |
ತೊಳಗುವ ಕುಡುಮಿಂಚಿಂ ತಿರ್ದಿದ ಪು |
ತ್ತಳಿಯೋ ಎನಲೊಪ್ಪಿದುದಾದೇವಮಿಥುನಮಾಸಗ್ಗದೊಳು ||೫೧

ಆನಿರ್ಜರಮಿಥುನಮದೋರೊರ್ವರ |
ನೊನವಿಲಾಸಮನೊಲಿದೀಕ್ಷಿಸುತ |
ತ್ಯಾನಂದದಿನೆವಯಿಡದುದಱಿಂದೋರೊರ್ವರ ಸವಿದುಟಿಯಂ ||
ಪೀನಂ ಸೇವಿಸಿ ದಣಿದುದಱಿಂ ಮ |
ತ್ತಾನಾಕೀನಿಕರಕ್ಕಂದಿಂದಂ |
ತಾನಾದಮೊ ಕಣ್ಮುಚ್ಚದರುಣ್ಣದರೆಂಬಱಿಕೆಯ ಹೆಸರು ||೫೨

ಸುರಲೋಕದ ಸೌಖ್ಯಮನೀತೆಱದಿಂ |
ಹರಿಸದಿನುಂಡು ಬೞಿಕ ಕನಕಪ್ರಭ |
ಸುರನಱಿದಲ್ಲಿಂ ಬಂದು ಜಯಾವನಿಪಾಲಕ ನೀನಾದೈ ||
ಸುರಸುಂದರಿ ಕನಕಪ್ರಭೆಯಱಿವೆಲೆ |
ಹರಣದೆಱೆಯ ನಾನಾದೆನೆನುತ್ತಾ |
ದರದಿಂ ಸುಮತಿ ಸುಲೋಚನೆ ವಿಜ್ಞಾಪನಮಂ ಮಾಡಿದಳು ||೫೩

ಅನಿತಱೊಡನೆ ಪಿಂತಣ ಭವದೊಳ್ ಕಾಂ ।
ಚನವವರ್ಣಾಂಬರಚರನಾದಂದಿನ ।
ದಿನದೊಳ್ ಬೆಸಕೆಯ್ದವಲೋಕಿನಿಯುಂ ಚಿಂತಾರೂಪಿಣಿಯುಂ ॥
ವಿನುತಪ್ರಜ್ಞಪ್ತಿಯುಮಂಬರಗಾ ।
ಮಿನಿಯುಂ ಮೊದಲಾದಾದೇವತೆಗಳ್ ।
ಜನನಾಥಾ ಬೆಸನಂ ಕುಡು ಜಗದೊಳೆನುತಿರದೆಯ್ದಿದುವು ॥ ೫೪

ದೇವತೆಗಳ್ ಬೆಸನಂ ಬೇಡಲ್ ಕಂ ।
ಡಾವರಿಸಿದ ಸಂತಸದಿಂದಾವಸು ।
ಧಾವರನಿಂತೆಂದಂ ವಿದ್ಯಾದೇವತೆಗಳಿರಾ ನೀವು ॥
ಈವೇಳೆಗೆ ಬಂದುದು ಲೇಸಾಯ್ತು ।
ನಾವಾಸಮಯದೆ ಕರೆದೊಡೊದಗಿಮೆನು ।
ತೋವದೆ ವಿನಯವಚನಮಂ ನುಡಿದು ಕಳಿಪಿದಂ ತಾನವನು ॥ ೫೫

ಇಂತು ನೆರೆದ ಸಭೆಯೆಲ್ಲಕ್ಕ ಜವಡು ।
ವಂತೆ ಸುಲೋಚನೆ ತಮ್ಮಿರ್ವರ ಜ ।
ನ್ಮಾಂತರಮಂ ಬಿನ್ನವಿಸಲ್ ಪಿರಿದುಂ ಪ್ರಿಯದಿಂ ಕೇಳುತವೆ ॥
ಸಂತಸದಿಂ ವಿಕ್ರಮಕೌರವಭೂ ।
ಕಾಂತಂ ತಳದಿರೆ ಖರಕರನಪರದಿ ।
ಗಂತಮನೆಯ್ದಿ ವರುಣಮಣಿಮಕುಟದ ಮಾಣ್ಕಿಯಿನೆಸೆದಿರ್ದಂ ॥ ೫೬

ಪತ್ತುಂದೆಸೆಯ ಪದಾರ್ಥದ ಮಱೆಯೊಳ್ ।
ಪತ್ತಿದ ತಮಮೆಲ್ಲಮನುರುವಣೆಯಿಂ ।
ಪೊತ್ತಿ ದಹಿಸಿ ಬಲಿಕಾಹುತಿವಡೆಯದ ಹೊಸತಱಗೆಂಡಮಿದೋ ॥
ಮೊತ್ತದ ಪಾಂಸುಳೆಯರ ರತಿರಾಗದ ।
ಬಿತ್ತಿನ ಪುಂಜಮಿದೋ ಎನೆ ಚೆಲ್ವಂ ।
ಪೆತ್ತುದಪರದಿಶೆಯೊಳಗಿನಬಿಂಬಂ ಹೃತಕುಮುದಕದಂಬಂ ॥ ೫೭

ಕೇಡನಿವಂಗಾನೊದವಿಸದಿರ್ದೊಡೆ ।
ಕೂಡದು ಸುರತಸುಖಂ ನಮಗೆನುತಂ ।
ಜೋಡೆಯರುಜ್ಜುಗಿಸಿದ ಬಳ್ಕೋಟಿಯಿನಾಪಲವುಂ ಪಾದಂ ॥

ನೀಡುಂ ಬತ್ತಿ ನಿಲಲ್ಬಗೆಗಾಣದೆ ।
ಪಾಡೞಿದುರುಳ್ವಂದದಿನಸ್ತಾದ್ರಿಯ ।
ಕೋಡುಂಗಲ್ಲುಪರಿಮದಿಂ ಬಿೞ್ದನದಿತಿಸುತನಬುಧಿಯೊಳು ॥೫೮

ಕಡಲುರಿ ತನ್ನಯ ಮಱ್ವೊರ್ಕ್ಕಾಪಗೆ ।
ಒಡೆಯನ ನಿಱಿಸಿ ಪೆಱಗೆ ಮೊದಲೇ ಪೆಂ ।
ಬಿಡದೆ ಕಱುತ್ತಿದಿರೇಳ್ವುಗ್ಗಳೊಡ್ಡಣಮಂ ಕಂಡಿದಿರೊಳಗೆ ॥
ಬಿಡದೊಡ್ಡಿದ ಮೋಹರಮೆನೆ ಮಾಣಿಕ ।
ವಡೆದ ವರುಣದಿಗ್ವಧು ಸಿಂಗರಿಸಿದ ।
ಕಡುಗೆಂಪಿನ ಪಸದನಮೆನೆ ಸಂಧ್ಯಾರುಚಿ ಸಲೆ ಸೊಗಯಿಸಿತು ॥೫೯

ಪ್ರಿಯಮಿತ್ರಂ ಪಿಂಗಡಲ ಮಡುವಿನೊಳ್ ।
ಲಯಮಾದುದನಱಿದುಂ ಸುಖಿಸುವುದಿದು ।
ನಯಮೇ ನಮಗಿನ್ನಾತನ ಮೊಗಮಂ ನಿಟ್ಟಿಸುವನ್ನೆಬರ ॥
ನಿಯಮಮಂ ನಿಶ್ಚಯದಿಂದೆಸಗುವವರ ।
ಶಯನಬ್ರಹ್ಮಚರಿತ್ರಮೆನುತ್ತಾ ।
ಗಯಸಂಬಟ್ಟೆಣೆವಕ್ಕಿಯಗಲ್ದುವು ಸಂಧ್ಯಾಸಮಯದೊಳು ॥೬೦

ಪಾಱಿದುವೊಸೆದು ಪಱಮೆಯ ಪಸುಳೆಗಳ್ ।
ನೂಱೆಸಳ್ವೂವಿಂದುಪ್ಪಳದಿಂತಿಣಿ ।
ಗಾಱಿದುದುರಿ ನೇಸಱುಗದಿರ್ಗಳಲ್ಲೊಳ್ ಜಾರಾಸಂತತಿಗೆ ॥
ಪಿಱಿದುದತ್ಯುತ್ಸಹವೆಣ್ದೆಸೆಯೊಳ್ ।
ತೋಱಿತು ನಸುಗತ್ತಲೆ ದೇಗುಲದೊಳ್ ।
ಸಾಱಿತು ಶಂಖಂ ಸರಸಿಜಮಿತ್ರನಪರಶರನಿಧಿಗೆಯ್ದೆ ॥೬೧

ಬಾಂಜೊಡರುರಿದು ಕೆಡಲ್ಕಾಕುಡಿಯುಂ ।
ಕಂಜಭವಾಂಡಕಟಾಹಮನಡರ್ದ ನ ।
ಮಾಂಜನಮೋ ಜಂಬೂದ್ವೀಪದ ಮೇರುವಿನ ಸಮಕ್ಷದೊಳು ॥
ಸಂಜನಿಯಿಸಿದಾಜಂಬೂಫಲರುಚಿ ।
ಪಿಂಜರಿಸಿದುದೋ ಭುವನತಳಮನೆನೆ ।
ರಂಜಿಸಿದುದು ಕಱ್ತಲೆ ಕಣ್ಣಾಲಿಯ ವಿಷಯಂ ಕೆಡುವಂತೆ ॥೬೨

ಮುಗಿಯೆ ಪಗಲ್ ಮುಸುಕಲ್ ಮುಂಗತ್ತಲೆ ।
ಮುಗಿಲ ಪಥಂ ಮೊದಲಾದ ದಿಶೆಗಳೊಳ ।
ಮುಗುಳ್ ಜವಳಿವಕ್ಕಿಗಳಕ್ಷಿಗಳೊಳಗುಬ್ಬೆಗದಶ್ರುಕಣಂ ॥
ಮುಗುಳ್ವಲ್ಲಂ ಮಗುಳ್ದಚ್ಚ ಶಿಳೀಮುಖ ।
ಮುಗುಳ್ ಕುಲಟೆಯರ ಮೊಲ್ಗೆ ದರ್ಪಯಿಂ ನೆಱೆ ।
ಮುಗಿದುವು ಮುನ್ನೀರಣಾಗಿಯು ಸೆಜ್ಜೆವನೆಗಳಾರಾತ್ರಿಯೊಳು ॥೬೩

ವಿಲಸದ್ವಿಷ್ಣುಪದಕೆ ಸುರರರ್ಚಿಸಿ ।
ದಲರೋ ಮಲಯಜಕರ್ದಮಕಣವೋ ।
ಜಲಬಿಂದುವೊ ಮೌಕ್ತಿಕದಕ್ಷತೆಯೋ ನವಕಲವೋದನವೋ ॥
ತೊಳಗುವ ದೀಪಾಳಿಯೊ ಸುಧೆಯುಣ್ಮುವ ।
ಫಲತತಿಯೋ ಎನಲೆಸೆದುದು ತಾರಾ ।
ವಳಿ ತದ್ರೂಪದ ಹೊಗೆಯೆನೆ ಕಬ್ಬಲೆ ಕಣ್ಗೆ ವಿರಾಜಿಸಿತು ॥೬೪

ಇಂತವನಿಯನಾವರಿಸಿದ ದೆಸೆಯೊಳ್ ।
ಮುಂತಣ ಕೈಗೆಲಸಮನಸವಸದಿಂ ।
ದಂ ತೀರಿಪ ಮನೆಯವರಂ ವಂಚಿಪ ಮೂಕದೊಡಂದೊಡುವ ॥
ಮಂತಣಮುಂ ದೂದವಿಯೊಳ್ ಮಾಡುವ ।
ಸಂತಸದಿಂ ಸಂಕೇತಕೆ ನಡೆದುಪ ।
ಕಾಂತರನೊಡಬಡಿಸುವ ಜಾರಾತತಿಯೊಪ್ಪವಡೆದುದಾಗ ॥೬೫

ಉಟ್ಟು ಕರಿಯ ಕಾಗಿನ ಸೀರೆಯನ ।
ಣ್ಪಿಟ್ಟು ಲಸನ್ಮೃಗಮದವಂ ಮುಡಿಯೊಳ ।
ಗಿಟ್ಟಸಿತೋತ್ಪಲದೊಳ್ಗಲರಂ ಸಲ್ಲಲಿತಲತಾಂಗದೊಳು ॥
ತೊಟ್ಟು ತೊಳಪ ಹರಿನೀಲದ ತೊಡವಂ ।
ಬಟ್ಟವೊಲೆಯ ಬಂಧಕಿಯರ್ ಕಂಗಳ ।
ವಟ್ಟು ನಡೆದು ಬಂದರು ಕಾಡಿಗೆಯಂ ಕಡೆದ ಕರುವಿನಂತೆ ॥೬೬

ಹಲ್ಲ ಕೊನೆಯ ಹಜ್ಜೆಯನರುಣಾಧರ ।
ದಲ್ಲಿ ಮಿನುಗಲೀಯದೆ ಬಾಯ್ಗೊಡು ಕಾಱು ।
ಹಿಲ್ಲದೆ ಕೂರುಗುರ್ಗಲೆಗೆ ಲತಾಂಗಂಗುಡು ಹಾರಂ ಹಱಿದು ॥

ಚೆಲ್ಲದವೊಲ್ ಚದುರಿಂದಾಲಿಂಗಿಸು |
ಮೆಲ್ಲನೆ ಮೊಱೆಯನುಱಿದ ನುಡಿಯಂ ನುಡಿ |
ನಲ್ಲನೊಳೆನುತೋದಿಸಿ ಕಳಿಪಿದಳೆಳೆಯಳನೊರ್ವಳ್ ಕೆಳದಿ ||೬೭

ಬೆಳತಿಗೆಗಣ್ಣ ಕಡೆಯ ಬೆಳಗು ತಳ |
ತ್ತಳಿಸುತ್ತಿರೆ ತಣ್ಗದಿರ್ದೊರೆಂಗಲಿವೆನು |
ತೆಳಸಿ ಚಕೋರೀಶಿಶು ಮುಸುಕುತ್ತಿರೆ ಕಂಡು ಕರಂ ಸುಗಿದು ||
ತಳಿರ್ಗೈಯಂ ಪುರ್ಬಿನೊಳಿಟ್ಟೀಕಾ |
ವಳಿಯೊಳಮುತ್ತಂ ಕಿಱ್ತೀಡಾಡು |
ತ್ತಲಘುನಿತಂಬೆ ನಡೆದಳತಿಚದುರಿಂದುಪಪತಿಯಿರ್ದೆಡೆಗೆ ||೬೮

ಕಾಳಿಂದಿಯ ಕರ್ಮಡುವಂ ಸೋಲಿಪ |
ಕಾಳದೊಳಗೆ ಮುಸುಗುವ ಪೊಣರ್ವಕ್ಕಿಯ |
ಮೇಳಮನೇಳಿಪ ನೆಲೆಮೊಲೆಗಳ ನವಕೂರ್ಮನಿಭಾಂಘ್ರಿಗಳ ||
ಬಾಳಮರಾಳೋಪಮಮೃದುಗಮನದ |
ಬಾಳೆವಸುಳೆದಿಟ್ಟೆಯ ಬಂಧಕಿಯರ |
ಜಾಳಂ ನಡೆತಂದುದು ಸಂಕೇತಸ್ಥಾನದ ದೆಸೆಗಾಗಿ ||೬೯

ಬಡನೊಱಗಿದರುಸಿರಂ ಲಾಲಿಸುತಲೆ |
ಮಿಡುಕದ ತೆಱದಿಂದೆೞ್ದು ಘಳಿಸಿದಲೆ |
ಯುಡಕೆವಿಡಿದು ಮೆಲ್ಲನೆ ನಡೆವಡಿಗಳ ಸೊಪ್ಪುಣ್ಮದ ತೆಱದಿ ||
ಪಡಿಯಂ ದನಿಗೊಡದಂತೆ ತೆಱೆದು ಪೊಱ |
ಮಡುತ ನಿಜಾಂಗಾಮೋದಕ್ಕೆಱಪಾ |
ಱಡಿಗೆ ಸುಗಿದು ಸಂಪಗೆಯಂ ಸೂಡಿ ನಡೆದಳೊರ್ವಳ್ ಚದುರೆ ||೭೦

ಬಂದೋರಗೆಯಂಗನೆಯರ್ ತವರೊ |
ರ್ಗಂದೆಯ್ದಿದರಱಿವೆಸದಿಂದಾಣ್ಮಂ |
ಬಂದುದುಮಿಲ್ಲಿರುಳ್ಕಣ್ಣಿಲ್ಲತ್ತೆಗೆ ತೊೞ್ತು ಮನೆಗೆ ಹೊಲ್ಲ ||
ಎಂದುಂ ದೂಱಿನವಳ್ ನಾನಂತದ |
ಱಿಂದಣ್ಮೆನು ತರಲೆನುತಂಗಣದೊಳ್ |
ನಿಂದು ಭವತಿ ಭಿಕ್ಷಾಯೆಂಬಂಗಾಡಿದಳೊರ್ವಳ್ ಕುಲಟೆ ||೭೧

ಹಿತ್ತಿಲಶೋಕೆಯ ನೆೞಲೊಳ್ ಮೊಗದೊಳ್ |
ಯುತ್ತಿರೆ ಹಱಿದ ಕೊರಲ ಹಾರದ ಹೊಸ |
ಮುತ್ತಂ ನೋಡುವೆನೆನುತವೆ ಪೊಱಮಟ್ಟನಿಸು ತಡೆದು ಬಂದು ||
ವೃತ್ತಸ್ತನೆ ಪಂಜರದ ಗಿಳಿಗೆ ಕುಡು |
ಕಿತ್ತೊಲವಿಂ ಚುಂಬಿಸಿ ಮತ್ತದು ಕಡಿ |
ದತ್ತಯ್ಯೋ ಎನುತಿನಿವಿರಿದುಂ ಮಂಚಿಸಿದರ್ ಮನೆಯವರಂ || ೨೨

ಇಂತೊಪ್ಪುವ ಕಾಳಗದೊಳಾಧರಣೀ |
ಕಾಂತಂ ಸಾಯಂಕಾಲದ ವಿಧಿಯಂ |
ಸಂತೋಷಂ ಮಿಗೆ ಮಾಡಿ ಬೞಕ ತನ್ನ ನಿಜಾಂತಃಪುರದ ||
ಕಾಂತಾನಿಕುರುಂಬದ ಮಧ್ಯದೊಳ |
ತ್ಯಂತವಿಲಾಸದೊಳೋಲಗದೊಳಗೆ ಜ |
ಯಾಂತಂ ಕೈಗೆಯ್ದು ಕರಂ ರಂಜಿಸುತಿರ್ದಂದದಿನಿರ್ದಂ || ೨೩

ನಿರುತಂ ಶ್ರೀಯುತನುರುತರವಾಹಿನಿ |
ಯುರಸಂ ನುತಗಂಭೀರಾಕ್ರಾಂತಂ |
ಪಿರಿದುಂ ಕಬಳಿತಸರ್ವಾಶಾಸ್ತೋಮಂ ಭುವನಾಧಾರಂ ||
ಗುರುಚರಿತೋತ್ಕಲಿಕಾಸಂಪನ್ನಂ |
ಪರಸೀಮೋಲಂಘನವಿರಹಿತನೆನೆ |
ಶರನಿಧಿಯಂತೆ ವಿರಾಜಿಸಿದಂ ಸತ್ಪ್ರಭುಕುಲಮಣಿದೀಪಂ || ೨೪

ಇದು ಸುರನರಫಣಿಪರಿವೃಢವಿನಮಿತ |
ವಿದಿತವಿನಯಗುಣಗಣಯುತಜಿನಪತಿ |
ಪದಸರಸಿಜಮದಮಧುಕರನತಿಚತುರಕಲಾಪರಿಪೂರ್ಣಂ ||
ಸದಮಲಚರಿತಂ ಪ್ರಭುರಾಜಂ ಸ |
ನ್ಮುದದಿಂ ರಚಿಸಿದ ಜಯನೃಪಕಾವ್ಯದೊ |
ಳೊದವಿ ಮನೋಹರಮಾದುದು ಪದಿಮೂಱನೆಯ ಮಿಸುಪ ಸಂಧಿ || ೨೫

ಇಂತು ಹದಿಮೂಱನೆಯ ಸಂಧಿ ಮುಗಿದುದು.

# ಚತುರ್ದಶಾಶ್ವಾಸಂ.

ಸೂಚನೆ॥ ಪಿರಿದುಂ ರಂಜಿಪ ಚಂದ್ರೋದಯದೊಳ್ |
ಗುರುಮುದದಿಂ ನಿಜನಗರಿಯ ವೇಶ್ಯಾ |
ವರವೀಥಿಯೊಳ್ ವಿಹಾರಿಸಿದಂ ವಿಕ್ರಮಕೌರವರಾಜಂ ॥

ಮುನ್ನಂ ಹಗೆ ನಿಮಗಾದ ತುಹಿನಕರ |
ನೆನ್ನ ಹೆಜ್ಜಗಣಿಂ ಮೂಡಲ್ ಬರುತಿದೆ |
ಯಿನ್ನಿನಿತಱ ಮೇಲಿರದಿರಿಯೆನುತಾಜಾರಾಸಂತತಿಗೆ ॥
ಸನ್ನೆಯನುಱೆ ತೋಱುವ ಮೂಡಣ ದೆಸೆ |
ಗನ್ನೆಯ ಕೈಯ ಮಿಸುಪ ಕೆಂಪೋ ಎನೆ |
ಕೆನ್ನಂ ಸೊಗಯಿಸಿದುದು ರಾಗಂ ರಾಜೋದಯಸಮಯದೊಳು ॥೧

ಈಹದನಂ ನಮಗೆಸಗಿದ ಶಶಿಯಂ |
ರಾಹು ನೊಣೆದು ಮಗುೞ್ದುಗುೞದೆ ಹೋಗಲಿ |
ರೋಹಿಣಿಯೋಲೆಗಳಿಯಲಿಯೆನುತ ಬಿಸುಸುಯ್ಯಿಂ ಸುಮ್ನಾಗ ॥
ನೇಹದ ನಲ್ಲರ ತೋಳ್ಗೊಳ್ ತೊಡಚಿದ |
ಬಾಹುಲತಿಕೆದೆಗೆದೊಯ್ಯನೆ ಕಾಲಟಾ |
ವ್ಯೂಹಂ ನಡೆತಂದುದು ನಗರೀರಕ್ಷಕನಱಿಯದ ತೆಱದಿಂ ॥೨

ಸ್ಮರಸುಭಟನ ಮಾಣಿಕ್ಯದ ಸೀಸಕ |
ದಿರವಂ ನವಮೋಹನಸಿದ್ಧಂ ಕಡು |
ಹರಿಸದಿನಾಡುವ ಪೊಸಪವಳದ ಠಾಳಿಯ ಬಟ್ಟಲ ತೆಱನಂ ॥
ಸುರುಚಿರಮಪ್ಪನುರಾಗರಸಾಬ್ಧಿಯೊ |
ಳಿರದುದಯಿಪ ಬುದ್ಬುದದ ಪರಿಯುಮಂ |
ಪಿರಿದುಂ ಗೆಲೆವಂದುದು ಸುರದಿಶೆಯೊಳಗರ್ಧೋದಯಚಂದ್ರಂ ॥೩

ಸ್ಮರಮೋಹನಶಸ್ತ್ರಂ ಮಾಡಲ್ ಸುರ |
ವರನೆಂಬೊವಜನುದಯರಾಗದ ಶೇ |
ಸುರಿಯಿಂ ಕಾಸಿ ಬಟಿಕ ಸಂಧ್ಯಾಸಂದಂಶದೆ ಪಿಡಿದೆತ್ತಿ ॥

ಭರದಿನುದಯಗಿರಿಯೆಂಬಡೆಗಲ್ಲೊಳ್ |
ಗಿರಿಸಿ ಪೊಳೆವ ಪೊಸಲೋಹದುರುಳಿಯಂ |
ಪಿರಿದುಂ ಪೋಲ್ತುದು ಮುಂದೆಸೆಯೊಳ್ ಮೂಡುವ ಹಿಮಕರಬಿಂಬಂ ||೪

ಸುರಪದಿಶಾಪತಿ ಬಿನದದಿ ಪೊಡೆವವ |
ಸರದೊಳಗಾಕ್ಕೈಯ್ಯೋರೆವರಿಯೆ ನೆಗೆ |
ವರುಣಮಣಿಯ ಕಂತುಕಮನೆಯುಮರಮುಹಿಗೆ ದಾಟಿಯನಿಡುವ ||
ಸ್ಮರಚಕ್ರೇಶ್ವರನಾದಲೆಗೆತ್ತಿದ |
ವರವಿದ್ರುಮವಿಲಸಚ್ಛತ್ರಮದೆನೆ |
ಕರಮೆಸೆದುದು ಮುಂ ಮೂಡಿ ನೆಗೆವ ನೂತನಮೃಗಧರಬಿಂಬಂ ||೫

ದೇವಾಧೀಶದಿಶಾಂಗನೆ ನೋಂಪಿಯ |
ನೋವದೆಸಗಿ ನುಣ್ಗೊರಲೊಳ್ ಕಟ್ಟಿದ |
ಭಾವಜನೆಂಬ ಕರಿಯ ನಾಗರ ಹೊಂದಾಲಿಯ ಮಾಸ್ಕಿಯೊಳು ||
ಆವಿರಹಿವ್ರಜಮಂ ಕೊಲಲೆನುತಂ |
ಕಾವಂ ಪೊಸಗರಳದ ಗೋಳಕಮಂ |
ತೀವಿ ಪಿಡಿದ ಪಿಂಜರರತ್ನದ ಪಾತ್ರೆನ್ನೊಲೆಸೆದುದು ಚಂದ್ರಂ ||೬

ಕರಮೆಸೆದತ್ತು ಕಲಾಭೃದ್ಬಿಂಬಂ |
ಬಿರಿಮುಗುಳ್ಗಣೆಯನ ಬಿಂಗದ ಬಜ್ಜಣ |
ದರಲಂಬನ ಮೂಲದ ತಟ್ಟೆಯ ಕಾವನ ಕೈಗನ್ನಡಿಯ ||
ಸ್ಮರನ ಕರದ ನವಕರ್ಪೂರದ |
ಳ್ವರಲ ಕರಂಡಕದಂಗಜನಾಡಿಸು |
ವುರಗನ ಹೊಸಹಳಿಕಿನ ಹೇಟಿಗೆಯ ವಿಲಾಸಮನನುಕರಿಸಿ ||೭

ಮದನಂ ಪಿಡಿದು ನಿರೀಕ್ಷಿಪ ರದನೀ |
ರದನರಚಿತಘಟಿಕಾಚಕ್ರಮೊ ಸಂ |
ಮದದಿಂದಾಮದನಂ ಮೋಹನಧರ್ಮವನುಚ್ಚಿ ನಡೆಯಿಸುವ ||
ಸದಮಲಧರ್ಮಸುಚಕ್ರಮೊ ಮತ್ತಾ |
ಮದನಂ ರತಿಶಾಸ್ತ್ರವಿಪಂಚಿಕೆಯಂ |
ಚದುರಿಂ ಬರೆದೋಲೆಯ ‡ಚಂಡ‸ಕೆಯೊ ಎನೆ ಸಸಿ ಸೊಗಯಿಸಿತು ||೮

‡. ಚಂದ್ರಿಕೆಯೋಯೆನಲೆಸೆದುದಾಚಂದ್ರಂ. ಖ||

ಹರದಿಗ್ವಧುವಿನೊಡನೆ ಮಾತಾಡಲ್ |
ತಿರಿಗಿದ ಗೀರ್ವಾಣಾಶಾಸುದತಿಯು |
ವರವಜ್ರದ ತಾಟಂಕಂ ಗಗನ‡ಶ್ರೀಯನುರಾಗದೊಳು ||
ಪಿರಿದುಂ ಕ್ರೀಡಿಸಲನುಗೊಳಿಸಿದ ಬಂ |
ಧುರಜಂಗಮಕಾಸಾರಂ ಸೊಗಯಿಸು |
ವಿರವಂ ಪೋಲ್ತು ವಿರಾಜಿಸಿದುದು ಬಿಂಬಂ ರಾಕೇಂದುವಿನ ||೯

ಅಮರದಿಶಾಂಗನೆಯಂಬರಲಕ್ಷ್ಮಿಗೆ |
ಮಮತೆಯಿನೀವೆನೆನುತ ಪಿಡಿದೆತ್ತಿದ |
ವಿಮಲೋಜ್ಜ್ವಲಮಾಣಿಕ್ಯಕದೊಳ್ಪಾಯಸಮಿಕ್ಕಿದ ಪರಿಯಾಣಕೆ ||
ಕಮಲೋದರಸುತನೆಂಬ ಭಟಂ ಸಂ |
ಭ್ರಮದಿಂ ಹೊಯಿಸುವಳಿಯ ಜಯಘಂಟೆಗೆ |
ಸಮನಾದುದು ಹಿಮಧಾಮಂ ಸಂಹೃತಸರಸಿರುಹಸ್ತೋಮಂ ||೧೦

ಸುರಪನಿಡುವ ಚಿಗಿಹಲ್ಲೆಯ ಮೋಹನ |
ಶರಮಂ ಬೆಳಗುವ ಸಿಕ್ಕನಿವಳೆಯ ರತಿ |
ವರನಾಮೋಹನಮಂಚಕವಿತತಿಯನಱಸಿ ಹಿಡಿದು ತರಲು ||
ಭರದಿಂ ನಡೆಯಿಪ ಪೆಳ್ಳಿಯ ಬಟ್ಟಲ |
ಪಿರಿದುಂ ಮೋಹನಮಲ್ಲಂ ದಕ್ಷಿಣ |
ಕರದಿಂದೆತ್ತಿದ ಸಂಗ್ರಾಣಿಗೆ ಸಮನೆನೆ ಸಸಿ ಸೊಗಯಿಸಿತು ||೧೧

ಇಳೆಯ ವಿಯೋಗಿಗಳಸುವೆಂಬರ್ಥಂ |
ಗಳವುದ್ಯೋಗವದೃಶ್ಯಾಕರಣಂ |
ದಳೆದಲ್ಲದೆ ಸಮನಿಪ್ಪುದಿಲ್ಲೆನುತುಂ ಮತ್ತಾರಾತ್ರಿಯೊಳು ||
ಅಳವಟ್ಟತಿಸಾಹಸದಿಂದವೆ ಪಿಡಿ |
ದೆಳೆಯಾಲಂ ತಪ್ಪದೆನುತ್ತವೆ ಬಗೆ |
ಗೊಳಿಸಿ ವಿರಾಜಿಸಿದುದು ಚತುರರರ್ಗಾಚಿಹ್ನಂ ಚಂದ್ರಮನ ||೧೨

ಮಲ್ಲಿಗೆಯಲರ ತೊಡಂಬೆಯ ಮಧ್ಯದೊ |
ಳುಲ್ಲಸದಿಂದೆ ಕುಳಿತ ಮಧುಕರನಂ |
ಫುಲ್ಲಾಸ್ಯನ ಕುಲಿಶದ ಖೇಟಕದ ನಡುವೆ ಕಟ್ಟಿದ ಕರಿಯಾ ||

‡ ಸ್ತ್ರೀ. ಖ||

ಜಲ್ಲಿಯುನಗಜಾಧೀಶನ ನುಣ್ಗೊರ |
ಉಲ್ಲಿ ಕರಂ ಕಣ್ಗೊಳಿಸುವ ಕಱಿಯಂ |
ಗೆಲ್ಲಂಗೊಂಡೆಸೆದುದು ಚೆಲ್ವಂ ಸಂಪೂರ್ಣಸುಧಾಕರನ || ೧೩

ಅಮರಗಾರ್ಗರೋಗಗಣೆಗೆಯ್ವ್ಸನನು |
ತಮ್ಮೃತರುಚಿಯನೋವದೆ ಪೂರ್ವದಿಶಾ |
ರಮಣಿಯುದಯಗಿರಿಯೊಲೆಯೊಳ್ ಬಟ್ಟಿವೆಟ್ಟಯ್ವನಣ್ಗಳಮಿಟ್ಟು ||
ಸಮೆದು ಮೊದಲ್ಮೊಱದ ಪಡಿಸಣವಂ |
ಮಮತೆಯೊಳೀಂಟುವ ಘಂಗಿಯಾಸ್ಪ್ರಲ್ ಸಂ |
ಭ್ರಮದಿಂ ಸವಿದುವು ಚಾರುಚಕೋರಂ ಚಂದ್ರಕರಂಗಳನು || ೧೪

ಅಡಸಲ್ಕೇಡು ಮೊದಲ ನೃಪತಿಗೆ ಮ |
ತ್ತೊಡೆಯನದಾರಾರಾಜ್ಯಕ್ಷಪನಂ |
ಪಿಡಿವುದು ಸಿರಿಯೆಂಬುಗ್ರ್ತಿಯನೆಲ್ಲರ್ಗಱಿವುವವೊಲ್ ದಿನಪಂ ||
ಪಡುಗಡಲಂ ಪುಗೆ ಸಿರಿಯುಂ ಸಾರ್ವುದು |
ಸಡಗರದಿಂ ಪಗಲೆಂಬಂತೊಪ್ಪಂ |
ಬಡೆದಿಳೆಯುಂ ತೀವಿತು ತಿಳಜೊನ್ನಂ ಜೀವಂಜೀವಾನ್ನಂ || ೧೫

ಪಿರಿದುಂ ಪ್ರಿಯದೊಳಿರುಳ್ವೆಣ್ಣುಂ ಶರಿ |
ಪರಿರಂಭಿಸುವ ಸಮಯದೊಳ್ ಸೂಸಿದ |
ಸಿರಿಗಂಪಿನ ರಜಮೋ ಕುಮುದಿನಿಯ ಮುಖದ ಹಾಸದ ರುಚಿಯೋ ||
ಸ್ಮರನ ಜಸದ ಹರವರಿಯೋ ಎನೆ ಬಂ |
ಧುರತೆವಡೆದು ಬೆಳುದಿಂಗಳೊಳಾಭೂ |
ವರಚಂದ್ರಂ ಪೊಲೊಳ ವಿಹರಿ|ಸಲೆನುತುಜ್ಜುಗಿಸಿದನಾಗ || ೧೬

ಕತ್ತುರಿಬೊಟ್ಟು ಕೊರಲ ಹೊಸಮುತ್ತಿನ |
ಹತ್ತಸರಂ ಮುಡಿಗಿಟ್ಟ ಮುಗುಳ್ ಮ |
ಯ್ಗೊತ್ತಿದ ಕಾಶ್ಮೀರಂ ಪೊದೆದೆಳಪೂಂದಳಿರ್ವಣ್ಣದ ವಸನಂ ||
ಮತ್ತನೆಸೆವ ಪಾದುಕವಾಭೂಷಾ |
ಲೋತ್ತಂಸಂಗಳವಡೆ ಕಣ್ಗೆಸೆದಂ |
ಚಿತ್ತಭವಂ ವಿಟವೇಷಮನಂಗೀಕರಿಸಿ ಸೊಗಯಿಪಂತೆ || ೧೭

---

* ನುಣ್ಣ ಖ|| † . ವೆನೆ. ಖ||

ಕಾಳೋಚಿತಮನಱಿದು ಪಸದನಮಂ |
ತಾಳಿ ಬೞಿಕ ತೆಂಕಣದೆಸೆವನೆಯಿಂ |
ಬಾಳಸವಿಾರಂ ಪೊಱಮಡುವಂತರಮನೆಯಿಂ ಪೊಱಮಟ್ಟು ||
ಮೇಳದ ಕೆಳೆಯರ್ ತನ್ನೊಡನೆಯ್ತರೆ |
ಲೀಳೆ ವಿಾಗಲ್ ನಡೆದಂ ಮೆಲ್ಲನೆ ಭೂ |
ಪಾಳಶಿಖಾಮಣಿ ತತ್ಪುರದತಿಶೋಭೆಯನೀಕ್ಷಿಸುತಾಗ ||೧೮

ಚಾವನ್ನದ‡ತಿಗುರಂ ಮೆಯ್ಯೊಳಗಿ |
ಟ್ಟೋವಿ ಮುಱಿದು ಸಿರಬಂದಮನೊಪ್ಪುವ |
ಹೂವಿನ ಹೊಸಬಣ್ಣದ ಹಚ್ಚಡಮಂ ಹೊದೆದು ಸಪುರನಾದ ||
ಕೋವಣಮಂ¶ಮಡಿದುಟ್ಟುಳಿಯಂ ಬಿ |
ಟ್ಟುವಸುಧಾವರನೆಡಬಲವಿಡಿದ ಕ |
ಲಾವಿದರೆನಿಪ ಸುಹೃಜ್ಜನವಿತತಿ ನಡೆದುದತಿಮುದದಿಂದ ||೧೯

ಅಡಸಿದ ನವನಕ್ಷತ್ರನಿಕಾಯದ |
ನಡುವೆ ನಡೆವ ಸಂಪೂರ್ಣೇಂದುವಿನಂ |
ತಿಡಿಕಿಱಿದತ್ಯುಜ್ವಲಿಸುವ ಪಲವುಂ ದೀವಿಗೆಗಳ ತೀವಿ ||
ಕಡುತೊಳಗುವ ಹರಿನೀಲದ ಹರಲಂ |
ಗಡಿವೀಧಿಯೊಳೊಸೆದೆಯ್ತಂದಂ ತ |
ನ್ನೊಡನೆಯ್ತರೆ ಪರಿಮಿತಮಿತ್ರಾವಳಿ ಬಲ್ಲರ ಬಲ್ಲಹನು ||೨೦

ಅಂಗಡಿಯಂಗಡಿಯೊಳಗೋರಣದ ಬೆ |
ಡಂಗಿಂ ಬಿರಿಮುಗುಳ್ವಾಸಿಗಮಂ ಮಾ |
ಱಂಗುಡುವೆಳವೆಣ್ಗಳ ಮೂವಣ್ಣದ ಕಣ್ಗಳ ಕಾಂತಿಯೊಳು ||
ಮಂಗಲಕೀರ್ತಿಯುತಂ ನಡೆದಂ ಸುರ |
ಗಂಗಾಕಾಳಿಂದೀನದಿಯರುಣಾ |
ಸಂಗಮದೊಳ್ §ಸಂಭ್ರಮದಿಂದೆಯ್ದುವ ಕಳಹಂಸನ ತೆಱದಿ ||೨೧

ಚೆಂಗಣಿಗಿಲೆಯೊಳೆಯಲರ್ವಾಸಿಗಕೆ ಮ |
ನಂಗೊಳಿಸುವ ಮೃಗಮದದಣ್ಪಂ ಲಲಿ |
ತಾಂಗಿಯದೊರ್ವಳ್ ತೊಡೆದು ರಸಿಕನೊರ್ವಂಗೆ ಎಲೆಗೆ ಕುಡುವ ||

---

‡ ತಿಮಿರ. ಕ|| ¶. ವಿಾಡಿ. ಕ|| §. ಸಂತಸ.

ಭಂಗಿ ಕರಂ ಬಲ್ಲರ ಬಗೆಗೊಳಿಸಿದು |
ದಂಗೋದ್ಭವನೆಂಬ ಮಹಾಸಾಹಸಿ |
ಗಂಗೆಯೊಲಿದು ರತಿ ಬಾಸಟವಿಟ್ಟಲರ್ಗಯ್ದಂ ಕುಡುವಂತೆ ‖ ೨೨

ಅನಿಮಿಷಲೋಚನೆಯೊರ್ವಳ್ ಮಾಱುವೆ |
ನೆನುತವೆ ನವಮೃಗಮದಪಂಕಿಲಮಂ |
ಮಿನುಗುವ ವಿದ್ರುಮದಿಂ ಕಂಡರಿಸಿದ ಪೊಸಬಟ್ಟಲೊಳಿಟ್ಟು ‖
ಘನಕಾಚವ್ರೊಂದಱ ಮೇಲೆ ಹಿಡಿದು ನಿಂ |
ದೆನಸುಂ ಕಣ್ಗೊಳಿಸಿದಳುದಯಾದ್ರಿಯು |
ಕೊನೆಯ ಶಶಾಂಕಸಹಿತ ಸುರಪದಿಶಾಸತಿ ಸೊಗಯಿಸುವಂತೆ ‖ ೨೩

ಆಸಂಜೆಯೊಳೊಡಗಲಿಸಿದ ಹೂವಿನ |
ಬಾಸಿಗಗಳ ಕಂಪಿನ ಸತಿಯರ ನಿ |
ಶ್ವಾಸಾಮೋದದ ತನುಸೌರಭ್ಯದ ಕಪ್ಪುರದಂಬುಲದ ‖
ವಾಸನೆಗಳ ಭೇದಮನೊರೆಯುತವೆ ವಿ |
ಲಾಸದಿನೊಡನೆಯ್ದಿದರೊಳ್ ವೇಶ್ಯಾ |
ವಾಸದ ವೀಧಿವಿಡಿದು ನಡೆದಂ ಚಾತುರ್ಯಚತುರ್ವದನಂ ‖ ೨೪

ಚಿನ್ನದ ಬೊಂಬೆಗಳೆನೆ ನೇರಾಣಿಯು |
ಕನ್ನೆಯರೆನೆ ಕುಂದಣದ ಕರುಗಳೆನೆ |
ಸೊನ್ನೆಯ ಪರಿಜುಗಳೆನೆ ಪೊಸಮಿಸುನಿಯ ಮುಗುದೆಯರೆನೆ ಮಿಸುಪ ‖
ಹೊನ್ನ ಕುಮಾರಿಯರೆನೆಯುಪರಂಜಿಯ |
ಚೆನ್ನೆಯರೆನೆ ಮಿಸುನಿಯ ನೀಱೆಯರೆನೆ |
ಸನ್ನುತಸೌಭಾಗ್ಯಂಬಡೆದಬಲೆಯರೊಪ್ಪವಡೆದರಾಗ ‖ ೨೫

ಪೊಂಗರಡೆಗೆಗಳ ಪೊಸಮಿಂಟೆಗಳ ಕೊ |
ಡಂಗಳ ಕೊಸಗಿನ ಮುಗುಳ್ಗಳ ನವಕೋ |
ಕಂಗಳಿರುಳ ತಾವರೆಗಳ ಮೋಹನಸಿದ್ಧನ ರವುಳಿಗಳ ‖
ಅಂಗಜನಮಳ್ಗಡಿಗಳ ಬೆಳಗಾಯ್ಗಳ |
ತೇಂಗಾಯ್ಗಳ ತೆಗಬೊಗರಿಗಳವರಂ |
ಪಿಂಗದೆ ಗೆಲ್ವ ಕುಚದ ಕೋಮಲೆಯರ್ ತೊಳಗಿದರಂತಲ್ಲಿ ‖ ೨೬

ಬಾಳೆವಸುಳೆದಿಟ್ಟಿಯು ಬಡನಡುವಿನ |
ಬಾೞೆದೊಡೆಯು ಬಂಡುಣಿವೆಱಗುರುಳ್ಗಳ |
ಬಾಳಮೃಣಾಳೋಪಮಬಾಹುವಿನ ಮನೋಜಾತಂ ಪಿಡಿದ ||
ಬಾಳ ಹೊಗರ ತನುವಿನ ರತಿದೇವಿಯು |
ಬಾೞಂ ಕಿಡಿಸುವ ನವಲಾವಣ್ಯಾಗ |
ಬಾಳೆಯಾರಂ ನೋಡುತ ನಡೆದಂ ನವಮಾರಂ ಸುಕುಮಾರಂ ||೨೭

ಬಂಡುಣಿವೆಱಗುರುಳ್ಗಳ ಬಡನಡುವಿನ |
ತೊಂಡೆದುಟಿಯು ತೊಳಪಂಗಲತೆಯು ಶಶಿ |
ಮಂಡಲಮುಖದ ಮದನಮಾತಂಗಗತಿಯು ಮದಿರಾಂಬಕದ ||
ಗಂಡುಪುರುೞಿಮಾತಿನ ಮನಸಿಜಕೋ |
ದಂಡಲಸದ್ಭ್ರೂವಲ್ಲರಿಯೊಳ್ಳೆಳ |
ವೆಂಡಿರ ತಂಡಮನೀಕ್ಷಿಸುತೆಯ್ದಿದನಾನೃಪಕುಲತಿಲಕಂ ||೨೮

ತೋರದುಱುಂಬಿನ ಮಲ್ಲಿಗೆಯಿಂ ಘನ |
ಸಾರದ ಮೂಗುತಿಯಿಂ ಹೊಸಮುತ್ತಿನ |
ಹಾರದಿನುಟ್ಟ ದುಗುಲದಿಂ ಚಂದನದಣ್ಪಿಂ ಸುಲಿಪಲ್ಲಿಂ ||
ವಾರಣರದರಂಜಿತಪಾದುಕದಿಂ |
ಚಾರುಕಟಾಕ್ಷಪ್ರಭೆಯಿಂದೆಸೆವಭಿ |
ಸಾರಿಕೆ ನಡೆತಂದಳ್ ಮನಸಿಜನ ಯಶೋವನಿತೆಯು ತೆಱದಿ ||೨೯

ಮುಡಿಗಲರಂ ಮೂಗಿಗೆ ಮೂಗುತಿಯಂ |
ನಿಡುಗಣ್ಗಂಜನಮಂ ಕುಚಮಧ್ಯಕೆ |
ಬಿಡುಮುತ್ತಿನ ಮಣಿಸರಮಂ ಕೈಗೆ †ಕನಕಮಣಿಕಂಕಣಮಂ ||
ಉಡೆನಿಱಿಗುತ್ತಮಮೇಖಲೆಯಂ ಕೇ |
ಸಡಿದಳಕೊಪ್ಪುವಲಕ್ತಕರಸಮಂ |
ಸಡಗರದಿಂ ಸಿಂಗರಿಸುವ ಸುದತೀಜನಮೊಪ್ಪಿದುದಲ್ಲಿ ||೩೦

ರೂಡಿಸಿದೆನ್ನೀರೂಪಕ್ಕೆಲೆ ರತಿ |
ನೀಡುಂ ನಿನ್ನಯ ಚೆಲ್ವಿಕೆ ಸರಿಯೆನು |
ತಾಡಿದೆ ಗಡಮದು ಹುಸಿಯೆಂದೆನುತಾಂ ಹಾಕುವೆ ನೀ ತಡವಂ ||

† ಕನನ್ಮಣಿ ಕ||

ಮಾಡದೆಯೆತ್ತೆನುತಿಕ್ಕುವ ಮುಡಿಯೆನೆ |
ಬಾಡಿದ ಬಲ್ಮುಡಿಯುಲರಂ ತೆಗೆದೀ |
ನಾಡಿದಳೊರ್ವಳಬಲೆ ವಿಟರಕ್ಷಿಯ ಮಾನಂ ಪಿಡಿವ ಬಲೆ||೩೧

ಭಾವಕಜನಚಿಂತಾಮಣಿ ನಿನ್ನೀ |
ಲಾವಣ್ಯಾಂಗವನೀಕ್ಷಿಸುವೀನವ |
ಭಾವಕೆಯುಲರ್ಗಣ್ಣೊಳಗಂ ಸೂಸುತ್ತಿದೆ ಬಹ್ವಾಶೆಯೊಳು ||
ಸೇವಿಸಿ ಚಾರುಚಕೋರಂ ಜೊನ್ನವು |
ನೋವದೆ ಕಾಱುವ ತೆಱದಿನೆನುತ್ತುಂ |
ಕೋವಿದನೊರ್ವನುಸಿರೆ ಕೇಳುತೆ ಮುಂಗಡೆಗೆ ನಡೆದನರಸಂ ||೩೨

ಬಗುಮಿಗೆಯೊಲವಿಂದುಯ್ಯಲನೇಱಿದ |
ಮುಗುದೆಯುಲಘುಕುಚಮಧ್ಯದ ಹೊವಿನ್ಮಣಿ |
ಸೊಗಯಿಸಿದುದು ಮುತ್ತಾಕೆಗೆಸೆವ ಹೊಕ್ಕುೞ ಹೊಕ್ಕರಣೆಯೊಳು ||
ಮಿಗೆ ತೀವಿದ ಲಾವಣ್ಯಾಮೃತವುಂ |
ತೆಗೆಯಲ್ ಗಗನಶ್ರೀಯುಮುಳ್ಗಡಗಳ |
ಮೊಗದೊಳ್ ಕಟ್ಟಿ ಪಿಡಿಯೆ ರಾರಾಜಿಪ ರಜ್ಜುವಿನಂದದೊಳು ||೩೩

ಮಂದೇತರಹರ್ಷದೊಳುಯ್ಯಲನೊಲೆ |
ವಿಂದೀವರವದನದ ಕುಮುದಾಕ್ಷಿಯ |
ಕುಂದರದದ ಗಱುವೂವುಗುರ್ಗಳ ಬಂದುಗೆಯುಲವಾರ್ಯ್ದಱಿಯ ||
ಸುಂದರಿಯುಮಲಾಂಗದ ಕಂಪಂ ಕೊಳ |
ಲೆಂದಮರಾಧೀಶನ ನಂದನವನ |
ದಿಂದಿೞಿವ ಮಾಲೆಯುವೊಲ್ ನೀಲದ ರಜ್ಜು ವಿರಾಜಿಸಿತು ||೩೪

ಉಡುಗಳೊಳುಗುರ್ವೆಳಗಂ ಹಿಮಗದಿರೊಳ್ |
ಕಡೆಗಣ್ಗಳ ಕಾಂತಿಯನಾನದೊಳ್ |
ಬಡನಡುವಂ ದೇವಾಪಗೆಯೊಳ್ ತೊಳಗುವ ಲಾವಣ್ಯವನು ||
ಕಡುರಂಜಿಪ ಮೊಗದೊಳ್ ಚಂದ್ರಮನಂ |
ಪಡಿಯುಂ ನೋಡುವ ಪರಿಯುವೊಲೊದೆವಳ್ |
ಕಡುಪಿಂದುಯ್ಯಲನೊರ್ವಳ್ ವನಿತೆ ಕಲಾವಿದಜನವಿನುತೆ ||೩೫

ಮಿಸುಪ ಹಸುಳೆ ಗಾಳಿಯ ತಾಟನದಿಂ |
ನಸು ಹಾಱುವ ಮೇಲುದೞ ಸೆಱಗು ರಂ |
ಜಿಸುವ ಗಱಿಗಳೆಂದೆನೆ ಸಂತೋಷಂದಳೆದುಯ್ಯಾಲನೊದೆವಾ ||
ಅಸಿಯುಳಲಘುಕುಚಯುಗಲಂ ಮಿಗೆ ರಂ |
ಜಿಸಿದುವಕನಿಪಾತಂಬಡೆಯದ ಪೊಸ |
ಮಿಸುನಿಯ ಪೊನ್ನ ಜವೞವೆಟ್ಟನಿಲಪಥಕೆ ಪಾಱುವ ತೆಱದಿ ||೩೬

ನೋಡೀಕೆಯನೆನುತವಳ ಕಡೆಗೆ ಕೈ |
ನೀಡಿ ಕೆಲದ ಕೆಳೆಯ-ನೊಳುಸಿರ್ವ ರಸನ |
ಗಾಡಿಯನೀಕ್ಷಿಸುತಾತನ ಕಡೆಗೆ ಮೊಗವನಿಟ್ಟುಯ್ಯಾಲೆಯ ||
ಆಡುವಬಲೆಯೊರ್ವಳ ಕೇಕರರುಚಿ |
ನೀಡುಂ ಪರಿದುದು ರತಿಯನನಂಗಂ |
ಪಾಡಱಿದಾಡಿಸಲೆಂದು ಪಿಡಿದ ಮುತ್ತಿನ ಹಗ್ಗದ ತೆಱದಿ ||೩೭

ಸರಸಿರುಹೋಪಮಕರದಿಂದಾಡುವ |
ಸುರುಚಿರಶುಕ್ತಿಭವದ ತಿಱಿಕಲ್ಲಾ |
ತರುಣಿಯ ತರಳಕಟಾಕ್ಷಪ್ರಭೆಗಳ್ ಮುಂದ್ಯೆಸಲ್ಕಲ್ಲಿ ||
ಅರವಿಂದಾಕರದೊಳ್ ಸಂಭ್ರಮದಿಂ |
ಪಿರಿದುಂ ಮೂಡಿ ಮುೞುಂಗಿ ವಿನೋದಿಪ |
ತರುಣಮರಾಳಸಮಿತಿಯೆಂಬಂದಮನೊದವಿಸುತೊಪ್ಪಿದುದು ||೩೮

ಅಂಗ್ಯೆಗಳ ಲಕ್ಷಣದ ಸುರೇಖೆಯ |
ಮಾಂಗಿರದೆಱಗುತೆಱಗುತೇಱುವ ಪೊಸ |
ಮಾಂಗುಲಿವಕ್ತ್ರಗಳೋ ತತ್ಕರನಖಕಾಂತಿಯ ಚಂದ್ರಿಕೆಗೆ ||
ಹಿಂಗದೆಱಗುತೇಱುವ ಚಾರುಚಕೋ |
ರಂಗಳ ಜಂಗುಳಿಯೋ ಎಂಬಂದದಿ |
ನಂಗನೆಯೊರ್ವಳ್ ಕೈವಿಡಿದಾಡುವ ತಿಱಿಕಲೊಪ್ಪಿದುದು ||೩೯

ವಿಮಲಸ್ಫಟಿಕಮಣಿಯ ಕುಟ್ಟಿಮದೊಳ್ |
ರಮಣೀಮಣಿ ಪೊಡೆದಾಡುವ ನಮನೋ |
ನ್ನಮನವ್ಯಾಪಾರದ ನವನೀಲಮಣಿಯ ಕಂತುಕಮಾಗ ||

ಕಮನೀಯತೆಯಂ ಪಡೆದುದು ತತ್ಕರ |
ಕಮಲಕ್ಕಂ ಪಜ್ಜಳಿಸುವ ಪ್ರತಿಫಲ |
ಕಮಲಕ್ಕಂ ಬಿಡದೆಡೆಯಾಡುವ ಮದಮಧುಕರಮೆಂಬಂತೆ ||೪೦

ಕೇದಗೆಯೆಸಳ್ಗವಳಿಗೆಯೆಡಗೈಯೊಳ್ |
ಸಾದರದಿಂ ತಾನೋವುವ ದೀವದ |
ಕಾದಂಬಂ ಕಾಲೆಡೆಯೊಳ್ ಜಾಣ್ಕೆಗೆಯಂಗಭವಾಗಮಮಂ ||
ಓದುವರಸುಗಿಳಿವಱ ಬಲಗೈಯೊಳ |
ಗಾದಂ ಕಣ್ಗೆಸೆಯಲ್ ನಾಲ್ಕೊಗದನ |
ಕಾದಲೆಯಂದದಿನೊರ್ವಳಬಲೆ ಸೌಂದರ್ಯಂದಾಳಿದಳು ||೪೧

ಪರಭೃತಲಲಿತಾಲಾಪೆಯದೊರ್ವಳ್ |
ಪಿರಿದುಂ ಹರಿಸವೊದವೆ ಸಲ್ಲಲಿತ |
ಸ್ವರದಿಂ ಬಾಜಿಪ ವೀಣೆಯ ಹರಿನೀಲದ ನಡೆಯೊಳಗಿಟ್ಟು ||
ಬೆರಲ ಕೊನೆಯ ಮಿನುಗುವ ಕೊರುಗುರ್ಗಳ್ |
ಕರಮೆಸೆದುವು ಬೆಳರ್ಗೇದಗೆಯೆಸಳ್ಗಳ್ |
ನರಲುಣಿಗಳ ಪಂತಿಗೆ ಪರಿವಿಡಿಯಿಂದುಣಲಿಕ್ಕುವ ತೆಱದಿ ||೪೨

ಸ್ಥಾಯಿಯನಾರೋಹಿಯನವರೋಹಿಯ |
ನೋಯರವಂ ಸಂಚಾರಿ ಬಜಾವಣೆ |
ರಾಯ ಲವಣಿ ವಹಳಿಕೆ ಡಾಳಂಗಳಕಾರಪರಂಪರೆಯ ||
ಆಯತಿಯಿಂ ರಂಜಿಪ ತ್ರಿಸ್ಥಾನೋ |
ಪಾಯಸ್ವರದ ಚತುರ್ವಿಧಪದಂಡಿಯ |
ಗಾಯಕಿ ರಸಿಕಮನೋದಯಕಿ ಪಾಡಿದಳತಿಚದುರಿಂದ ||೪೩

ಕಾಡುವ ಹವಣನಱಿಯದೆ ಮಿಗಿಲೀವನ |
ಕಾಡಲಱಿಯದ ಕೃಪಣನ ಮೋಹಂ ನಗೆ |
ಗೆಡೆಯಪ್ಪುದು ಬೆಳವಿಗೆಯ ಬಳಸಿನ ಹವಣನಱಿಯದೆ ನೀರಂ ||
ಬಿಡುವ ಕುಡಿಯನಂದದೊಳೆನುತಂ ನೆರ |
ಗಡಯೊರ್ವಳ್ ರಚ್ಚೆಗೆ ಬಂದರಕಂ |
ಡುಡುಗಾನನೆಯೊರ್ವಳ್ ತನ್ನೋರಗೆಯಬಳೆಯೊಳಾಸಿರಿದಳು ||೪೪

ತಾನೊಲಿದಿದಿರನೊಲಿಸಬಲ್ಲಳಿಯಾನು |
ಮಾನಿಸೆ ಮನದೊಳಗೊಂದೆಳ್ಳನಿತುಂ |
ಮಾನಿಸಿಕೆಯುಮುಂಟೇಕಾಲೋಚಿತಮುಂ ತಾ ಬಲ್ಲವಳ್ ||
ಹೀನರೊಡನೆ ಮೇಳಂ ತನಗಲ್ಲದೆ |
ಯಾನಂದಿಪರೊಡನಾಡಲ್ ಬಲ್ಲಳ್ |
ಕೀನಾಸಿಗೆ ತನಗೇಕೆನ್ನೇರಗೆಯೆಂಬ ಬಲುಮೆಮಾತು ||೪೫

ಇಲ್ಲದ ನೆವವಿಟ್ಟುಗಲಿ ಭುಜಂಗನ |
ಕಲ್ಲೆರ್ದೆ ಮೆಲ್ಲೆರ್ದೆಯೆಂಬೊಳಗಂ ತಿಳಿ |
ಕಲ್ಲೆರ್ದೆಯಾದೊಡೆ ಬಿಡು ಮೆಲ್ಲೆರ್ದೆಯಾದೊಡೆ ಕೈವಿಡಿಯಿರದೆ ||
ಸಲ್ಲೀಲೆಯೊಳವನೇನಂ ಕೊಟ್ಟುದ |
ನಲ್ಲದು ಸಲ್ಲದೆನಲು ಬೇಡೆನುತಂ |
ಫುಲ್ಲಾಕ್ಷಿಗೆ ನುಡಿದಳು ಜೀವನಸಖಿಯಾತಿಹಿತವಚನವನು ||೪೬

ಮನದೊಳ್ ಮುಚ್ಚಟವದಿಲ್ಲದೊಡಂತದ |
ನಿನಿಸುಂ ಹೊಲಹೊಮ್ಮ್ರಸದೊಲಿಪಂದದಿ |
ನಸಿಮಿಷಲೋಚನೆಯರಿ ಕಾದಲರಂ ತಮ್ಮ ವಶಂಮಾಡಿ ||
ಧನಮುಂ ತೆಗೆವುದು ಮತವೆನುತ್ತೂರ್ವಳ್ |
ಕನಕಕಮಲಕುಟ್ಮಲಕುಚದಿಳೆಲೆಗೆ |
ಮನಸಿಜಮಂತ್ರಮನೋದಿಸುವಂತುಸಿರಿದಳತಿಚದುರಿಂದ ||೪೭

ಮನದ ಗೆಲವು ಮೆಯ್ಯೊಳು ಹೊಬ್ರುಹೊಮ್ಮದೆ |
ತನಿಸೋಲವೆ ತನುವಂ ಪಿಡಿದಂತೆಸ್ರೊ |
ಲಿನಿಸೊಳಗಂ ಕಾಣಿಸಿಕೊಳ್ಳದೆಯೊಲವೇ ಬಡಲಾದಂತೆ ||
ಧನಸಂಪನ್ನಿಕೆಯುಳ್ಳ ಭೂಜಂಗರ |
ಮನಮಂ ಬಂದಿವಿಡಿದು ಸಲೆಯಾಳುವ |
ವನಜಮುಖಿಗೆ ಹಿತ್ತಿಲದಲ್ಲವ ಸುರತರು ಸರಸಿಜನೇತ್ರೇ ||೪೮

ಬಲಿಯುದವನನತಿಚದುರಿಂದೊಲಿಯಿಸು |
ನ್ರೊಲಿದ ಬಟೀಕ್ಕವನುಳ್ಳೊಡವೆಗಳಂ |
ಸುಲಿಯಿಸಿಕೊಂಡತಿದಾರಿದ್ರ್ಯನುಮಾದವನಂ ನೀಂ ತಗುಳು ||

ನೆಲಸದೆಯಿನುಡಿ ನಿನ್ನಯ ನೊಸಲೊಳು |
ಕಲಸಿದ ಬಿದಿಯ ಬರಪವೆಂದೇ ಬಗೆ |
ಯೆಲೆ ಬಾಲಕಿಯೆನುತೂರ್ವಶಿ ತನುಜೆಗೆಯೋದಂ ಕಲಿಸಿದಳು || ೪೯

ಬಚ್ಚರಬಯಲ ನುಡಿಗೆ ಬಗೆಯಿತ್ತೊಡೆ |
ಮೆಚ್ಚಿ ಪಿಗಿಲನೀಯದನೇಳಿಸಿದೊಡೆ |
ಬಚ್ಚಣೆವಾತಿನ ಬದಗಗೊಲಿದೊಡೆ ಕಾತರಿಸುವ ಕಣ್ಣ ||
ಇಚ್ಛೆಯ ರೂಪುಳ್ಳವಗೆ ಸಿಲುಕಿದೊಡೆ |
ನಚ್ಚಣಿಗರ ನಟನೆಗೆ ಮೋಹಿಸಿದೊಡೆ |
ಪುಚ್ಚಣಿಯಹುದೆನುತೂರ್ವಶಿ ಮುಗ್ಧೆಗೆಯುಸಿರಿದಳು ವಿದಗ್ಧೆ || ೫೦

ಮುಟ್ಟಿದ ಮೋಹದ ಕಾದಲನೇ ಕೈ |
ಮುಟ್ಟಿ ಕರಂ ಕಾಲೋಚಿತದಱಿತದಿ |
ಕೊಟ್ಟುದೆ ಕೋಟಿಯೊಹವೆಯೆನಗೆನುತವೆಯತಿಸಂತೋಷವನು ||
ನೆಟ್ಟನೆಯೊಡಲೊಳಗಿಂಬಿಟ್ಟುಬಲೆಯ |
ಹಟ್ಟಿಯ ಗೊತ್ತಿನೊಳಗೆಯನವರತಂ |
ಕಟ್ಟಿ ಕಱಿವ ಸಗ್ಗದ ಹಸುವಲ್ಲವೆ ಬಳಿಕೆ ನಳಿನನೇತ್ರೆ || ೫೧

ಹರಿಸದಿನಿತ್ತ ಹಗಲ ಚಿಕ್ಕೊತ್ತೆಯ |
ನಿರುಳೊತ್ತೆಯ ಹಣವೆನುತವೆ ಬಗೆದಾ |
ಯಿರುಳೊತ್ತೆಯ ವಿತ್ತವನೋಹಿಯೆನುತಾ ಪ್ರೋಹಿಯ ಹೊನ್ನಂ ||
ವರಸಜ್ಜನವೆನುತವೆ ಬಗೆದಾಕೆಗೆ |
ಯರಿದೇ ಗಂಡರೊಲುವೆಯರಿದೇಸಿರಿ |
ಯರಿದೇ ಭೋಗವರಿದೆ ನವಮೋಹಾನಂದವಮೃತವಾಣಿ || ೫೨

ಸೋಲವೆ ಮೆಯ್ವಾತ್ತಿದ ಸಲೆ ಮೋಹದ |
ಲೋಲಾಕ್ಷಿಗೆ ನೆವ ಗಡ ಮುನಿವುದು ಗಡ
ಕಾಲೋಚಿತ ಗಡ ಕಲಹಂ ಗಡ ಕೈತವ ಗಡ ಗೆಲವು ಗಡ ||
ಆಲಸ್ಯಂ ಗಡ ಹುಸಿಗಡ ಹಡಹಿನ |
ಮೇಲಣ ಚಿತ್ತಂ ಗಡಯೆನುತೂರ್ವಶಿ |
ಬಾಲಹರಿಣಲೋಚನೆ ನುಡಿದಳ್ ತನ್ನಯ ನಿಜಸಖಿಯಾಡನೆ || ೫೩

ಸಮಯೌವನ ಸಮರೂಪು ಸಮಶ್ರೀ |
ಸಮರಸಿಕತೆ ಸಮಕಾಮೋದ್ದೀಪನ |
ಸಮರಾಗಂ ಸಮಭೋಗಬಲಂ ಸಮವೆನಿಸುವ ಮೋಹಮಿರ್ಪು ||
ರಮಣೀಯಮನಾದಂ ಪಡೆದಾಪ್ರಿಯ |
ತಮರಸರಲಬಾಣಂ ನಡಬಲ್ಲವೆ |
ರಮಣಿಯೆನುತ ನುಡಿದಳದೊರ್ವಳ್ ನೇಹದ ಕೆಳದಿಯ ಕೂಡೆ ||೫೪

ನಲ್ಲಂ ನಲ್ಲನೆ ಕಡುನಲ್ಲಂ ಕುಡ |
ಬಲ್ಲನೆ ಸುರಭಿಸರೂಪನೆ ಮನಸಿಜ |
ನೆಲ್ಲ ಕಲೆಯನಱಿವನೆ ಬಿದಿಯುತ್ತಮನಾಯಕನೇ ವಿಷ್ಣು ||
ಹೊಲ್ಲದಬಲೆಗೊಲಿವನೆ ಚಃ ಪುಸಿವನೆ |
ಯಿಲ್ಲವೆನುತ ಕೋಮಲೆ ತನ್ನಯ ನಿಜ |
ವಲ್ಲಭನಿರವನೊರೆದಳಿರ್ದಂದದಿ ಕೇಳ್ದ ಕೆಳದಿಯೊಡನೆ ||೫೫

ಮನೆಯಂ ಮಱದು ಮದುವೆಯಾದಾಕೆಯ |
ನೆನಗಾಗಿ ಬಿಸುಟ್ಟುಳ್ಳೊಡಮೆಯನೊಂ |
ದಿನಿಸುಳಿಯದೆ ಮುಂ ತತ್ತು ಭವಿಷ್ಯದ್ವ್ಯವಹಾರಮನುಳಿದು ||
ತನು ಬೇಱಸುವೊಂದೆಂಬಂತೆನ್ನೊಳ |
ಗಿನಿದಂ ಕೆಡಲೀಯದೆ ನಡಪಿದನಂ |
ವನಿತೆಯದೆಂತು ಬಿಡುವೆನೆನುತುಂ ನಿಡುಸುಯ್ದಳ್ ನೀಲಾಕ್ಷಿ ||೫೬

ಗಳಿಸಿದೊಡಮೆಯೋಸೇಸುದಿನಂಬರ |
ಮೊಳವೆಮಗಂತದಱಿಂದೆಲ್ಲರೊಳ |
ಗ್ಗಳಿಕೆಯ ಚೆಲ್ವಿಕೆಯಂ ರಸಿಕತೆಯಂ ವಿತರಣಮಂ ತಳೆದ ||
ತುಱಿಲಾಳಂ ಬಿಡಬೇಡೆನುತೆನ್ನುಮ |
ನೆಱಲಿಸುವೀಮದಿಪಾಱಯನೀಕ್ಷಿಸು |
ಉಳನೆಯೆನುತ ನಿಡುಸುಯ್ದಳದೊರ್ವಳ್ ನವಕೋಕಿಲವಾಣೀ ||೫೭

ಬರವಿನಿಯನೊಳಿಲ್ಲೆಂದು ನುಡಿದ ಸಹ |
ಚರಿಯೊರ್ವಳ ನುಡಿಯಂ ಲಾಲಿಸುತಾ |
ಪರಿಸಿದ ಚಿಂತೆಯೊಳಗೆ ನುಗ್ಗಿದಪಿನೊಳಿಟ್ಟಳದಳಿರ್ಗ್ಗೆಯ ||

ಅರುಣಪ್ರಭೆ ಪರಕಲಿಸಿದ ಮುಖಮಂ ।
ಹರಿಣನಯನೆ ಬಾಗಲ್ಕೆ ಭಾಗದ ।
ಗುರುಕುಚಮೊಸೆದುದು ಶಶಿಯಂ ತಾಳ್ದುದುದಯಗಿರಿಯೆಂಬಂತೆ ॥೫೮

ಮುನಿಸಂ ಬಿಡು ಮುಕುರೋಪಮಮುಖಿಯೆನು ।
ತೆನಗುಂ ದೈನ್ಯದೊಳಡಿಗೆಱಗಲ್ಕಾ ।
ಮುನಿಸನೆ ಬಲಿದಾಂ ತಿಳಿಯದಿರಲ್ಕಾಯಿನಿಯಂ ಕಡುನೊಂದು ॥
ಮುನಿದು ತೊಲಗಲಲ್ಲಿಗೆ ನಾಂ ಮುನ್ನಿನ ।
ಮುನಿಸಂ ಬಿಡುವೆನೆನುತ ಕೆಳದಿಯರಂ ।
ವನರುಹಮುಖಿ ಕೇಳ್ ಕಳುಪಲವಂ ತಾಂ ತಳುವದೆ ಬಂದಪನೇ ॥೫೯

ಅವನ ಚೆಲುವೆ ದಿಟ್ಟಿಗೆ ತೆರೆಯಾಗಿದೆ ।
ಯವನ ನುಡಿಯೆ ಕಿವಿವಟ್ಟೆಯ ಕೆತ್ತಿದೆ ।
ಯವನಂಗಾವೋದವೆಯುಸಿರಂ ತಗದಿದೆಯವನೊಳ್ದುಟಯೆ ॥
ಸವಿನಾಲಗೆಯಂ ತಗದಿದೆ ಮೆಯ್' ಮ ।
ತ್ತವನಪ್ಪುಗೆಯಿಂಪಂ ಪೊದೆದಿದೆ ಬೞಿ ।
ಕವನೊಲವೇಯುಸುವಾಗಿಡೆಯನ್ಯಮನಾನೆಂತುಸಿರುವೆನು ॥೬೦

ಅಕ್ಕನ ಮುಡಿಗರಲಂ ತರಲೆನುತಾಂ ।
ಚೆಕ್ಕನೆ ಹಿತ್ತಿಲ ಹೂವಿನ ಬನವಂ ।
ಪೊಕ್ಕದನಱಿದಾಭಾವಂ ಬಂದು ನೆರೆದು ಸೊಗಯಿಸಿ ಸೊಕ್ಕಂ ॥
ಇಕ್ಕಿದನೆನುತೊರ್ವಳೊಳುಸಿರುವ ಸಮ ।
ಯಕ್ಕಾನಾಯಕಿಯಿದಿರ್ವರೆ ಕಾಣುತ ।
ದಿಕ್ಕನೆ ದಿಟ್ಟಿದೆಱಿದೆನೆನುತಂ ಹುಸಿದಳದೊರ್ವಳ್ ಚದುರೆ ॥೬೧

ಬಂಗಿದ ಪ್ರಿಯತಮನಂ ತರಲೆಯ್ದಿದ ।
ತಂಗಿಯಿದೇಕೆ ನೊಸಲ ಕುಂಕುಮವೀ ।
ರಂಗುದುಟಿಗೆ ಬಂದುದು ಪೇೞೆನಲೆಂದಳು ಭಾವಂಗೆಱಗಿ ॥
ಉಂಗುಟಮಂ ಕಚ್ಚುವ ವೇಳೆಯೊಳಾ ।
ಸಿಂಗರಿಸಿದ ಕುಂಕುಮಮದಿರ್ದಧರಕೆ ।
ಸಂಗೊಳಿಸಿದುದಿದು ಪುಸಿಯಲ್ಲಾ ತಾಂ ಬಂಡಪಸಡೆ ನೋಡು ॥೬೨

ಕಂಕಣವಿವೆ ಕೋಮಲೆ ಕರದೊಳಗೆಯು ।
ಲಂಕರಿಸೆಂಬನನೀಕ್ಷಿಸಿ ನಿನಗಾ ।
ಪಂಕಜಮುಖಿ ಹರಿಸದೊೞಕ್ಕಿದ ದೃಕ್ಕಂಕಣಮಂ ಮಱಸಿ ॥
ಕಂಕಣಮುಮನೆನ್ನೀಕಣ್ಬೊಂಗಗ ।
ಲಂಕರಿಸಿದ ಬೞಿಕೀಕ್ಕೈಯಾನದ ।
ಕಂಕಣವೇಕೆನುತಂ ಖಂಡಿತಭರ್ತಾರಿಕೆಯುಸಿರಿದಳು ॥೬೩

ನಿಡುಗಣ್ಣೆವೆಮೊಯ್ಯದೆ ನೋಡುವ ಬೞಿ ।
ಯ್ಮಿಡುಕುವ ಕುಡುಪುರ್ವುಗೞಿಂ ಜಱುರ್ಜ ।
ತೊತ್ತಡನೆ ಮೊಗಂದಿರುಪುವ ಮೇಲುದನೋಸರಿಸುವ ಮೌನವನು ॥
ಹಿಡಿವಶ್ರುವನುಗುೞಿಪ ನಿಟ್ಟುಸಿರಂ ।
ಬಿಡುವ ಮಡದಿಯೊಪ್ಪಿದಳಪರಾಧಮು ।
ನೊಡರಿಸಿ ಬಂದ ಬೊಜಂಗನ ಮೊಗದಿರವಂ ನಸುನೋಡುತವೆ ॥೬೪

ಇನಿಯನ ಮೊಗದ ಮುನಿಸು ತಿರ್ದುವುದೋ ।
ಘನಮಹುದೋಎನುತಮೆ ಬಾಳಾಂಕಿಯು ।
ಮನೆಯುರುಗಂ ಮೆಯ್ಯಾಗ್ಣಿಸಿಕೊಳ್ಳದೆ ನಿಂದೋಸರುಗೇಳ್ವ ॥
ವನಿತೆಯಿರವನೀಕ್ಷಿಸಿ ಕಡುಮಱುಕದ ।
ಮನದಿಂ ಪ್ರಿಯಸಖಿ ತನ್ನಿಚ್ಚೆಯೊಳಾ ।
ಮನಸಿಜರೂಪನ ಬೞಿಗತ್ಯಾತುರದಿಂದೆ ನಡೆದಳಾಗ ॥೬೫

ಪೀನಕುಚಂ ಪರಲೊತ್ತುವ ದಿನದಿಂ ।
ನೀನಲ್ಲದೆಯನ್ಯರನೇನಱಿದಳೆ ।
ದೀನತನದಿ ಹಣದೆಗೆಯಲ್ ಬಲ್ಲಳೆ ಸೋಲುವೆ ಮೈವಿಡಿದ ॥
ಆನಂದಕೆ ಹೊಱಗಾಗಿರ್ದಳೆಯುದ ।
ನೇನುಮನಱಿಯದೆ ನೆವಮಂ ಕಾಣದೆ ।
ನೀನಗಲುವದುಚಿತವೆಯೆನುತಂ ಸಖಿ ತಿೞಿಪಿದಳಾವಿಟನ ॥೬೬

ಕೆಳದಿಯೊಸಗೆವಾತಂ ಕೇಳುತ ಕೋ ।
ಮಳೆಗತ್ಯಾನಂದಾಶ್ರುಕಣಂ ಕ ।
ಣ್ಗೊಳಿಸಿತು ಕಾದಲನಂ ನೋಡುವೆನೆನುತವೆ ಮೊದಲೇ ಮನಕೆ ॥

ಎಳಸದ ವಸ್ತುನಿಕರವಂ ನೋಡುವ |
ಬಟ್ಟಿಯೊಳ್ ಪತ್ತಿದ ಕಲ್ಮಷವಂ ತಾಂ |
ತೊಳವೆನೆನುತ ತುಱುಗೆವೆಗಣ್ಗಮಲಾಂಬುಗಳಂ ತಂದಂತೆ ||೬೭

ಇನಿಯಂ ಬಂದಪನೆಂಬುದನಱಿದಾ |
ವನರುಹಪತ್ರವಿಶಾಲವಿಲೋಚನೆ |
ಕನಕಕಲಶಕುಚಮಧ್ಯದೊಳೊಪ್ಪುವ ನವಮಣಿಕಂಠಿಕೆಯಂ ||
ಘನಜಘನದ ಮೇಖಲೆಯಂ ಕರದೊಳ್ |
ಮಿನುಗುವ ಕಂಕಣಮಂ ತೋಳ್ವಳೆಯಂ |
ಮನದನುರಾಗದಿ ಪಿಂಗಿಸಿ ಸಿಂಗರವಿಟ್ಟೊಪ್ಪಿದಳಾಗ ||೬೮

ಸಜ್ಜೆವನೆಯನೆಯ್ದುತ ಪೊಸಜಾದಿಯ |
ಸಜ್ಜುಕವಂ ಪಾಸಿಗೆ ಪರಕಲಿಸುತ |
ಪಜ್ಜಳಿಸುತ ಮಣಿದೀಪವನಂಗಣದತ್ತಯ್ದುವ ಪತಿಯ ||
ಪಜ್ಜೆಯ ಸೊಪ್ಪನಿರದೆ ಲಾಲಿಸುತಂ |
ಲಜ್ಜೆದೊಱೆದು ನಡೆಪಾಡುವ ವಾಸವ |
ಸಜ್ಜೆಕೆಯುಜ್ಜುಗವರಸನ ಕಣ್ಗೆ ಮನೋಹರಮೆಯ್ದಿಸಿತು ||೬೯

ಕನ್ನಡಿಯಂ ನೋಡುವ ಸಮಯದೊಳಾ |
ಬೆನ್ನ ಮಱೆಯೊಳಿನಿಯಂ ಮಿಡುಕದೆ ನಿಲೆ |
ತನ್ನ ನೆೞಲ್ವಿಡಿದಾತನನೆೞಲಿರೆ ಕಾಣುತೆ ಮತ್ತೊರ್ವ ||
ಕನ್ನೆಯೊಡನೆಯೀತಂ ನಿಂದಪನೆನು |
ತುನ್ನತಿಕೆಯ ಮುನಿಸಂ ಬಗೆಗಿತ್ತು |
ಕನ್ನೆ ಪಿಡಿದ ಕನ್ನಡಿಯಂ ನೆಗೊರ್ತ್ತಿದಳದನೇನೆಂಬೆಂ ||೭೦

ಮುನಿದ ಬೞಿಕ್ಕನ್ನಿದಿರೊಳಗಿರ್ಪುದು |
ನಿನಗಲ್ಲದೆ ಸಲ್ಲದೆನುತ್ತವೆ ತಗು |
ಳ್ದನಿಸೂಱಿಡನೆ ಬಂದಾಂ ಪೊಱಮಡಿಸಲ್ಕೋಪವನುಂ ನೀನೆ ||
ಎನುತ ಕನಲ್ದೋಪನ ಸೆಱಗಂ ಪಿಡಿ |
ದನಿಮಿಷನೇತ್ರೆ ಸೊಗಸಿದಳು ರತಿ ತ |
ನ್ನಿನಿಯನ ಕಡುಚೆಲ್ವಂ ಕಳ್ಳವನಂ ಕಂಡು ಪಿಡಿವ ತೆಱದಿಂ ||೭೧

ಬೇಡ ಮುನಿಸು ಬಲ್ವೆತ್ತುವೊಗದಳೆ ನಡೆ ।
ನೋಡು ನವಾಂಬುಜಪತ್ರನಯನೆ ಮಾ ।
ತಾಡು ಮಧುರಪಿಕವಾಣಿ ಮನೋಹರಿ ಮೆಯ್ದೆಗೆದಮಾರ್ದಪ್ಪು ॥
ನೀಡುಂ ಚುಂಬಿಸು ಬಿಂಬಫಲಾಧರೆ ।
ಕೂಡೊಲಿದಲಘುನಿತಂಬೆಯೆನುತ ಮಾ ।
ತಾಡಿ ಮನಃಪ್ರಿಯೆಯುಂ ತಿಳಿಪಿದನಿನಿಯಂ ಕಡುಜಾಣ್ಮೆಯೊಳು ॥೭೨

ತೊಳಪ ತೊಡೆಯು ಗದ್ದುಗೆಯೊಳು ಕುಳ್ಳಿ ।
ರ್ದಳಘುಕುಚದ ಮಲಗಂ ನೆಮ್ಮಿದ ಕ ।
ಣ್ಗೊಳಿಸುವ ಮುಡುಹಿನ ಮೂಡಾವಿಗೆ ಕ್ಕೈಯಿಟ್ಟುಸುಗೀಶ್ವರನ ॥
ಲಳಿತಾಂಗದ ಮೇಲಾಸತಿಯುಲರ್ಗ ।
ಣ್ಬೆಳಗು ಪರಿದು ಮುಸುಕಲು ಮತ್ತಾ ಕ ।
ಣ್ಗಳ ಪುತ್ರಿಕೆಗಳೊಸೆದು ಚಾಮರಮಂ ಡಾ'ಸುವಂತಾಯ್ತು ॥೭೩

ಬಟ್ಟಮೊಲೆಯು ಬಾಲೆಯುನೊಸಲೊಳು ಬಗೆ ।
ಯಿಟ್ಟುಬಲ್ಲಹನೊಲವಿಂ ಚವುಕದ ।
ಬೊಟ್ಟಂ ಕುಂಕುಮದಿಂದಿಡೆಯಂಗಜಚಕ್ರೇಶಂ ತನ್ನ ॥
ಹೆಟ್ಟುಗೆಯುರೊಳುರುಮಹಿಷೀಪದಮಂ ।
ಕೊಟ್ಟು ಕರಂ ಹರಿಸದಿ ಪೊಸಮಿಸುನಿಯು ।
ಪಟ್ಟಂಗಟ್ಟಿದ ತೆಜದಿಂ ಕಣ್ಗೆಯ್ದಿತು ಕಡುರಂಜನೆಯು ॥೭೪

ತಡೆದಸುಗೀಶಂ ಶಯ್ಯಾಸದನದ ।
ಪಡಿದೆಗೆವನಿತಱೊಳಡಸಿದ ಮುನಿಸಿಂ ।
ದುಡುಪಾನನೆ ಮಣಿಮಂಚದಿನೆೞ್ದು ಮುಡಿಯು ಬಾಸಿಗದೆಗೆದು ॥
ಪೊಡೆದೆಡದಲತೆಗೆಗಾಲೊಳೊದೆದು ಕ ।
ಣ್ಗಡೆಯು ತೊಳಪ ಕದಿರಿಂದಮಿಱುದುಮುವ ।
ನೊಡಲೊಳಲಂಪಂ ಪೆರ್ಚಿಸಿ ಕಾತರದಿಂ ಕೂಡಿದಳಾಗ ॥೭೫

ಕನ್ನೆ ಸೊಗಸುದುಟಿಗುಡು ಪ್ರಿಯುದಿಂ ಚೆಂ ।
ಬೊನ್ನ ಮುಕುರಮುಖಿ ಮುಂಡಾಡಯು' ।
ಚೆನ್ನಿಗ ಚೆಂದಳಿಗ್ಮೆರ್ಯುಳೆ ಪರಿರಂಭಂಗೆಯ್ಚದುರ ॥

ಉನ್ನತಜಘನೆ ಸುಸಿಲ್ಗೆೞೇಱ್ಱೈ ।
ಯೆನ್ನ ಕೊರಲ ದೇವರಹೊನ್ನೆಯೆನು ।
ತ್ತುನ್ನಲ್ಕೆಯನಾಡುತರವಿುಯಿುಸಿದರ್ಕ್ಷದಲರೊಲವಿಂದ ॥೭೬

ಗಲ್ಲವಿಡದು ಮುದ್ದಿಸಿ ಗರಗರಿಕೆಯು ।
ಲಲ್ಲೆನುಡಿಯು ನುಣ್ಪಂ ಕಿವಿಗಾಗಿಸಿ ।
ಪಲ್ಲ ಕೊನೆಯು ಕುಱುಪಂ ಚೆಂದುಟಿಗೇಱಿಸಿ ಬಿಗಿಬಿಗಿಯಪ್ಪಿ ॥
ಮೆಲ್ಲೆರ್ದೆಯೊಳು ಸವಿವೇಟಮನೊದವಿಸಿ ।
ಯುಲ್ಲಸದಿಂ ಕಾದಲನತಿಮೋಹದ ।
ನಲ್ಲಳಮನದೊಳಗೞಿದು ಬೞಿಕ ಸಮಸುರತಮನಾಗಿಸಿದಂ ॥೭೭

ನಡೆ ನೋಟದೊಳಂಕುರವೇಱಿಸಿ ನು ।
ಣ್ದುಟಿಯಂದೀರೆಲೆವಡೆಯಿಸಿ ಬಾಯ್ದೞ್ ।
ಗಿಡುವಮೃತಾಧರದಿಂ ಕುಡಿಯೇಱಿಸಿ ಕಲೆಯಿಂ ಕುಸುಮವನು ॥
ಅಡರಿಸಿಯುಮರ್ದಪ್ಪುಗೆಯಿಂ ಫಲಮಂ ।
ಬಿಡದೊದಗಿಸಿ ನವಮೋಹನಲತೆಯುಂ ।
ಮಡದಿಮಣಿಯುಮೆಯ್ಯೊಳು ಬೆಳೆಯಿಸಿದಂ ಸುರತದೊಳಾಯಿನಿಯುಂ ॥

ಚುಂಬಿಸಿ ಸವಿಯುನಱಿದು ಪೊಸಕಪ್ಪುರ ।
ದಂಬುಲಮಂ ಬಾಯ್ದೞಿಗೆ ಕಡಂಗೊ ।
ಟ್ಟಂಬುಗೊಳಪಕೊರಗುರ್ಗಲೆಯಿಟ್ಟು ಮೊಱೆಯನುೞಿದೊಳ್ನುಡಿಯಂ॥
ತುಂಬಿ ಕಿವಿಗೆಯಡೆಬಿಡವಿಲ್ಲದೆಯೊ ।
ತ್ತುಂಬದಿನಪ್ಪಿ ಕೊರಲ ಬಣ್ಣದ ಸರ ।
ದಿಂ ಬಲ್ಲಹನ ಮನಸುಮೆಚ್ಚಲು ಕೂಡಿದಳೊಲವಿಂ ತರುಣಿ ॥೭೯

ಮುಡಿಯೊತ್ತೊಗುವ ಮುಡಿಯನಾನನಮಂ ।
ತುಡುಕುವ ತುಂಬಿಗುರುಳ್ಗಳನೋವುತ ।
ನಿಡಿಯಲರ್ಗಣ್ಗೆ ಬಸಿವ ಬೆಮರಂ ಕೊರಗಿಂ ಮಿಡಿಯುತ್ತ ॥
ಉಡಿನಿಱಿಯಂ ಪಿಡಿದೊಳ್ಗುಡಿಸುತ ನಾ ।
ಣ್ಬಿಡಿದ ತೊಡೆಗಳನಿಱುಂಕುತ ನಿಡುಸು ।
ಯ್ಯುಡುತ ನಡೆದು ಬಂದಳು ರತ್ಯಂತದ ರಮಣಿ ನಿಜಾಂಗಣಕೆ ॥೮೦

ಬಂದುಗೆಯಲರೊಳಗಣ ಮಧುವಂ ಕೊಳ |
ಲೆಂದು ಮುಸುಂಕಿದ ತುಂಬಿವಸುಳೆ ಬಾ |
ಲೇಂದುಗೆ ಸೇರಿದ ಕಿಱುಗಜ್ಜ ಮೋಹಾಮೃತರಸಮಂ ತುಂಬಿ ||
ಕಂದರ್ಪಂ ಕೆಮ್ಮಣಿಯ ಕರಂಡಕ |
ಕೊಂದಿಸಿದರಗಿನ ಮುದ್ರೆಯಿಡುವೆಯೆಂ |
ಬಂದದೆ ಪಲ್ಲಕೊನೆಯ ಕುಱುಹಧರದೊಳೊಪ್ಪಿದುದಂಗನೆಗೆ ||೮೧

ಕಟ್ಟೊಲುಮೆಯೊಳಿನಿಯಂ ಕೂರುಗುರಿಂ |
ದಿಟ್ಟ ಸೊಗಸುಗಲೆಯಿಂ ನೀಲಾಂಬಕಿ |
ಯಿಟ್ಟಣಿಸಿದ ನೆಲೆವೊಲೆಯ ನಡುವೆ ಘನರತಿಯ ಬಱಿಕ್ಕೆಯೊಳು ||
ಪುಟ್ಟಿ ಬಸಿವ ಬಳ್ಬಮರ ಜಲಂ ಮಡು |
ಗಟ್ಟಲದಱ ಮಧ್ಯದೊಳು ನೆಲಸಿಯುಳ |
ವಟ್ಟಿದು ಶರಧಿಯೊಳುದಯಿಸಿ ಏ ನಗುವ ಶಶಿಲೇಖೆಯ ತೆಱದಿ ||೮೨

ಗುಜ್ಜುವಡೆದ ಗುರುಕುಚವುಗುರ್ವ್ರಯ್ಗಳ |
ಹಜ್ಜೆ ಹೊಳೆವ ನಳಿತೋಳಱಿದಳಕಂ |
ಪಜ್ಜಳಿಸುವ ಸಿರಿವೊಗವೊಜ್ಜರಿಸುವ ಬೆಮರುಣ್ಮುವ ಸೇದೆ ||
ಸೆಜ್ಜೆಯನಾಶ್ರಯಿಸುವ ನವಿರುಣ್ಮುವ |
ಲಜ್ಜೆ ಬೆಳರ್ವೆಸವಧರಂ ಬೀಸುವ |
ಬಿಜ್ಜಳಕಿಕ್ಕೈಸುವ ಮೈಯೊಪ್ಪಿತು ರತ್ಯಂತದ ಸತಿಗೆ ||೮೩

ಅರುಣಮಣಿಯನೇಱಿಸುವುಗುರ್ಗೊನೆಯಿಂ |
ಪಿರಿದುಂ ಗೆಯ್ದಾಲಿಂಗನದೊತ್ತಂ |
ಬರದಿಂ ಗುಜ್ಜುವಡೆದ ಚೆಲ್ವಿಂದಾವರಿಸಿದ ಕಿಱುಬೆಮರಿಂ ||
ತರುಣಿಯ ಗುರುಕುಚಯುಗಲಂ ರೋಹಣ |
ಗಿರಿಯುಂ ವಿಂಧ್ಯಾಚಲಮುಂ ಹಿಮಭೂ |
ಧರಮುಂ ನೆನೆಯಿಸಿದುದು ನಡೆ ನೋಡುವ ನವರಸಿಕರ ಬಗೆಗೆ ||೮೪

ಈಯಂದದಿನತಿಶೋಭೆವಡೆದ ವೇ |
ಶ್ಯಾಯುವತಿಯರ ವಿಲಾಸದ ಸದಭಿ |
ಪ್ರಾಯಮನೀಕ್ಷಿಸುತಂ ತದ್ವಿಪಣಿಯನಿನಿವಿರಿದುಂ ಮುದದಿಂ ||

ಶ್ರೀಯುವತೀಪ್ರಾಣೇಶ್ವರನಭಿನವ |
ಕಾಯಭವಂ ಸಕಲಕಲಾಪ್ರೌಢಂ |
ರಾಯನಿರದೆ ಪೊಱಮಟ್ಟೈದುತಂದಂ ನೃಪವರನಂದಿರಕೆ ||೮೫

ಒಡನೆಯ್ದಿದ ಸಹಚರರಂ ನವಮಣಿ |
ದೊಡವುಡೆತಂಬುಲವೊದಲಾದುವಱಿಂ |
ಸಡಗರದಿಂ ಸತ್ಕರಿಸಿ ಬೞಿಕ ಹರಿಸದೊಳಂತಃಪುರಕೆ ||
ನಡೆದು ನರೇಂದ್ರಲಲಾಮಂ ಪಟ್ಟದ |
ಮಡದಿ ಮಧುರಪಿಕವಾಣಿ ಸುಲೋಚನೆ |
ಯೊಡನೆ ಹಲವು ರತಿಬಂಧಕ್ರಿಯೆಯೊಳಗನಿಸು ತೊಲಗದಿರ್ದಂ ||೮೬

ಸುಸಿಲ ಕಡೆಯು ಸೌಖ್ಯದ ಬಲುಸೊಕ್ಕಿಗೀ |
ಯೊಸಕವಡೆದು ಬಲಿಯಿತ್ತಂಬಂದದಿ |
ನೊಸೆದಾಮಾನವಮನಸಿಜನಭಿನವರತಿಯೆನಿಸೆ ಸೊಗಯಿಸುವ ||
ಅಸಿಯಳ ತೋಳ್ವಾಸಿನ ಮೇಲೊಯ್ಯನೆ |
ಮುಸುಕಿದ ನಿದ್ರೆಯೊಳಿರಲಾನಮಯಕೆ |
ನಸುದೋಱಿತು ನಾಕಾಧಿಪದಿಕ್ಕಿನೊಳಳವಗಲಿನ ಚಿಹ್ನಂ ||೮೭

ಬಾಡುವ ತಾರಗೆಗಳು ಬಡಬಡಕನೆ |
ತೀಡುವುದಯುಪವನಂ ಮುಂದೆಸೆಯೊಳ್ |
ಕೂಡುವರುಣರುಚಿ ಮಾಸಿದ ಮುಕುರದವೊಲ್ ಕಂದಿದ ಚಂದ್ರಂ ||
ಪಾಡುಗೆಡೆವ ಕತ್ತಲೆ ಪಲುಬುವ ಖಗ |
ಮೋಡುವ ಜಾರಾತತಿಯಂಬುಜದೊಳು |
ಪಾಡುವ ಪಜ್ಜಮೆವಱಿ ಗಳೆಸೆದುವು ಪನಿಪೊತ್ತಿನ ಸಮಯದೊಳು ||೮೮

ಇರುಳೊಳು ರಾಕ್ಷಸರಂದದಿ ಪಿಡದಾ |
ಚರಿಸಿದ ವಾರುಣಿಯಾಂ ಮೊಗಸೋಂಕಿದ |
ಪಿರಿದುಂ ದೋಷಾಕರನೆನಿಸಿದ ಕೋಕಂಗಳನಗಲಿಸಿದ ||
ದುರಿತಂ ತನಗೀತೆಱದಿಂದಲ್ಲದೆ |
ಪರಿಹರವಾಗದೆನುತ ನಿಶ್ಚಯದಿಂ |
ಶರಧಿಸ್ನಾನಂಗೆಯ್ವಂದದಿ ಪತಿಯಸ್ತಂಗತನಾದಂ ||೮೯

ಗಂಡನೞಿಯಲಿಮ್ಮಂದದಿನೞಿವುದು |
ಪೆಂಡಿರ್ಗನುಮತಮೆಂಬುದನವನೀ |
ಮಂಡಲದೊಳಗುಳ್ಳಬಲಾಜನಕೆಯಱಿಕೆಮಾೞ್ಪಂದದೊಳು ||
ದಿಂಡುಗೆಡೆದು ಪಶ್ಚಿಮವಾರಿಧಿಯೊಳು |
ಖಂಡಶಶಾಂಕನೞಿಯೆ ತಾರಗೆಗಳ |
ಮಂಡಳಿಯುಂ ಮುಸುಕಿದ ರಾತ್ರಿಯುಮಿನಿಸುೞಿಯದೞಿದುವಾಗ ||೯೦

ಇದು ಭೀಕರಮಪ್ಪಂಧೋರರಾಕ್ಷಸ |
ನದಟಂ ಪುೞಿದು ಪೊೞಿವ ಹಣೆಗಣ್ಣನೊ |
ಇದು ಕತ್ತಲೆಯೆಂಬ ಕರೇಣುವನುಜದಿಕ್ಕಿದ ಕೇಸರಿಯೋ ||
ಇದು ತಮವೆಂಬಸಿತಾಂಭೋನಿಧಿಯಂ |
ಪದಪಿಂ ಪಾನಂಮಾಡಿದಗಸ್ತ್ಯನೊ |
ಇದು ನಿಶೆಯೆಂಬ ವನಮನಳುರ್ವಗ್ನಿಯೊ ಎನೆ ರವಿ ಮೂಡಿದುದು ||೯೧

ಆಯಿನನುದಯದೊಳೆೞ್ದು ಸರಾಗದೊ |
ಳಾಯತನೇತ್ರ ಸುಲೋಚನೆ ಸಹಿತಂ |
ತೋಯಜಸದ್ರೂಪಾನನಮಂ ತೊಳೆದು ಜಿನೇಶಂಗೆಱಗಿ ||
ಭೂಯುವತೀಪ್ರಾಣೇಶಂ ಸುಮನೋ |
ಸಾಯಕಸನ್ನಿಭನಭಿನವಮನುಜಯ |
ಜಾಯಾಪತಿ ಜಯಭೂಪತಿ ಸುರಪತಿವೈಭವದೊಳಗಿರ್ದಂ ||೯೨

ಸಲೆ ಗುಣಯುತಧರ್ಮಧರಂ ಮುಖ್ಯ |
ಮಲಸುಮನೋರಥನತನುವಿಲಾಸಂ |
ವಿಲಸದ್ರಾಜಬಲಾನ್ವಿತನುದ್ಯದ್ಭಾರತ್ಯನುಭಾವಂ ||
ಲಲಿತಕುವಲಯೋಪೇತಂ ವಿಗ್ರಹ |
ದಲನಂ ಜನತಾಹೃದಯನಿವಾಸಂ |
ಲಲನಾಜನಕಂಗಜನಂತೆಸೆದಂ ಪ್ರಭುಕುಲಮಣಿದೀಪಂ ||೯೩

ಇದು ಸುರನರಫಣಿಪರಿವೃಢವಿನಮಿತ |
ವಿದಿತವಿನಯಗುಣಗಣಯುತಜಿನಪತಿ |
ಪದಸರಸಿಜಮದಮಧುಕರನತಿಚತುರಕಲಾಪರಿಪೂರ್ಣಂ ||

ಸದಮಲಚರಿತಂ ಪ್ರಭುರಾಜಂ ಸಂ |
ಮದದಿಂ ರಚಿಸಿದ ಜಯನೃಪಕಾವ್ಯದೊ |
ಳೊದವಿ ಮನೋಹರವಾದುದು ಪದಿನಾಲ್ಕನೆಯ ವಿಸುಪ ಸಂಧಿ || ೯೪

ಇಂತು ಪದಿನಾಲ್ಕನೆಯ ಸಂಧಿ.

# ಪಂಚದಶಾಶ್ವಾಸಂ.

೧

ಸೂಚನೆ ‖ ಸುಖದಿಂ ರಾಜ್ಯವನಾಳುತ ಶತಶತ ।
ಮುಖನತಜಿನನಂ ನೋಡಲ್ ಒಳ್ಳಯು ।
ಶಿಖರಿಗೆ ಸುದತಿವೆರಸು ನಡೆದಂ ಜನಪತಿ ಜಯರಾಜೇಂದ್ರಂ ‖

ಸಾಸಿರಗಣ್ಣಂಗೆ ಸೊಬಗಿನೊಳಿಮ್ಮಡಿ ।
ಸಾಸಿರಗದಿರಗೆ ತೇಜದೊಳಯ್ಮಡಿ ।
ಸಾಸಿರೆಸಳ ನಾಭಂಗೆ ವಿಚಾರಿಸೆ ಸಿರಿಯೊಳ್ ಪತ್ತುಮಡಿ ‖
ಸಾಸಿರ ಜಿಹ್ವೆಯುವಗೆ ಜ್ಞಾನದೊಳು ।
ಸಾಸಿರ ಮಡಿಯೊಂದೆನುತಿಳೆಯೆಲ್ಲಂ ।
ಸಾಸಿರ ಬಾಯಿಂದವೆ ಕೊಂಡಾಡುವುದಾಜಯಭೂವರನ ‖ ೧

ಪತ್ತುಂ ದೆಸೆಯೊಳು ತನ್ನ ಜಸಮನಾಜ್ಞೆ ।
ಪತ್ತಿಸಿ ನಡುನಾಡರಸರುಮಂ ಮಲೆ ।
ಪೊತ್ತಿನ ದುಷ್ಟನೃಪರುಮಂ ಬಲುಸಾಸಿಗತನದಿಂ ತನ್ನಾ ‖
ಪತ್ತನದೊಳ್ ಮನೆಗಟ್ಟಿಸಿ ಬಳಿಕಾ ।
ಪತ್ತಂ ರಿಪುತತಿಗಾಗಿಸಿ ಘನಸಂ ।
ಪತ್ತಿಯಿನಾಪ್ರಭುಕುಲಮಣಿದೀಪನರಸುಗೆಯ್ಯುತ್ತಿರ್ದಂ ‖ ೨

ಶೌರ್ಯದೊಳಾಸೂರ್ಯನನುನ್ನತಿಕೆಯು ।
ಧೈರ್ಯದೊಳಾಮಾಮೇರುವನುದ್ಧತ ।
ವೀರ್ಯದೊಳಾಯಲರಣಿಯೊಳಿಯನನಳುಕೆಯೊಳಾಅಬ್ಜಜನಂ ‖
ಚಾರ್ಯದೊಳಾಮನುಗಳನೊಪ್ಪುವ ಗಾಂ ।
ಭೀರ್ಯದೊಳಾಮುನ್ನೀರಂ ಮಿಸುಪಾ ।
ದಾರ್ಯದೊಳಾಸುರತರುವಂ ಗೆಲ್ದನಿಳಾಧಿಪಜಯರಾಯಂ ‖ ೩

ಮಾನಿತನವಮಣಿಮಯಮಕುಟಧರರ್ ।
ಭೂನುತರತಿವಿಕ್ರಮಶಾಲಿಗಳುಮ ।
ನೂನೈಶ್ವರ್ಯಯುತರ್ ಸದ್ವಂಶಜರೆಣ್ಭಾಸಿರನಾದ ‖

ಭೂನಾಥರ್ ತಮ್ಮ ತನೂಜೆಯರಂ ।
ಸಾನಂದದಿ ಕಲ್ಯಾಣವಿಧಿಯೊಳ್ ।
ತ್ತಾ ನರಸಾಯಕಜಯಭೂವರನಂ ಬಿಡದೋಲೈಸುವರು ॥ ೪

ನೀರನಿಧಿಯ ಸುತೆ ನವನೀಲಾಂಗನ ।
ಪೇರುರವಂ ಪೊರ್ದಲೆಯನ ಮೆಯ್ಯಂ ।
ಗೌರಿ ತೊಳಪ ತಾವರೆಯ ತನುಜನಾನನವಂ ನುಡಿವೆಣ್ಣು ॥
ಆರ್ಯೆಯದೆಯೆಡೆವಿಡದೊಲಿದಂದದಿ ।
ನಾರಾಜಾನ್ವಯತಿಲಕಂ ವಿಕ್ರಮ ।
ಕೌರವನಂ ಬಿಡುವಿಲ್ಲದೆ ಸುಭಗೆ ಸುಲೋಚನೆಯೊಲಿದಿಹಳು ॥ ೫

ಲಕ್ಷ್ಮಿ ಹರಿಯ ವಕ್ಷಮನೆಳವೆಯ ಮೃಗ ।
ಲಕ್ಷ್ಮಂ ಮೃಡಮಣಿಮಕುಟೋದಯಮಂ ।
ಲಕ್ಷ್ಮಿಣಿ ಲಲಿತಸರೋಜಾಕರಮಂ ಬಿಡದೆ ಸೊಗಯಿಪಂತೆ ॥
ಸೂಕ್ಷ್ಮಸುಭಗತರಮಧ್ಯೆ ಸುಲೋಚನೆ ।
ಪಕ್ಷ್ಮಂಬೊಯ್ಯದೆ ಸಮಯಮಗಲದೆ ಜ ।
ಯಕ್ಷ್ಮಾವನಿಪಾಲನ ಪೇರುರಮಂ ಪಿಡಿದು ಸುಖಿಸುತಿಹಳು ॥ ೬

ಈಯಂದದೊಳಗಿಳಾತಳಮೆಲ್ಲಂ ।
ಬಾಯೆತ್ತಿ ಕರಂ ಕೊಂಡಾಡುವವೊಲ್ ।
ಶ್ರೀಯುರದೊಳ್ ನಟಿಸುವವೊಲು ಮನ್ನೆಯರೆಲ್ಲಂ ಮಣಿವವೊಲು ॥
ಆಯತನೇತ್ರೆಯರಿಚ್ಛೈಸುವವೊಲು ।
ರಾಯಂ ಮಧ್ಯಮಭೂತಳಮಂ ಕ ।
ಟ್ಟಾಯತಿಯಿಂದಾಳ್ದಂ ಪಲಗಣ್ಣಂ ಸಗ್ಗಮನಾಳ್ವಂತೆ ॥ ೭

ಮತ್ತೆ ಕೆಲವು ಕಾಲಂ ರಾಜ್ಯಂಗೆ ।
ಯ್ಯುತ್ತಿರ್ದಾನೊಂದು ದಿನಂ ಭೂಪಾ ।
ಲೋತ್ತಂಸಂ ಪುರುಜಿನನಂ ನೋಡುವೆನೆಂಬೊಂದಭಿಲಾಷ ॥
ಚಿತ್ತಕ್ಕೊದವೆ ಸುಲೋಚನೆಗೂಡಿ ವಿ ।
ಯತ್ತಲಮಾರ್ಗದಿನೆಯ್ದುವೆನೆನುತಂ ।
ಪೊತ್ತವೊದಲ್ಬೆಸನಂಬೇಡಿದ ದೇವತೆಗಳನೆಯ್ದಿಸಿದಂ ॥ ೮

ಬರಿಸಿ ಬೞಿಕ ಬಾಂಬೊೞೆಯೊಳಗೆಯ್ದುವ ।
ವರವಿದ್ಯಾದೇವತೆಯಂ ಪಿರಿದಾ ।
ದರಮನದಱೊಳೆ ನುಡಿದು ಮತ್ತದಱಿಂ ಮಣಿಪುಷ್ಪಕವೊಂದಂ ॥
ವಿರಚಿಸಿ ಸತಿಪತಿಗಳು ತಾವಿರ್ವರ್ ।
ಹರಿಸದಿನೇಱಿ ವಿಯತ್ತಲಪಥದೊಳ್ ।
ವರಕೈಲಾಸಮಹಾಭೂಮಿಧರಕೊಲವಿಂದೆಯ್ದಿದರು ॥೯

ಹಿಂಗದೆ ಹಿಂದೆ ಹಲವು ಕಾಲಂ ತ ।
ನ್ನಂಗದ ಮೇಲೆ ಧರಿಸಿಕೊಂಡಿರ್ದಾ ।
ಹಂಗಂ ಮಗುಚುಕುವೆನೆನುತುಱೆ ಭಾವಿಸಿ ಬೞಿಕಾನೆಲನೆಂಬ ॥
ಅಂಗನೆ ಹೊಱೆ ಭಾಸುರತರಮಾದ ಭು ।
ಜಂಗಾಧೀಶ್ವರನೋ ಎನೆ ಕಡುಚೆ ।
ಲ್ವಿಂಗೆಡೆಯಾದತ್ತಾಕೈಲಾಸಂ ಸರ್ವೇಶನಿವಾಸಂ ॥೧೦

ವಸುಧಾವಿಷ್ಟರದುಪರಿಮದೊಳ್ ರಂ ।
ಜಿಸುವೆಳವೞ್ಕಿನ ಲಿಂಗಂಬೊಲು ಮೇ ।
ಣಾಸಮಾಯುಧನಂ ಗೆಲ್ದಭವಂ ನಿಱಿಸಿದ ಕುಲಿಶದ ಹರಲ ॥
ಮಿಸುಪ ಜಯಸ್ತಂಭಂಬೊಲು ಮೇಣಾ ।
ಗಸಮೆಂಬಾಗೊಡಾರಕೆ ನಿಱಿಸಿದ ।
ಪೊಸಬೆಳ್ಳಿಯ ಕಂಭಂಬೊಲು ತೊಳಗಿದುದಾಕೈಲಾಸಾದ್ರಿ ॥೧೧

ಅಲ್ಲಲ್ಲಿಗೆ ಮಿನುಗುವ ಮಾಣಿಕ್ಯದ ।
ಕಲ್ಲ ದರಿಗಳೆಸೆದುವು ಗೋತ್ರದ್ವಿಷ ।
ಪೊಲ್ಲಮುನಿಸಿನಿಂದಿಟ್ಟ ಕುಲಿಶದೇಱೋ ಎಂಬಂದದೊಳು ॥
ಅಲ್ಲಲ್ಲಿಗೆ ನುಣ್ಬೞ್ಕಿನಱೆಗಳೊಳು ।
ಜಲ್ಲಿಪ ನಿರ್ಝರಜಲಮಾವೇದನೆ ।
ಯಲ್ಲಿ ಸುರಿವ ಕಣ್ಣೀರೋ ಎನಲೊಪ್ಪಿದುದಾಶೈಲದೊಳು ॥೧೨

ಕುರುವಿಂದದ ಕಮ್ಮರಿ ಕುಲಿಶದ ಕಣಿ ।
ಹರಿನೀಲದ ಹಾಸಱೆ ಹಳದಿಯ ಬ ।
ಲ್ಪರಲೊಡ್ಡುಂಗಲ್ವೈಡೂರ್ಯದ ಹಬ್ಬುಗೆ ಗೋಮೇಧಿಕದ ॥

ದರಿ ಪಳಿಕಿನ ಜೂಳಿಕೆ ಪಚ್ಚೆಯ ಗವಿ ।
ವರರವಿಶಶಿಕಾನ್ತೋಪಲಮೇಖಲೆ ।
ಯಿರವಿಂದೆಸೆಯಿತ್ತಾಕೈಲಾಸಂ ಕಣ್ಬುಗೆಗೆ ವಿಲಾಸಂ ॥೧೩

ವರಶೋಭೆಯನೆಯ್ದಿದ ವೈಡೂರ್ಯದ ।
ಹರಲ ಬಿಲಂಗಳ ಮೇಲೆ ವಿರಾಜಿಸಿ ।
ಪೊರಬ್ದಿ ಪೊಳೆವ ನವಸೂತ್ರಂಗಳ ಹೊಳಹುಗಳಂ ಕಾಣುತವೆ ॥
ತರುಣೋರಗಿಗಳಿವೆನುತಾಯೆಡೆಯೊಳ್ ।
ಪರಿದು ಪುಗುವ ಮೊಱಿಮಾವುಗಳತಿಕಾ ।
ತರದಿಂದಾನಂದಿಸಲುಜ್ಜುಗಿಸುವುವಾಬಲ್ಮೆಟ್ಟದೊಳು ॥೧೪

ಸುರಸೀಮನ್ತಿನಿಯರ್ ವಿದ್ಯಾಧರ ।
ವರವನಿತೆಯರಾಶಾಂಗನೆಯರ್ ಕಿಂ ।
ಪುರುಷಪುರಂಧ್ರಿಯರುರಗಲಲನೆಯರ್ ತಾರಾತರುಣಿಯರು ॥
ಗರುಡಗಣಿಕೆಯರ್ ಗಾಂಧರ್ವತನೂ ।
ದರಿಯರ್ ಯಕ್ಷನಿತಂಬಿನಿಯರ್ ಕಿ ।
ನ್ನರಕಾಂತೆಯರಿರಲೆಸೆದುದು ತತ್ಕೈಲಾಸಮಹಾಶಿಖರಿ ॥೧೫

ತಾರಾಕುಸುಮಕುಜಾತದ ತೆಱದಿಂ ।
ರಾರಾಜಿಸುವಾಕೈಲಾಸಾದ್ರಿಯ ।
ನಾರಾಜೇಂದ್ರಶಿಖಾಮಣಿಯುಂ ನಿಜಸುದತಿ ಸುಲೋಚನೆಯುಂ ॥
ಮಾರುತಮಾರ್ಗದೊಳೆಯ್ದಿ ಪುದಿದ ನಾ ।
ನಾರತ್ನವಿರಾಜಿತಪುಷ್ಪಕದಿಂ ।
ದಾರೈದಿಱಿವ ಸಮಯದೊಳು ನಡುಬಾನೆಱಿದ ದಿತಿಸುತನು ॥೧೬

ಗಿರಿವರವೆಂಬ ರಜತಸ್ಥಯಷ್ಟಿಯ ಮೇ ।
ಗಿರಿಸಿ ಧಗದ್ಧಗಿಸುವ ಸೊಡರೆನಲಂ ।
ಬರಸತಿ ತದ್ಗಿರಿರಾಜಂಗೆತ್ತಿದ ಕನಕಚ್ಛತ್ರಮೆನೆ ॥
ಸುರಭುವನೋಲ್ಲಸಿತಮಹೀತಳದಿಂ ।
ಧರಿಸಿದ ಗಿರಿಯೆಂಬಾಶೇಷನ ತಲೆ ।
ವರಲೆನೆಲೆಸೆದುದು ನಡುವಗಲಿನ ಬಿಂಬಂ ತಿಗ್ಮಾಂಶುವಿನ ॥೧೭

ಪರಿರಂಜಿತವಾದುದು ಪಗಲೊಡೆಯನ |
ವರಮಂಡಲವಾಗಿರಿಯೆಂಬ ಮಹಾ |
ಪುರುಷನ ಮಾಣಿಕ್ಯದ ಮಕುಟಂಬೊಲು ತದ್ಗಿರಿ+ಪತಿಯೆಂಬ ||
ಸುರುಚಿರಪುಷ್ಪರಜೋಹರ್ಮ್ಯದ ಮೇ |
ಗಿರಿಸೆ ತಳತ್ತಳಿಸುವ ನವಚಾಮೀ |
ಕರರಂಜಿತಕಲಶಂಬೊಲು ನಡೆನೋಡುವ ರಸಿಕರ ಬಗೆಗೆ ||೧೮

ಎಲೆ ಜಯಧರಣೀಪಾಲಕ ನಿನ್ನ |
ಜ್ಜ್ವಲಿಸಿ ವಿರಾಜಿಪ ವಿಕ್ರಮರಸಮಂ |
ವಿಲಸತ್ಪಿಂಜರರತ್ನಕಲಶದೊಳ್ ತೀವಿ ಗಗನಲಕ್ಷ್ಮಿ ||
ತಲೆವಾಜ್ಞೆಯುಂ ಪೊತ್ತಿದೆ ನೋಡೆನುತಂ |
ಸಲೆ ಕೊಂಡಾಡಿದರಾಕೈಲಾಸಾ |
ಚಲದೊಳಗಾಡುವ ಕಿನ್ನರರಾನಡುವಗಲಿನ ಖರಕರನ ||೧೯

ಕರಮೆ ಸುಡುವ ಖರಕಿರಣಜ್ವಾಲೆಗೆ |
ಉರಿವುರಿಗದಿರ್ಗಲ್ಲಂ ಗುಂಡಕ್ರಿಯು |
ನಿರದಾಳಾಪಿಸಿ ಕರಗಿಸುತಂ ಶಶಿಕಾಂತೋಪಲಗಳನು ||
ತರಳಾಪಾಂಗದ ಚಂದ್ರಿಕೆಯಿಂದೊ |
ಜ್ಜರಿಸುತ ಮೆಯ್ವಿಡಿದುಬ್ಬೆಗಮಂ ಪರಿ |
ಹರಿಸಿ ಕೊಳುತಮಿರ್ಪರ್ ಗಂಧರ್ವಸತಿಯ-ರಾಶೈಲದೊಳು ||೨೦

ತಳಿರ್ದೊಂಗಲೊಳಗವಿದು ಬಾಯಂ ಬಿಡು |
ವೆಳವಕ್ಕಿಯುಂ ಱಟ್ಟೆಗಳಿಂ ಬೀಸುವ |
ಗಿಳಿಗಳ್ ಸುಂಡಿಲ ಸಿಕೆಯಿಂ ಸೀಕರಮಂ ಮಿಗೆ ಮುಂಚುಕದೊಳು ||
ಕಳಭದ ಮೇಲೆ ಕಱೆವ ಪಿಡಿಗಳ್ ಬ |
ಳ್ವಳಬಾಡುವ ಕಱುವಂ ತಮ್ಮಯ ಮೈ |
ನೆಳಲೊಳಡಂಗಿಪ ಹರಿಣಿಗಳೊಪ್ಪಿದುವಾಮಧ್ಯಾಹ್ನದೊಳು ||೨೧

ಆಮಧ್ಯಾಹ್ನದೊಳುರಿವುರಿಬಿಸಿಲಿಂ |
ಭೂಮೀಶಂ ಬಾಡಿದ ತಳಿರಂದದಿ |
ಕೋಮಲತನು ಬಂಬಲು ಬಾಡುವ ಸುಕುಮಾರಿ ಸುಲೋಚನೆಯು ||

---

+ ಮೊಂದೆಂಬಾ. ಕ||

ತಾಮರಸೋಪಮವದನಂಗಾಣುತ ।
ಸಾಮಂಮಾಡದೆ ತದ್ಗಿರಿತಟದೊಳ್ ।
ಭೀಮಾರಣ್ಯಮದೊಂದಿರೆ ಕಂಡದಱೊಳಗಡೆಗೆಯ್ದಿದನು ॥ ೨೨

ಎರಲೆಯು ಬೀಡೆಕ್ಕಲನ ಕೊಟುರಂ ।
ಕರಡಿಯು ಹಟ್ಟಿ ಕಡವಯೂರ್ ಚಮರಿಯು ।
ಹುರಮೊಂಟಡಿಯು ಹೊಱಲ್ ಕಾಟಿಯು ಕೊಟ್ಟಂ ಖಱ್ಗಿಯು ಪಳ್ಳಿ ॥
ಅರಸುಮಿಗದ ಪಟ್ಟಣಮಾನೆಯು ಮಟ ।
ಮೊರಲುಣಿಗಳ ನೆಲೆಮನೆಯೆನಲತಿಬಂ ।
ಧುರಮಾದುದು ಭೀಮಾರಣ್ಯಮಗಣ್ಯಮೃಗಾಳಿಶರಣ್ಯಂ ॥ ೨೩

ಸುಜ್ಜಲರಸಿಂಗಡೆಯುದಿಸಂಪಗೆ ।
ಬೆಜ್ಜಲು ಬೆಳೆವ ಬಿದಿರ್ಕೇವರಿಟಣ ।
ಸಜ್ಜರನಕರಂಜಿಗೆಯರನೇಱಲಳಲೆಮುಱುತ್ತಗಮುಱುತ್ತು ॥
ಕಜ್ಜುರಕಕ್ಕೆ ಕಡವಮೊಳಗುನವಿ ।
ಲ್ವಜ್ಜೆಗರಿಕೆಸಸಿನೇಸಱುಮೆಳಗಿಗೆ ।
ವೆಜ್ಜಗೊಡದೆ ಬೆಳೆದಿರಲಾಬಿಂಜಂ ಭೀಕರಗತರಮಾಯ್ತು ॥ ೨೪

ಮಱ್ಪೊಕ್ಕ ಮಹಾತಮಮಂ ಕೊಟ್ಟೊಡೆ ।
ಕೊಜತೆಯೆನುತಮದನಲೆಯುಟ್ಟುವ ಪಗ ।
ಲೆಱೆಯನ ಪಲಗದಿರ್ಗಳ ಕೋರಲಂ ಪಿಡಿದೋವದೆ ತಾಂ ತಗುಳ್ವ ॥
ತೆಜನೆನೆ ತಾರಾಪಥಮಂಡಲಮಂ ।
ನೆಱೆ ಪಂದರಿಸಿ ಬೆಳೆದ ನವತರುಗಳ ।
ತುಱುಗಿದ ತೊಜಲ್ಗೊಂಬಿನ ಕೆಲವು ಕವಲ್ಗೊಂಬೊಪ್ಪಿದುವು ॥ ೨೫

ಪೇರಿಂ ಮುನ್ನಮೆ ಪಾನಂಮಾಡಿದ ।
ನೀರಂ ತಮ್ಮೊಡಲೊಳ್ ತೀವಿದ ಹಸಿ ।
ತೀರದೆ ಬಾಕುಳತನದಿಂ ಬಾನ ಪೊಱಯು ಬಂಧುರಮಪ್ಪ ॥
ವಾರಿಯನೋವದೆ ತಮ್ಮಯ ಕೊನೆಯಿಂ ।
ಪೂರಿಸಿಯುಣಬೇಕೆನುತ ಪರಿವವೊಲ್ ।
ತಾರಾಪಥಮಂ ತವೆ ಚುಂಬಿಸಿದುವು ತದ್ವನತರುವಿತತಿ ॥ ೨೬

O.28

ಎನ್ನಂ ದಹಿಸಿ ದಳಿಸುವ ದವಾಗ್ನಿಗೆ |
ಯುನ್ನತಿಕೆಯ ಸತ್ತ್ವಮನಿರದೊದವಿಪ |
ಭಿನ್ನತೆಯಿಲ್ಲದ ನಂಟತನಮನದಱೊಳ್ ಮಾಡುವ ಗಾಳಿ ||
ಎನ್ನೊಳೆ ಪುಗೆ ಕೇಡೆನಗಿರದಪ್ಪುದು |
ನನ್ನಿಯೆನುತ ಬಗೆದಂತದನಿನಿಸುಂ |
ತನ್ನೊಳು ಪುಗಲೀಯದೆ ತದ್ವಿಪಿನಂ ಕಿಕ್ಕಿಱಿಗೊಂಡಿಹುದು ||೨೭

ವನದೋಷಧಿಗೊಡೆಯಂ ಕುಮುದೇಶಂ |
ವನನಿಧಿಯೊಳಗಸ್ತಮಿಸುತ ತನ್ನಯ |
ತನುವಿಡಿದಂಕದ ವಸ್ತುವನಾತರುತತಿಯೊಳು ಕೈಯೆಡೆಯಂ ||
ಮನದಕ್ಕಱ ಮಿಗೆ ಕೊಟ್ಟಂ ತಾನೆಂ |
ದೆನೆ ವಲ್ಮೀಕಲಸನ್ಮೃದುವಟುಶಶ |
ವಿನುತಾಮೃತಫಲರುಚಿರಚ್ಛಾಯಾಶೈತ್ಯಮೆಸೆದುವಲ್ಲಿ ||೨೮

ಕರಡಿ ಕಡವೆ ಕಾಡೆಮ್ಮೆ ಸೊಣಗ ಮೊಲ |
ಮರೆ ಮೂಗುರಿ ಕೂರಂಗಿಯಳಿಲು ಬೆ |
ಕ್ಕರಲೆ ಕೊಜಿವ ಮುಸು ಸಾರಗ ಸೀರುಡುವೆಕ್ಕಲಕಪಿ ಪಂದಿ ||
ನರಿ ಹುಲಿಯುಡು ತರುವಂಗಿ ಚಮರಿ ಮಿಗ |
ಮೆರಲುಣಿಯಾನೆಯರಸುಮಿಗಮೆಂಟಡಿ |
ಯೆರಡುತಲೆಯಪಕ್ಕಿಯಿನೊಪ್ಪಿದುದಾದಾರುಣಮಪ್ಪಡವಿ ||೨೯

ನವಶಾಖೆಯ ಕವಲೆಸೆವ ರವಣೆಕೋಲ್ |
ತವೆ ಸೊಗಯಿಪ ಪಲ್ಲವನಿಕುರುಂಬಂ |
ಕವಳಿಗೆಗೆದರ್ದಲಸತ್ಪುಸ್ತಕಮೋದುವ ಮಱಿಗಿಳಿಯಳಿಯ ||
ನಿವಹಂ ವಟುಸಂತತಿಯಾಗಲ್ಕೊಂ |
ದವನಿಜದುಪರಿಮದೊಳಗೆ ಕುಳಿತ ಮುಸು |
ವಿವಿಧನಿಗಮಮೋದಿಪ ಗಡ್ಡದ ದೀಕ್ಷಿತನೆಂಬಂತಾಯ್ತು ||೩೦

ಧರಣಿತಳಮನೊಂದೆಕ್ಕಲನುಬ್ಬಿವ |
ಸರದೊಳಿದಿರ ಕಲ್ಲಂ ತಾಗಲ್ಕಾ |
ಭರಕೆ ಮುಱಿದ ದಾಡೆಯಿನರುಣಾಂಬು ಪೊರೆದು ಬೀೞ್ವೆಳಮುತ್ತು ||

ಪಿರಿದುಂ ರಂಜಿಸಿದುವು ಕಾಡೊಡೆಯನ |
ವರವಿಕ್ರಮದ ಬೆಳಸನುದ್ಯೋಗದೊ |
ಳಿರದೆ ಬೆಳೆವೆನೆನುತಂ ತಾಂ ಬಿತ್ತುವ ಬೀಜದ ಭಂಗಿಯೆನೆ ||೩೧

ಸಿಂಗಂ ಪೆಱುತಿರಲಾಶಿಶುವಂ ತಾ |
ಯಂಗದಿ ತಲೆ ಹೊಱಟುದಯಿಪ ಸಮಯಕೆ |
ಮುಂಗಡೆಯೊಂದು ಮತಂಗದ ಮಱಿಯಿರೆ ಕಾಣುತ ಕಡುಮುಳಿದು ||
ಜಂಗಿಸಿಯಾಪ್ರೌಢಲಿಂದದನವಱಿತು |
ತುಂಗಪರಾಕ್ರಮಿಗಳ್ ಕಿಱಿದಾದೊಡೆ |
ಪಿಂಗುವರೇ ತಮ್ಮಯ ಕೃತ್ಯವನವನೀಮಂಡಲದೊಳಗೆ ||೩೨

ಎರೆಯಂ ನುಂಗುವ ಫಣಿಯಾಫಣಿಯಂ |
ಭರಿಕೈಯಿಂದೆ ಪಿಡಿವ ಮದಕರಿಯಾ |
ಕರಿಯಂ ಕೊಲ್ವ ಮೃಗೇಂದ್ರಂ ಮತ್ತಾಮೃಗಪತಿಯಂ ಸೀಳ್ವ ||
ಶರಭಂ ಶರಭನನೆತ್ತುವ ಭೀಕರ |
ವರಭೇರುಂಡಖಗಂ ತದ್ವಿಪಿನದೊ |
ಳಿರೆ ಕಂಡಚ್ಚರಿವಟ್ಟಂ ವಿಕ್ರಮಕೌರವಭೂಪಾಲಂ ||೩೩

ಭರದಿಂ ಬಿಸುನೆತ್ತರು ಸುರಿವಾನನ |
ಪುರಿಯನುಗುೞ್ವೊಲೆ ಮೊಗೆನಲಳ್ಳೆಯ |
ನಿರದೆ ಕರಂ ಹುಯ್ಯುತ ಕುಕ್ಕುಱಿಸಿದ ಸಲಗಂ ತಿದಿಯೆನಲು ||
ಉರವಣೆಯಿಂ ಮೊದಲೆಚ್ಚ ಕೆಡಪಿಯೊಡ |
ವೆಱದಾ ಬಾಲವಿಡಿದು ಬಾಗಿದ ವನ |
ಚರನೊಪ್ಪಿದನದನೊರ್ಕೈಯಿಂದೊತ್ತುವ ಕಮ್ಮಱನಂತೆ ||೩೪

ಮುಂದೊಂದೆಡೆಯೊಳ್ ಮಂಡೈಸಿ ಕರಂ |
ನಿಂದು ತಮುತ್ತಿರ್ವರುಮಂ ನೋೞ್ಪ ಪು |
ಳಿಂದಿಯರಂ ನೋಡುತ ನೃಪನಿರುಳ್ವೆಣ್ಗಳೊ ಪೊಸಕತ್ತುರಿಯಾ ||
ಸುಂದರಿಯರೊ ನೀಲದ ನೀಱೆಯರೋ |
ಇಂದೀವರಕುಸುಮದ ಕೋಮಲೆಯರೊ |
ಚಂದದ ಹರಿಚಂದನದಬಲೆಯರೊ ಎನುತ ಕೊಂಡಾಡಿದನು ||೩೫

ತಳರಡಿಗಳ ತಳತಳಿಪಲರ್ಗಣ್ಗಳ |
ಪೊಳೆವೆಳದುಂಬಿಗುರುಳ್ಗಳ ಸೊಗಯಿಪ |
ಸೆಳೆನಡುವಿನ ಸುರಭಿಶ್ವಾಸದ ಸುರುಚಿರಶಾಖೋಪಮದ ||
ನಳಿತೋಳ್ಗಳ ನವಕಜ್ಜಲವರ್ಣದ |
ಲಳಿತಾಂಗದ ಕಾಞ್ಚೀಡಿತಿಯರು ಕ |
ಣ್ಗೊಳಿಸಿದರಾಸಲ್ಲಲಿತತಮಾಲವನದ ಲಕ್ಷ್ಮಿಯತೆಱದಿ || ೩೬

ಕಾರಿರುಳ್ವಣ್ಣದ ಮೆಯ್ ಕಾಳಿಂದಿಯು |
ನೀರಂ ತೆಗಳ್ವ ತನುಚ್ಛವಿ ನವಕ |
ಸ್ತೂರಿಯ ಪರಿಮಳಮಂ ಪೊಱಮಡಿಸುವ ತನುತನುಸೌರಭ್ಯಂ ||
ಮಾರಮದೇಭಮನೇಳಿಪ ಸುಗತಿ ಮ |
ಯೂರಲಸತ್ಪಿಂಛದ ಸುಭಗತೆಯಂ |
ದೂರೀಕರಿಪ ಕಬರಿ ಕಣ್ಗೊಪ್ಪಿದುವಾಪೇಡಿತಿಯರಿಗೆ || ೩೭

ಕಾಡ ಕುಸುಮಮಂಜರಿಯಂ ಕಚದೊಳ್ |
ಸೂಡಿ ಮಿಗದ ಗೋರೋಚನದಣ್ಪಂ |
ತೀಡಿ ತನುವಿನೊಳು ಬಿದಿರ ಬಸಿರ ಗಜಕುಂಭದ ಸೂಕರನ ||
ದಾಡೆಯ ಮಣಿಹಾರಮನುರುಕುಚದೊಳ್ |
ಜೋಡಿಸಿಯಸುಗೆದಿರ ದುಪ್ಪಟಿಯಂ |
ಪಾಡಱಿದುಟ್ಟು ಪುಳಿಂದಪುರಂಧ್ರಿಯರೊಪ್ಪವಡೆದರಲ್ಲಿ || ೩೮

ನಿಟ್ಟೆಸಳ್ಗಣ್ಣ ನಿಶಾಟನಿತಂಬಿನಿ |
ಯಿಟ್ಟಣಿಸಿದ ನೆಲೆವೊಲೆಗಳ ಮಧ್ಯದೊ |
ಳಿಟ್ಟುರಗನ ಕೊಟ್ಟನ ಮಣಿಹಾರಂ §ಕಣ್ಗೆ ವಿಶಂಕೆಯನು ||
ಪುಟ್ಟಿಸಿದುದು ಮನಸಿಜಮಾತಂಗದ |
ಬಟ್ಟ ಜವಳಿದಲೆಯೊಳಗಲರುಣಿಯಳ |
ವಟ್ಟ ನವೇರುಕುಸುಮಮಾಲೆಯನೊಸೆದಿಕಿ ದ ಮಾಙ್ಕೊಯೊಳು ||

ಮತ್ತೊರ್ವಳ್ ಮಿಗಗಣ್ಗಳ ಪೇಡಿತಿ |
ಸುತ್ತಿದಡೆಯ ಪೊಸಪೀಲಿಯ ಕಣ್ಗಳ |
ವೊತ್ತಂ ಕಣ್ಗೆ ವಿರಾಜಿಸಿದುದು ತಜ್ಜನತಾನಾಯಕನ ||

---

§ ಮನಕೆ. ಕ||

ಚಿತ್ತೋದ್ಭವಗೆಣೆಯೆನಿಸುವ ಚೆಲ್ವಿಕೆ |
ಯುತ್ತಮಮಂ ವನಸತಿ ನಡೆ ನೋಡಲೆ |
ನುತ್ತ ಪಲವು ಕಣ್ಣಿಂ ತಾನಂಗೀಕರಿಸಿದ ಮಾಱ್ಕೆಯೊಳು ||೪೦

ಇಂತೊಪ್ಪುವ $ಹಳುವಂ ನಡೆನೋಡುವ |
ಕಂತುನಿಭಂ ತನ್ನೊಡನೆಯ್ದುವ ನಿಜ |
ಕಾಂತೆ ಸುಲೋಚನೆ ಸಹಿತಂ ಪಿರಿದನುರಾಗದಿನೆಯ್ತರುತ ||
ಮುಂತೊಂದೆಡೆಯೊಳ್ ಮುಗುಳ್ವಿಲ್ಲಂ ಕಡು |
ಸಂತಸದಿಂ ಕ್ರೀಡಿಪ ನೆಲೆಯೆನಿಸಿ ಕ |
ರಂ ತೊಳಗುವ ಸೌಮನಸಾಖ್ಯದ ನಂದನವೊಂದಿರೆ ಕಂಡಂ ||೪೧

ಅರಗಿಳಿ ಬಾಳಾಂಕಿಗಳೋಡುವ ಮಟ |
ವರಲಂಬುಗಳಂ ಮಾಡುವ ಕಮ್ಮಟ |
ಮರವಿಂದಾಸ್ತ್ರದ ಮೊನೆಗಿಕ್ಕುವ ಬಾಸಟದ ಪೆಳೆಯುಕೂಟ ||
ವಿರಹಿವಿತಾನದ ಚಿತ್ತಕೆ ಸಂಕಟ |
ಮುರುಯೋಗಿಗಳ ವಿರಕ್ತಿಗೆ ಪಲ್ಲಟ |
ದಿರವು ಸುರಭಿಮಾಯುವ ಕಾಲಾಟವುಮೆನಿಸಿದುದಾತೋಟ ||೪೨

ಬಾೞೆ ಬಕುಳ ಬಾವನ್ನ ಪೆಳೆವ ಸಿರಿ |
ದಾೞಿ ಪಲಸು ಪಡ್ಡಿಯರನೇಱಿಲ್ |
ನೇಱಲ್ ನೆಲ್ಲಿಯುಸುಗೆಯೊಳನೀರಿಂಮಾವಿಂದಿರಹೊನ್ನೆ ||
ಈಳೆಯುಡಕೆ ಕಜ್ಜೂರ ಮಾದಲ ಕಿ |
ತ್ತೀಳೆಯುಗಿಲ್ ನಾರಗ ಸಂಪಗೆ ರಸ |
ದಾೞಿ ಸಿರಿಸ ದಾೞಿಂಬದ ಸಾಲ್ಗಳ್ ಸಲೆ ಸೊಗಸಿದುವಲ್ಲಿ ||೪೩

ಪೂಗಮನೇಱಿದ ನಾಗಲತಿಕೆ ಪು |
ನ್ನಾಗಮನಡರಿದ ಮಾಲತಿ ಮಾವಂ |
ರಾಗದಿನೇಱಿದ ಮಲ್ಲಿಗೆಯುಸುಗೆಯನಮರಿದ ವಾಸಂತಿ ||
ಬಾಗೆಯನೊತ್ತಿ ಹಿಡಿದ ಕುಂದಂ ಕೃ |
ಷ್ಣಾಗರುವಿಡಿದುಡುವಳ್ಳಿಗಳಿಂದಾ |
ಪೂಗಣೆಯನ ಜಯನಾಲಯದುಮೆನೆ ವನವತಿಪಾವನಮಾಯ್ತು ||೪೪

---

$. ಕಾಡಂ. ಕ||

ಪೂ ತುಱುಗಿದ ಪುನ್ನಾಗಂ ತಳಿರಿಂ ।
ಜೋತೊಱಗಿದ ತರುಣಾಶೋಕಂ ಲತೆ ।
ಯೋತೊಡರಿದ ಮಂದಾರಂ ಪಾವು ಪರಾಗಮನಿರದುಣ್ಬ ॥
¶ಕೇತಕಮಮೃತಫಲಂ ತೀವಿದ ನವ ।
ಚೂತಂ ಮಗಮಗಿಸುವ ಚಂದನಭೂ ।
ಜಾತಮಿರಲ್ಕೊಪ್ಪಿತು ವನಮಂಗಭವನ ನಲ್ಮೆಯ ಭವನಂ ॥೪೫

ಎಳದಳಿರ್ದೊಂಗಲುಳಿಯ ಮಱಿಯೊಳ್ ನಿಂ ।
ದಳಿತತಿಯೆಂಬ ಬಿಯದರಲ್ಲಿಗೆ ಕ ।
ಣ್ಗೊಳಿಪಾನೆಗಳ ಮಿಸುಪ ಮಿಗಗಳ ರಂಜಿಸುವ್ರೊಳ್ವಕ್ಕುಗಳ ॥
ವಿಳಸನ್ಮದದೊಳೊಗೆದ ನೂತನಪರಿ ।
ಮಳಜಾತಿಯನಾಸುಗ್ಗಿಯನಂದನ ।
ದೊಳಗೊಯ್ಯನೆ ಸೋವಿದನೆಲರೆಂಬ ವನೇಚರನತಿಮುದದಿ ॥೪೬

ಈವನದಿಮ್ಮಾವಿನ ತಣ್ಣೆೞಲೆಂ ।
ಬಾಪ್ಪೋಲಗಶಾಲೆಯೊಳರಲಂಬಂ ।
ಮೂವಳಸಿದ ಗಿಳಿಯುಳಿ ಬಾಳಾಂಕಿಯ ಮಂತಣದೊಳಗಹನೆ ॥
ಈವೇಳೆಗೆಯವಸರಮಿಲ್ಲಾತಗೆ ।
ನೀವಿದಱಿಂದೆ ಪುಗಲ್ಪುಗಲೆಂದಿರ ।
ದೋವದುಲಿವ ಪಡಿಯುಜವಕ್ಕಿಯ ನುಡಿಗೇಳ್ ನಡೆದನರಸಂ ॥೪೭

ಆಸುಮನಸವೆಂಬ ಮಹಾವನದ ವಿ ।
ಲಾಸಮನೀಕ್ಷಿಸುತಂ ತಾಮಿರ್ವರ್ ।
ಪೂಸರಲನ ಪುಗುವನೆಯಂತೆ ಲತಾಲಯಮೊಂದಿರೆ ಕಂಡು ॥
ಭಾಸಿಪ ಬಹುಕುಸುಮದಿನೊಪ್ಪುವ ತಳಿ ।
ರ್ವಾಸಿನ ಮೇಲಾನಡುವೊಱ್ತಿನ ಬಿಸಿ ।
ಲೋಸರಿಸುವ ಪರಿಯಂತಂ ಪ್ರಿಯತರದಿಂ ಮೆಯ್ಯಿಕ್ಕಿದರು ॥೪೮

ಪರಿರಂಜಿತಪದ್ಮಾಧೀಶಂ ದು ।
ರ್ಧರತರಧರಣೀಮಂಡಲಧಾರಣ ।
ನುರುತರಬಲಯುತನತಿವಿಭ್ರಾಜಿತಭೋಗ್ಯೈಕಾಧಾರಂ ॥

---

¶. ಕೇತಕಿ ಮಧುರ. ಖ'।

ಪಿರಿದುಂ ಪವನಾಚಾರಂ ಘನಬಂ ।
ಧುರಮಣಿಮಸ್ತಕನುರಗೇಂದ್ರನವೊಲ್ ।
ಧರೆಯೊಳಗತಿವಿಭ್ರಾಜಿಸಿದಂ ಸತ್ಪ್ರಭುಕುಲಮಣಿದೀಪಂ ॥೪೯

ಇದು ಸುರನರಫಣಿಪರಿವೃಢವಿನಮಿತ ।
ವಿದಿತವಿನಯಗುಣಗಣಯುತ ಜಿನಪತಿ ।
ಪದಸರಸಿಜಮದಮಧುಕರನತಿಚತುರಕಲಾಪರಿಪೂರ್ಣಂ ॥
ಸದಮಲಚರಿತಂ ಪ್ರಭುರಾಜಂ ಸ ।
ಮ್ಮದದಿಂ ರಚಿಸಿದ ಜಯನೃಪಕಾವ್ಯದೊ ।
ಳೊದವಿ ಮನೋಹರಮಾದುದು ಪದಿನೈದನೆಯ ಮಿಸುಪ ಸಂಧಿ ॥

ಇಂತು ಹದಿನೈದನೆಯ ಸಂಧಿ ಮುಗಿದುದು.

# ಷೋಡಶಾಶ್ವಾಸಂ.

—— ೦ ——

ಸೂಚನೆ ॥ ಭರದಿಂ ಖಚರಿಯೊಸಗಿದುಪಸರ್ಗಕೆ ।
ಯಿರದಂಜದೆ ತನುಜಗೆ ರಾಜ್ಯವನಿ ।
ತ್ತುರುದೀಕ್ಷೆಯನಾಂತಮೃತಪದಂಬಡೆದಂ ಜಯಭೂಪರನು॥

ಮುದದಿಂ ಮುದ್ದುಮೊಗದ ಮುಗ್ಧಾಕ್ಷಿಯು ।
ಮೃದುತನುವೆಂಬೊಳ್ವಿಸಿನೊಳೊಯ್ಯನೆ ।
ಪುದಿದ ಮಲಯರುಹಚರ್ಚೆಯು ಮಿಸುಗುವ ಪಚ್ಚಡಿಕೆಯು ಮೇಲೆ ॥
ಪೊದೆದಾಕೆಯು ನಳಿತೋಳ್ವೆಚ್ಚಡವಂ ।
ಚದುರಿಂ †ಪೊದೆದನುಗೆಯ್ದು ಸುಸಿಲ ಸೌ ।
ಖ್ಯದ ತಿಳಿನಿದ್ದೆಯೊಳಿರ್ದಂ ವಿಕ್ರಮಕೌರವಭೂವರನು ॥೧

ಆನಡುವೊತ್ತಿನ ಬಿಸಿಲಿಬ್ಬವನ್ನಂ ।
ಮಾನವಪತಿ ಮೆಯ್ಮಱೆದಿರ್ದನಿಜ ।
ಮಾನಿನಿಯೊಬ್ಬಳುದಂತೆೞ್ದಲತೆವನೆಯಂ ಪೊಱಮಟ್ಟು ॥
ಸಾನಂದದಿ ಸುರತರುಗಳನಡರ್ದ ನ ।
ವೀನಾಮರಲತಿಕಾಸಂದೋಹದ ।
ನೂನಕುಸುಮಮಂಜರಿಯಂ ತಿಱಿತಿಱಿದಾಡುವ ಸಮಯದೊಳು ॥೨

ನಂದನವನಿತೆ ನರೇಂದ್ರಲಲಾಮನ ।
ದೊಂದು ಮನೋಹರಮುಮನೀಕ್ಷಿಸಿ ಸೋ ।
ಲಂದಳೆದೆಯ್ದಿದಳೋ ಎನಲೊರ್ವಳ್ ಚಂಪಕನಾಸಿಕದ ॥
ಕುಂದಣವಾೞ್ದೊಡೆಯು ಕುಮುದಾಕ್ಷಿಯು ।
ಕೆಂದಳಿರ್ವಜ್ಜೆಯು ಲಲಿತಲತಾಂಗದ ।
ಕುಂದರದದ ಬೆಳುಗಾಯ್ಮೊಲೆಯಬಲೆ ವಿಲಾಸದಿನೆಯ್ದಿದಳು ॥೩

ತಳಿರಡಿಗಳ ತಾರಾಳಿನಖಂಗಳ ।
ಪೊಳೆವೆಳವಾೞ್ದೊಡೆಯ ಮುಱಿಲೊಟ್ಟಿಲ ।
ನಿಱಿಕೆಯ್ವ ನಿತಂಬದ ಸಂಶಯಮಧ್ಯದ ಕಲಶಸ್ತನದ ॥

---

†. ದೊಸೆ. ಖ॥

ತೊಳಪ ಶಶಾಂಕಮುಖದ ಸರಸೀರುಹ |
ದಳನೇತ್ರದ ಕಿಱುದುಂಬಿಗುರುಳ ಹೊಂ |
ಜೆಳೆಮುಬ್ಬೆಪ್ಪಳಗಂಪಿನ ಗರುವೆ ವಿಲಾಸದಿನೆಯ್ದಿದಳು ||೪

ಬಂದಾಬಡವಿಡಿನಡುವಿನ ಭಾಮಿನಿ |
ನಿಂದು ಬೆಡಂಗಿನೊಳಿರೆ ಕಂಡಭಿನವ |
ಕಂದರ್ಪಂ ಜಯಭೂಪತಿ ತಾನಿಂತೆಂದು ನಿರೂಪಿಸಿದಂ ||
ಇಂದುವದನೆ ನೀನಾರಾವರಸಿನ |
ನಂದನೆಯೀಕಡೆಗೇಕಾರಣಮೆ |
ಯ್ತಂದೆಯೆನಲ್ ಬಂದುಗೆವಾಯುಂ ತೆಱದಿಂತೆಂದಾಡಿದಳು ||೫

ಧರಣಿಪ ಚಿತ್ತ್ರಸೇ ನೀ ಬಿಜ್ಜೋ |
ದರನಾಡಿನ ಮಧ್ಯದೊಳೆಸೆವ ಮನೋ |
ಹರವಿಷಯದ ಶಕ್ತಿಪುರದಧಿರಾಜಂ ಪಿಂಗಳಗಾಂಧಾರಂ ||
ನರನಾಯಕನೆಸೆವಾತನ ನಿಜಸತಿ |
ತರಳವಿಲೋಚನೆಯೆಂಬಂ ನಾಂ ನಿ |
ನ್ನುರುತರ ಸೌಂದರ್ಯಕೆ ಸೋಲ್ತೀಯೆಡೆಗೊಲವಿಂದೆಯ್ದಿದೆನು ||೬

ನಿನ್ನ ವಿಲಾಸಮುಮಂ ನೋಡದೆ ನಾಂ |
¶ಚೆನ್ನಿಗ ತಡವೊಂದಿನಿಸಂ ಮಾಡದೆ |
ಮನ್ನಿಸಿ ಕೂಡಿ ಹರಣಮಂ ಕಾವುದು ಲೇಸಂತಲ್ಲದೊಡೆ ||
ಎನ್ನನೆಸಳಗಣೆಯುಗ್ಗಿಯುಳಱಿಪುದು |
ಕೆನ್ನಮೆನುತ ನುಡಿದಾಕುಲಬೆಗೆಯು |
ತ್ಯುನ್ನತಗುಣಿ ವಿಕ್ರಮುಕರವನೀತೆಜದಿಂದಾಡಿದನು ||೭

ನುಡಿಯದಿರೆಲೆ ಬಂಧಕಿ ನೀನೊರ್ವಂ |
ಮುಡಿದ ಮುಡಿಯ ಬಾಸಿಗವಮಾಮೆಯ್ಯೊಳ್ |
ತೊಡೆದನುಲೇಪನವುಟ್ಟು ಕಳೆದ ದುಪ್ಪಟಯೊಱಗಿದ ಹಕ್ಕೆ ||
ಮಡಗೂಬಿಂತದಱಿಂ ನಿನ್ನೊಳಗಾ |
ನೊಡವೆರೆವುದು ಮತವೇ ಎಂದವನೊಳ್ |
ಪಡಿಮಾತಂ ನುಡಿದಳ್ ಕೆಂಬಾಯುಂ ತೆಱದವಳಿಂತೆಂದು ||೮

$ ದಾ. ಕ|| ¶ ಚೆನ್ನಿಗ. ಕ||

ಪರರೆನಸುಂ ಭೋಗಿಸಿದುವಭೋಗ್ಯಂ ।
ಕರಮೆ ಕನಿಷ್ಟಮೆನುತ್ತಾಡಿದೆಯೆಲೆ ।
ಯುರಸಾ ಪರಭೂಪರ್ ಭೋಗಿಸಿದುತ್ತಮಮಣಿಭೂಷಣಮುಂ ॥
ವರವಾಹನತತಿಯುಂ ನೆಲವೆಣ್ಣುಂ ।
ಸಿರಿಯುಂ ಭೋಗ್ಯ ಗಡಾಸ್ತ್ರೀರತ್ನಂ ।
ಪಿರಿದುಂ ಕಷ್ಟಮೆಎನುತೆ ನುಡಿದಳೊಳಗವನಿಂತೆಂದುಸಿರ್ದಂ ॥೯

ಪರಸುದತಿಯರೆನ್ನೊಡವುಟ್ಟಿದರೊಳ್ ।
ಸರಿ ಮುಂ ಪೆತ್ತೀವಿದ ನಿಜಜನನಿಗೆ ।
ಸರಿ ಮೊದಲುಪದೇಶಂಮಾಡಿದ ಗುರುವಿನ ನಿಜವಲ್ಲಭೆಗೆ ॥
ಸರಿ ತಾಂ ಪೆತ್ತಣುಗಿನ ಪೆಣ್ಗೂಸಿಗೆ ।
ಸರಿಯಂತದಱಿಂದೀಕೃತ್ಯಮನಾ ।
ಚರಿಸುವುದನುಚಿತವೆಂದವಗಾಬಂಧಕಿಯಿಂತಾಡಿದಳು ॥೧೦

ಹರಿಯು ಹಲವು ಗೋಪನಿತಂಬಿನಿಯರ್ ।
ಪರವನಿತೆಯರಲ್ಲವೆ ನಾಲ್ಮೊಗದನ ।
ಗರಿಣಿಯುವಗೆ ಮಗಳಲ್ಲವೆ ಸಗ್ಗದ ಭಾಮಿನಿಯರ್ ತಮ್ಮಾ ॥
ಪುರುಷರಣಿದ ಬಱಿಕನ್ಯಗೊಲಿಯರೆ ।
ಕುರುಭೂಮಿಯು ಮಿಥುನಂ ತಾಮೇಕೋ ।
ದರರಲ್ಲನೆಯೆಂದಾಡಿದ ಕುಲಟೆಗೆ ಕುರುಪತಿಯಿಂತೆಂದಂ ॥೧೧

ಪರಸತಿಯರ ಕೂಟಂ ನರಕಾವನಿ ।
ಗಿರದೆಯ್ದಿಪುದದಱಿಂ ನಿನ್ನೊಳಗೊಡ ।
ವೆರೆವುದು ಮತವಲ್ಲೆನುತ್ತತಿನಿಷ್ಠುರವಚನಮುಮಂ ನುಡಿದಾ ॥
ಅರಸಂಗಿಂತೆಂದಳ್ ಜೀವದಯಾ ।
ಪರಧರ್ಮಂ ನಿನ್ನದು ನೀನೆನ್ನಂ ।
ಪರಿಹರಿಸಲ್ಕಾನಱಿದಾಪಾಪಂ ನಿನ್ನನೆ ತಟ್ಟುವುದು ॥೧೨

ಎಂದು ನುಡಿದ ನಳಿನವಿಲೋಚನೆಗಾ ।
ಯಿಂದುಕುಲದ ರಾಯಂ ಜಯ†ಭೂವರ ।
ನೆಂದನೆಲೇ ಪಾತಕಿ ನಿನ್ನೊಳು ಮಱುಮಾತಂ ನಾನಾಡೆ ॥

---

†. ಧರಣೀಚಂದ್ರನುಸಿರಿದನೆಲೆ. ಖ||

ಮುಂದಣ ಗತಿ ಕಿಡುವುದು ನೀಂ ಪೋಗೆನೆ ।
ಮಂದೇತರಕೋಪದಿನುಪಸರ್ಗಮು ।
ನೊಂದಿನಿಸುಂ ತಡಮಾಡದೆ ವಿಚ್ಛಿವಿನಂದದಿ$ಮಾಡಿದಳು ॥೧೩

ಬಸಲಾದಾವುಗಳಿಂ ಪೆರ್ಬುಲಿಯಿಂ ।
ಮುಸುಕುವ §ಬಲ್ನಿಡಿಲಿಂ ಸಿಡಿಲಿಂ ।
ಬಿಸದುರಿಯಂ ಬಿಡದುಗುಳ್ವುರಗಗಳಿಂ ಸೂಸುವ ಪುರಿವಿಚ್ಚಿಲಿಂ ॥
ಮಸೆದಸಿಯಿಂ ಸಿಂಗದ ಜಂಗುಳಿಯಿಂ ।
ಪೊಸತಡಿಗಂಡದಿನಾಬಿಜ್ಜೋದರಿ ।
ಮಸಗಿ ಕರಂ ದಾರುಣತರಮುಪ್ಪಪಸರ್ಗಂಮಾಡಿದಳು ॥೧೪

ಎಕ್ಕಲಸಿಂದೆತ್ತಿಪ ಪಿರಿದುಂ ಕಾ ।
ದುಕ್ಕುವ ಲೋಹರಸದಿನುಚ್ಚಿ ವಿಸಿಸುವ ।
ಸೊಕ್ಕಾನೆಯು ಭರಿಕ್ಕೆಯಿಂ ಬಲ್ಪಿಂ ಬಡಿಯಿಪ ಪಾತಕಿಯು ॥
ಉಕ್ಕೆವಗೆಯುಕ್ಕಗಿಯುದೆಯಿನಿಸುಂ ।
ಚೊಕ್ಕಳಿಕೆಯು ದೀವಸಮೋಸರಿಸದೆ ।
ತಕ್ಕುಬಿಯುದೆ ತದ್ಧೀರೋದಾತ್ತಂ ಮೇರುವಿನಂತಿರ್ದಂ ॥೧೫

ಆವುಪಸರ್ಗಮನಾಹೂವಿನ ಮನೆ ।
ಯೋವರಿಯೊಳ್ ಮುಚ್ಚಿದೊಜಗಿದ ಹೊಸಹೊಂ ।
ದಾವರೆಮೊಗದ ಸುಲೋಚನೆ ಕೇಳ್ದುಲರ್ಗಣ್ಣಿಂ ತೆಱೆದೆಬ್ಬು ॥
ತೀವಿದ ಭೀರುತೆಯಿಂ ಬರೆ ಕಾಣಾ ।
ತ್ತಾವಿದ್ಯಾಧರಿಯಾಕೆಯು ರೂಪಂ ।
ಭಾವಿಸುತಾವುಪಸರ್ಗಮನಡಗಿಸಿ ಮೆಯ್ಗರೆವನಿತಚ್ಚೊಳು ॥೧೬

ಕಪ್ಪುರದೆಳವಳಿಕಿಂ ಕಂಡರಿಸಿ ತೊ ।
ಳಪ್ಪನೆಸೆವ ಪಾಂಚಾಳಿಕೆಯಂದದೆ ।
ನಿಪ್ಪೊಸತಪ್ಪಾಕಾರದ ಸಗ್ಗಿಗನೊರ್ವಂ ತನ್ನ ಸತಿ ॥
ಉಪ್ಪಳಗಣ್ಣ ನಿಳಿಂಪಾಂಗನೆವೆರ ।
ಸೊಪ್ಪಮನನುಕರಿಸುತ ಗುಣನಿಳೆಯರೆ ।
ನಿಪ್ಪರಾಜಮಿಥುನಮಿರ್ದೆಡೆಗನುನಯದಿಂದೆಯ್ದಿದನು ॥೧೭

$. ನಾಡಿ ಖ॥ §. ಬಱಸಿ ಖ ॥

ಬರುತಾದೇವಂ ಪಿರಿದನುರಾಗದಿ |
ವರಶುಚಿವಿಕ್ರಮಕೌರವನಂ ಬಂ |
ಧುರಗುಣಭೂಷಿತೆ ಸುಭಗೆ ಸುಲೋಚನೆಯುಂ ಕಾರುಣ್ಯದೊಳು ||
ತುರಿಯದಿ ಪೂಜೆಸಿ ತುತಿಯಿಸಿ ಬೞಿಕಾ |
ದರದಿಂದೆಲೆ ನೃಪತೀ ನಾವೀಯೆಡೆ |
ಗಿರದೆಯ್ದಿದ ಕಥನಮನೊರೆವೆಂ ಕೇಳೆಂದು ನಿರೂಪಿಸಿದಂ ||೧೮

ದೇವೇಂದ್ರಂ ಶಚಿಸಹಿತಮೆ ತನ್ನಮ |
ರಾವತಿಯೊಳು ಮಿಸುಪೋಲಗಮಿರ್ದಾ |
ದೇವಸಭೆಯೊಳಿಂತೆಂದಂ ಮತ್ತಾ ಭರತಮಹೀತಳದ |
ಭೂವರರೊಳ್ ಜಯನೃಪನುಂ ಸತಿಯುರೊ |
ಳಾವಿಧುವದನೆ ಸುಲೋಚನೆಯುಂ ನೆಱ |
ಭಾವಿಸಲವರಲ್ಲದೆ ಸುವ್ರತದೊಳಮಾರಿಲ್ಲೆನುತುಸಿರ್ದಂ ||೧೯

ಆನುಡಿಗೆಲೆ ಜಯನೃಪ ನಿನ್ನಮಲಸ |
ಮಾನವ್ರತಮಂ ನೋಡುವೆನೆನುತೆ |
ನ್ನೀನಲ್ಲಳು ಸಹಿತಾಸಗ್ಗದಿನಾಂ ನಿಮ್ಮೆಡೆಗೆಯ್ದಿದೆನು ||
ಕಾನನಮಿದಱೊಳಗಡೆಯಂಬರಚರ |
ಮಾನಿನಿ ಮಾಡಿದ ಕೃತ್ಯಕ್ಕಗಿಯದೆ |
ನೀನಿರ್ದುದನೀಕ್ಷಿಸಿ ಮನದೊಳಗನುರಾಗಂದಾಳಿದೆನು ||೨೦

ಸುರರಾಜಂ ಸಗ್ಗಿಗರೋಲಗದೊಳ |
ಗುರುಮುದದಿಂ ಕೊಂಡಾಡಿದ ಮಾತಿಗೆ |
ಪಿರಿದುಂ ನಿಮ್ಮಿರ್ವರ ಗುಣವೂಣೆಯುಮಂ ಮಾಡಿದುದಿಲ್ಲ ||
ಅರಸಾಯೆನುತ ಸರಾಗದಿ ತುತಿಯಿಸಿ |
ವರರತ್ನಾಭರಣಂಗಳನಿತ್ತಾ |
ದರದಿ ತಮುತ್ತಿರ್ವರ್ ನಿರ್ಜರಲೋಕಕ್ಕೆಯ್ದಿದರಿತ್ತ ||೨೧

ದಾರುಣತರಮಪ್ಪೀಯುಪಸರ್ಗಂ |
ದೂರೀಕೃತಮಾದೊಡಮೆನಗೀಸಂ |
ಸಾರದ ಸೌಖ್ಯಮೆನಗೆ ಬೇಡೆನುತಿನಿವಿರಿದುಂ ಭಾವಿಸುತ ||

ವೈರಾಗ್ಯಂ ಬಗೆಯೊಳಗಚ್ಚೊತ್ತಲು |
ಭೂರಮಣೀಪತಿ ಮುಕ್ತಿಸ್ತ್ರೀಯೊಳು |
ಸೌರಸುಖಮನನವರತಂ ಬಿಡದನುಭವಿಸುವೆನೆನುತಿರ್ದಂ ‖ ೨೨

ಆಸಮಯದೊಳಂಬುಜದಳಲೋಚನೆ |
ಭಾಸುರಮೂರ್ತಿ ಸುಲೋಚನೆ ಸಹಿತಂ |
ಭೂಸುದತೀಪತಿ ನಾನಾಚಿತ್ರವೆಸದ ಬಿಮಾನವನೇಱಿ ‖
ಆಸತ್ಪಥದೊಳು ರೋಹಿಣಿವೆರಸು ಸು |
ಧಾಸೂತಿ ಕರಂ ವಿಭವಂಬೆತ್ತು ವಿ |
ಲಾಸದಿ ಮುನ್ನೀರ್ಗೆಯ್ದುವ ತೆಱದಿಂ ನಿಜಪುರಕೆಯ್ದಿದನು ‖ ೨೩

ಹೊಱಲಂ ಹೊಕ್ಕು ಬೞಿಕ ತನ್ನೊರ್ವಳು |
ಲಳನೆ ಶಿವಂಕರದೇವಿವೆಸರನಾಂ |
ತಳಘಪಯೋಧರೆಯಣುಗನನಂತಬಲಂಗೆ ಸುಲಗ್ನದೊಳು ‖
ತುೞಿಲಾಳ್ ವಿಕ್ರಮಕಾರವನವನೀ |
ತಳಭಾರಮನಿತ್ತನಸುಂ ವಿಭವದಿ |
ಘೞಿಲನೆ ಪಟ್ಟಂಗಟ್ಟಿದನತ್ಯುನ್ನತಿಕೆಯ ಮುದದಿಂದ ‖ ೨೪

ಪಟ್ಟಂಗಟ್ಟಿ ತನೂಜಗೆ ತನ್ನೊಡ |
ವುಟ್ಟಿದ ವಿಜಯಜಯಂತರಯೋಧ್ಯೆಯ |
ಪಟ್ಟಣದರಸು ಭರತನೃಪತಿಯ ತನುಜರ್ ... ತನ್ನಾ ‖
ಹೆಟ್ಟಿಗೆಯರ್ ತಾವೆಣ್ಟಾಸಿರಮುಂ |
ಕಟ್ಟರಸುಗಳಯ್ನಾಸಿರವೆರಸಾ |
ದಿಟ್ಟಂ ದೀಕ್ಷೆಗೆನುತ ನಡೆದಂ ವೃಷಭೇಶನ ಸನ್ನಿಧಿಗೆ ‖ ೨೫

ದಿವಿಜವಿಟೀವಿಟವಿಲಸತ್ಕ್ರೀಡಾ |
ನವನಿರ್ಜರಲತಿಕಾಗೃಹವಿಸ್ಫಾರ |
ರವೆಗಳನಾಂತ ಜವಳಿದಪ್ಪಲಿನೆಸೆವಾಕೈಲಾಸಾದ್ರಿ ‖
ಪ್ರವಿದಿತವಾಗಿ ವಿರಾಜಿಪ ಸುಮನೋ |
ಭುವನವುದಾಗಲ್ಕದಱಗ್ರದೊಳೊ |
ಪ್ಪುವನನುಕರಿಸಿದ ಸಮವಶರಣವಮಾಮುಕ್ತಿಯ ತೆಱನಾಯ್ತು ‖ ೨೬

ವಿಮಲಕದಂಬಮಣಿಗಳಿಂ ಸೊಗಯಿಪ |
ಸಮವಶರಣಮಂಡಪಮಂ ಪೊಕ್ಕಾ |
ರಮಣಿಸುಲೋಚನೆಸಹಿತ ಜಿನಪನಂ ಮೂಮೆ ತಿರಿದು ಬಂದು ||
ಸಮುಚಿತದೊಳ್ ನಿಂದಭಿವಂದಿಸಿ ಕರ |
ಕಮಲಂಗಳನಾದರದಿಂ ಮುಗಿದಾ |
ಸಮಯಕೆ ಸಂಜನಿಯಿಸಿತವಧಿಜ್ಞಾನಂ ತದ್ಗುಣನಿಧಿಗೆ ||೨೭

ತದನಂತರದೊಳ್ ಗಣಧರರಂ ಸ |
ಮ್ಮದದಿಂದಭಿವಂದಿಸಿ ದೀಕ್ಷೆಯನಾ |
ಚದುರೆ ಸುಲೋಚನೆ ಮೊದಲಾದರಸಿಯರುಂ ತನ್ನೊಡವಂದ ||
ವಿದಿತಾವನಿಪಾಲಕನಿಕುರುಂಬಮು |
ಮದಟರ್ ವಿಜಯಜಯಂತಾನುಜರುಂ |
ಸದಮಲಗುಣಿ ತಾನುಂ ಧರಿಸಿದರಮರಜನಂ ಪೊಗಳ್ವಂತೆ ||೨೮

ಅವನಿಗನರ್ಘ್ಯಮೆನಿಪ ಮುನಿರೂಪಂ |
ಸವಿನಯದಿಂದಾಯೆಡೆಯ ತಪಸ್ವೀ |
ನಿವಹಂ ಕೊಂಡಾಡುವಿನಂ ತಾನವಿರಳಹೃದಯನುಮಾಗಿ ||
ಅವಧರಿಸೆ ಮನಃಪರ್ಯಯಜ್ಞಾನಂ |
ಸವನಿಸೆ ಬಳಿಕುಪಗಣಧರಪದಮುದು |
ತವಕದಿನೆಯ್ದಿತ್ತಾಮುನಿಯುಜಿನನದೇನಂ ಬಣ್ಣಿಪೆನು ||೨೯

ಇಂತಾದೀಶಂ ಮುಕ್ತಿಶ್ರೀಯೊಳ್ |
ನಂತಸುಖಾತ್ಮಕನಾಗಿ ನೆರೆವ ಪ |
ರ್ಯಂತಂ ಮತ್ತಾತನ ಘನಭಾಷೆಯೊಳಿನಿಸಿನಿಸಂ ತೆಗೆದು ||
ಸಂತತಮಾಭವ್ಯಾವಳಿಗೊರೆದಂ |
ತಿಂತಿಣಿಗೊಂಡ ವನಕೆ ವನಧಿಯ ನೀ |
ರಂ ತೆಗೆದಿನಿಸಿನಿಸಂ ಕಱೆವಂಬುದದಂದಮನನುಕರಿಸಿ ||೩೦

ತನ್ನೊಡನಿರ್ದಾಸಿರ ಜತಿರಾಯರ್ |
ಸನ್ನುತರಮಲಗುಣಾಲಂಕೃತರ |
ತ್ಯುನ್ನತಸುವ್ರತಪರಿಪಾಲಕರುಂ ತದ್ರಜತಾಚಲದ ||

ರನ್ನದ ಕೋಡುಂಗಲ್ಲುಪರಿವುದೊಳು |
ಸನ್ನಿದವಾಗಿ ನಿಲಲ್ ತಾಂ ನಿಂದಂ |
ತನ್ನಂ ತನುವಿಂದಂ ಬೇರ್ಕೆಯ್ದಾದಿತ್ಯಪ್ರತಿಮೆಯೊಳು ||೩೧

ತನುವಿದು ತನತಲ್ಲೆಂದು ವಿಚಾರಿಸಿ |
ತನುವಿಂಗಪ್ಪ ಪರೀಷಹಮಂ ತಾ |
ನಿನಿಸುಂ ಭಾವಿಸದಾನಿಜತತ್ವದೊಳೋವದೆ ಚಿತ್ತವನು ||
ಎನಸುಂ ನಿಱಿಸಿ ಬೞಿಕ ಕಣ್ಣಾಲಿಯು |
ನಿನಬಿಂಬದೊಳಿಟ್ಟಾಜತಿರಾಯುಗೆ |
ಜನಿಸಿತು ಕೇವಲಬೋಧಂ ಪೊೞ್ತು ಕಡಲೊಳಗುೞಿದ ಮುನ್ನ ||೩೨

ಆರಿಂಗರಿದಿನ ಮುಕ್ತಿಮಹಿಯುನಾ |
ನಾರಯದುೞ್ಱಿ ಸಾಧಿಸುವೆನೆನುತ ಮ |
ತ್ತಾರುಷಿಪತಿಯಾದೆಸೆಗೆ ಪರಸ್ಥಾನಂಮಾಡಿದ ತೆಱದಿ ||
ಧಾರಿಣಿಯಿಂದೈಸಾಸಿರ ಧನುವಿನ |
ದೂರಮೊಗೆದು ನಿಂದಿರಲಾಕ್ಷಣದೊಳು |
ಘೋರೆನೆ ನಾಲ್ದೆಱದಮರನಿಕಾಯಂ ನೆರೆದತ್ತಾಯೆಡೆಗೆ ||೩೩

ಬಾನೇ ಬಾಯ್ದೆಱೆಯೆತ್ತಿ ಪೊಗೞ್ವಂ |
ತಾ‡ನಾಕೀನಿಕರಂ ಸೂಳೈಸುವ |
ನಾನಾವಾದ್ಯರವಂ ಪೊಣ್ಮಿತು ಮೇಗಡೆ ಬಹುರೂಪಾಂತು ||
ಮಾನಿತಮಯನವವಿಧವಿದಿತಗ್ರಹ |
ವಿಮಾನಲಕಿಱುವಂದದಿ ಪಲವಣ್ಣದ |
ನೂನಮಣಿಯು ಮೞೆ ಕಱೆದುದು ಬೋಧಮರುಹಗುದಯಿಸಲೊಡನೆ ||

ಸುರಿದುದಲರ ಸೊಬ್ಬೞೆ ಬಿಡದೆಱಗಿತು |
ಬಿರಿಮೊಗ್ಗೆಯು ತಂದಲು ನನೆಗಳ ಬೆ |
ಳ್ಸರಿ ಬಿಟ್ಟುದು ಹೂವಿನ ಹನಿ ಹನಿತುದು ಹುಯ್ದುದು ಸಜ್ಜಕದ ||
ಸರಿ ಪೊಸಮುಗುಳ್ಗಳ ಸೊನೆ ಕಱೆದುದಾ |
ಪುರವಣೆಯಿಂ ನವಶುಕ್ಲಧ್ಯಾನಂ |
ಬರೆ ಜಯಮುನಿನಾಥಗೆ ಭವ್ಯಜನಾನೀಕಮನೋರಥಗೆ ||೩೪

---

‡. ನಾಕಿನಿಕುರುಂಬಂ. ಖ||

ಬೞಿಕಮರಾವನಿಯಿಂ ಬಳರಿಪು ಬೆಂ |
ಬೞಿಯೊಳಗಿರದೆ ನಿಳಿಂಪವಿತತಿಯ |
ವ್ವಳಿಸಿ ಬರಲ್ಕಾಯೆಡೆಗೆ ಬರುತ ಪೂಜಿಸಿ ತತ್ಕೇವಲಿಗೆ ||
ವಿಳಸದ್ರತ್ನಕದಂಬಕದಿಂ ಪ |
ಜ್ವಳಿಸುವ ಗಂಧಕುಟಿಯನೊಸೆದಾಕ್ಷಣ |
ದೊಳಗತಿಚಿತ್ರವೆಸದಿ ನಿರ್ಮಿಸಿದಂ ವಿತ್ತೇಶ್ವರನಿಂದ ||೧೬

ಪವನಪಥಂ ಪಲ§ವರ್ಣ್ಣದ ಪೂವಿನ |
ನವಮಂಜರಿಗಳನೇಂ ಪಡೆದತ್ತೋ |
ದಿವಿಜೇಂದ್ರಂ ಮುನಿಸಿಂದಿಡೆ ಮುಂ ಕತ್ತಱಿಸಿದ †ಱೆಟ್ಟೈಗಳೇ ||
ತವೆ ಚಿಗುರಲ್ಕಾರೋಹಣಶೈಲಂ |
ತವಕದಿ ಪಾಱಿದುದೋ ಎನೆ ಮಿನುಗುವ |
ನವಮಣಿಸಂತತಿಯಿಂ ಕಂಡರಿಸಲ್ ತೊಳಗಿತು ಗಂಧಕುಟಿ ||೧೭

ಮತ್ತಾಗಂಧಕುಟಿಯ ಮಧ್ಯದೊಳೆಳ |
ಮುತ್ತಿನ ಸಿಂಹಾಸನದುಪರಿಮದೊಳು |
ತೆತ್ತಿಸಿದಮಲಕನಕಕಂಜಾತದ ನಡುವಣ ಕರ್ಣಿಕೆಯ ||
ತುತ್ತತುದಿಯೊಳಾನಾಲ್ವೆರಲನಿತಂ |
ಚಿತ್ತಜರಿಪು ಮುಟ್ಟದೆ ಸೌಭಾಗ್ಯಂ |
ಬೆತ್ತಂಘ್ರಿದ್ವಯಮಿಟ್ಟತಿಮಹಿಮಾಲಂಕೃತನಾಗಿರ್ದಂ ||೧೮

ಪಲಗಣ್ಣಂ ಪಾಱುಂಬಳೆಗೈಯಂ |
ನೆಲವ್ರೊಱಗಂ ಬೆಂತರಬಲ್ಲಹನು |
ಜ್ವಲಿಸುವ ಜೋಯಿಸರಾಣ್ಮಂ ಮಿಗದರಸಂ ಮೊದಲಾಗಿ ||
ಸಲೆ ಸೊಗಯಿಸುವ ಶತೇಂದ್ರರ್ಬಹುವಿಧ |
ಬಲಮೊಲ್ಲಂದಿನ ಬಂಜೆವಡೆಯದ |
ಕಲಿ ನವಜಯಜಯಜಿನಪನ ಗಂಧಕುಟಿಯೊಳೆಡಗಿಱಿದಿಹುದು ||೧೯

ಪೆಡದಲೆಯನ ಪೆಂಡತಿ ಮೈಗಣ್ಣನ |
ಮಡದಿ ಹೆಱೆಯ ನೇಹದ ಹೆಟ್ಟುಗೆ ನೆಲ |
ದೊಡೆಯನ ನಲ್ಲಳು ದೆಸೆಯಾಣ್ಮರ ಗರಣಿಯರುಂ ಮೊದಲಾದ ||

---

§ ವಂದದ. ಕ|| † ಜಟ್ಟೈ. ಕ||

ಕಡುಚೆಲ್ವಿಕೆಯಂ ತಳೆದು ಮಿಸುಪ ಮು |
ಪ್ಪೊಡವಿಯ ಪೆಣ್ಮಕ್ಕಳ ನಿಕುರುಂಬಂ |
ಸಡಗರದಿಂದಾಜಯಜಿನನಂಘ್ರಿಯುಗಮನರ್ಚಿಸುತಿಹುದು ॥ ೪೦

ಭವವಾರಾಶಿಯೊಳಾೞಿಯಿರದೆ ಮುೞು |
ಗುವ ದೇಹಿಗಳಂ ತನ್ನ ಕರುಣದಿಂ |
ತವೆಯೆತ್ತುತೆ ಸಂತತಮಾರ್ಯಾಖಂಡದ ದೇಶಂಗಳೊಳು ॥
ರವಿಶಶಿಕೋಟಿದ್ಯುತಿಕಾಶಂ ತ |
ದ್ದ್ವಿಜಾವಳಿ ತನ್ನಡಿಗನವರತಂ |
ಸವಿನಯದಿಂ ಮುಗ್ಗುತ್ತಿರೆ ವೈಭವದೊಳ್ ವಿಹರಿಸುತಿರ್ದಂ ॥ ೪೧

ಈಯಂದದೆ ಕೆಲ ಕಾಲಂ ವಿಹರಿಸಿ |
ಮಾಯಂ ಮೊದಲಾದ ಕಷಾಯಂಗಳ |
ದಾಯಂಗಿಡಿಸಿ ಬೞಿಕಮಾಗಂಧಕುಟಿಯುಮಂ ಬಿಸುಟೞಿದು ॥
ಕಾಯಜರಿಪು ಕೈಲಾಸಶಿಖರದೊಳ್ |
ಕಾಯೋತ್ಸರ್ಗದೆ ನಿಂದವ್ರತಶ್ರೀ |
ಜಾಯೆಯೊಳೊಡಗೂಡಿದನೆಲ್ಲಾ ಭುವನಂ ಪೊಗೞ್ವಂದದೊಳು ॥ ೪೨

ಇದು ಸುರನರಫಣಿಪರಿವೃಢವಿನಮಿತ |
ವಿದಿತವಿನಯಗುಣಗಣಯುತಜಿನಪತಿ |
ಪದಸರಸಿಜಮದಮಧುಕರನತಿಚತುರಕಲಾಪರಿಪೂರ್ಣಂ ॥
ಸದಮಲಚರಿತಂ ಪ್ರಭುರಾಜಂ ಸಂ |
ಮದದಿಂ ರಚಿಸಿದ ಜಯನೃಪಕಾವ್ಯದೊ |
ಳೊದವಿ ಮನೋಹರಮಾದುದು ಪದಿನಾಱನೆಯ ಮಿಸುಪ ಸಂಧಿ ॥ ೪೩

ಇಂತು ಪದಿನಾಱನೆಯ ಸಂಧಿ ಮುಗಿದುದು.

ಜಯನೃಪ ಕಾವ್ಯಂ

ಸಮಾಪ್ತಂ.

# ಶೋಧನಂ.

ಪುಟ ೧೦೫—ಪದ್ಯ ೫೭

ಮುಖ್ಯೇಂದ್ರಾಖ್ಯಾನದಿ ತೇಜೋವೇ ।
ತಾಖ್ಯಾನದಿ ಸರ್ವೋರ್ವೀನುತಥ ।
ವರ್ಮಾಖ್ಯಾನದಿ ಪುಣ್ಯಜನಾಖ್ಯಾನದಿನಂಬುಧಿಪತಿಯೆನಿಪಾ ॥
ಆಖ್ಯಾನದಿ ರಂಜಿಸುವ ಜಗತ್ಪ್ರಾ ।
ಣಾಖ್ಯಾನದಿ ಧನದಾಖ್ಯಾನದಿನೀ ।
ಶಾಖ್ಯಾನದಿನಾಶಾಧಿಪರಂತೆಸೆದಂ ಪ್ರಭುಕುಲದೀಪಂ ॥ ೫೭